ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಭಾನುವಾರ, 29 ಮಾರ್ಚ್ 2026
ಸಂಪುಟ 16, ಸಂಚಿಕೆ 4, ಪುಟಗಳು 16
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ಎಸ್-400 ಕ್ಷಿಪಣಿ ರಕ್ಷಣಾ ವ್ಯವಸ್ಥೆ ವಿಸ್ತರಣೆ
02

ನಕ್ಸಲ್ ಪಿಡುಗು ನಿರ್ನಾಮದ ಬಗ್ಗೆ ನಾಳೆ ಲೋಕ ಚರ್ಚೆ



02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಆಶ್ಲೇಷ

ದಿನದ ಮಾತು

ಕೃಷಿಕನಿಗೆ ದುರ್ಭಿಕ್ಷವಿಲ್ಲ, ಮೌನವಾಗಿರುವವನಿಗೆ ಕಲಹವಿಲ್ಲ, ಜಾಗೃತನಾಗಿರುವವನಿಗೆ ಭಯವಿಲ್ಲ.
▲ಸುಭಾಷಿತ

ರಂಗಭೂಮಿ; ಎಡವಟ್ಟಿನಲ್ಲಿಯೂ ರಸ!

ವಕ್ರದೃಷ್ಟಿ
• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ಮೈಸೂರು: 12 ಕೋಟಿ ರೂ. ಮೌಲ್ಯದ ಡ್ರಗ್ಸ್ ಪತ್ತೆ

• **ಮೈಸೂರು:** ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ಪೊಲೀಸರು 12 ಕೋಟಿ ರೂಪಾಯಿ ಮೌಲ್ಯದ ಡ್ರಗ್ ದಾಸ್ತಾನು ಪತ್ತೆ ಮಾಡಿದ್ದಾರೆ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ದಾಸನಪುರ ಗ್ರಾಮದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮೈಸೂರು ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ. ಮೈಸೂರು ಸಿದ್ಧಿಖಿ ಮೊಹಲ್ಲಾ ನಿವಾಸಿ ಮೊಹಮ್ಮದ್ ಇರ್ಫಾನ್ ಮತ್ತು ಹುಣಸೂರಿನ ಮೊಹಮ್ಮದ್ ಇರ್ಫಾನ್ ಬಂಧಿತ ಆರೋಪಿಗಳು.

• ಪುಟ ೧೦

ಹುಸಿ ಬಾಂಬ್ ಬೆದರಿಕೆ: ಮೈಸೂರಲ್ಲಿ ಆರೋಪಿ ಸೆರೆ

• **ಮೈಸೂರು:** ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಸಂದೇಶಗಳನ್ನು ಕಳುಹಿಸಿ ರಾಜ್ಯದಲ್ಲಿ ಆತಂಕ ಸೃಷ್ಟಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ದೆಹಲಿ ಪೊಲೀಸರು ಮೈಸೂರಿನಲ್ಲಿ ಬಂಧಿಸಿದ್ದಾರೆ. ಮೈಸೂರಿನ ಬೃಂದಾವನ ಬಡಾವಣೆಯ 2ನೇ ಹಂತ, 6ನೇ ಕ್ರಾಸ್‌ನಲ್ಲಿರುವ ಮನೆಯೊಂದರಿಂದ ಕಾರ್ಯಾಚರಣೆ ನಡೆಸುತ್ತಿದ್ದ ಶ್ರೀನಿವಾಸ್ ಅಲಿಯಾಸ್ ಶ್ರೀನಿವಾಸ್ ಲೂಯಿಸ್ ಬಂಧಿತ ಆರೋಪಿ. ಈತ ದೇಶದ ನಾನಾ ಭಾಗಗಳಿಗೆ ಒಟ್ಟು 1,100ಕ್ಕೂ ಹೆಚ್ಚು ಬಾಂಬ್ ಬೆದರಿಕೆ ಇಮೇಲ್ ಮಾಡಿ ಆತಂಕ ಸೃಷ್ಟಿಸಿದ್ದ.

• ಪುಟ ೮

ಕಾಂಗ್ರೆಸ್ ತಲೆಯಲ್ಲಿ ಮಾತ್ರ ಮನುವಾದ: ಛಲವಾದಿ

• ಪುಟ ೧೦

ಖಾಸಗಿ ಆಸ್ಪತ್ರೆಗಳಲ್ಲಿ ಒಪಿಡಿ ಚಿಕಿತ್ಸೆಗೆ ಮಾತ್ರ ಅವಕಾಶ

• ಪುಟ ೧೦

ಎರಡೂ ಕಡೆ ಗೆಲುವು: ಸಿಎಂ ಸಿದ್ದರಾಮಯ್ಯ

• ಪುಟ ೧೦

ರಾಮನವಮಿ ಮೆರವಣಿಗೆ ಮೇಲೆ ಕಿಡಿಗೇಡಿಗಳ ಕಲ್ಲು

• ಪುಟ ೭

ಛತ್ತೀಸ್‌ಗಢ: ಮೂವರು ಮಾವೋಗಳ ಶರಣಾಗತಿ

• ಪುಟ ೭

ಭಯೋತ್ಪಾದಕರಿಗೆ ಆಶ್ರಯ ಮುಂದುವರಿಕೆ: ಅಮೆರಿಕ ಎಚ್ಚರಿಕೆ

ಪಾಕ್ ಉಗ್ರರ ತಾಣ

• **ಹೊಸದಿಲ್ಲಿ:** ಪ್ರಮುಖವಾಗಿ ಜಮ್ಮು-ಕಾಶ್ಮೀರ ಸೇರಿ ಭಾರತವನ್ನು ಗುರಿಯಾಗಿಸಿಕೊಂಡಿರುವ ಪಾಕಿಸ್ತಾನ, ಭಯೋತ್ಪಾದಕ ಸಂಘಟನೆಗಳ ನಿರಂತರ ಚಟುವಟಿಕೆಯ ಕೇಂದ್ರವಾಗಿ ಮುಂದುವರಿದಿದೆ ಎಂದು ಅಮೆರಿಕ ಕಾಂಗ್ರೆಸ್‌ನ ಸಂಶೋಧನಾ ಸೇವೆ(ಸಿಆರ್‌ಎಸ್) ವರದಿ ಎಚ್ಚರಿಕೆ ನೀಡಿದೆ.


ಪಾಕಿಸ್ತಾನದ ಮಣ್ಣಿನಿಂದ ಕಾರ್ಯನಿರ್ವಹಿಸುತ್ತಿರುವ 15 ಸಂಘಟನೆಗಳನ್ನು ಗುರುತಿಸಿರುವ ಈ ವರದಿ ಮಾ.25ರಂದು ಬಿಡುಗಡೆಯಾಗಿದ್ದು, ಇವುಗಳಲ್ಲಿ ಹೆಚ್ಚಿನವುಗಳನ್ನು ಅಮೆರಿಕ ವಿದೇಶಿ ಭಯೋತ್ಪಾದಕ ಸಂಘಟನೆಗಳು ಎಂದು ಘೋಷಿಸಿದೆ. ಇದರಲ್ಲಿ ಲಷ್ಕರ್ -ಎ-ತೈಬಾ, ಜೈಶ್-ಎ-ಮೊಹಮ್ಮದ್, ಹರಕತ್ -ಉಲ್ ಜಿಹಾದ್ ಇಸ್ಲಾಮಿ, ಹರಕತ್ ಉಲ್-ಮುಜಾಹಿದ್ದೀನ್ ಮತ್ತು ಹಿಜ್ಬುಲ್ ಮುಜಾಹಿದ್ದೀನ್ ನಂತಹ ಭಾರತ ಮತ್ತು ಕಾಶ್ಮೀರ ಕೇಂದ್ರಿತ ಗುಂಪುಗಳು ಸೇರಿವೆ. ಈ ಹಿಂದೆ ಹಲವು ಮಿಲಿಟರಿ ಕಾರ್ಯಾಚರಣೆಗಳು ಮತ್ತು 2014ರ ರಾಷ್ಟ್ರೀಯ ಕ್ರಿಯಾ ಯೋಜನೆ(ಎನ್‌ಎಪಿ) ನಡೆದಿದ್ದರೂ, ಈ ಗುಂಪುಗಳು ಯಾವುದೇ ಶಿಕ್ಷೆಯ ಭಯವಿಲ್ಲದೆ ಕಾರ್ಯನಿರ್ವಹಿಸುತ್ತಿವೆ ಎನ್ನಲಾಗಿದೆ.



ಲಷ್ಕರ್-ಎ-ತೈಬಾ ಚಟುವಟಿಕೆಗಳು: 1980ರ ದಶಕದ ಕೊನೆಯಲ್ಲಿ ರಚನೆಯಾದ ಮತ್ತು ಹಫೀಜ್ ಸಯೀದ್ ನೇತೃತ್ವದ ಲಷ್ಕ ರ್-ಎ-ತೈಬಾ, ಪಂಜಾಬ್ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ನೆಲೆಗಳನ್ನು ಹೊಂದಿದೆ.

166 ಜನರ ಸಾವಿಗೆ ಕಾರಣವಾದ 2008ರ ಮುಂಬೈ ದಾಳಿಯನ್ನು ಸಂಘಟಿಸಿದ್ದ ಈ ಗುಂಪು, ನಿರ್ಬಂಧಗಳಿಂದ ತಪ್ಪಿಸಿಕೊಳ್ಳಲು ತನ್ನ ಹೆಸರನ್ನು ಜಮಾತ್-ಉದ್-ದವಾ ಎಂದು ಬದಲಾಯಿಸಿಕೊಂಡಿದೆ. ಇದು ಪ್ರಸ್ತುತ ಸಾವಿರಾರು ಹೋರಾಟಗಾರರನ್ನು ಹೊಂದಿದ್ದು, 2001ರಿಂದ ವಿದೇಶಿ ಭಯೋತ್ಪಾದಕ ಸಂಘಟನೆ ಎಂದು ಗುರುತಿಸಲ್ಪಟ್ಟಿದೆ.

ಜೈಶ್-ಎ-ಮೊಹಮ್ಮದ್ ಕಾರ್ಯಾಚರಣೆ: 2000ರಲ್ಲಿ ಮಸೂದ್ ಅಜರ್‌ನಿಂದ ಸ್ಥಾಪಿಸಲ್ಪಟ್ಟ ಜೈಶ್-ಎ-ಮೊಹಮ್ಮದ್, ಭಾರತದ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸುವ ಗುರಿ ಹೊಂದಿದೆ. ಈ ಗುಂಪು ಭಾರತ, ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದಾದ್ಯಂತ ಸುಮಾರು 500 ಸಶಸ್ತ್ರ ಬೆಂಬಲಿಗರನ್ನು ಹೊಂದಿದೆ. ಇದು 2001ರ ಭಾರತೀಯ ಸಂಸತ್ತಿನ ಮೇಲಿನ ದಾಳಿಯಲ್ಲಿ ಭಾಗಿಯಾಗಿತ್ತು ಮತ್ತು ಅಮೆರಿಕದ ವಿರುದ್ಧ ಯುದ್ಧ ಘೋಷಿಸಿದೆ.



ಆಂತರಿಕ ಭದ್ರತೆಗೆ ಸವಾಲು

ದಕ್ಷಿಣ ಏಷ್ಯಾ ತಜ್ಞ ಕೆ. ಅಲನ್ ಕ್ರಾನ್‌ಸ್ಟಾಡ್ ಸಿದ್ಧಪಡಿಸಿದ ಈ ವರದಿ, ಪಾಕಿಸ್ತಾನದ ಗುಂಪುಗಳನ್ನು 5 ವಿಧಗಳಾಗಿ ವರ್ಗೀಕರಿಸಿದೆ. ಪಾಕಿಸ್ತಾನ, ಬಲೂಚಿಸ್ತಾನ ಮತ್ತು ಖೈಬರ್ ಪಖ್ತುನ್ವಾದಲ್ಲಿ ಆಂತರಿಕ ಹಿಂಸಾಚಾರವನ್ನು ಎದುರಿಸುತ್ತಿದ್ದರೂ, ಅಲ್ಲಿನ ಮದ್ರಸಾಗಳು ಉಗ್ರಗಾಮಿ ಸಿದ್ಧಾಂತವನ್ನು ಪೋಷಿಸುವ ಬೋಧನೆಗಳನ್ನು ಮುಂದುವರಿಸಿವೆ ಎಂದು ವರದಿ ತಿಳಿಸಿದೆ.

ಕಾಶ್ಮೀರ ಕೇಂದ್ರಿತ ಉಗ್ರಗಾಮಿತ್ವ



1989ರಲ್ಲಿ ಸ್ಥಾಪನೆಯಾದ ಮತ್ತು 2017ರಲ್ಲಿ ಅಮೆರಿಕದಿಂದ ಭಯೋತ್ಪಾದಕ ಗುಂಪು ಎಂದು ಘೋಷಿಸಲ್ಪಟ್ಟ ಹಿಜ್ಬುಲ್ ಮುಜಾಹಿದ್ದೀನ್, 1,500 ಸದಸ್ಯರ ಕೇಡರ್ ಹೊಂದಿದೆ. ಈ ಗುಂಪು ಕಾಶ್ಮೀರದ ಸ್ವಾತಂತ್ರ್ಯ ಅಥವಾ ಜಮ್ಮು ಮತ್ತು ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರ್ಪಡೆಗೊಳಿಸಲು ಪ್ರಯತ್ನಿಸುತ್ತಿದೆ. ಈ ಪ್ರಾದೇಶಿಕ ಗುಂಪುಗಳು ಅಲ್ ಖೈದಾದಂತಹ ಜಾಗತಿಕ ಸಂಘಟನೆಗಳ ಜತೆಗೂಡಿ ಕಾರ್ಯನಿರ್ವಹಿಸುತ್ತಿವೆ.

ಪ್ರಾದೇಶಿಕ ಭದ್ರತೆಯ ಮೇಲೆ ಪರಿಣಾಮ

ಭಯೋತ್ಪಾದಕ ಚಟುವಟಿಕೆಗಳನ್ನು ತಡೆಗಟ್ಟಲು ಪಾಕಿಸ್ತಾನ 2023ರಲ್ಲಿ ಕೆಲವು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ. ಆದರೂ ಭಯೋತ್ಪಾದಕ ಮೂಲಸೌಕರ್ಯಗಳು ಇನ್ನೂ ಅಸ್ತಿತ್ವದಲ್ಲಿವೆ. ಪ್ರಾದೇಶಿಕ ಶಾಂತಿಗಾಗಿ ಈ ಗಡಿಯಾಚೆಗಿನ ಭಯೋತ್ಪಾದನೆಯನ್ನು ಹತ್ತಿಕ್ಕುವುದು ಅತ್ಯಗತ್ಯ ಎಂದು ಭಾರತ ಪ್ರತಿಪಾದಿಸಿದೆ. ಪಾಕಿಸ್ತಾನ ಈ ಜಾಲಗಳನ್ನು ನಿಯಂತ್ರಿಸಲು ವಿಫಲವಾಗಿರುವುದು, ನೆರೆಹೊರೆಯ ರಾಷ್ಟ್ರಗಳೊಂದಿಗೆ ಉದ್ವಿಗ್ನತೆ ಹೆಚ್ಚಿಸುತ್ತಿದೆ ಎಂದು ವರದಿಯಲ್ಲಿ ತೀರ್ಮಾನಕ್ಕೆ ಬರಲಾಗಿದೆ.

ಮಸ್ಕ್ ಇದ್ದರೆಂಬ ವರದಿ ತಳ್ಳಿಹಾಕಿದ ಜೈಸ್ವಾಲ್

ಮೋದಿ-ಟ್ರಂಪ್ ಮಧ್ಯೆ ಮಾತ್ರ ಮಾತು: ಎಂಇಎ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ದೂರವಾಣಿ ಕರೆಯಲ್ಲಿ ಬಿಲಿಯನೇರ್ ಉದ್ಯಮಿ ಎಲಾನ್ ಮಸ್ಕ್ ಇದ್ದರೆಂಬ ನ್ಯೂಯಾರ್ಕ್ ಟೈಮ್ಸ್ ವರದಿಯನ್ನು ಶನಿವಾರ ತಳ್ಳಿಹಾಕಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ), ದೂರವಾಣಿ ಕರೆಯಲ್ಲಿ ಇಬ್ಬರು ನಾಯಕರಷ್ಟೇ ಮಾತುಕತೆ ನಡೆಸಿದ್ದಾರೆಂದು ಸ್ಪಷ್ಟಪಡಿಸಿದೆ.



ಮಂಗಳವಾರದ ದೂರವಾಣಿ ಕರೆಯಲ್ಲಿ ಇಬ್ಬರು ನಾಯಕರ ನಡುವೆಯಷ್ಟೇ ಮಾತುಕತೆ ನಡೆದಿದೆ ಎಂದು ಎಂಇಎ ವಕ್ತಾರ ರಣಧೀರ್ ಜೈಸ್ವಾಲ್ ಶನಿವಾರ ಸ್ಪಷ್ಟಪಡಿಸಿದ್ದಾರೆ.

ಟ್ರಂಪ್ ಜತೆಗಷ್ಟೇ ಮಾತುಕತೆ: ನಾವು (ನ್ಯೂಯಾರ್ಕ್ ಟೈಮ್ಸ್) ವರದಿಯನ್ನು ನೋಡಿದ್ದೇವೆ. ಮಾ.24ರ ದೂರವಾಣಿ ಸಂಭಾಷಣೆಯಲ್ಲಿ ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಟ್ರಂಪ್ ಅವರ ನಡುವೆಯಷ್ಟೇ ನಡೆದಿದೆ. ಈ ಹಿಂದೆಯೇ ಹೇಳಿದಂತೆ ಮಧ್ಯಪ್ರಾಚ್ಯದ ಪರಿಸ್ಥಿತಿಯ ಕುರಿತು ಉಭಯ ನಾಯಕರು ಪರಸ್ಪರ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದೇವೆ ಎಂದು ಜೈಸ್ವಾಲ್ ತಿಳಿಸಿದ್ದಾರೆ.

ವಾಷಿಂಗ್ಟನ್ ಸ್ಪಷ್ಟನೆ ನೀಡಲಿ: ನಮ್ಮ ಪ್ರಧಾನಿ ಟ್ರಂಪ್ ಅವರೊಂದಿಗಷ್ಟೇ ಮಾತನಾಡಿದ್ದಾರೆ. ಪ್ರಧಾನಿ ಜತೆ ಇನ್ಯಾರೂ ಮಾತುಕತೆ ನಡೆಸಿಲ್ಲ. ಕೊಠಡಿಯಲ್ಲಿ ಇನ್ಯಾರಾದರೂ ಇದ್ದರೇ ಅಥವಾ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದರೇ ಎಂಬ ಕುರಿತು ವಾಷಿಂಗ್ಟನ್ ಸ್ಪಷ್ಟನೆ ನೀಡಬೇಕಿದೆ ಎಂದು ಜೈಸ್ವಾಲ್ ಹೇಳಿದ್ದಾರೆ.

➡ಪುಟ ೮

ಯುಎಇಯಲ್ಲಿ ಐವರು ಭಾರತೀಯರಿಗೆ ಗಾಯ

ಸಮರಕ್ಕೆ ಹೌತಿ ಬಂಡುಕೋರರ ಸೇರ್ಪಡೆ

• ಪುಟ ೭



ಮೋದಿ, ಟ್ರಂಪ್ ಮಾತುಕತೆ ಫಲಪ್ರದ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಮಂಗಳವಾರ ಫಲಪ್ರದ ಮಾತುಕತೆ ನಡೆಸಿದ್ದಾರೆ ಎಂದು ಅಮೆರಿಕದ ಶ್ವೇತಭವನ ಶುಕ್ರವಾರ ತಡರಾತ್ರಿ ತಿಳಿಸಿದೆ. ಪ್ರಧಾನಿ ಮೋದಿ ಅವರೊಂದಿಗೆ ಅಧ್ಯಕ್ಷ ಟ್ರಂಪ್ ಅತ್ಯುತ್ತಮ ಬಾಂಧವ್ಯ ಹೊಂದಿದ್ದಾರೆ. ಇದು ಫಲಪ್ರದ ಮಾತುಕತೆ ಆಗಿತ್ತು ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕ್ಯಾರೊಲಿನ್ ಲೆವಿಟ್ ಹೇಳಿದ್ದಾರೆ. ಫೆ.28ರಂದು ಇಸ್ರೇಲ್ ಮತ್ತು ಅಮೆರಿಕ ಸೇನೆಗಳು ಇರಾನ್ ಮೇಲೆ ಜಂಟಿ ಬಾಂಬ್ ದಾಳಿ ಆರಂಭಿಸಿದ ಬಳಿಕ ಉಭಯ ನಾಯಕರು ಮೊದಲ ಬಾರಿಗೆ ಮಾತುಕತೆ ನಡೆಸಿದ್ದಾರೆ.

ಸೌದಿ ರಾಜಕುಮಾರನ ಜತೆ ಮೋದಿ ಚರ್ಚೆ

ಪ್ರಧಾನಿ ಮೋದಿಯವರು ಶನಿವಾರ ಸೌದಿ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ರೊಂದಿಗೆ ದೂರವಾಣಿ ಮಾತುಕತೆ ನಡೆಸಿದ್ದು, ಪ್ರಾದೇಶಿಕ ಇಂಧನ ಮೂಲಸೌಕರ್ಯಗಳ ಮೇಲಿನ ದಾಳಿ ಖಂಡಿಸಿದ್ದಾರೆ.

➡ಪುಟ ೮

ಸಭಾಭವನ ಉದ್ಘಾಟನೆ, ತುಲಾಭಾರದಲ್ಲಿ ಡಾ.ಭಾಗ್ವತ್ ಹೇಳಿಕೆ

ಭಾರತದಿಂದ ವಿಶ್ವ ಗೆಲ್ಲುವ ಕಾರ್ಯ

• **ಚಿಕ್ಕೋಡಿ:** ಸಮಾಜ ಕೇವಲ ಕಾನೂನಿನ ಆಧಾರದ ಮೇಲೆ ನಡೆಯುವುದಿಲ್ಲ, ಪರಸ್ಪರ ನಂಬಿಕೆ, ಸಹಾನುಭೂತಿ ಮತ್ತು ಆಪ್ತಭಾವದ ಮೇಲೆ ನಿಂತಿದೆ. ಇಂತಹ ನಂಬಿಕೆಯಿಂದ ಭಾರತ ವಿಶ್ವವನ್ನು ಗೆಲ್ಲುವ ಕೆಲಸ ಮಾಡುತ್ತಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಹೇಳಿದರು.

ತಾಲೂಕಿನ ಯಡೂರ ಗ್ರಾಮದ ವೀರಭದ್ರೇಶ್ವರ ದೇವಸ್ಥಾನ ಹಾಗೂ ಕಾಡದೇವರ ಮಠದ ವತಿಯಿಂದ ನಿರ್ಮಿಸಿದ ಗುರುಕುಲದ ಸಭಾಭವನ ಕಟ್ಟಡವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಜಗತ್ತಿಗೆ ಆಪ್ತಭಾವದ ಮಾರ್ಗ ತೋರಿಸಿದಾಗ ಮಾತ್ರ ನಿಜವಾದ 'ವಿಶ್ವಗುರು'ವಾಗಲು ಸಾಧ್ಯವಿದೆ. ಭಾರತೀಯ ಪರಂಪರೆಯ ಬ್ರಹ್ಮ ಮತ್ತು ಈಶ್ವರ ಪರಿಕಲ್ಪನೆ ಹಾಗೂ ಯೂನಿವರ್ಸಲ್ ಕಾನ್ಷಿಯಸ್‌ನೆಸ್ ನಡುವೆ ಸಾಮ್ಯತೆ ಇದೆ.

➡ಪುಟ ೮



ಟಿಎಂಸಿ ಸರ್ಕಾರದ ವಿರುದ್ಧ ಆರೋಪ ಪಟ್ಟಿ ಬಿಡುಗಡೆ ಮಾಡಿದ ಶಾ


ಭದ್ರತೆಗೆ ಸಂಬಂಧಿತ ಚುನಾವಣೆ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಬಂಗಾಳಕ್ಕೆ ಸೀಮಿತ ಹೋರಾಟವಲ್ಲ, ಬದಲಾಗಿ ದೇಶದ ಭದ್ರತೆಗಾಗಿ ನಡೆಯುವ ಹೋರಾಟವೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಟಿಎಂಸಿ ಸರಕಾರದ ವಿರುದ್ಧ ಆರೋಪ ಪಟ್ಟಿ ಬಿಡುಗಡೆ ಮಾಡುವ ಮೂಲಕ ಬಂಗಾಳದಲ್ಲಿ ಬಿಜೆಪಿ ಪರ ಚುನಾವಣಾ ಪ್ರಚಾರಕ್ಕೆ ಸಚಿವ ಶಾ ರಂಗು ನೀಡಿದ್ದಾರೆ.

ಟಿಎಂಸಿಯ ತುಷ್ಟೀಕರಣ ರಾಜನೀತಿ, ಭ್ರಷ್ಟಾಚಾರ ಮತ್ತು ರಾಜಕೀಯ ಹಿಂಸಾಚಾರಗಳಿಂದಾಗಿ ಕಳೆದ 15 ವರ್ಷಗಳಲ್ಲಿ ಪಶ್ಚಿಮ ಬಂಗಾಳವು ಅಕ್ರಮ ನುಸುಳುವಿಕೆಗೆ ದೇಶದ ಪ್ರಧಾನ ಕಾರಿಡಾರ್ ಆಗಿ ಪರಿವರ್ತಿತವಾಗಿದೆ ಎಂದು ಆರೋಪಿಸುವ ಮೂಲಕ, ತಾನು ಪ.ಬಂಗಾಳದ ಜನಸಾಮಾನ್ಯರ ಪರ ಹೋರಾಟಗಾರ್ತಿ ಎಂದು ಬಿಂಬಿಸಿಕೊಂಡು ಬಂದಿರುವ ಮಮತಾ ಬ್ಯಾನರ್ಜಿ ಇಮೇಜ್‌ಗೆ ಬಂಗಾಳದಲ್ಲೇ ಸಚಿವರು ಹೊಡೆತ ನೀಡಿದ್ದಾರೆ.

➡ಪುಟ ೮



ಗಡಿಗೆ ಬೇಲಿ ಹಾಕಲು ಬಿಡದ ಮಮತಾ

ಟಿಎಂಸಿ ಸರ್ಕಾರ ಅಕ್ರಮ ನುಸುಳುಕೋರರ ಮತ ಬ್ಯಾಂಕ್ ಸೃಷ್ಟಿಸುವ ದುರುದ್ದೇಶ ಹೊಂದಿದೆ. ಹಾಗಾಗಿಯೇ ಕೇಂದ್ರದ ಸತತ ಮನವಿ ಹೊರತೂ ಬಾಂಗ್ಲಾದೇಶ ಗಡಿಯುದ್ದಕ್ಕೂ ಭಾರತದ ಗಡಿಗೆ ತಂತಿಬೇಲಿ ಬಿಗಿಯಲು ಅಗತ್ಯವಿರುವ ಜಮೀನನ್ನು ಕೇಂದ್ರಕ್ಕೆ ನೀಡಿಲ್ಲ.

➡ಪುಟ ೮

ವೈರಮುಡಿ ಉತ್ಸವ ಅದ್ಧೂರಿ

• **ಮೇಲುಕೋಟೆ:** ಶ್ರೀ ಚಲುವನಾರಾಯಣ ಸ್ವಾಮಿಯವರ ವಿಶ್ವವಿಖ್ಯಾತ ವೈರಮುಡಿ ಕಿರೀಟಧಾರಣ ಮಹೋತ್ಸವ ಮಹಾವಿಷ್ಣುವಿನ ಅನುಗ್ರಹಕ್ಕೆ ಪ್ರಮುಖ ದಿನವಾದ ಶನಿವಾರ ರಾತ್ರಿ ಲಕ್ಷಾಂತರ ಭಕ್ತರ ಜಯಘೋಷದೊಂದಿಗೆ ಅದ್ಧೂರಿಯಾಗಿ ನೆರವೇರಿತು. ಪರಾಭವನಾಮ ಸಂವತ್ಸರದ ಮೀನ-ಚೈತ್ರಮಾಸದ ಪುಷ್ಯ ನಕ್ಷತ್ರದ ಶುಭದಿನಕೂಡಿದ ಬ್ರಹ್ಮೋತ್ಸವದ ನಾಲ್ಕನೇ ತಿರುನಾಳ್ ದಿನದಂದು ಸಾಕ್ಷಾತ್ ಭಗವಂತನದ್ದೆಂದೇ ಪ್ರತೀತಿಯಿರುವ ವೈರಮುಡಿ ಕಿರೀಟವನ್ನು ಶ್ರೀದೇವಿ ಭೂದೇವಿಯರೊಂದಿಗೆ ಗರುಡಾರೂಢನಾದ ಚಲುವನಾರಾಯಣಸ್ವಾಮಿಗೆ ರಾತ್ರಿ 8 ಗಂಟೆಗೆ ತೊಡಿಸಲಾಯಿತು. ಇದಕ್ಕೂ ಮುನ್ನ ಗರುಡದೇವನ ಉತ್ಸವ ನಡೆದ ನಂತರ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಸಮಕ್ಷಮದಲ್ಲಿ ಮಹಾಮಂಗಳಾರತಿ ನೆರವೇರಿಸಿ, ಭಕ್ತರ ಗೋವಿಂದ ನಾಮ ಘೋಷಣೆಯೊಂದಿಗೆ ವೈರಮುಡಿ ಉತ್ಸವಕ್ಕೆ ಚಾಲನೆ ದೊರೆಯಿತು. • ವಿವರ ಪುಟ ೧೦





ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆ ಪ್ರಧಾನಿ ಮೋದಿ ಕರೆ

ಏಕತೆಯಿಂದ ಬಿಕ್ಕಟ್ಟು ಎದುರಿಸಿ

• **ನೋಯ್ಡಾ:** ಜಾಗತಿಕ ಸವಾಲುಗಳನ್ನು ಎದುರಿಸಿಕೊಂಡು ವಿಕಸಿತ ಭಾರತ ಸಾಕಾರಗೊಳಿಸಲು 140 ಕೋಟಿ ಭಾರತೀಯರೊಳಗೆ ಏಕತೆ ಮತ್ತು ಸಾಮೂಹಿಕ ಪ್ರಯತ್ನಗಳ ಅಗತ್ಯವಿದೆ. ಸವಾಲುಗಳ ನಿಭಾಯಿಸಲು ಸಮರ್ಪಣಾ ಭಾವ ಮತ್ತು ಏಕತೆಯಿಂದ ದುಡಿಯುವಂತೆ ದೇಶವಾಸಿಗಳಿಗೆ ಕರೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಇದೇ ನಮ್ಮ ಬಲವೆಂದು ಹೇಳಿದ್ದಾರೆ.

ಪ.ಏಷ್ಯಾ ಬಿಕ್ಕಟ್ಟನ್ನು ಉಲ್ಲೇಖಿಸಿ, ಸರಕಾರ ಭಾರತದ ಹಿತಾಸಕ್ತಿ ಮತ್ತು ದೇಶದ ಕುಟುಂಬಗಳು ಹಾಗೂ ರೈತರ ಹಿತ ಕಾಯಲು ಪ್ರಾಧಾನ್ಯತೆ ನೀಡಿದೆ ಎಂದು ನುಡಿದರು.

ಸಮಯದ ಉಳಿತಾಯ ಮತ್ತು ವೆಚ್ಚ ಕಡಿತಗಳಿಂದ ಜನರ ಬದುಕನ್ನು ಸುಗಮಗೊಳಿಸಲು ಸರಕಾರ ಆದ್ಯತೆ ನೀಡಿದೆ. ಪ.ಏಷ್ಯಾ ಸಂಘರ್ಷ ಜಾಗತಿಕ ಬಿಕ್ಕಟ್ಟು, ಆದರೆ ನಾವು ಭಾರತದ ಹಿತಾಸಕ್ತಿಗಳ ರಕ್ಷಣೆಗೆ ಪ್ರಾಧಾನ್ಯತೆ ಕೊಡಬೇಕು. ಜಾಗತಿಕ ಬಿಕ್ಕಟ್ಟನ್ನು ಆದಷ್ಟು ಮೌನವಾಗಿ, ಸಹನೆ ಮತ್ತು ಏಕತೆಯಿಂದ ಎದುರಿಸಬೇಕೆಂಬುದು ಜನರಲ್ಲಿ ನನ್ನ ಪುನರಪಿ ಮನವಿಯಾಗಿದೆ ಎಂದರು.

➡ಪುಟ ೮



ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟಿಸಿದ ಪ್ರಧಾನಿ ಮೋದಿ.

ಜನರ ಸುರಕ್ಷೆಗೆ ಅಗತ್ಯ ಕ್ರಮ

ಪ.ಏಷ್ಯಾದಲ್ಲಿ ಸುಮಾರು ಒಂದು ತಿಂಗಳಿಂದ ಸಮರ ನಡೆಯುತ್ತಿದೆ. ಸಂಘರ್ಷದಿಂದ ಉದ್ಭವಿಸಿರುವ ಸವಾಲುಗಳನ್ನು ಭಾರತವು ಸಂಪೂರ್ಣ ಶಕ್ತಿಯುತವಾಗಿ ಎದುರಿಸುತ್ತಿದೆ. ದೇಶದ ಜನರ ಸುರಕ್ಷೆಗಾಗಿ ಸರಕಾರ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ.

➡ಪುಟ ೮

ನೇಪಾಳ ಮಾಜಿ ಪ್ರಧಾನಿ ಶರ್ಮಾ ಒಲಿ ಬಂಧನ

• **ಕಠ್ಮಂಡು:** ತನಿಖಾ ಆಯೋಗದ ವರದಿಯನ್ನು ಜಾರಿಗೆ ತರುವ ಸರ್ಕಾರದ ನಿರ್ಧಾರದ ಬೆನ್ನಲ್ಲೇ ನೇಪಾಳದ ಪೊಲೀಸರು ಶನಿವಾರ ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಮತ್ತು ಮಾಜಿ ಗೃಹ ಸಚಿವ ರಮೇಶ್ ಲೇಖಕ್ ಅವರನ್ನು ಬಂಧಿಸಿದ್ದಾರೆ. ಕಳೆದ ವರ್ಷ ಸೆ.8 ಮತ್ತು 9ರಂದು ನಡೆದ ಜೆನ್ ಝಿ ಚಳವಳಿಯನ್ನು ಹತ್ತಿಕ್ಕಿದ ಕ್ರಿಮಿನಲ್ ಆರೋಪಗಳನ್ನು ಒಲಿ ಮತ್ತು ಲೇಖಕ್ ಎದುರಿಸುತ್ತಿದ್ದಾರೆ. ಈ ಘಟನೆಯಲ್ಲಿ 76 ಜನರು ಮೃತಪಟ್ಟಿದ್ದರು. ಆರೋಪಿಗಳಿಗೆ ಮೂರರಿಂದ ಹತ್ತು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವಂತೆ ಆಯೋಗ ಶಿಫಾರಸು ಮಾಡಿದೆ.



➡ಪುಟ ೮

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,45,000** (2,40,000) ಅಪರಂಜಿ ಚಿನ್ನ: **1,48,090** (1,44,710) ಆಭರಣ ಚಿನ್ನ: **1,35,750** (1,32,650) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹93.97

ಹೊಸದಿಗಂತ
ಭಾನುವಾರ, 29 ಮಾರ್ಚ್ 2026
ಹುಬ್ಬಳ್ಳಿ

ಆರೋಪಿಗಳ ಲೋಕದಲ್ಲಿ ಪೊಲೀಸರ ಕಾರುಬಾರು

ಶಿಸ್ತಿನ ಇಲಾಖೆಯ ಅಶಿಸ್ತಿನ ಸ್ಥಿತಿ



ಸಮಾಜದಲ್ಲಿ ಕಳ್ಳತನ ಮಾಡುವವರನ್ನು ಸೆರೆಹಿಡಿಯ ಬೇಕಿದ್ದ ಪೊಲೀಸರೇ ಇಂತಹ ಕೃತ್ಯದಲ್ಲಿ ಭಾಗಿಯಾಗುತ್ತಿರುವುದು ಕಳವಳದ ಸಂಗತಿ. ರಾಜ್ಯದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಅನೇಕ ಪೊಲೀಸರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಲಾಗಿದೆ. ಇದರ ನಡುವೆಯೂ ಲಂಚ ಪಡೆದು ಲೋಕಾಯುಕ್ತಕ್ಕೆ ಟ್ರ್ಯಾಪ್ ಆಗಿ ಇಲಾಖೆ ಗೌರವಕ್ಕೆ ಕುಂದುತರುತ್ತಿದ್ದಾರೆ. ದೇಶದಲ್ಲೇ ಕರ್ನಾಟಕ ಪೊಲೀಸರಿಗೆ ಉತ್ತಮ ಗೌರವ ಇತ್ತು. ಇಂತಹ ಪೊಲೀಸರಿಂದ ರಾಜ್ಯಕ್ಕೆ ಹಾಗೂ ಪೊಲೀಸ್ ಇಲಾಖೆಯೂ ತಲೆತಗ್ಗಿಸುವ ಸ್ಥಿತಿ ನಿರ್ಮಾಣವಾಗಿದೆ.

ಒಂದು ವರ್ಷದಲ್ಲಿ ಸುಮಾರು 88 ಕ್ರಿಮಿನಲ್ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ನೇರವಾಗಿ ಶಾಮೀಲು

ಪಿಎಸ್‌ಐ ಹುದ್ದೆ ಆಮಿಷ, ಲಂಚಕ್ಕಾಗಿ ಬೇಡಿಕೆ

ದರೋಡೆ ಪ್ರಕರಣದಲ್ಲೂ ಸ್ವತಃ ಸಿಬ್ಬಂದಿಯೇ ಭಾಗಿ

▸ಚಂದನ್ ಲಕ್ಕೂರು

ಕಳೆದ ವರ್ಷ ದಿಸೆಂಬರ್‌ನಲ್ಲಿ ನಡೆದ ವಾರ್ಷಿಕ ಪೊಲೀಸ್ ಅಧಿಕಾರಿಗಳ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ವರ್ಷದಲ್ಲಿ ಸುಮಾರು 88 ಕ್ರಿಮಿನಲ್ ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ನೇರವಾಗಿ ಶಾಮೀಲಾಗಿದ್ದಾರೆ ಎಂದು ತಿಳಿಸಿದ್ದರು.

ಸಮಾಜದಲ್ಲಿ ಕಳ್ಳತನ ಮಾಡುವವರನ್ನು ಸರೆಹಿಡಿಯ ಬೇಕಿದ್ದ ಪೊಲೀಸರೇ ಇಂತಹ ಕೃತ್ಯದಲ್ಲಿ ಭಾಗಿಯಗುತ್ತಿರುವುದು ಕಳವಳದ ಸಂಗತಿ. ರಾಜ್ಯದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಅನೇಕ ಪೊಲೀಸರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಲಾಗಿದೆ. ಇದರ ನಡುವೆಯೂ ಲಂಚ ಪಡೆದು ಲೋಕಾಯುಕ್ತಕ್ಕೆ ಟ್ರ್ಯಾಪ್ ಆಗಿ ಇಲಾಖೆ ಗೌರವಕ್ಕೆ ಕುಂದುತರುತ್ತಿದ್ದಾರೆ. ದೇಶದಲ್ಲೇ ಕರ್ನಾಟಕ ಪೊಲೀಸರಿಗೆ ಉತ್ತಮ ಗೌರವ ಇತ್ತು. ಇಂತಹ ಪೊಲೀಸರಿಂದ ರಾಜ್ಯಕ್ಕೆ ಹಾಗೂ ಪೊಲೀಸ್ ಇಲಾಖೆಯೂ ತಲೆತಗ್ಗಿಸುವ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಪ್ರಕರಣಗಳು ಪೊಲೀಸ್ ಇಲಾಖೆಯಲ್ಲಿ ಹೆಚ್ಚಾಗುತ್ತಿರುವುದಕ್ಕೆ ನೇರ ಕಾರಣ ಅವರ ವರ್ಗಾವಣೆ ನಡೆದಿಲ್ಲ ಎನ್ನುವ ಆರೋಪವೂ ಇದೆ.



ಪಿಎಸ್‌ಐ ಹಗರಣ: ಮಾಜಿ ಎಡಿಜಿಪಿ ಅಮೃತ್ ಪಾಲ್ ಭಾಗಿ

ರಾಜ್ಯವನ್ನೇ ತಲ್ಲಣಗೊಳಿಸಿದ್ದ 545 ಪಿಎಸ್‌ಐ ನೇಮಕಾತಿ ಹಗರಣದ ತನಿಖೆ ಈಗ ನಿರ್ಣಾಯಕ ಹಂತಕ್ಕೆ ತಲುಪಿದೆ. ಓಎಂಆರ್ ಶೀಟ್ ತಿದ್ದುಪಡಿ ಮಾಡಲು ಸ್ಟ್ರಾಂಗ್ ರೂಮ್ ಕೀಯನ್ನು ದುರುಪಯೋಗಪಡಿಸಿಕೊಂಡು ಅನರ್ಹ ಅಭ್ಯರ್ಥಿಗಳ ಆಯ್ಕೆಗೆ ಅವಕಾಶ ಮಾಡಿಕೊಡಲಾಗಿತ್ತು. ಪ್ರತಿ ಅಭ್ಯರ್ಥಿಯಿಂದ 30 ರಿಂದ 70 ಲಕ್ಷ ರೂಪಾಯಿ ಲಂಚ ಪಡೆಯಲಾಗಿತ್ತು ಎಂಬುದು ತನಿಖೆಯಲ್ಲಿ ದೃಢಪಟ್ಟಿದೆ. ನಿವೃತ್ತ ನ್ಯಾ.ಬಿ.ವೀರಪ್ಪ ನೇತೃತ್ವದ ಸಮಿತಿಯ ವರದಿ ಆಧರಿಸಿ, ಅಕ್ರಮದಲ್ಲಿ ಭಾಗಿಯಾದ 52 ಅಭ್ಯರ್ಥಿಗಳನ್ನು ಪರೀಕ್ಷೆಯಿಂದ ಶಾಶ್ವತವಾಗಿ ಡಿಬಾರ್ ಮಾಡಲಾಗಿದೆ. ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಬಿಗುವಿನ ಕ್ರಮ ಕೈಗೊಂಡಿದೆ. ಈ ಹಗರಣದ ಪ್ರಮುಖ ಸೂತ್ರಧಾರಿ ಎನ್ನಲಾದ ಮಾಜಿ ಎಡಿಜಿಪಿ ಅಮೃತ್ ಪಾಲ್ ಮತ್ತು ಹೆಡ್ ಕಾನ್ಸ್‌ಟೇಬಲ್ ಶ್ರೀಧರ್ ಅವರಿಗೆ ಸೇರಿದ 1.53 ಕೋಟಿ ರೂ. ಮೌಲ್ಯದ ಸ್ಥಿರ ಆಸ್ತಿಯನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ.

ಚಿನ್ನಾಭರಣ ತಯಾರಕನಿಂದಲೂ ದರೋಡೆ ಮಾಡಿದ ಪಿಎಸ್‌ಐ

ದಾವಣಗೆರೆ ನಗರದಲ್ಲಿ ರಕ್ಷಕರೇ ಭಕ್ಷಕರಾದ ಘಟನೆಯೊಂದು ನಡೆದಿತ್ತು. ಚಿನ್ನಾಭರಣ ತಯಾರಕನ ಬಳಿ ಇದ್ದ 76 ಗ್ರಾಂ ಬಂಗಾರವನ್ನು ದರೋಡೆ ಮಾಡಿದ ಇಬ್ಬರು ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು ಸೇರಿದಂತೆ ಒಟ್ಟು ಏಳು ಮಂದಿ ಆರೋಪಿಗಳನ್ನು ಜಿಲ್ಲಾ ಪೊಲೀಸರು ಬಂಧಿಸಿದ್ದರು. ಕಾರವಾರದ ನಿವಾಸಿ ಎಂ.ವಿಶ್ವನಾಥ ಅವರು ದಾವಣಗೆರೆಯ ಮಂಡಿಪೇಟೆಯ ವಿವಿಧ ಜ್ಯುವೆಲರ್ಸ್‌ಗಳಿಂದ ಆಭರಣ ತಯಾರಿಸಲು ಸುಮಾರು 76 ಗ್ರಾಂ ಬಂಗಾರವನ್ನು ಪಡೆದುಕೊಂಡಿದ್ದರು. ರಾತ್ರಿ 12.30ರ ಸುಮಾರಿಗೆ ಊರಿಗೆ ಮರಳಲು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಂದು ಬಸ್ ಹತ್ತುತ್ತಿದ್ದಾಗ, ಹಿಂಬದಿಯಿಂದ ಬಂದ ವ್ಯಕ್ತಿಯೊಬ್ಬರು ನಾನು ಪೊಲೀಸ್ ಅಧಿಕಾರಿ ಎಂದು ಬೆದರಿಸಿ ಬಸ್ಸಿನಿಂದ ಕೆಳಕ್ಕೆ ಇಳಿಸಿದ್ದಾರೆ. ಬಳಿಕ ವಿಶ್ವನಾಥ ಅವರನ್ನು 112ಪೊಲೀಸ್ ಜೀಪಿನಲ್ಲಿ ಕೆಟಿಜೆ ನಗರ ಪೊಲೀಸ್ ಠಾಣೆಯ ಬಳಿ ಕರೆದೊಯ್ದು, ಅಲ್ಲಿಂದ ಮತ್ತೊಂದು ಕಾರಿಗೆ ವರ್ಗಾಯಿಸಿದ್ದಾರೆ. ಬಿಎಸ್‌ಎನ್‌ಎಲ್ ಕಚೇರಿ ಸಮೀಪ ಕರೆದೊಯ್ದ ಆರೋಪಿಗಳು, ನೀನು ಚಿನ್ನ ಕಳ್ಳಸಾಗಣೆ ಮಾಡುತ್ತಿದ್ದೀಯಾ ಎಂದು ಬೆದರಿಸಿ, ಹಲ್ಲೆ ನಡೆಸಿ ಅವರ ಬಳಿಯಿದ್ದ 8 ಲಕ್ಷ ರೂ. ಮೌಲ್ಯದ ಚಿನ್ನವನ್ನು ಕಸಿದುಕೊಂಡು ಮತ್ತೆ ಬಸ್ ನಿಲ್ದಾಣಕ್ಕೆ ಬಿಟ್ಟು ಪರಾರಿಯಾಗಿದ್ದರು. ಹಾವೇರಿ ಜಿಲ್ಲೆ ಹಂಸಭಾವಿ ಠಾಣೆಯ ಪಿಎಸ್‌ಐ ಮಾಳಪ್ಪ, ರಾಣೆಬೆನ್ನೂರು ಸಂಚಾರ ಠಾಣೆಯ ಪಿಎಸ್‌ಐ ಪ್ರವೀಣ್, ಸೇರಿದಂತೆ ಇತರೆ ಆರೋಪಿಗಳನ್ನು ಪೊಲೀಸರು ಬಂಧಿಸಿ, ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿದ್ದರು.

ನ್ಯಾಯ ಕೇಳಲು ಬಂದವರನ್ನೇ ಮಂಚಕ್ಕೆ ಕರೆದ ಪಿಐ

ಮೂಡುಬಿದಿರೆ ಪೊಲೀಸ್ ಇನ್ಸ್‌ಪೆಕ್ಟರ್ ಸಂದೇಶ್ ವಿರುದ್ಧ ಕೇಳಿಬಂದಿರುವ ಲೈಂಗಿಕ ಕಿರುಕುಳದ ಆರೋಪದ ಹಿನ್ನೆಲೆಯಲ್ಲಿ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶ ಇಲಾಖೆ ಹೊರಡಿಸಿದೆ.



ಕೌಟುಂಬಿಕ ಕಲಹ ಹಾಗೂ ಇತರ ವೈಯಕ್ತಿಕ ಸಮಸ್ಯೆಗಳ ಬಗ್ಗೆ ದೂರು ನೀಡಲು ಪೊಲೀಸ್ ಠಾಣೆಗೆ ಬರುತ್ತಿದ್ದ ಮಹಿಳೆಯರಿಗೆ ಸಂದೇಶ್ ಲೈಂಗಿಕ ಕಿರುಕುಳ ನೀಡುತ್ತಿದ್ದರು ಎಂಬ ಗಂಭೀರ ಆರೋಪಗಳು ಕೇಳಿಬಂದಿದ್ದವು. ನ್ಯಾಯ ಕೇಳಲು ಹೋದ ಮಹಿಳೆಯರನ್ನು ಅಸಭ್ಯವಾಗಿ ನಡೆಸಿಕೊಳ್ಳುವುದು ಮಾತ್ರವಲ್ಲದೆ, ಅವರಿಗೆ ಲೈಂಗಿಕ ಸುಖಕ್ಕೆ ಬೇಡಿಕೆ ಇಡುತ್ತಿದ್ದರು ಎಂದು ಸಂತ್ರಸ್ತೆಯರು ದೂರಿದ್ದಾರೆ.



ಆಯುಕ್ತರ ಕಚೇರಿಯ ಆವರಣದಲ್ಲೇ ಹಣ ಕಳ್ಳತನ

ಸೈಬರ್ ಕ್ರೈಂ ಪ್ರಕರಣವೊಂದರಲ್ಲಿ ಆರೋಪಿಯೊಬ್ಬನನ್ನು ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದರು. ಆತ ಜಾಮೀನಿನ ಮೇಲೆ ಹೊರಬಂದ ನಂತರ, ತನ್ನ ಕಾರಿನಲ್ಲಿ 11ಲಕ್ಷ ರೂ. ಹಣವಿದ್ದ ಬ್ಯಾಗ್ ನಾಪತ್ತೆಯಾಗಿದೆ. ಆ ಹಣವನ್ನು ಯಾರೋ ಕಳ್ಳತನ ಮಾಡಿದ್ದಾರೆ ಎಂದು ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದನು. ಈ ಬಗ್ಗೆ ಪೊಲೀಸ್ ಅಧಿಕಾರಿಗಳು ತನಿಖೆ ನಡೆಸಿದ್ದರು. ಜಪ್ತಿ ಮಾಡಿದ್ದ ಕಾರನ್ನು ಆಯುಕ್ತರ ಕಚೇರಿ ಹಿಂದಿನ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆ ಮಾಡಲಾಗಿತ್ತು. ಸಿಸಿ ಕ್ಯಾಮೆರಾ ಪರಿಶೀಲಿಸಿದಾಗ 11 ಲಕ್ಷ ರೂ. ಇದ್ದ ಬ್ಯಾಗ್ ಅನ್ನು ಅದೇ ಠಾಣೆಯ ಹೆಡ್ ಕಾನ್ಸ್‌ಟೇಬಲ್ ಜಬೀವುಲ್ಲಾ ತೆಗೆದುಕೊಂಡು ಹೋಗಿರುವುದು ಪತ್ತೆಯಾಗಿತ್ತು. ಜಬೀವುಲ್ಲಾನ ಮನೆ ಪರಿಶೀಲನೆ ನಡೆಸಿದಾಗ ಹಾಸಿಗೆ ಕೆಳಗೆ ಹಣವನ್ನು ಜೋಡಿಸಿಟ್ಟಿರುವುದು ಪತ್ತೆಯಾಗಿತ್ತು.



ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಪಿಐ, ಡಿವೈಎಸ್‌ಪಿ, ಎಸಿಪಿ ಇವರಿಗೆ ಗೊತ್ತಿಲ್ಲದೆ ಯಾವ ಅಪರಾಧವೂ ನಡೆಯಲು ಸಾಧ್ಯವಿಲ್ಲ. ಪೊಲೀಸರು ಜಾಗರೂಕತೆಯಿಂದ ಕೆಲಸ ಮಾಡಬೇಕು. ವಿಶೇಷವಾಗಿ ದುರ್ಬಲರಿಗೆ ರಕ್ಷಣೆ ನೀಡಬೇಕು. ಬಲಾಢ್ಯರ ಕೈಗೊಂಬೆಗಳಂತೆ ಕೆಲಸ ಮಾಡಬಾರದು.
■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಪೊಲೀಸ್ ವಾರ್ಷಿಕ ಸಮ್ಮೇಳನದಲ್ಲಿ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಲುಕಕೂಡದು ಎಂದು ಎಚ್ಚರಿಸಲಾಗಿತ್ತು. ಪದೇ ಪದೆ ಇಂತಹ ಘಟನೆಯಾದಾಗ ಸರ್ಕಾರಕ್ಕೆ ಹಾಗೂ ವೈಯುಕ್ತಿಕವಾಗಿ ನನಗೂ ಮುಜುಗರವಾಗಲಿದೆ. ಆಗಾಗ ಇಂತಹ ಘಟನೆಗಳು ಯಾಕೆ ನಡೆಯುತ್ತದೆ ಎಂಬುದರ ಬಗ್ಗೆ ಅಧ್ಯಯನ ಮಾಡಬೇಕಿದೆ. ನನ್ನ ಹಂತದಲ್ಲಿ ಭ್ರಷ್ಟಾಚಾರ ನಡೆಸುವುದಕ್ಕೆ ಬಿಡುವುದಿಲ್ಲ. ನಮಗೆ ಜವಾಬ್ದಾರಿ ಇದೆ. ಜನರಿಗೆ ನಾವು ಉತ್ತರ ಕೊಡಬೇಕು. ಜನ ನಮ್ಮನ್ನು ಗೆಲ್ಲಿಸಿದ್ದಾರೆ. ಆದಷ್ಟು ಈ ತರಹದ ಘಟನೆ ಆಗದ ರೀತಿ ನೋಡಿಕೊಳ್ಳುತ್ತೇವೆ.
■ ಡಾ.ಜಿ.ಪರಮೇಶ್ವರ, ಗೃಹ ಸಚಿವ

ಇಂಟೆಗ್ರಿಟಿ ಚೆಕ್ ಎಲ್ಲಾ ಹಂತದ ಸಿಬ್ಬಂದಿಗಳ ಹಿನ್ನೆಲೆ ಮತ್ತು ನಡತೆಯ ಬಗ್ಗೆ ನಿಯಮಿತವಾಗಿ ಪರಿಶೀಲನೆ ನಡೆಸಲು ಆದೇಶಿಸಲಾಗಿದೆ. ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾದವರನ್ನು ಕೇವಲ ಅಮಾನತು ಮಾಡದೆ, ಸೇವೆಯಿಂದ ವಜಾಗೊಳಿಸುವ ಪ್ರಕ್ರಿಯೆಗೂ ಚಾಲನೆ ನೀಡಲಾಗಿದೆ. ಕೆಲಸದ ಒತ್ತಡ ಮತ್ತು ನೈತಿಕ ದಾರಿ ತಪ್ಪದಂತೆ ಸಿಬ್ಬಂದಿಗೆ ಕೌನ್ಸೆಲಿಂಗ್ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.
■ ಡಾ.ಎಂ.ಎ. ಸಲೀಂ. ಡಿಜಿ, ಐಜಿಪಿ



ಹಾಡಹಗಲೇ ಎಟಿಎಂ ವಾಹನ ಅಡ್ಡಗಟ್ಟಿ ದರೋಡೆ

ಬೆಂಗಳೂರಿನ ಹೃದಯಭಾಗದಲ್ಲಿ ನವೆಂಬರ್ ತಿಂಗಳಲ್ಲಿ ಹಾಡುಹಗಲೇ ಸಿನಿಮೀಯ ಮಾದರಿಯಲ್ಲಿ ಎಟಿಎಂ ಹಣ ಸಾಗಿಸುವ ವಾಹನವನ್ನು ದರೋಡೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಕಾನ್ಸ್‌ಟೇಬಲ್ ಅಣ್ಣಪ್ಪ ನಾಯಕ್ ದರೋಡೆಕೋರರ ಜತೆಗೆ ಸೇರಿ ಕೃತ್ಯ ಎಸಗಲು ಪ್ರಮುಖ ಪಾತ್ರವಹಿಸಿದ್ದನು. ಭಾರತ ಸರ್ಕಾರ ಎಂಬ ಬೋರ್ಡ್ ಹಾಕಿಕೊಂಡಿದ್ದ ಕಾರಿನಲ್ಲಿ ಬಂದ 7-8 ಜನರ ತಂಡ, ಬರೋಬ್ಬರಿ 7.11 ಕೋಟಿ ರೂ. ಹಣದೊಂದಿಗೆ ಪರಾರಿಯಾಗಿದ್ದರು. ಜಯನಗರದ ಅಶೋಕ ಪಿಲ್ಲರ್ ಬಳಿ ಕೃತ್ಯ ಆರಂಭಿಸಿ, ಡೈರಿ ಸರ್ಕಲ್ ಫ್ಲೈ ಓವರ್ ಮೇಲೆ ದರೋಡೆ ಮಾಡಲಾಗಿತ್ತು. ಆರ್‌ಬಿಐ ಅಧಿಕಾರಿಗಳು ಎಂದು ಹೇಳಿ ವಾಹನವನ್ನು ತಡೆದ ದರೋಡೆಕೋರರು, ಗನ್‌ಮ್ಯಾನ್ ಸೇರಿದಂತೆ ಸಿಬ್ಬಂದಿಯನ್ನು ಕೆಳಗಿಳಿಸಿದ್ದಾರೆ. ಬಳಿಕ ಚಾಲಕನೊಬ್ಬನನ್ನು ಮಾತ್ರ ವಾಹನದಲ್ಲೇ ಇರಿಸಿಕೊಂಡು ಡೈರಿ ಸರ್ಕಲ್‌ಗೆ ಕರೆದೊಯ್ದಿದ್ದಾರೆ. ಫ್ಲೈಓವರ್ ಮೇಲೆ ವಾಹನ ನಿಲ್ಲಿಸಿ, ಅದರಲ್ಲಿದ್ದ ಹಣವನ್ನು ತಮ್ಮ ಇನ್ನೋವಾ ಕಾರಿಗೆ ವರ್ಗಾಯಿಸಿಕೊಂಡು ಕ್ಷಣಾರ್ಧದಲ್ಲಿ ಮರೆಯಾಗಿದ್ದರು.

ಎಸಿಪಿ ಲಂಚ ಪಡೆಯುವಾಗ ಲೋಕ ಟ್ರ್ಯಾಪ್

ಅವಧಿ ಮೀರಿ ಹೋಟೇಲ್ ಕಾರ್ಯನಿರ್ವಹಣೆಗೆ ಅನುಮತಿ ನೀಡಲು ವ್ಯವಸ್ಥಾಪಕರಿಂದ ಲಂಚ ಸ್ವೀಕರಿಸುತ್ತಿದ್ದ ಮಲ್ಲೇಶ್ವರಂ ಉಪವಿಭಾಗದ ಎಸಿಪಿ ಕೃಷ್ಣಮೂರ್ತಿ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಟ್ರ್ಯಾಪ್ ಮಾಡಿ ವಶಕ್ಕೆ ಪಡೆದಿದ್ದರು. ರಾಜಾಜಿನಗರದ ಸಾಗರ್ ಹೋಟೇಲ್ ವ್ಯವಸ್ಥಾಪಕ ಸಂಜಯ್ ಕುಮಾರ್ ನೀಡಿದ್ದ ದೂರಿನನ್ವಯ ಲೋಕಾಯುಕ್ತ ಅಧಿಕಾರಿಗಳು ಟ್ರ್ಯಾಪ್ ಮಾಡಿದ್ದರು. ಅವಧಿ ಮೀರಿದ ಬಳಿಕವೂ ವ್ಯಾಪಾರ ವಹಿವಾಟು ನಡೆಸುತ್ತಿದ್ದ ಆರೋಪದಡಿ ಸಾಗರ್ ಹೋಟೆಲ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಈ ಸಂಬಂಧ ವಿಚಾರಣೆ ನಡೆಸಿದ್ದ ಎಸಿಪಿ ಕೃಷ್ಣಮೂರ್ತಿ ಅವರು ಅನುಮತಿ ನೀಡಲು 50 ಸಾವಿರ ರೂ. ಲಂಚಕ್ಕೆ ಬೇಡಿಕೆಯಿಟ್ಟಿರುವುದಾಗಿ ಹೋಟೆಲ್ ವ್ಯವಸ್ಥಾಪಕ ಸಂಜಯ್ ಕುಮಾರ್ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಲೋಕಾಯುಕ್ತ ಅಧಿಕಾರಿಗಳು ಬುಧವಾರ ಕಚೇರಿಯಲ್ಲಿ 30 ಸಾವಿರ ಲಂಚದ ಹಣ ಸ್ವೀಕರಿಸುತ್ತಿದ್ದಾಗಲೇ ಎಸಿಪಿ ಕೃಷ್ಣಮೂರ್ತಿ ಅವರನ್ನು ವಶಕ್ಕೆ ಪಡೆದಿದ್ದಾರೆ.



ಲಂಚ ಸ್ವೀಕರಿಸುವಾಗ ಲೋಕ ಬಲೆಗೆ ಪಿಐ

ಚೀಟಿ ವ್ಯವಹಾರ ಪ್ರಕರಣವೊಂದರಲ್ಲಿ ಹೆಸರು ಸೇರಿಸದಿರಲು ರಿಯಲ್ ಎಸ್ಟೇಟ್ ಉದ್ಯಮಿಯಿಂದ ಲಂಚ ಸ್ವೀಕರಿಸುತ್ತಿದ್ದ ಕೆ.ಪಿ.ಅಗ್ರಹಾರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಗೋವಿಂದರಾಜು ಅವರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. 2025ರಲ್ಲಿ ಕೆ.ಪಿ.ಅಗ್ರಹಾರ ಠಾಣೆಯಲ್ಲಿ ದಾಖಲಾಗಿದ್ದ ಚೀಟಿ ವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ, ರಿಯಲ್ ಎಸ್ಟೇಟ್ ಉದ್ಯಮಿ ಮೊಹಮ್ಮದ್ ಅಕ್ಬರ್ ಅವರ ಹೆಸರನ್ನು ಆರೋಪಿಗಳ ಪಟ್ಟಿಗೆ ಸೇರಿಸುವುದಾಗಿ ಇನ್ಸ್‌ಪೆಕ್ಟರ್ ಗೋವಿಂದರಾಜು ಬೆದರಿಕೆ ಹಾಕಿದ್ದರು. ಈ ಹೆಸರನ್ನು ಕೈಬಿಡಲು 5 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಇದರ ಪ್ರಕಾರ ಮುಂಗಡ ಹಣ ಒಂದು ಲಕ್ಷ ರೂ.ವನ್ನು ಗೋವಿಂದರಾಜು ಪಡೆದುಕೊಂಡಿದ್ದರು. ಬಾಕಿ ಉಳಿದ 4 ಲಕ್ಷ ಹಣವನ್ನು ಮೈಸೂರು ರಸ್ತೆಯ ಶಿರಸಿ ಸರ್ಕಲ್ ಸಮೀಪವಿರುವ ಸಿಎಆರ್ ಗ್ರೌಂಡ್ ಬಳಿ ಪಡೆಯುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳು ಜ.29ರಂದು ದಾಳಿ ನಡೆಸಿ ಬಂಧಿಸಿದ್ದಾರೆ. ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆಯುತ್ತಿದ್ದಂತೆ ಇನ್ಸ್‌ಪೆಕ್ಟರ್ ಗೋವಿಂದರಾಜು ಏಯ್.. ಏಯ್.. ಎಂದು ಬೊಬ್ಬಿಡುತ್ತಾ ಸ್ಥಳದಲ್ಲಿ ಕೆಲಕಾಲ ಹೈಡ್ರಾಮಾ ಸೃಷ್ಟಿಸಿದ್ದಾರೆ. ಈ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ.

ತುಮಕೂರಿನಲ್ಲಿ ಲೋಕಾ ಬಲೆಗೆ ಪಿಎಸ್‌ಐ



ಕಾರು ಬಿಡುಗಡೆ ಮಾಡಲು ಲಂಚಕ್ಕೆ ಬೇಡಿಕೆ ಇಟ್ಟಿದ್ದ ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಚೇತನ್ ಕುಮಾರ್ ಅವರನ್ನು ಸಾಕ್ಷ್ಯಾಧಾರ ಸಮೇತ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಬೆಂಗಳೂರು ಮೂಲದ ವಕೀಲ ನಾಗೇಶ್ ಅವರಿಗೆ ಸೇರಿದ ಕಾರನ್ನು ಜ.17ರಂದು ಕೆಸರುಮಡು ಸಮೀಪ ಪಿಎಸ್‌ಐ ವಶಕ್ಕೆ ಪಡೆದಿದ್ದರು. ಯಾವುದೇ ಅಧಿಕೃತ ಪ್ರಕರಣ ದಾಖಲಿಸದೆ ಕಾರನ್ನು ಬಿಡುಗಡೆ ಮಾಡಲು ಹಣದ ಬೇಡಿಕೆ ಇಟ್ಟಿದ್ದರು. ಆರಂಭದಲ್ಲಿ ಕಾರಿನ ಮಾಲೀಕರಿಂದ 5 ಲಕ್ಷ ರೂ. ಲಂಚ ಕೇಳಿದ್ದ ಪಿಎಸ್‌ಐ, ನಂತರ ಸುದೀರ್ಘ ಮಾತುಕತೆಯ ಬಳಿಕ 40 ಸಾವಿರ ರೂ.ಗೆ ಒಪ್ಪಂದ ಮಾಡಿಕೊಂಡಿದ್ದರು ಎನ್ನಲಾಗಿದೆ. ಇದರಿಂದ ಬೇಸತ್ತ ವಕೀಲ ನಾಗೇಶ್ ಅವರು ತುಮಕೂರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಇನ್ಸ್‌ಪೆಕ್ಟರ್ ವಿರುದ್ಧ ರಾಜ್ಯಪಾಲರಿಗೆ ಸಿಬ್ಬಂದಿ ದೂರು

ಬೆಂಗಳೂರಿನ ಪುಟ್ಟೇನಹಳ್ಳಿ ಠಾಣೆಯ ಇನ್ಸ್‌ಪೆಕ್ಟರ್ ಎಚ್.ಕೆ. ರವಿಕುಮಾರ್ ವಿರುದ್ಧ ಅದೇ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ಗಳು ಹಾಗೂ ಸಿಬ್ಬಂದಿ ಒಗ್ಗೂಡಿ ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಕಳೆದ ಎರಡೂವರೆ



ವರ್ಷಗಳಲ್ಲಿ ಇನ್ಸ್‌ಪೆಕ್ಟರ್ ಸುಮಾರು 15 ಕೋಟಿ ರೂ.ಗೂ ಅಧಿಕ ಅಕ್ರಮ ಆಸ್ತಿ ಸಂಪಾದಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಬಾರ್, ಪಬ್, ಸ್ಪಾ ಮತ್ತು ಬೀದಿ ಬದಿ ವ್ಯಾಪಾರಿಗಳಿಂದಲೇ ತಿಂಗಳಿಗೆ 25 ಲಕ್ಷ ರೂ. ಹಫ್ತಾ ವಸೂಲಿ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೆ, ರೇಪ್ ಕೇಸ್, ವೀಸಾ ವೆರಿಫಿಕೇಶನ್ ಮತ್ತು ವಂಚನೆ ಪ್ರಕರಣಗಳನ್ನು ಮುಚ್ಚಿಹಾಕಲು ಆರೋಪಿಗಳಿಂದ ಲಕ್ಷಾಂತರ ರೂಪಾಯಿ ಲಂಚ ಪಡೆಯುತ್ತಿದ್ದಾರೆ. ರೌಡಿ ಪಟ್ಟಿಯಿಂದ ಹೆಸರು ತೆಗೆಯಲು ಒಬ್ಬೊಬ್ಬರಿಂದ 20 ರಿಂದ 25 ಲಕ್ಷ ಹಣಕ್ಕೆ ಬೇಡಿಕೆ ಇಡುತ್ತಿದ್ದು, ಇವರ ಕಿರುಕುಳದಿಂದ ಬೇಸತ್ತ ಸಿಬ್ಬಂದಿ ಈಗ ರಾಜ್ಯಪಾಲರು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಪತ್ರ ಬರೆದು ಸಮಗ್ರ ತನಿಖೆಗೆ ಆಗ್ರಹಿಸಿದ್ದಾರೆ.



ಹವಾಲಾ ಹಣ ಪಡೆದ ಆರೋಪ: ಪಿಐ ಅಮಾನತು

ಕರ್ತವ್ಯಲೋಪದ ಹಿನ್ನೆಲೆಯಲ್ಲಿ ಅಮಾನತುಗೊಂಡಿದ್ದ ಜ್ಞಾನಭಾರತಿ ಠಾಣೆಯ ಇನ್ಸ್‌ಪೆಕ್ಟರ್ ಎಂ.ಎಸ್. ರವಿ ಅವರ ವಿರುದ್ಧ ಈಗ ಕೋಟ್ಯಂತರ ರೂಪಾಯಿ ಹವಾಲಾ ಹಣ ಎಗರಿಸಿದ ಗಂಭೀರ ಆರೋಪ ಕೇಳಿಬಂದಿದೆ. ಜ.15ರಂದು ನಾಗರಬಾವಿ ಬಳಿ ಹವಾಲಾ ಹಣ ಸಾಗಾಟವಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಇನ್ಸ್‌ಪೆಕ್ಟರ್ ನೇತೃತ್ವದ ತಂಡ ದಾಳಿ ನಡೆಸಿತ್ತು. ಪೊಲೀಸರನ್ನು ಕಂಡು ಪರಾರಿಯಾಗಲು ಯತ್ನಿಸಿದ ಆರೋಪಿಗಳನ್ನು ಎಲೆಕ್ಟ್ರಾನಿಕ್ ಸಿಟಿ ಬಳಿ ಸಿನಿಮೀಯ ಶೈಲಿಯಲ್ಲಿ ಬೆನ್ನಟ್ಟಿ ವಶಕ್ಕೆ ಪಡೆಯಲಾಗಿತ್ತು. ಆದರೆ, ಈ ಕಾರ್ಯಾಚರಣೆಯ ವೇಳೆ ಜಪ್ತಿ ಮಾಡಲಾದ ಸುಮಾರು 1.5 ಕೋಟಿ ರೂ. ಹವಾಲಾ ಹಣವನ್ನು ಇನ್ಸ್‌ಪೆಕ್ಟರ್ ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಗುಮಾನಿ ವ್ಯಕ್ತವಾಗಿತ್ತು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ನಗರ ಪೊಲೀಸ್ ಆಯುಕ್ತರು ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ಎಲೆಕ್ಟ್ರಾನಿಕ್ ಸಿಟಿ ವಿಭಾಗದ ಡಿಸಿಪಿಗೆ ಸೂಚಿಸಿದ್ದಾರೆ.

ಪಿಎಸ್‌ಐಯಿಂದ ಬಿ-ರಿಪೋರ್ಟ್‌ಗಾಗಿ ಲಂಚಕ್ಕೆ ಬೇಡಿಕೆ

ವಂಚನೆ ಪ್ರಕರಣವೊಂದರಲ್ಲಿ ಬಿ-ರಿಪೋರ್ಟ್ ಸಲ್ಲಿಸಲು 3ಲಕ್ಷ ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದ ಚಿಕ್ಕಜಾಲ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಶಿವಣ್ಣ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಸ್ಥಳೀಯ ನಿವಾಸಿ ರವಿಕುಮಾರ್ ಎಂಬುವರ ವಿರುದ್ಧ ಅದೇ ಠಾಣೆಯಲ್ಲಿ ವಂಚನೆ ಪ್ರಕರಣವೊಂದು ದಾಖಲಾಗಿತ್ತು. ಈ ಪ್ರಕರಣವನ್ನು ಮುಕ್ತಾಯಗೊಳಿಸಿ ನ್ಯಾಯಾಲಯಕ್ಕೆ ಬಿ-ರಿಪೋರ್ಟ್ ಸಲ್ಲಿಸಲು ಪಿಎಸ್‌ಐ ಶಿವಣ್ಣ ಅವರು 3ಲಕ್ಷ ಹಣ ನೀಡುವಂತೆ ರವಿಕುಮಾರ್ ಅವರಿಗೆ ಒತ್ತಾಯಿಸಿದ್ದರು ಎನ್ನಲಾಗಿದೆ. ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿದ ಲೋಕಯುಕ್ತ ಅಧಿಕಾರಿಗಳು, ರಾತ್ರಿ ಸುಮಾರು 8:30ರ ವೇಳೆಗೆ ಠಾಣೆಯ ಸಮೀಪವೇ ಶಿವಣ್ಣ ಅವರ ದ್ವಿಚಕ್ರ ವಾಹನದ ಬಳಿ 2 ಲಕ್ಷ ನಗದು ಹಣವನ್ನು ಇಡಲಾಗಿತ್ತು. ಲಂಚದ ಹಣವನ್ನು ಎತ್ತಿಕೊಳ್ಳಲು ಮುಂದಾದ ಕ್ಷಣದಲ್ಲೇ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು, ಸಾಕ್ಷಿ ಸಮೇತ ಅವರನ್ನು ವಶಕ್ಕೆ ಪಡೆದಿದ್ದಾರೆ.

ಪೊಲೀಸರಿಗೆ ಗೊತ್ತಾಗದ ಡ್ರಗ್ಸ್ ಫ್ಯಾಕ್ಟರಿ

ಕರ್ನಾಟಕವು ಈಗ ಕೇವಲ ಡ್ರಗ್ಸ್ ಸೇವನೆಯ ತಾಣವಲ್ಲದೆ, ಉತ್ಪಾದನೆಯ ಕೇಂದ್ರವಾಗಿಯೂ ಬದಲಾಗುತ್ತಿರುವುದು ಆತಂಕಕಾರಿ ವಿಚಾರ. ನೆರೆ ರಾಜ್ಯದ ಪೊಲೀಸರು ಬಂದು ಇಲ್ಲಿನ ಜಾಲಗಳನ್ನು ಪತ್ತೆ ಹಚ್ಚುತ್ತಿರುವುದು ಕಳವಳ ತಂದಿದೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ದೇಶವನ್ನೇ ಬೆಚ್ಚಿಬೀಳಿಸುವಂತಹ ಬೃಹತ್ ಡ್ರಗ್ಸ್ ಜಾಲವೊಂದನ್ನು ಜುಲೈ ತಿಂಗಳಲ್ಲಿ ಮಹಾರಾಷ್ಟ್ರ ಪೊಲೀಸರು ಭೇದಿಸಿದ್ದರು. ಹೆಸರಿಗೆ ಮಾತ್ರ ಕಾರ್ ಗ್ಯಾರೇಜ್ ನಡೆಸುತ್ತಿದ್ದ ಆರೋಪಿಗಳು. ಅದೇ ಜಾಗದಲ್ಲಿ ಗುಟ್ಟಾಗಿ ನಡೆಯುತ್ತಿದ್ದ ಸಿಂಥೆಟಿಕ್ ಡ್ರಗ್ಸ್ ತಯಾರಿಕಾ ಘಟಕದ ಮೇಲೆ ದಾಳಿ ಮಾಡಿರುವ ಪೊಲೀಸರು, ಬರೋಬ್ಬರಿ 390 ಕೋಟಿ ರೂ. ಮೌಲ್ಯದ ಮಾದಕ ವಸ್ತುವನ್ನು ಜಪ್ತಿ ಮಾಡಿದ್ದರು. ಅಜ್ಮಲ್ ಎಂಬವರು 20 ಸಾವಿರ ರೂ.ಗೆ ಬಾಡಿಗೆ ಪಡೆದಿದ್ದ ಜಾಗವನ್ನು, ಡ್ರಗ್ಸ್ ತಯಾರಿಕೆಗಾಗಿ ಬೇರೆಯವರಿಗೆ 1 ಲಕ್ಷ ರೂ.ಗೆ ಬಾಡಿಗೆಗೆ ನೀಡಿದ್ದರು. ಮುಂಭಾಗದಲ್ಲಿ ಕಾರು ಗ್ಯಾರೇಜ್ ಎಂಬಂತೆ ಬಿಂಬಿಸಿ, ಒಳಭಾಗದಲ್ಲಿ ಮೆಫೆಡ್ರೋನ್ ತಯಾರಿಸಲಾಗುತ್ತಿತ್ತು. ಮೈಸೂರಿನಿಂದ ಮಹಾರಾಷ್ಟ್ರಕ್ಕೆ ಈ ಮಾದಕ ವಸ್ತುಗಳು ಸರಬರಾಜಾಗುತ್ತಿದ್ದವು. ಬೃಹತ್ ಪ್ರಮಾಣದ ಮಾದಕ ವಸ್ತು ಪತ್ತೆಯಾಗಿರುವುದು ಒಂದು ಕಡೆ ಯಶಸ್ಸಾಗಿದ್ದರೂ, ಮೈಸೂರು ಪೊಲೀಸರ ವೈಫಲ್ಯದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಟೀಕೆಗಳು ವ್ಯಕ್ತವಾಗಿವೆ. ಮಹಾರಾಷ್ಟ್ರ ಪೊಲೀಸರು ಸುಳಿವು ನೀಡುವವರೆಗೆ ನಮ್ಮ ಪೊಲೀಸರು ಏನು ಮಾಡುತ್ತಿದ್ದರು ಎನ್ನುವ ಪ್ರಶ್ನೆಗಳು ಜನರಲ್ಲಿ ಹಲವು ಅನುಮಾನಗಳಿಗೆ ಎಡಮಾಡಿದೆ.

ರೌಡಿ ಬೇಬಿಗೆ ಪೋಲಿ ಪಾಪು ಕಿರುಕುಳ



ಕೋಣನಕುಂಟೆ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪಾವಣ್ಣ ಅವರು ಲೇಡಿ ರೌಡಿಶೀಟರ್ ಯಶಸ್ವಿನಿ ಗೌಡ ಅವರಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿತ್ತುಯ. ಇನ್ಸ್‌ಪೆಕ್ಟರ್ ಪಾವಣ್ಣ ಕೆಲವು ದಿನಗಳಿಂದ ಲೈಂಗಿಕ ಕಿರುಕುಳ ನೀಡುತ್ತಿದ್ದರು ಎಂದು ಆರೋಪಿಸಿ, ಸಂತ್ರಸ್ತೆ ನಗರ ಪೊಲೀಸ್ ಆಯುಕ್ತರಿಗೆ ಈ ಸಂಬಂಧ ದೂರು ನೀಡಿದ್ದು, ಇನ್ಸ್‌ಪೆಕ್ಟರ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಈ ಸಂಬಂಧ ಇನ್ಸ್‌ಪೆಕ್ಟರ್ ವಿರುದ್ಧ ಇಲಾಖೆ ತನಿಖೆ ನಡೆಸಿ ವರದಿ ನೀಡಲು ಡಿಸಿಪಿಗೆ ನಗರ ಪೊಲೀಸ್ ಆಯುಕ್ತರು ಸೂಚನೆ ನೀಡಿದ್ದಾರೆ.

ಬೆಂಗಳೂರಿನಲ್ಲೂ ಡ್ರಗ್ಸ್ ಫ್ಯಾಕ್ಟರಿ ಶಂಕೆ?


ಬೆಂಗಳೂರಿನ ಮೂರು ಡ್ರಗ್ಸ್ ಫ್ಯಾಕ್ಟರಿಗಳ ಮೇಲೆ ಮಹಾರಾಷ್ಟ್ರ ಪೊಲೀಸರು ದಾಳಿ ನಡೆಸಿ, ಅಂದಾಜು 56 ಕೋಟಿ ರೂ. ಮೌಲ್ಯದ ಮೆಫೆಡ್ರೋನ್ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ. ಈ ಕಾರ್ಯಾಚರಣೆಯು ರಾಜ್ಯ ಪೊಲೀಸ್ ಇಲಾಖೆಯ ಗುಪ್ತಚರ ವೈಫಲ್ಯವನ್ನು ಎತ್ತಿ ತೋರಿಸುವಂತಿದೆ. ಡಿ.21ರಂದು ಮುಂಬೈನಲ್ಲಿ ಮಹಾರಾಷ್ಟ್ರದ ಮಾದಕ ದ್ರವ್ಯ ನಿಗ್ರಹ ಕಾರ್ಯಪಡೆ ಅಬ್ದುಲ್ ಖಾದಿರ್ ಶೇಖ್ ಎಂಬಾತನನ್ನು ಬಂಧಿಸಿ 1.5 ಕೋಟಿ ರೂ. ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿತ್ತು. ಆತನ ವಿಚಾರಣೆ ವೇಳೆ ಬೆಳಗಾವಿಯ ಪ್ರಶಾಂತ್‌ಪಾಟೀಲ್ ಎಂಬಾತನ ಹೆಸರು ಹೊರಬಂದಿತು. ಈ ಕೊಂಡಿಯನ್ನು ಹಿಡಿದು ತನಿಖೆ ನಡೆಸಿದಾಗ ಬೆಂಗಳೂರಿನಲ್ಲಿ ಕಾರ್ಯಾಚರಿಸುತ್ತಿದ್ದ ಮೂರು ರಹಸ್ಯ ಡ್ರಗ್ಸ್ ಫ್ಯಾಕ್ಟರಿಗಳ ಸುಳಿವು ಸಿಕ್ಕಿದೆ. ಇದರ ಪರಿಣಾಮ ಸ್ಥಳೀಯ ಮೂರು ಠಾಣೆಯ ಇನ್ಸ್‌ಪೆಕ್ಟರ್‌ಗಳಾದ ಶಬರೀಶ್, ಚೇತನ್ ಕುಮಾರ್, ರಾಮಕೃಷ್ಣ ರೆಡ್ಡಿಯನ್ನು ಕರ್ತವ್ಯ ಲೋಪದ ಮೇಲೆ ಅಮಾನತು ಮಾಡಲಾಗಿದೆ.

ಘಟಪ್ರಭಾ ನದಿಗೆ 2.5ಟಿಎಂಸಿ ನೀರು

ಕಲಾದಗಿ: ಮೂರು ತಾಲೂಕಿನ ವಿವಿಧ ಹಳ್ಳಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಹಾಗೂ ಈ ಭಾಗದ ಜಲಮೂಲ ಜೀವನಾಡಿ ಘಟಪ್ರಭಾ ನದಿಗೆ ನೀರು ಹರಿಸಲು ಬೆಳಗಾವಿ ಪ್ರಾದೇಶಿಕ ಆಯುಕ್ತರಿಗೆ ಬಾಗಲಕೋಟೆ ಜಿಲ್ಲಾಧಿಕಾರಿಗಳಿಂದ ಪತ್ರ ರವಾನೆಯಾಗಿದೆ.

ಮುಧೋಳ, ಬೀಳಗಿ, ಬಾಗಲಕೋಟೆ ತಾಲೂಕಿನ ವಿವಿಧ ಹಳ್ಳಿಗಳ ಜನ ಜಾನುವಾರುಗಳಿಗೆ ಕುಡಿಯುವ ಉದ್ದೇಶಕ್ಕಾಗಿ ಹಿಡಕಲ್ ಜಲಾಶಯದಿಂದ 2.5 ಟಿಎಂಸಿ ನೀರು ಬಿಡಲು ಪತ್ರ ಬರೆದಿದ್ದು, ಬೀಳಗಿ ಶಾಸಕ ಜೆ.ಟಿ.ಪಾಟೀಲ ಬಾಗಲಕೋಟೆ ಜಿಲ್ಲಾಧಿಕಾರಿಗಳಿಗೆ ನದಿಗೆ ನೀರು ಬಿಡಿಸಲು ಅಗತ್ಯ ಕ್ರಮ ವಹಿಸುವಂತೆ ಮೂರು ದಿನದ ಹಿಂದೆ ಸೂಚನೆ ನೀಡಿದ ಹಿನ್ನೆಲೆ ಹಾಗೂ ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿಯವರಿಗೆ ನೀರು ಬಿಡಲು ಮನವಿ ಮಾಡಿದ್ದು ಬಾಗಲಕೋಟೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಕುಡಿಯುವ ಉದ್ದೇಶಕ್ಕಾಗಿ ಘಟಪ್ರಭಾ ನದಿಗೆ 2.5 ಟಿಎಂಸಿ ನೀರು ಬಿಡಲು ಬೆಳಗಾವಿ ಪ್ರಾದೇಶಿಕ ಆಯುಕ್ತರಿಗೆ ಮಾ.26ರಂದು ಪತ್ರ ರವಾನೆ ಮಾಡಿದ್ದಾರೆ.















ಕಿರುಸುದ್ದಿ

ರಕ್ತದಾನ ಶಿಬಿರ ಇಂದು

ಹುಬ್ಬಳ್ಳಿ: 24ನೇ ಜೈನ ತೀರ್ಥಂಕರ ಮಹಾವೀರರ 2625 ನೇ ಜಯಂತಿ ಮಹೋತ್ಸವವನ್ನು ಹುಬ್ಬಳ್ಳಿ ದಿಗಂಬರ ಜೈನ ಸಮಾಜವು ಎರಡು ದಿನಗಳು ಅದ್ದೂರಿಯಾಗಿ ಆಚರಿಸಲಾಗುವುದು. ಮಾ.29ರಂದು ದಿಗಂಬರ ಜೈನ ಸಮಾಜದ ಯುವ ಸಂಘ ಹಾಗೂ ಜೈನ ಯುವತಿಯರ ಸಂಘದಿಂದ ಮಹಾವೀರ ಗಲ್ಲಿಯ ಶಾಂತಿನಾಥ ಭವನದಲ್ಲಿ ಬೆಳಗ್ಗೆ 10.30ಕ್ಕೆ ರಾಷ್ಟ್ರೋತ್ಥಾನ ರಕ್ತ ಭಂಡಾರದ ಸಹಯೋಗದೊಂದಿಗೆ ರಕ್ತದಾನ ಶಿಬಿರ ನಡೆಯಲಿದೆ. ಸಂಜೆ 5.30ಕ್ಕೆ ನಡೆಯುವ ಧರ್ಮಸಭೆ ಕಾರ್ಯಕ್ರಮವನ್ನು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಉದ್ಘಾಟಿಸುವರು. ಜೈನ ಸಮಾಜದ ಅಧ್ಯಕ್ಷ ರಾಜೇಂದ್ರ ಬೀಳಗಿ ಅಧ್ಯಕ್ಷತೆ ವಹಿಸುವರು. ಮಾ.30ರಂದು ಬೆಳಗ್ಗೆ ಕ್ಕೆ ನಗರದ ಎಲ್ಲ ಜಿನಮಂದಿರಗಳಲ್ಲಿ ವಿಶೇಷ ಪೂಜೆಗಳು, ನಾಮಕರಣ, ತೊಟ್ಟಿಲೋತ್ಸವ ನೆರವೇರಲಿದೆ.

ಇಂದು ಆಯ್ಕೆ ಪ್ರಕ್ರಿಯೆ

ಹುಬ್ಬಳ್ಳಿ: ಕೆಎಸ್‌ಸಿಎ ಧಾರವಾಡ ವಲಯದ 14, 16 ಮತ್ತು 19 ವರ್ಷದೊಳಗಿನವರ ತಂಡಕ್ಕೆ ಆಯ್ಕೆ ಪ್ರಕ್ರಿಯೆ ಹುಬ್ಬಳ್ಳಿ, ಧಾರವಾಡ ಸೇರಿ ವಲಯ ವ್ಯಾಪ್ತಿಯ ವಿವಿಧ ಜಿಲ್ಲೆಗಳಲ್ಲಿ ನಡೆಯಲಿದೆ.

14 ವರ್ಷದೊಳಗಿನವರ ಬಾಲಕರ ತಂಡದ ಆಯ್ಕೆ ಪ್ರಕ್ರಿಯೆ ಮಾರ್ಚ್ 29ರಂದು ಬೆಳಗ್ಗೆ 8 ಗಂಟೆಗೆ ಕೆ.ಎಚ್.ಪಾಟೀಲ ಆಸ್ಟ್ರೋಟರ್ಫ್ ಮೈದಾನ, ಕಾರವಾರದ ಮಾಲಾದೇವಿ ಮೈದಾನ, ಏಪ್ರಿಲ್ 3ರಂದು ಬೆ.8ಕ್ಕೆ ಬೆಳಗಾವಿಯ ಕೆಎಸ್‌ಸಿಎ ಮೈದಾನ, ಮಾರ್ಚ್ 31ರಂದು ಬೆ.8ಕ್ಕೆ ಹುಬ್ಬಳ್ಳಿಯ ಕೆಎಸ್‌ಸಿಎ ಕ್ರೀಡಾಂಗಣ, ಧಾರವಾಡದ ಮಾಳಮಡ್ಡಿಯ ಕೆಇಬೋರ್ಡ್ ಶಾಲಾ ಮೈದಾನದಲ್ಲಿ ನಡೆಯಲಿವೆ. ಆಟಗಾರರು 2012ರ ಸೆ.1ರಿಂದ 2014ರ ಆಗಸ್ಟ್ 31ರ ಒಳಗೆ ಜನಿಸಿರಬೇಕು. 14 ವರ್ಷದೊಳಗಿನವರ ಅಂತರಜಿಲ್ಲಾ ಪಂದ್ಯಗಳು ಏ.6ರಿಂದ 10ರವರೆಗೆ ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮಹಾವೀರ ಜಯಂತಿ ನಾಳೆ

ಧಾರವಾಡ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಭಗವಾನ್ ಮಹಾವೀರ ಜಯಂತಿ ಮಾ.30ರಂದು ಸಂಜೆ 5 ಗಂಟೆಗೆ ಇಲ್ಲಿನ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಉದ್ಘಾಟಿಸಲಿದ್ದು, ಶಾಸಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸುವರು. ಜಮಖಂಡಿ ನಿವೃತ್ತ ಪ್ರಾಧ್ಯಾಪಕ ಪ್ರೊ. ಬಿ.ಪಿ.ನ್ಯಾಮಗೌಡ ವಿಶೇಷ ಉಪನ್ಯಾಸ ನೀಡುವರು. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಭಾಪತಿ ಬಸವರಾಜ ಹೊರಟ್ಟಿ ಜಿಲ್ಲೆಯ ಶಾಸಕರು, ನಿಗಮ ಮಂಡಳಿಗಳ ಅಧ್ಯಕ್ಷರು, ಜನಪ್ರತಿನಿಧಿಗಳು, ಜಿಲ್ಲಾಮಟ್ಟದ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ದಿಟ್ಟ ನಿರ್ಧಾರ ಸ್ವಾಗತಾರ್ಹ



ನವಲಗುಂದ: ಜಾಗತಿಕ ಮಟ್ಟದಲ್ಲಿ ಯುದ್ಧ ಕಾರ್ಮೋಡ ಕವಿದಿದ್ದು ಇರಾನ್ ಅಮೆರಿಕ ಇಸ್ರೇಲನಂತ ತೈಲ ಮಹಾನ್ ರಾಷ್ಟಗಳು ಯುದ್ದದಿಂದಾಗಿ ಜಾಗತಿಕ ಮಟ್ಟದಲ್ಲಿ ತೈಲ ಹಾಗೂ ಇತರೆ ಉತ್ಪನ್ನಗಳ ಕೊರತೆಯಿಂದ ಹಲವಾರು ದೇಶಗಳು ಸಮಸ್ಯೆ ಎದುರಿಸುತ್ತಿದ್ದು, ಇತ್ತ ಭಾರತ ದೇಶ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಇಂತಹ ಕಷ್ಟದ ಸಂದರ್ಭದಲ್ಲಿ ಡೀಸೆಲ್ ಪೆಟ್ರೋಲ್ ಮೇಲಿನ ಸುಂಕವನ್ನು ಶೇ.10 ಇಳಿಸಿ ದೇಶದ ಆರ್ಥಿಕತೆಯ ಸದೃಢತೆಯನ್ನು ಜಗತ್ತಿಗೆ ಸಾರಿದ್ದಾರೆ ಎಂದು ಬಿಜೆಪಿ ಮುಖಂಡ ದೇವರಾಜ್ ಬ.ದಾಡಿಬಾವಿ ಪ್ರಧಾನಿ ಮೋದಿ ಅವರ ನಿರ್ಧಾರವನ್ನು ಸ್ವಾಗತಿಸಿದ್ದಾರೆ. ಎಂತಹದ್ದೇ ಕಷ್ಟ ಬಂದರೂ ದೇಶ ಮತ್ತು ದೇಶದ ಜನತೆಯನ್ನು ಸುರಕ್ಷತೆ ನಿಟ್ಟಿನಲ್ಲಿ ಒಯ್ಯುವ ದಿಟ್ಟ ಸಾಮರ್ಥ್ಯವನ್ನು ತೋರಿದ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರದ ಹಾಗೂ ಮಿತ್ರ ಪಕ್ಷಗಳ ದಿಟ್ಟ ನಿರ್ಧಾರ ಸ್ವಾಗತ ಎಂದಿದ್ದಾರೆ.

ಸವಾರ ಸಾವು

ಕುಂದಗೋಳ: ಹುಬ್ಬಳ್ಳಿ ಲಕ್ಷ್ಮೇಶ್ವರ ರಸ್ತೆ ಕುಂದಗೋಳ ಪಟ್ಟಣದ ಬೈರಪ್ಪನವರ ಹೊಲದ ಹತ್ತಿರ ಕಾರೊಂದು ಮುಂದೆ ಹೊಗುತ್ತಿದ್ದ ಎಕ್ಸಲ್ ದ್ವಿಚಕ್ರ ವಾಹನ ಸವಾರನಿಗೆ ಡಿಕ್ಕಿ ಹೊಡೆದು ಮರಣ ಹೊಂದಿದ ಘಟನೆ ಶನಿವಾರ ಮಧ್ಯಾಹ್ನ ನಡೆದಿದೆ.

ಹುಬ್ಬಳ್ಳಿ ಕಡೆಯಿಂದ ವೇಗವಾಗಿ ಬಂದ ಕಾರ್ ಚಾಲಕ ಪ್ರಶಾಂತ ಕಾಳೆ ಮುಂದೆ ಹೊಗುತ್ತಿದ್ದ ಟಿ.ವಿ.ಎಸ್ ಎಕ್ಸಲ್ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡಿದ ಪರಿಣಾಮ ಸವಾರ ಭಗಿರಥ ಚುನಿಲಾಲ್ ಪಟೇಲ್ (22) ಅವರಿಗೆ ಗಂಭೀರ ಗಾಯಗಳಾಗಿ ಕುಂದಗೋಳ ಸರ್ಕಾರಿ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಸಾವನಪ್ಪಿದ್ದಾರೆ. ಇವರು ಮೂಲತಃ ಜೋಧಪುರ ಜಿಲ್ಲೆಯವರಿದ್ದು ಹಾಲಿ ವಸ್ತಿ ಲಕ್ಷ್ಮೇಶ್ವರದಲ್ಲಿ ಕಿರಾಣಿ ವ್ಯಾಪಾರಸ್ಥರಾಗಿದ್ದರು

ಘಟನಾ ಸ್ಥಳಕ್ಕೆ ಸಿಪಿಐ ಸಮೀರ್ ಮುಲ್ಲಾ, ಪಿ ಎಸ್ ಐ ಶರಣಬಸಪ್ಪ ಸಂಗಳದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕುಂದಗೋಳ ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಾಗಿದೆ.



ಉಪ್ಪಿನಬೆಟಗೇರಿ: ಸ್ಥಳೀಯ ಮೂರುಸಾವಿರ ವಿರಕ್ತಮಠದ ಪೀಠಾಧಿಪತಿ ಲಿಂಗೈಕ್ಯ ಜಗದ್ಗುರು ಬಸವಲಿಂಗ ಸ್ವಾಮೀಜಿಯ 34ನೇ ಪುಣ್ಯಸ್ಮರಣೋತ್ಸವ ಜರುಗಿತು. ಶ್ರೀ ಕುಮಾರ ವಿರೂಪಾಕ್ಷ ಸ್ವಾಮೀಜಿ ಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಹಾ ಮಂಗಳಾರತಿ ನೆರವೇರಿಸಿದರು. ಗ್ರಾಮದ ಹಿರಿಯರು ಹಾಗೂ ಯುವಕರು ಈ ಕಾರ್ಯಕ್ರಮದಲ್ಲಿ ಇದ್ದರು.

ಅನುದಾನ ಬಿಡುಗಡೆಗೆ ಚಿಂತನ ವೇದಿಕೆ ಬೇಸರ

ಹುಬ್ಬಳ್ಳಿ: ಕಲೆ-ಸಾಹಿತ್ಯ ಪರ ಸಂಘಟನೆಗಳಿಗೆ ಹಣಕಾಸು ನೆರವು ನೀಡುವ ವಿಚಾರದಲ್ಲಿ ಬರೀ ಪರಿಶಿಷ್ಟ ಹಿಂದುಳಿದ ವರ್ಗದ ಸಂಘಟನೆಗಳಿಗೆ ಮಾತ್ರ ಸರ್ಕಾರ ಅನುದಾನ ಬಿಡುಗಡೆ ಮಾಡಿದ್ದು ನಿಜಕ್ಕೂ ಬೇಸರದ ಸಂಗತಿ ಎಂದು ಚಿಂತನ ವೇದಿಕೆ ಅಭಿಪ್ರಾಯಪಟ್ಟಿದೆ. ಕಲೆ-ಸಾಹಿತ್ಯ ಪರ ಸಂಘಟನೆಗಳು ಎಲ್ಲ ನಾಡು ನುಡಿ ಸೇವೆಗೆ ಸದಾ ಹೆಣಗುತ್ತಿವೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಮತೀಯ ಭಾವನೆ ವ್ಯಕ್ತಪಡಿಸುವುದು ಸೂಕ್ತವಲ್ಲ, ಕಳೆದ ವರ್ಷ ಕಿಂಚಿತ್ತು ನೆರವು ನೀಡದೆ ಇದೀಗ ಮತೀಯ ಭಾವನೆ ತೋರಿಸಿದ್ದು, ಕಲಾವಿದರಿಗೆ ಅನ್ಯಾಯ ಮಾಡಿದಂತೆ. ಇನ್ನಾದರೂ ತಕ್ಷಣ ಅರ್ಹ ಎಲ್ಲ ಕಲೆ-ಸಾಹಿತ್ಯ ಪರ ಸಂಘಟನೆಗಳಿಗೆ ಹಣ ಬಿಡುಗಡೆ ಮಾಡುವಂತೆ ವೇದಿಕೆ ಮುಖ್ಯಮಂತ್ರಿ ಹಾಗೂ ಕನ್ನಡ ಇಲಾಖೆ ಸಚಿವರಿಗೆ ಇಮೇಲ್ ಮೂಲಕ ಮನವಿ ಮಾಡಿದೆ. ಜಿಲ್ಲಾ ಉತ್ಸವ ನೆಪದಲ್ಲಿ ಕೋಟ್ಯಂತರ ರೂ. ಅನಗತ್ಯ ಪೋಲಾಗುತ್ತಿದೆ. ಅಲ್ಲಿಯೂ ಸಹ ಸ್ಥಳೀಯ ಕಲಾವಿದರನ್ನು ಕಡೆಗಣಿಸಿ ರಾಜಧಾನಿಯ ಹೆಸರಾಂತ ಅದರಲ್ಲೂ ಸಿನಿಮಾ ರಂಗದವರನ್ನು ಮೆರೆಸುವ ಹವ್ಯಾಸವೇ ಹೆಚ್ಚಿದೆ, ಯಾವ ಸರ್ಕಾರ ಬಂದರೂ ಅವರಿಗೆ ಗ್ರಾಮಾಂತರ ಕಲಾತಂಡ ಕಾಣುವುದೇ ಇಲ್ಲ, ಲಾಬಿ ಮಾಡುವ ಗುಂಪುಗಳೆ ಹೆಚ್ಚು ಫಲಾನುಭವಿ ಎಂದು ವೇದಿಕೆಯ ಕೃಷ್ಣಮೂರ್ತಿ ಕುಲಕರ್ಣಿ, ಚನ್ನಬಸಪ್ಪ ಧಾರವಾಡಶೆಟ್ರು, ವಿ.ಜಿ. ಪಾಟೀಲ, ಪದ್ಮಜಾ ಉಮರ್ಜಿ, ವಂದನಾ ರಮೇಶ ಮುಂತಾದವರು ಮನವಿ ಮಾಡಿದ್ದಾರೆ.



ಧಾರವಾಡ: ಗ್ಯಾಸ್ ಸಿಲಿಂಡರ್ ಕೊರತೆ ಸುಳ್ಳು ವದಂತಿ ಹಬ್ಬಿಸಿದ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಕರ್ನಾಟಕ ಭ್ರಷ್ಟಾಚಾರ ನಿರ್ಮೂಲನಾ ವೇದಿಕೆ ಕಾರ್ಯಕರ್ತರು ಧಾರವಾಡ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಗುರುವಾರ ಪ್ರತಿಭಟಿಸಿದರು.

ಯಲ್ಲಾಪುರ ಕಾಲೇಜು ಚಾಂಪಿಯನ್ | ಧಾರವಾಡ ಕವಿವಿ ರನ್ನರ್ ಅಪ್

ಸಂಕಲ್ಪ ಉತ್ಸವಕ್ಕೆ ಅದ್ದೂರಿ ತೆರೆ

ಧಾರವಾಡ: ನಗರದ ಜನತಾ ಶಿಕ್ಷಣ ಸಮಿತಿಯ ಶ್ರೀ ಮಂಜುನಾಥೇಶ್ವರ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಸನ್ನಿಧಿ ಕಲಾ ಕ್ಷೇತ್ರದಲ್ಲಿ ನಡೆದ ಎರಡು ದಿನಗಳ ರಾಜ್ಯಮಟ್ಟದ ಸಂಕಲ್ಪ ಉತ್ಸವಕ್ಕೆ ಅದ್ದೂರಿ ತೆರೆ ಬಿದ್ದಿತು.

ಉತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಸ್ಪರ್ಧೆಗಳಲ್ಲಿ ಕಾರವಾರ ಜಿಲ್ಲೆಯ ಯಲ್ಲಾಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳ ತಂಡ ಸಮಗ್ರ ವೀರಾಗ್ರಣಿ ಪ್ರಶಸ್ತಿಯೊಂದಿಗೆ ರೂ.30 ಸಾವಿರ ನಗದು, ಟ್ರೋಫಿ ಬಹುಮಾನವೂ ಪಡೆಯಿತು.

ರೂ.20 ಸಾವಿರ ನಗದು, ಟ್ರೋಫಿ ಒಳಗೊಂಡ ಪ್ರಥಮ ರನ್ನರ್ ಅಪ್ ಪ್ರಶಸ್ತಿಗೆ ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ತಂಡ ತೃಪ್ತಿಪಟ್ಟಿತು. ಜೈನ್ ಪದವಿ ಮಹಾವಿದ್ಯಾಲಯವು ದ್ವಿತೀಯ ರನ್ನರ್ ಅಪ್ ಪ್ರಶಸ್ತಿಯನ್ನು ತನ್ನ ಮುಡಿಗೆ ಏರಿಸಿಕೊಂಡಿತು.

ಪ್ರಶಸ್ತಿ ಪ್ರದಾನಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎ.ಎಂ.ಖಾನ್ ಮಾತನಾಡಿ, ಸ್ಪರ್ಧೆಗಳು ವ್ಯಕ್ತಿತ್ವ ವಿಕಸನಕ್ಕೆ ದಾರಿ. ವಿದ್ಯಾರ್ಥಿ ಬದುಕಿನಲ್ಲಿ ಬರುವ ಸ್ಪರ್ಧೆಗಳನ್ನು ಸವಾಲಾಗಿ ಸ್ವೀಕರಿಸಿದಾಗ ಜೀವನದಲ್ಲಿ ಯಶಸ್ಸು ಸಾಧಿಸಬಹುದು ಎಂದರು.

ಸ್ಪರ್ಧೆಗಳು ಜೀವನದ ಪಾಠಗಳನ್ನು ಕಲಿಸುತ್ತವೆ. ಹೀಗಾಗಿ ವಿದ್ಯಾರ್ಥಿಗಳು ಬದುಕಿನಲ್ಲಿ ಬರುವ ಅವಕಾಶಗಳನ್ನು ಕೈಚೆಲ್ಲಬಾರದು. ಪ್ರಶಸ್ತಿಗಳು ಬರಲಿ, ಬರದೇ ಇರಲಿ ಸ್ಪರ್ಧೆ ಮಾಡಬೇಕು. ಅಂದಾಗ ದೊಡ್ಡ ಜವಾಬ್ದಾರಿಗಳು ನಿರ್ವಹಿಸಲು ಸಾಧ್ಯವಿದೆ ಎಂದರು.

ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಮಾತನಾಡಿ, ಸಂಕಲ್ಪ ಉತ್ಸವದಲ್ಲಿ 60ಕ್ಕೂ ಅಧಿಕ ಕಾಲೇಜಿನಿಂದ 800 ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಒರೆಗೆ ಹಚ್ಚಿದ್ದಾರೆ. ಈ ಉತ್ಸವದ ಯಶಸ್ವಿಗೆ ಶ್ರಮಿಸಿದ ಬೋಧಕ- ಬೋಧಕೇತರ ಸಿಬ್ಬಂದಿಗೆ ಅಭಿನಂದನೆ ಸಲ್ಲಿಸಿದರು. ಜೆಎಸ್ಎಸ್ ಅನ್ನ, ಜ್ಞಾನ, ಸಮಯ ಪ್ರಜ್ಞೆ, ಉದ್ಯೋಗ ಮತ್ತು ಶಿಸ್ತಿಗೆ ಹೆಸರಾಗಿದೆ. ಇಲ್ಲಿ ಕಲಿತ ಅದೆಷ್ಟೋ ವಿದ್ಯಾರ್ಥಿಗಳು ಉತ್ತಮ ಭವಿಷ್ಯ ಕಟ್ಟಿಕೊಂಡಿದ್ದಾರೆ. ಇನ್ನು ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುವುದಾಗಿ ವಾಗ್ದಾನ ಮಾಡಿದರು.

ವಾಣಿಶ್ರೀ ಪ್ರಸಾದ, ಡಾ.ಸೂರಜ್ ಜೈನ್, ವಿವೇಕ ಲಕ್ಷ್ಮೇಶ್ವರ, ಶ್ರವಣಕುಮಾರ ಯೋಗಿ ಡಾ.ಆರ್.ವಿ.ಚಿಟಗುಪ್ಪಿ, ಡಾ.ಜಿನ್ನಪ್ಪ ಕುಂದಗೋಳ, ಶ್ರುತಿ ಶೆಟ್ಟಿ ಇದ್ದರು. ರಕ್ಷಿತಾ ವಾಲಿ ಸ್ವಾಗತಿಸಿದರು. ನವ್ಯ ಭಟ-ಅಮೃತ ನಿರೂಪಿಸಿದರು. ರವಿ ಇಂಡಿ ವಂದಿಸಿದರು.



- ಕ್ವಿಜ್ ಸ್ಪರ್ಧೆಯಲ್ಲಿ ಜಿ.ಜಿ.ಕಾಮರ್ಸ್ ಕಾಲೇಜು ಪ್ರಥಮ, ಕಿಟಲ್ ಕಾಲೇಜು ದ್ವಿತಿಯ, ನವಲಗುಂದ ಕಾಲೇಜು ತೃತೀಯ
- ಟ್ರೆಸರ್ ಹಂಟ್ ಸ್ಪರ್ಧೆಯಲ್ಲಿ ಕವಿವಿಯ ಪ್ರಥಮ, ಎಸ್.ಸಿ.ಬಾಳೆಗುಂದ್ರಿ ದ್ವಿತೀಯ, ಬೆಳಗಾವಿಯ ಪೀಪಲ್ ಟ್ರೀ ಸ್ಥಾನ ತೃತೀಯ
- ಜಾಹೀರಾತು ಸ್ಪರ್ಧೆಯಲ್ಲಿ ಯಲ್ಲಾಪುರ ಕಾಲೇಜು ಪ್ರಥಮ, ಜೆಎಸ್ಎಸ್ ಬನಶಂಕರಿ ಕಾಲೇಜು ದ್ವಿತೀಯ, ಜೈನ್ ಕಾಲೇಜು ತೃತೀಯ
- ಫೋಟೋಗ್ರಾಫಿ ಸ್ಪರ್ಧೆಯಲ್ಲಿ ಹುಬ್ಬಳ್ಳಿಯ ಎ.ಜಿ.ಎಂ.ಆರ್. ಪದವಿ ಕಾಲೇಜು ಪ್ರಥಮ, ಹಳಿಯಾಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದ್ವಿತೀಯ ಹಾಗೂ ಹುಬ್ಬಳ್ಳಿ ಜೈನ ಕಾಲೇಜು ತೃತೀಯ
- ಸಾಂಸ್ಕೃತಿಕ ವಿಭಾಗದಲ್ಲಿ ಕರ್ನಾಟಕ ವಿಜ್ಞಾನ ಕಾಲೇಜು ದ್ವಿತೀಯ, ಜೆ.ಎಸ್.ಎಸ್. ಬನಶಂಕರಿ ಪದವಿ ಕಾಲೇಜು ತೃತೀಯ

ನಾಟಕಗಳಿಂದ ಜೀವನಕ್ಕೆ ಶಕ್ತಿ, ಪ್ರೋತ್ಸಾಹ

ಹುಬ್ಬಳ್ಳಿ: ನಾಟಕಗಳು ಜೀವನಕ್ಕೆ ಒಂದು ಶಕ್ತಿ, ಪ್ರೋತ್ಸಾಹ ನೀಡುತ್ತವೆ. ಇಂದಿನ ಪೀಳಿಗೆ ಸಿನಿಮಾ ಹಿಂದೆ ಬಿದ್ದು, ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕಗಳಿಂದ ದೂರ ಆಗಿದ್ದಾರೆ. ಯುವಕರು ಈ ಕಡೆ ಗಮನ ಹರಿಸಬೇಕು ಎಂದು ಮಾಜಿ ಸಂಸದ ಪ್ರೊ. ಐ.ಜಿ. ಸನದಿ ಹೇಳಿದರು.

ಜೆ.ಸಿ.ನಗರದ ಟೌನ್ ಹಾಲ್ ಹಿಂಭಾಗದ ನೌಕರರ ಭವನದಲ್ಲಿ ವಿಶ್ವರಂಗಭೂಮಿ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಸ್ವರ್ಣ ರಂಗಭೂಮಿ ಸಂಘದ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಹರೀಶ್ಚಂದ್ರ ನಾಟಕ ಮಹಾತ್ಮಾಗಾಂಧಿ ಅವರಿಗೆ ಸ್ಪೂರ್ತಿಯಾಗಿದೆ. ಹೀಗಾಗಿ ನಾಟಕಗಳು ಮನ ವಿಕಾಸ ಮಾಡುತ್ತವೆ ಎಂದರು.

ಧಾರವಾಡದ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಮೇಜರ್ ಸಿದ್ಧಲಿಂಗಯ್ಯ ಹಿರೇಮಠ ಮಾತನಾಡಿ, ರಂಗಭೂಮಿ ವೇಷಭೂಷಣಗಳ ಪ್ರದರ್ಶನವಲ್ಲ, ಬೆಳಕು ನೆರಳಿನ ಆಟವಲ್ಲ ಸಮಾಜದಲ್ಲಿನ ಸತ್ಯ, ನ್ಯಾಯ, ಅನ್ಯಾಯದ ಮೇಲೆ ಬೆಳಕು ಚೆಲ್ಲುವ ದೊಡ್ಡ ಶಕ್ತಿ. ಕನ್ನಡದಲ್ಲಿ ನಾಟಕದ ಪ್ರಸ್ತಾಪವಿಲ್ಲ ಎಂದು ಕೆಲವರು ಹೇಳುತ್ತಾರೆ. ಆದರೆ ಕನ್ನಡದಲ್ಲಿ ನಾಟ್ಯಶಾಸ್ತ್ರ ಅದ್ಭುತವಾಗಿ ಮೂಡಿ ಬಂದಿದೆ. ನಾಟಕದ ಸಂಯೋಜನೆ, ವೇದಿಕೆ, ಕಲಾವಿದರ ವೇಷಭೂಷಣ ಸೇರಿ ವಿವಿಧ ನಾಟಕದ ಕುರಿತು 2 ಸಾವಿರ ವರ್ಷಗಳ ಹಿಂದೆ ನಮ್ಮಲ್ಲಿ ಬರೆದಿದ್ದಾರೆ ಎಂದರು.

ಸಮಾಜ ಸೇವಕ ಸಿದ್ದು ಮೊಗಲಿಶೆಟ್ಟರ್ ಮಾತನಾಡಿ, ಕಲಾವಿದರಿಗೆ ಸಾಂಸ್ಕೃತಿಕ ಭವನ ನೀಡಬೇಕು ಎಂಬ ಬೇಡಿಕೆ ಇದೆ. ಆ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಆಯುಕ್ತರನ್ನು ಭೇಟಿ ಮಾಡಿ ಮನವಿ ಮಾಡಲಾಗುವುದು. ನಾಟಕ, ಕಲಾವಿದರಿಗೆ ಪ್ರೋತ್ಸಾಹ ಕೊಡಬೇಕಿದೆ. ಸರ್ಕಾರ ಕೂಡ ಕಲಾವಿದರ ಬಗ್ಗೆ ಗಮನ ಹರಿಸಬೇಕು ಎಂದರು.

ಶ್ರೀ ಸಿದ್ಧಾರೂಢಸ್ವಾಮಿ ಮಠದ ಧರ್ಮದರ್ಶಿ ಡಾ.ಗೋವಿಂದ ಮಣ್ಣೂರ ಹಾಗೂ ಸಂಘದ ಅಧ್ಯಕ್ಷ ಸುನಂದಾ ಹೊಸಪೇಟೆ ಪ್ರಾಸ್ತಾವಿಸಿದರು. ಭಾರತಿದೇವಿ ಬಾಗಲಕೋಟ, ಮಾಲಾ ಕುಂದಾಪುರ, ನಂದಮ್ಮ ಕಲಕತ್ತಾ, ಶಂಕ್ರಣ್ಣ ಚೌಡಾಪುರ, ಸೈಯದ ಮಾಸ್ತರ, ಹಾಫಿಜಾ ಬೇಗಂ, ಲಕ್ಷ್ಮೀದೇವಿ ಶಿಗ್ಗಾಂವ ಅವರನ್ನು ಸನ್ಮಾನಿಸಲಾಯಿತು. ಕಾಂಗ್ರೆಸ್ ಸೇವಾ ದಳದ ರಾಜ್ಯ ಘಟಕದ ಅಧ್ಯಕ್ಷೆ ಗಿರಿಜಾ ಹೂಗಾರ, ಸಮಾಜ ಸೇವಕ ರಮೇಶ ಮಹಾದೇವಪ್ಪನವರ, ಗೌರವ ಅಧ್ಯಕ್ಷ ಚಂದ್ರಧರ್ ಚಿಂದೋಡಿ, ಉಪಾಧ್ಯಕ್ಷ ಸಂಭಾಜಿ ಕಲಾಲ ಸೇರಿದಂತೆ ಇತರರಿದ್ದರು.



ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಭಾಗವಹಿಸಿ

ಹುಬ್ಬಳ್ಳಿ: ಮತದಾರರಪಟ್ಟಿಪರಿಷ್ಕರಣೆಯಲ್ಲಿ ವಾರ್ಡ್‌ಗಳ ಅಧ್ಯಕ್ಷರು ಹಾಗೂ ಮುಖಂಡರು ಸಕ್ರಿಯವಾಗಿ ಭಾಗವಹಿಸಬೇಕು. ಸೆಂಟ್ರಲ್ ಕ್ಷೇತ್ರದಲ್ಲಿ ಇನ್ನು 80-90 ಸಾವಿರ ಮತದಾರರ ಪರಿಷ್ಕರಣೆ ಆಗಬೇಕಿದೆ ಎಂದು ಬಿಜೆಪಿ ಹು-ಧಾ ಮಹಾನಗರ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ ಹೇಳಿದರು.

ಇಲ್ಲಿಯ ಕಾರವಾರ ರಸ್ತೆ ಅರವಿಂದ ನಗರದ ಬಿಜೆಪಿ ಕಚೇರಿಯಲ್ಲಿ ಹು-ಧಾ ಸೆಂಟ್ರಲ್ ಕ್ಷೇತ್ರದ ವತಿಯಿಂದ ಏರ್ಪಸಿದ್ದ ಮತದಾರರ ಪಟ್ಟಿ ಪರಿಷ್ಕರಣೆ ಹಾಗೂ ಮನ್ ಕಿ ಬಾತ್ ಕಾರ್ಯಕ್ರಮದ ಕುರಿತು ಸಭೆ ನಡೆಸಿ ಮಾತನಾಡಿದರು. ಸೆಂಟ್ರಲ್ ಕ್ಷೇತ್ರವು ಸಂಘಟನೆ ಹಾಗೂ ಮನ ಕಿ ಬಾತ್ ಕಾರ್ಯಕ್ರಮದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದೆ. ಈಗ ಮತದಾರರ ಪಟ್ಟಿ ಪರಿಷ್ಕರಣೆ ಮಾಡಲಾಗುತ್ತಿದ್ದು, ಬಿಎಲ್‌ಒಗಳು, ವಾರ್ಡ್ ಅಧ್ಯಕ್ಷರು ಹಾಗೂ ಮುಖಂಡರು ಉತ್ತಮವಾಗಿ ಮಾಡಬೇಕು. ಈಗಾಗಲೇ ಶೇ. 69 ರಷ್ಟು ಆಗಿದೆ ಎಂದರು.

ಕ್ಷೇತ್ರದ ಬಿಎಲ್‌ಎ 1 ಪ್ರಶಾಂತ ಜಾಧವ್ ಮಾತನಾಡಿ, ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸಬೇಕು. ಸರಿಯಾದ ರೀತಿಯಲ್ಲಿ ಅಧಿಕಾರಿಗಳೊಂದಿಗೆ ಸೇರಿ ಮಾಹಿತಿ ಪಡೆದು ಕಾರ್ಯ ನಿರ್ವಹಿಸಬೇಕು. ಶೇ. 100 ರಷ್ಟು ಮಾಡಬೇಕು ಎಂದರು.

ಸಭೆಯಲ್ಲಿ ಮಲ್ಲಿಕಾರ್ಜುನ್ ಮರಿಗೌಡರ್ ಅಧ್ಯಕ್ಷತೆ ವಹಿಸಿದ್ದರು . ಮಹಾನಗರ ಪಾಲಿಕೆಯ ಸದಸ್ಯರಾದ ಉಮಾ ಮುಕುಂದ, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ರಾಮನಗೌಡ ಶೆಟ್ಟನ್ ಗೌಡರ, ಕ್ಷೇತ್ರದ ಮಹಿಳಾ ಅಧ್ಯಕ್ಷ ಅಕ್ಕಮ್ಮ ಹೆಗಡೆ, ಸಿದ್ದು ಮೊಗಲಿ ಶೆಟ್ಟರ್, ರವಿ ನಾಯಕ, ಕೃಷ್ಣ ಗಂಡಗಾಳೇಕರ್ ಇದ್ದರು.

ಕಡ್ಡಾಯ ಪಾಲ್ಗೊಳ್ಳಿ

ಶಾಸಕ ಮಹೇಶ ಟೆಂಗಿನಕಾಯಿ ಕೇರಳಾದಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿ, ಮತದಾರರ ಪರೀಕ್ಷಣೆ ಕಾರ್ಯದಲ್ಲಿ ಮಂಡಲ ಬೂತ್ ಮಟ್ಟದಲ್ಲಿ ಕಡ್ಡಾಯವಾಗಿ ಎಲ್ಲರೂ ಪಾಲ್ಗೊಳ್ಳಬೇಕು. ಎಸ್‌ಐಆರ್‌ದಲ್ಲಿ ಕ್ಷೇತ್ರದಲ್ಲಿ ದಾಖಲೆ ಮಾಡಿ ನಡೆಯುವ ಮನ್ ಕಿ ಬಾತ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿದರು.



ಕನ್ನಡ ರಂಗಭೂಮಿ ಉಳಿವು ಅಗತ್ಯ: ಬೆಕ್ಕೇರಿ



ಧಾರವಾಡ: ಇಡೀ ಸಮಾಜ ಮುನ್ನಡೆಸುವ ಶಕ್ತಿ ಕನ್ನಡದ ರಂಗಭೂಮಿಗೆ ಇದೆ. ನಮ್ಮ ಪೂರ್ವಿಕರು ಕಟ್ಟಿ ಬೆಳೆಸಿದ ಕನ್ನಡ ರಂಗಭೂಮಿ ಉಳಿಸಿ, ಬೆಳೆಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಹೇಳಿದರು.

ದೇವರಹುಬ್ಬಳ್ಳಿಯ ಸಾಂಸ್ಕೃತಿಕ ಹಾಗೂ ಗ್ರಾಮೀಣಾಭಿವೃದ್ದಿ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಇಲ್ಲಿನ ಜೆಟಿಸಿ ಸಭಾಂಗಣದಲ್ಲಿ ಹಮ್ಮಿಕೊಂಡ ವಿಶ್ವರಂಗಭೂಮಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ರಂಗಭೂಮಿ ನಮ್ಮ ಸಂಸ್ಕೃತಿಯ ಭಾಗವಾಗಿದೆ. ಇದರ ಬೆಳವಣಿಗೆಗೆ ಸರ್ಕಾರವು ಹತ್ತು ಹಲವು ಕಾರ್ಯಕ್ರಮ ರೂಪಿಸುವ ಜೊತೆಗೆ ಅಗತ್ಯ ಅನುದಾನ ನೀಡುತ್ತಾ ಬಂದಿದೆ. ರಂಗಭೂಮಿ ಉಳಿದರೆ ಮಾತ್ರವೇ ಕನ್ನಡ ಸಂಸ್ಕೃತಿ ಉಳಿವು ಸಾಧ್ಯವಿದೆ ಎಂದರು.

ಗಾಯಕ ಡಾ.ಮೃತ್ಯುಂಜಯ ಶೆಟ್ಟರ್ ಮಾತನಾಡಿ, ಸಂಘಸಂಸ್ಥೆಗಳು ಸಾಂಸ್ಕೃತಿಕ ಕಾರ್ಯಕ್ರಮಗಳು ಮಾಡುವುದು ಇಂದು ಕಷ್ಟವಾಗುತ್ತಿದೆ. ಆದರೂ ಅವ್ವ ಸಂಸ್ಥೆ ಗ್ರಾಮೀಣ ಪ್ರತಿಭೆಗಳಿಗೆ ಅವಕಾಶ ನೀಡಿ ಸಂಸ್ಕೃತಿ ಬೆಳೆಸುವ ಕಾರ್ಯಕ್ಕೆ ಹೆಮ್ಮೆ ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಅವ್ವ ಸಂಸ್ಥೆಯ ಅಧ್ಯಕ್ಷ ಹಾಗೂ ಹಾಸ್ಯ ಕಲಾವಿದ ಮಲ್ಲಪ್ಪ ಹೊಂಗಲ್ (ಮೊಬೈಲ್ ಮಲ್ಲ) ಮಾತನಾಡಿ, ಎಷ್ಟೇ ಕಷ್ಟ ಬಂದರೂ, ಅವ್ವನ ಹೆಸರಿನಲ್ಲಿ ಕಟ್ಟಿರುವ ಈ ಸಂಸ್ಥೆಯ ಚಟುವಟಿಕೆಗಳು ಎಂದಿಗೂ ನಿಲ್ಲಿಸುವುದಿಲ್ಲ ಎಂದರು. ಸಮಾರಂಭದಲ್ಲಿ ಹಿರಿಯ ರಂಗಭೂಮಿ ಕಲಾವಿದೆ ವಿಶ್ವೇಶ್ವರಿ ಹಿರೇಮಠ ಮತ್ತು ಗಣಿತ ತಜ್ಞೆ ಡಾ.ಪ್ರಭಾ ನೀರಲಗಿ ಅವರಿಗೆ 2025ನೇ ಸಾಲಿನ ಅವ್ವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜಾನಪದ ಸಂಶೋಧನಾ ಕೇಂದ್ರ ಮತ್ತು ಸನ್ನಿಸ ಮಹಿಳಾ ಮಂಡಳದ ಸದಸ್ಯರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಕೃಷಿ ಇಲಾಖೆ ನೌಕರರಿಂದ ಸ.ಹಿ.ಪ್ರಾ.ಶ.1990 ನಾಟಕ ಪ್ರದರ್ಶನಗೊಂಡಿತು. ಡಾ.ಜಯಾನಂದ ಹಟ್ಟಿ, ನಂದಾ ಗುಳೇದಗುಡ್ಡ, ರುದ್ರಪ್ಪ ಹೊಂಗಲ್, ಪ್ರಶಾಂತಕುಮಾರ್ ತಡಸದ ಸೇರಿದಂತೆ ಗಣ್ಯರು ಇದ್ದರು.

> ರಂಗಭೂಮಿಗೆ ವ್ಯಕ್ತಿ ನಿರ್ಮಾಣ ಮಾಡುವ ಶಕ್ತಿಯಿದೆ. ಸಮಾಜ ಸರಿದಾರಿಗೆ ತರುವ ಶಕ್ತಿ, ಯುವ ಜನರ ವ್ಯಕ್ತಿತ್ವ ವಿಕಸನಕ್ಕೂ ಸಹಕಾರಿಯಾಗಿದೆ.
> ■ ಡಾ. ಬಸವರಾಜ ಹೊಂಗಲ್, ಜರ್ನಲಿಸ್ಟ್ ಗಿಲ್ಡ್ ಅಧ್ಯಕ್ಷ

ತೊಟ್ಟಿಲೋತ್ಸವ



ಹುಬ್ಬಳ್ಳಿ : ತಾಲೂಕಿನ ಮಿಶ್ರಿಕೋಟಿಯಲ್ಲಿ ಶ್ರೀ ನಾರಾಯಣ ರಾವ ಪದಕಿ ಹಾಗೂ ದತ್ತಣ್ಣ ದೇಸಾಯಿ ಬಂಧುಗಳಿಂದ ರಾಮ ನವಮಿಯ ಪ್ರಯುಕ್ತ ತೊಟ್ಟಿಲೋತ್ಸವ ಕಾರ್ಯಕ್ರಮ ನಡೆಯಿತು. ಡಾ.ವಿ.ಜಿ.ನಾಡಗೌಡ, ಗೋವಿಂದ ಮೈಸೂರ,ಆರ್.ಆರ್. ಕುಲಕರ್ಣಿ, ಗೋಪಾಲ ಕುಲಕರ್ಣಿ, ಶ್ರೀನಿವಾಸ ಕುಂದರಗಿ, ಹರ್ಷ ಪದಕಿ, ಪವನ ದೇಸಾಯಿ, ಸುರೇಖಾ ಕುಲಕರ್ಣಿ, ಪರಿಮಳಾ ವಾಳ್ವೇಕರ, ಜಯಪ್ರದಾ ಪದಕಿ, ವಿಜಯಾಬಾಯಿ ದೇಸಾಯಿ, ವಾಣಿ ದೇಸಾಯಿ, ಅಮೃತಾ, ಜ್ಯೋತಿ ಕುಲಕರ್ಣಿ, ಪದ್ಮಾ ಕುಂದರಗಿ ಇದ್ದರು.

ಮಹಾವೀರ ಜಯಂತಿ ಪೂರ್ವಭಾವಿ ಸಭೆ



ಕುಂದಗೋಳ: ಪ್ರತೀ ಇಲಾಖೆಯ ಕಚೇರಿಗಳಲ್ಲಿ ಕಟ್ಟುನಿಟ್ಟಾಗಿ ಆಚರಿಸಿದ ಮಹಾವೀರ ಜಯಂತಿ ಜಿಪಿಎಸ್ ಫೋಟೋಗಳನ್ನು ನನಗೆ ಕಳುಹಿಸಬೇಕು ಎಂದು ತಹಶೀಲ್ದಾರ್ ರಾಜು ಮಾವರ್ಕರ್ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ನಡೆದ ಭಗವಾನ್ ಮಹಾವೀರ ಜಯಂತಿ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ತಾಲೂಕಿನ ಜೈನ ಸಮಾಜದ ಬಾಂಧವರು ಮಹಾವೀರ ಜಯಂತಿ ದಿನದಂದು ಮದ್ಯ, ಮಾಂಸದ ಅಂಗಡಿಗಳನ್ನು ಅಂದು ಸಂಪೂರ್ಣ ಬಂದ್ ಮಾಡಬೇಕೆಂಬ ಮನವಿ ನೀಡಿದ್ದು , ಈ ಕುರಿತಾಗಿ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ. ಪ್ರತೀ ವರ್ಷದಂತೆ ಈ ವರ್ಷವೂ ಕೂಡ ನಮ್ಮ ಕಚೇರಿಯಲ್ಲಿ ಭಗವಾನ್ ಮಹಾವೀರ ಜಯಂತಿಯನ್ನು ಆಚರಿಸುವ ಜೊತೆಗೆ ಸಮಾಜದ ಸಾಧಕರು ಹಾಗೂ ವಿದ್ಯಾರ್ಥಿಗಳಿಗೆ ಸನ್ಮಾನ ಜರುಗುತ್ತದೆ. ಹಾಗೆಯೇ ಭಗವಾನ್ ಮಹಾವೀರ್ ಅವರ ಜೀವನ ಚರಿತ್ರೆ ಕುರಿತು ಉಪನ್ಯಾಸ ನೀಡಲಾಗುವುದು. ತಾಲೂಕಿನ ಸರ್ವ ಸಮಾಜ ಬಾಂಧವರು ಜಯಂತಿಗೆ ಆಗಮಿಸಿ ಶೋಭೇ ತರಬೇಕು ಎಂದು ಸಮಾಜ ಬಾಂಧವರಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಹರಲಾಪುರ, ಬು.ಕೊಪ್ಪ, ಗುಡೇನಕಟ್ಟಿ, ಸಂಶಿ, ಬೆಟದೂರು ಮತ್ತು ಗುಡಗೇರಿ ಜೈನ ಸಮಾಜ ಬಾಂಧವರು ಹಾಗೂ ವಿವಿಧ ಇಲಾಖಾ ಅಧಿಕಾರಿಗಳು ಪಾಲ್ಗೊಂಡಿದ್ದರು.

ಸಂಶೋಧನೆಗಳ ಮೂಲಕ ದೇಶದ ಅಭಿವೃದ್ಧಿಗೆ ಕೈಜೋಡಿಸಿ

ಹುಬ್ಬಳ್ಳಿ: ವಿದ್ಯಾರ್ಥಿಗಳು ಸಂಶೋಧನೆಗಳ ಮೂಲಕ ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಎ.ಎಂ.ಖಾನ್ ತಿಳಿಸಿದರು.

ಶನಿವಾರ ಕೆಎಲ್‌ಇ ಸಂಸ್ಥೆಯ ಪಿ.ಸಿ.ಜಾಬಿನ ವಿಜ್ಞಾನ ಮಹಾವಿದ್ಯಾಲಯ (ಸ್ವಾಯತ್ತ) 14ನೇ ಪದವಿ ಪ್ರದಾನ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಪದವೀಧರ ವಿದ್ಯಾರ್ಥಿಗಳು ಹೊಸ ಜೀವನದ ಸಂಕಲ್ಪದೊಂದಿಗೆ ನೂತನ ಕಾರ್ಯಶೈಲಿಯನ್ನು ರೂಢಿಸಿಕೊಳ್ಳಬೇಕೆಂದರು. ವಿದ್ಯಾರ್ಥಿಗಳು ಜ್ಞಾನ ಸಂಗ್ರಹಣೆಗೆ ನಿರಂತರ ಪ್ರಯತ್ನಿಸಬೇಕು. ಕೃತಕ ಬುದ್ಧಿ ಮತ್ತೆಯನ್ನು ಸರಿಯಾಗಿ ಬಳಸಿಕೊಳ್ಳಬೇಕು. ಮಹಾವಿದ್ಯಾಲಯದ ಕಾರ್ಯಗಳ ಬಗೆಗೆ ಸಂತಸ ವ್ಯಕ್ತ ಪಡಿಸಿದರು. ವಿದ್ಯಾರ್ಥಿಗಳು ಪಾಲಕರ ಕನಸುಗಳನ್ನು ನನಸು ಮಾಡುವ ಮೂಲಕ ಸಾಮಾಜಿಕ ಮತ್ತು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಸಂಘಟಿತರಾಗಿ ಕಾರ್ಯ ಮಾಡುವ ಮೂಲಕ ಹೆಚ್ಚಿನ ಕಾರ್ಯ ಮಾಡಬೇಕೆಂದನ್ನು ಉದಾಹರಣೆಗಳ ಮೂಲಕ ವಿವರಿಸಿದರು. ಹುಬ್ಬಳ್ಳಿ-ಧಾರವಾಡ ಶೀಘ್ರವಾಗಿ ಬೆಳೆಯುತ್ತಿದ್ದು, ಅದಕ್ಕೆ ಉತ್ತಮವಾದ ಕೊಡುಗೆಗಳನ್ನು ನೀಡುವ ಮೂಲಕ ಬೆಳವಣಿಗೆಗೆ ಕೈಜೋಡಿಸಬೇಕು. ಹೊಸ ಶೈಲಿಯ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲು ತಿಳಿ ಹೇಳಿದರು. ಬೆಂಗಳೂರು ಚಾಣುಕ್ಯ ವಿಶ್ವವಿದ್ಯಾಲಯದ ಡೀನ್ ಪ್ರೊ.ಶ್ರೀನಿವಾಸ ಎಸ್. ಬಳ್ಳಿ ಮಾತನಾಡಿ, ವಿದ್ಯಾರ್ಥಿಗಳು ದೈನಂದಿನ ಜೀವನದಲ್ಲಿ ಬರುವ ಸವಾಲುಗಳಿಗೆ ಉತ್ತರಗಳನ್ನು ಕಂಡುಕೊಳ್ಳಬೇಕು. ವಿದ್ಯಾರ್ಥಿಗಳು ಸಮಾಜದ ಆಸ್ತಿ ಆಗಿದ್ದು, ಅವರ ಮೇಲೆ ಹೆಚ್ಚಿನ ಹೊಣೆಗಾರಿಗೆ ಇದೆ ಎಂದರು. ಕರ್ನಾಟಕ ವಿಶ್ವವಿದ್ಯಾಲಯದ ಮೌಲ್ಯಮಾಪನದ ಕುಲಸಚಿವರಾದ ಪ್ರೊ.ಎನ್. ವಾಯ್. ಮಟ್ಟಿಹಾಳ, ಕೆಎಲ್‌ಇ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯ ಮಂಜುನಾಥ ಮುನವಳ್ಳಿ, ಕೈಗಾರಿಕೊದ್ಯಮಿ ವೀರೇಶಶರ್ಮಾ, ಸಂಸ್ಥೆಯ ಆಡಳಿತ ಮಂಡಳಿಯ ಸಲಹಾ ಮಂಡಳಿಯ ಹಿರಿಯ ಸದಸ್ಯ ಶಂಕರಣ್ಣ ಮುನವಳ್ಳಿ, ಪ್ರಾಚಾರ್ಯ ಡಾ.ಸಂಧ್ಯಾ ಆರ್.ಕುಲಕರ್ಣಿ, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಮಹಾಂತೇಶ ಎಮ್., ಉಪನ್ಯಾಸಕಿ ಡಾ.ಸ್ನೇಹಾ ಚಿಂತಾ, ಸುಷ್ಮಾ ಎಮ್., ಮೇಧಾ ದೇಶಪಾಂಡೆ, ಆಫ್ರಾ ಖಾಸರ ನದಾಫ್ ಇದ್ದರು.



ಪದವಿ ಪ್ರದಾನ

ರಮ್ಯಾ ಬುಡಿ, ಸಮ್ರೀನ್ ಖಾನ, ಸುನೀತಾ ಬಂಗಾರದ ಪದಕಗಳನ್ನು ಪಡೆದುಕೊಂಡರು. ಬಿಎಸ್ಸಿಯ 387, ಬಿಸಿಎದಲ್ಲಿ 183, ಎಂಎಸ್ಸಿ ಬಯೋಟೆಕ್ನಾಲಜಿ 7, ಎಂಎಸ್ಸಿ ಕಂಪ್ಯೂಟರ ಸೈನ್ಸ್ 4, ಎಂಎಸ್ಸಿ ಭೌತಶಾಸ್ತ್ರ 2, ಎಂಎಸ್ಸಿ ರಸಾಯನಶಾಸ್ತ್ರ 22 ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರಗಳನ್ನು ಅತಿಥಿಗಳಿಂದ ಪಡೆದುಕೊಂಡರು.

ಬಿಸಿಬಿ ನಿರ್ಮಾಣಕ್ಕೆ ಭೂಮಿಪೂಜೆ

ಕುಂದಗೋಳ: ಈ ಭಾಗದ ಜನತೆಯ ಬಹುಕಾಲದ ಬೇಡಿಕೆಯಾಗಿದ್ದ ಬರದ್ವಾಡ-ಚಾಕಲಬ್ಬಿ ಮಧ್ಯದ ಹಳ್ಳದ ಮೇಲೆ ಬ್ರೀಡ್ಜ್ ಕಂ ಬ್ಯಾರೇಜ್ (ಬಿಸಿಬಿ) ನಿರ್ಮಾಣಕ್ಕೆ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ 2 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾದ ಮಹತ್ವಾಕಾಂಕ್ಷಿ ಕಾಮಗಾರಿಗೆ ಶಾಸಕ ಎಂ.ಆರ್. ಪಾಟೀಲ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಮಳೆಗಾಲದಲ್ಲಿ ಪ್ರತಿವರ್ಷ ಈ ಹಳ್ಳದಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ ಹರಿದು ಎರಡು ಗ್ರಾಮಗಳ ನಡುವಿನ ಸಂಪರ್ಕ ಸಂಪೂರ್ಣ ಸ್ಥಗಿತವಾಗುತ್ತಿತ್ತು. ಇದರಿಂದ ರೈತರು ಹಾಗೂ ಸ್ಥಳೀಯರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದರು. ಬಿಸಿಬಿ ನಿರ್ಮಾಣದಿಂದ ಮಳೆನೀರನ್ನು ಸಂಗ್ರಹಿಸಿ ಜಲಮಟ್ಟ ಹೆಚ್ಚುವ ಜೊತೆಗೆ ರೈತರಿಗೆ ನೀರಾವರಿ ಸೌಲಭ್ಯ ಲಭ್ಯವಾಗಲಿದೆ. ಜೊತೆಗೆ ಗ್ರಾಮಗಳ ನಡುವಿನ ಸಂಪರ್ಕ ಸುಗಮವಾಗುವುದರಿಂದ ಜನಜೀವನಕ್ಕೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಈರಪ್ಪ ಮಾಡಳ್ಳಿ, ಸತೀಶ ಮಾಡಳ್ಳಿ, ಮಲ್ಲಯ್ಯ ನು, ಮಹೇಶ ಮಾಡಳ್ಳಿ, ಚನ್ನಬಸಪ್ಪ ಬೆಟಗೇರಿ, ಮಂಜುನಾಥ ಮಾಡಳ್ಳಿ, ಮುದುಕಪ್ಪ ಮಾಡಳ್ಳಿ, ಅಡಿವೆಪ್ಪ ಮಾಡಳ್ಳಿ, ನೀಲಪ್ಪ ನಿಂಬಣ್ಣವರ್, ನಿಂಗಪ್ಪ ಸೊಸರಬಿ, ರವಿಗೌಡ ಪಾಟೀಲ, ಮಾಲತೇಶ ಶ್ಯಾಗೋಟಿ, ದಾನಪ್ಪ ಗಂಗಾಯಿ, ಪ್ರಕಾಶ ಕುಬಿಹಾಳ, ನಾಗನಗೌಡ ಸಾತ್ಕಾರ್, ಡಿ.ವೈ. ಲಕ್ಕನಗೌಡರ, ಸಂತೋಷ ಮಲ್ಲಿಗವಾಡ ಸೇರಿದಂತೆ ಇತರರಿದ್ದರು.



ಶರಣಬಸವ ವಿವಿಗೆ ರಾಷ್ಟ್ರ ಮಟ್ಟದ ಪ್ರಶಸ್ತಿ



◆ **ಕಲಬುರಗಿ:** ಎಲೆಕ್ಟ್ರಾನಿಕ್ಸ್ ಮತ್ತು ದೂರಸಂಪರ್ಕ ಎಂಜಿನಿಯರಿಂಗ್ ಸಂಸ್ಥೆಯ (ಐಇಟಿಇ) ಅಧ್ಯಕ್ಷ ಪ್ರೊ. ಸುನೀಲ್ ಈ ವರ್ಷದ ದೇಶದ ಅತ್ಯುತ್ತಮ ವಿಶ್ವವಿದ್ಯಾಲಯಗಳಿಗೆ ನೀಡಲಾಗುವ ಪ್ರತಿಷ್ಠಿತ ಪಿ.ಪಿ.ಮಲ್ಹೋತ್ರ ಸ್ಮಾರಕ ಪ್ರಶಸ್ತಿಯನ್ನು ಕಲಬುರಗಿಯ ಶರಣಬಸವ ವಿಶ್ವವಿದ್ಯಾಲಯಕ್ಕೆ ಪ್ರದಾನ ಮಾಡಿದರು.

ಶನಿವಾರ ನಗರದ ಶರಣಬಸವ ವಿಶ್ವವಿದ್ಯಾಲಯದ ದೊಡ್ಡಪ್ಪ ಅಪ್ಪ ಸಭಾಮಂಟಪದಲ್ಲಿ ನಡೆದ ಐಇಟಿಇ ದಕ್ಷಿಣ ವಲಯ ವಿಚಾರ ಸಂಕಿರಣ ಮತ್ತು ಐಎಸ್‌ಎಫ್ ಕಾಂಗ್ರೆಸ್-2026 ಉದ್ಘಾಟನಾ ಸಮಾರಂಭದಲ್ಲಿ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿ ಮಾತೋಶ್ರೀ ಡಾ.ದಾಕ್ಷಾಯಿಣಿ ಅಪ್ಪಾಜಿ ಅವರಿಗೆ ಸಮಾರಂಭದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿದ ಮಾತನಾಡಿದ ಅಪ್ಪಾಜಿ, ಈ ಪ್ರಶಸ್ತಿ ಕೆಲವು ತಿಂಗಳ ಹಿಂದೆ ಐಇಟಿಇಯ ವಾರ್ಷಿಕ ಸಮಾವೇಶದಲ್ಲಿ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಅವರಿಗೆ ಔಪಚಾರಿಕವಾಗಿ ಪ್ರದಾನ ಮಾಡಲಾಗಿತ್ತು. ನವದೆಹಲಿಯಿಂದ ಬಂದು ಪ್ರಶಸ್ತಿಯನ್ನು ತಮಗೆ ಪ್ರದಾನ ಮಾಡಿದ್ದಕ್ಕಾಗಿ ಐಇಟಿಇಯ ಪದಾಧಿಕಾರಿಗಳಿಗೆ, ವಿಶೇಷವಾಗಿ ಅಧ್ಯಕ್ಷ ಸುನೀಲ್ ಅವರಿಗೆ ಧನ್ಯವಾದ ಅರ್ಪಿಸುತ್ತೇನೆ. ಈ ಪ್ರಶಸ್ತಿಯನ್ನು ಶರಣಬಸವ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಾಧಿಪತಿ ಲಿಂಗೈಕ್ಯ ಪೂಜ್ಯ ಡಾ.ಶರಣಬಸವಪ್ಪ ಅಪ್ಪಾಜಿ ಅವರಿಗೆ ಅರ್ಪಿಸುವುದಾಗಿ ಹೇಳಿದ ಅವರು, ಈ ಪ್ರಶಸ್ತಿ ಲಿಂ.ಡಾ.ಅಪ್ಪಾಜಿ ಅವರ ಜೀವಮಾನದ ಸಾಧನೆಯಾಗಿದೆ ಎಂದರು.

ಈ ಸಮಾರಂಭದಲ್ಲಿ ಶರಣಬಸವ ವಿಶ್ವವಿದ್ಯಾಲಯವು ಹಾಜರಿದ್ದ ಎಲ್ಲಾ ಐಇಟಿಇ ಪದಾಧಿಕಾರಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ವಿವಿಧ ಕಾಲೇಜುಗಳು ಮತ್ತು ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಸಂಶೋಧನಾ ಕಾರ್ಯಗಳು ಮತ್ತು ಪೋಸ್ಟರ್ ಪ್ರಸ್ತುತಿ, ಸಂಶೋಧನಾ ಪ್ರಬಂಧ ಪ್ರಸ್ತುತಿ ಮತ್ತು ಇತರ ಚಟುವಟಿಕೆಗಳಿಗಾಗಿ ವಿಭಿನ್ನ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವರು ಹಾಗೂ ಐಇಟಿಇ ಕಲಬುರಗಿ ಕೇಂದ್ರದ ಅಧ್ಯಕ್ಷರೂ ಆದ ಡಾ.ಲಕ್ಷ್ಮೀ ಪಾಟೀಲ ಮಾಕಾ ಸ್ವಾಗತಿಸಿದರು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ವಿವಿಯ ಉಪಕುಲಪತಿ ಪ್ರೊ.ಅನಿಲಕುಮಾರ ಬಿಡವೆ, ಮೌಲ್ಯಮಾಪನ ಕುಲಸಚಿವ ಡಾ.ಎಸ್.ಎಚ್.ಹೊನ್ನಳ್ಳಿ, ಹಣಕಾಸು ಅಧಿಕಾರಿ ಡಾ.ಕಿರಣ್ ಮಾಕಾ, ಡೀನ್ ಡಾ.ಶಿವಕುಮಾರ್ ಜವಳಿಗಿ, ಡೀನ್ (ಸಂಶೋಧನೆ) ಡಾ.ಸುಜಾತಾ ಮಲ್ಲಾಪುರ ಸೇರಿದಂತೆ ಇತರ ಗಣ್ಯರು ಉಪಸ್ಥಿತರಿದ್ದರು.

ಉಪ ಚುನಾವಣೆ: ಶುಷ್ಕ ದಿನವನ್ನಾಗಿ ಘೋಷಿಸಿದ ಡಿಸಿ

◆ **ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣೆಯ ಹಿನ್ನೆಲೆಯಲ್ಲಿ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಸುತ್ತಲು 10 ಕಿ.ಮೀ ವ್ಯಾಪ್ತಿಯಲ್ಲಿ ಏ.7ರಂದು ಸಂಜೆ 6ರಿಂದ ಏ.9ರಂದು ಸಂಜೆ 7 ಗಂಟೆವರೆಗೆ ಹಾಗೂ ಮತ ಎಣಿಕೆ ದಿನ ಅಂದರೆ ಮೇ 4ರಂದು ಮದ್ಯದ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್, ಹೋಟೆಲ್, ಕ್ಲಬ್, ಢಾಬಾ ಮತ್ತು ಇನ್ನಿತರ ಸ್ಥಳಗಳಲ್ಲಿ ಮದ್ಯ ಮಾರಾಟ ಹಾಗೂ ಸರಬರಾಜ ಮಾಡುವುದನ್ನು ನಿಷೇಧಿಸಿ ಈ ದಿನವನ್ನು ಶುಷ್ಕ ದಿವಸವೆಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಸಂಗಪ್ಪ ಆದೇಶ ಹೊರಡಿಸಿದ್ದಾರೆ. ಈ ಆದೇಶವನ್ನು ಸಂಬಂಧಪಟ್ಟ ಅಬಕಾರಿ, ಪೊಲೀಸ್ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸುವಂತೆ ಆದೇಶದಲ್ಲಿ ತಿಳಿಸಿದ್ದಾರೆ.
































ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಚಿಂತಿಸಬೇಕಾದ ವಿಷಯ ಯಾವುದು?

ವೈಭವವಿದ್ದರೂ ಮತ್ತೊಬ್ಬರಿಗೆ ಕೊಡದಿರುವ ಕೃಪಣತಾ

ಅತ್ಯಂತ ವಿಷಾದದ ಸಂಗತಿ ಯಾವುದು ಎಂಬುದು ಇಲ್ಲಿನ ಪ್ರಶ್ನೆ. ಇದಕ್ಕೆ ಉತ್ತರ, ಒಬ್ಬ ವ್ಯಕ್ತಿಯಲ್ಲಿ ಸಾಕಷ್ಟು ಸಂಪತ್ತು ಇದೆ; ಒಂದರ್ಥದಲ್ಲಿ ಧನಿಕ. ತಾನು ಮಾತ್ರ ಆ ಸಂಪತ್ತನ್ನು ಬಳಸಿದರೂ ಅದು ಖರ್ಚಾಗದ ರೀತಿಯಲ್ಲಿ ಇದೆ. ಹಾಗಾದರೆ, ಇಷ್ಟು ಸಂಪತ್ತುಳ್ಳವನಾಗಿದ್ದರೂ ಕೂಡ ಅವನು ದೀನ ದರಿದ್ರರಿಗೆ ಆ ಸಂಪತ್ತನ್ನು ಕೊಡದೇ ತಾನೇ ಭೋಗಿಸಬೇಕು ಎಂಬ ಯಾವ ಆಸೆ ಇದೆಯೋ, ಅದೇ ವಸ್ತುತಃ ಕೃಪಣತಾ ಎಂಬುದಾಗಿ ಹೇಳಲಾಗಿದೆ. ಈ ಕಾರ್ಪಣ್ಯ ಎಂಬ ಅತಿಭಯಂಕರವಾದ ಅವಗುಣವು ಪ್ರಸ್ತುತ ವಿಷಾದಪಡಬೇಕಾದ ವಿಚಾರವಾಗಿದೆ. ವಿಷಾದಪಡುವ ಸಂಗತಿಯಾದರೂ ಏನು? ಸಂಪತ್ತನ್ನು ಕೊಡಲೇಬೇಕೆಂಬ ನಿಯಮವಿದೆಯೇ? ಕೊಡದಿದ್ದರೆ ಏನು ಅಪರಾಧ? ನಿಜವಾಗಿಯೂ ಆ ವ್ಯಕ್ತಿ ತನ್ನ ಸಾಮರ್ಥ್ಯ, ಬುದ್ಧಿಮತ್ತೆ ಮತ್ತು ಶ್ರಮದ ಕಾರಣದಿಂದ ಸಂಪತ್ತನ್ನು ಗಳಿಸಿರುತ್ತಾನೆ. ಹಾಗಾಗಿ ಆ ಸಂಪತ್ತನ್ನು ಅವನೇ ಇಟ್ಟುಕೊಂಡು ಬಳಸಿ, ತನ್ನ ಪರಿವಾರದ ಪ್ರಗತಿಗಾಗಿ ಸೀಮಿತವಾಗಿ ಇಟ್ಟರೆ ಅದು ಹೇಗೆ ಆತಂಕದ ವಿಷಯ? ಅದನ್ನು ಏಕೆ ಕಾರ್ಪಣ್ಯ ಎಂಬುದಾಗಿ ಕರೆಯಬೇಕು ಎಂಬುದು ಇಲ್ಲಿನ ಆಶಯ. ಹೀಗಿರುವಾಗ ವೈಭವವಿದ್ದಾಗ ಮತ್ತೊಬ್ಬರಿಗೆ ಕೊಡದ ಮನೋಧರ್ಮವು ಹೇಗೆ ವಿಷಾದದ ಸಂಗತಿ ಎಂಬುದನ್ನು ಯೋಚಿಸಬೇಕಾಗಿದೆ.

''ಸ್ತೋಕಾದಪಿ ಹಿ ದಾತವ್ಯಂ ಮುದಿದೇನ ಅಂತರಾತ್ಮನಾ। ಅಹನ್ಯಹನಿ ಯತ್ಕಿಂಚಿತ್ ಅಕಾರ್ಪಣ್ಯಮ್ ಇತಿ ಸ್ಮೃತಮ್॥'' ಸ್ವಲ್ಪವನ್ನಾದರೂ ಕೊಡಲೇಬೇಕು, ಸ್ವಲ್ಪವನ್ನಾದರೂ ಅತ್ಯಂತ ಸಂತೋಷದಿಂದ ಕೊಡಬೇಕು, ಅದನ್ನು ಪ್ರತಿನಿತ್ಯವೂ ಕೊಡಬೇಕು ಎಂಬುದಾಗಿ ಕಾರ್ಪಣ್ಯದ ಸ್ವಭಾವವನ್ನು ಇಲ್ಲಿ ಹೇಳಲಾಗಿದೆ. ಪ್ರತಿಯೊಬ್ಬ ಮನುಷ್ಯನು ಕೂಡ ತಾನು ಸಂಪಾದಿಸಿದ್ದರಲ್ಲಿ ಹತ್ತನೆಯ ಒಂದು ಭಾಗವನ್ನು ದಾನ ಮಾಡಬೇಕು ಎಂಬುದಾಗಿ ನಮ್ಮೆಲ್ಲಾ ಶಾಸ್ತ್ರ ಸಂಪ್ರದಾಯಗಳು ಸಾರುತ್ತವೆ. ಅಂದರೆ ತ್ಯಾಗ ಮಾಡುವ ಮನೋಭಾವನೆ ಬೆಳೆಸಿಕೊಳ್ಳಬೇಕು; ಕೇವಲ ತಾನು ಮಾತ್ರ ಸಂಪತ್ತನ್ನು ಬಳಸಿಕೊಳ್ಳಬೇಕು ಎಂಬ ಭಾವನೆ ಸಲ್ಲದು ಎಂದು. ಸಂಪಾದಿಸಿದ ದ್ರವ್ಯದಲ್ಲಿ ಗೃಹಸ್ಥನಾದವನು ಪಂಚಮಹಾಯಜ್ಞಗಳನ್ನು ಮಾಡಬೇಕು ಎಂಬುದಾಗಿ ನಮ್ಮ ಸನಾತನ ಧರ್ಮದಲ್ಲಿ ಹೇಳಿರುವ ಅತ್ಯಂತ ಮಹತ್ವದ ವಿಷಯ. ಈ ಪಂಚಮಹಾಯಜ್ಞ ಎಂಬ ಶ್ರೇಷ್ಠವಾದ ಕರ್ಮವು ತನ್ನ ಸಂಪತ್ತನ್ನು ಸದ್ವಿನಿಯೋಗ ಮಾಡುವ ವಿಧಾನ ಎಂದು ಕರೆಯುತ್ತಾರೆ. ಇದರಿಂದ ಸಂಪತ್ತು ಸದ್ವಿನಿಯೋಗವಾದಂತಾಗುತ್ತದೆ. ದಾನದಿಂದ ಭೂತಕೋಟಿಗಳ ತೃಪ್ತಿಯು ಉಂಟಾಗಿ ದಾನಿಗೆ ಭೂತಕೋಟಿಯ ಅನುಗ್ರಹ ಸಿಗುತ್ತದೆ. ಹಾಗಾಗಿ ಎಷ್ಟು ವೈಭವವಿದ್ದರೂ ಅವನು ತನ್ನ ಗಳಿಕೆಯ ದ್ರವ್ಯವನ್ನು ಬೇರೊಬ್ಬರಿಗೆ ದಾನ ಮಾಡಲಿಲ್ಲವೆಂದರೆ ಅವನು ಶುದ್ಧನಾಗುವುದಿಲ್ಲ. ತ್ಯಾಗದ ಮನೋಭೂಮಿಕೆ ಬರದಿದ್ದರೆ ಶುದ್ಧಿ ಎಲ್ಲಿಂದ ಬರುತ್ತದೆ! ಶುದ್ಧನಾಗದಿದ್ದರೆ ಅವನು ಹೇಗೆ ತಾನೇ ಪುರುಷಾರ್ಥಗಳನ್ನು ಪಡೆಯುತ್ತಾನೆ? ಇತ್ಯಾದಿ ಅನೇಕ ಆತಂಕಗಳಿಂದ ಕೇಳಿರುವ ಪ್ರಶ್ನೆ ಇದಾಗಿದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಜರಾಸಂಧನಿಗೆ ಕೃಷ್ಣನ ಉತ್ತರ

ಜರಾಸಂಧನು ಹೇಳಿದನು: ''ನಿಮ್ಮೊಂದಿಗೆ ವೈರವೆಂಬುದು ಎಂದುಂಟಾಯಿತು ಎಂಬುದು ನನ್ನ ಸ್ಮರಣೆಗೆ ಬರುತ್ತಿಲ್ಲ. ಯೋಚಿಸಿದರೂ ಹೊಳೆಯುತ್ತಿಲ್ಲ. ನನ್ನ ಕಡೆಯಿಂದ ಯಾವುದೇ ಅಪರಾಧವೆಂಬುದಿಲ್ಲದಿರುವಾಗ, ನಿರಪರಾಧನಾದ ನನ್ನನ್ನು ಶತ್ರುವೆಂಬುದಾಗಿ ಹೇಗೆ ಪರಿಗಣಿಸಿದಿರಿ? ವಿಪ್ರರೇ, ಸಾಧು–ಪುರುಷರ ವರ್ತನೆಯೆಂದರೆ ಹೀಗಿರುವುದೇ? ಯಾರಿಗಾದರೂ ಧರ್ಮಕ್ಕೆ ಹೊಡೆತಬಿತ್ತೆಂದರೆ ಮನಸ್ಸು ಸಂತಾಪಗೊಳ್ಳುತ್ತದೆ. ಮಹಾರಥಿಯೆಂದೂ ಧರ್ಮಜ್ಞನೆಂದೂ ಕರೆಸಿಕೊಳ್ಳುವ ಯಾವನೇ ಕ್ಷತ್ರಿಯನು ಅನ್ಯಥಾ ನಡೆದುಕೊಳ್ಳುವವನಾಗಿ ಅಪರಾಧವಿಲ್ಲದವನ ಮೇಲೇರಿ ಹೋಗುವನೋ, ಅಂತಹವನು ಪಾಪಗತಿಯನ್ನು ಹೊಂದುವನು ಹಾಗೂ ತನ್ನ ಶ್ರೇಯಸ್ಸಿಗೇ ಭಂಗವನ್ನು ತರುವನು. ಸತ್ಕರ್ಮಗಳನ್ನು ಮಾಡುವುದೆನ್ನುವುದರಲ್ಲಿ ಕ್ಷತ್ರಿಯರಧರ್ಮವೆಂಬುದೇಮೂರೂ ಲೋಕಗಳಲ್ಲಿ ಶ್ರೇಷ್ಠವೆನಿಸತಕ್ಕದ್ದು. ಧರ್ಮಜ್ಞರು ಬೇರಿನ್ನಾವುದೇ ಧರ್ಮವನ್ನು ಪ್ರಶಂಸಿಸುವುದಿಲ್ಲ. ನಾನಾದರೋ ಸ್ವಧರ್ಮದಲ್ಲಿ ನೆಲೆಗೊಂಡಿರತಕ್ಕವನು. ಮನಸ್ಸನ್ನು ಸಂಯಮದಲ್ಲಿ ಇಟ್ಟುಕೊಂಡಿರುವವನು. ಪ್ರಜೆಗಳ ವಿಷಯದಲ್ಲಿ ಏನೂ ಅಪರಾಧವನ್ನು ಎಸಗದಿರುವವನು. ನನ್ನ ವಿಷಯದಲ್ಲಿ ಏನೋ ಪ್ರಮಾದದಿಂದಲೇ ನೀವು ಹೀಗೆ ಹೇಳುತ್ತಿರುವಿರಿ.''

ಅದಕ್ಕೆ ಕೃಷ್ಣನು ಹೇಳಿದನು: ಒಂದು ಕುಲದ ಉದ್ಧಾರವೆಂಬುದು ದೊಡ್ಡಕೆಲಸವಯ್ಯಾ ಮಹಾಬಾಹುವೇ! ಕುಲದ ಗೌರವವನ್ನುಳಿಸುವಂತಹವನು ಎಲ್ಲೋ ಒಬ್ಬನಿದ್ದಾನು. ಅಂತಹ ಮಹಾಪುರುಷನೊಬ್ಬನ ಆಣತಿಯಂತೆಯೇ ನಾವೀಗ ನಿನಗೆ ದಂಡನವನ್ನೀಯಲು ಬಂದಿದ್ದೇವೆ. ಈ ಭೂಮಿಯ ಮೇಲಿರುವ ಅನೇಕ ಕ್ಷತ್ರಿಯ ರಾಜರನ್ನು ನೀನು ಸೆರೆಗೆ ನೂಕಿರುವೆ. ಇದು ಕ್ರೂರಾಪರಾಧ. ಇದನ್ನು ಮಾಡಿಯೂ ನಿನ್ನನ್ನು ನೀನೇ ನಿರಪರಾಧಿಯೆಂದುಕೊಳ್ಳುವುದೇ? ಅಪರಾಧಿಗಳಲ್ಲದ ಇತರ ರಾಜರನ್ನು ಒಬ್ಬ ರಾಜನು ಅದೆಂತು ಹಿಂಸಿಸಿಯಾನು ರಾಜಶ್ರೇಷ್ಠನೇ? ರಾಜರುಗಳನ್ನು ಜೈಲಿಗೆ ತಳ್ಳಿ ಅವರನ್ನು ರುದ್ರನಿಗೆ ಬಲಿಗೊಡಲು ನೀನು ಬಯಸುತ್ತಿರುವೆಯಲ್ಲವೇ? ನೀನು ಎಸಗುವ ಆ ಪಾಪವು ನಮಗೆ ಅಂಟಿಕೊಳ್ಳುತ್ತದೆ. ಓ ಜರಾಸಂಧ! ಆದರೆ ನಾವು ಧರ್ಮವನ್ನು ಪಾಲಿಸತಕ್ಕವರು, ಧರ್ಮದ ರಕ್ಷಣೆಯನ್ನು ಮಾಡಲು ಸಮರ್ಥರಾಗಿರುವವರು.

ದೇವತೆಗೆಂದು ಮನುಷ್ಯರನ್ನು ಬಲಿಗೊಡುವುದನ್ನು ನಾವೆಂದೂ ಕಂಡವರಲ್ಲ. ಹಾಗಿರಲು ಶಿವನ ಯಜ್ಞಕ್ಕಾಗಿ ಅಷ್ಟೊಂದು ಮನುಷ್ಯರನ್ನು ಬಲಿಗೊಡಲಿರುವೆಯೆಂಬುದೇ ಒಪ್ಪಲಾಗದ ಸಂಗತಿ. ನೀನು ಕ್ಷತ್ರಿಯ. ಉಳಿದ ರಾಜರು ನಿನಗೆ ಸವರ್ಣರು. ಜರಾಸಂಧ, ಮತ್ತಾರು ತಾನೆ ನಿನ್ನಂತೆ ಈ ರೀತಿಯಾಗಿ ದುರ್ಮತಿಯನ್ನು ಹೊಂದಿದ್ದಾರು? ಯಾವ ಯಾವ ಅವಸ್ಥೆಯಲ್ಲಿ ಯಾವ ಯಾವ ಕರ್ಮವನ್ನು ಒಬ್ಬನು ಮಾಡುತ್ತಾನೋ, ಅದದೇ ಅವಸ್ಥೆಯಲ್ಲಿ ಅದರ ಫಲವನ್ನು ಹೊಂದಬೇಕಾಗುತ್ತದೆ. ನೀನು ಜ್ಞಾತಿಕ್ಷಯಕರ. ಎಂದರೆ ಬಂಧುಗಳನ್ನೇ ನಾಶಮಾಡಲಿಕ್ಕೆ ಹೊರಟಿರತಕ್ಕವನು. ಆದರೆ ನಾವು ಆರ್ತರಿಗೆ ರಕ್ಷಣೆಯನ್ನು ಕೊಡತಕ್ಕವರು. ಆದ್ದರಿಂದ ಜ್ಞಾತಿವೃದ್ಧಿಗಾಗಿ ನಿನ್ನ ವಧೆಯನ್ನು ಮಾಡಲು ಬಂದಿರುವಂಥವರು.

ಈ ಲೋಕದಲ್ಲಿ ಕ್ಷತ್ರಿಯರಲ್ಲಿ ಗಂಡಸೆಂಬುವನೇ ಮತ್ತೊಬ್ಬನಿಲ್ಲ ಎಂದ ನೀನೇನನ್ನು ಭಾವಿಸಿಕೊಂಡಿರುವೆಯೋ, ಅದು ನಿನ್ನ ಮಹತ್ತಾದ ಬುದ್ಧಿವಿಪ್ಲವವೇ ಸರಿ. ಸ್ವಾಭಿಮಾನಿಯಾದ ಯಾವ ಕ್ಷತ್ರಿಯನು ತಾನೆ ತನ್ನ ಬಂಧುಗಳನ್ನು ಅರಿತವನಾಗಿ, ಅವರನ್ನು ಕಾಪಾಡಲೋಸುಗ ಮಾಡಬೇಕಾದ ರಣವನ್ನು ತಪ್ಪಿಸಿಕೊಂಡಾನು? ಅದರಿಂದಲೇ ಸ್ವರ್ಗಪ್ರಾಪ್ತಿಯು ತನಗಂಟಾಗುವುದು ಎಂಬುದನ್ನು ಅರಿತಿದ್ದೂ ಸಹ! ರಣವೆಂಬುದು ಒಂದು ಯಜ್ಞ. ರಣಯಜ್ಞದಲ್ಲಿ ದೀಕ್ಷೆಗೊಂಡ ಕ್ಷತ್ರಿಯರು ಸ್ವರ್ಗದಲ್ಲಿ ಆಸ್ಥೆಯುಳ್ಳವರಾಗಿ, ತಮಗೆ ಅಭೀಷ್ಟವಾದ ಲೋಕಗಳನ್ನು ಸೇರುವರೆಂಬುದನ್ನು ನೀನೂ ಅರಿತಿರಬೇಕಷ್ಟೆ?

ರಂಗಭೂಮಿ; ಎಡವಟ್ಟಿನಲ್ಲಿಯೂ ರಸ!



ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

ಟಿಪಿಕಲ್ ಟಿಪಿ ಕೈಲಾಸಂ ಬರೆದ ನಾಟಕದಲ್ಲಿನ ಸನ್ನಿವೇಶ ಇಂತಿದೆ:

''ಯಾರಲ್ಲಿ!'' ದರ್ಪದಿಂದ ಕೂಗಿದ ರಾಜ.

''ಅಪ್ಪಣೆ ಮಹಾಪ್ರಭು'' ಎನ್ನುತ್ತಾ ಭಟನೊಬ್ಬನು ಮುಂದೆ ಬಂದ.

''ರಾಜದ್ವಾರದ ಬಳಿ ಏನು ನಡೆಯುತ್ತಿದೆ?''

''ಮಹಾಪ್ರಭುಗಳೇ, ದ್ವಾರಸ್ಥನೋರ್ವನು ವಿಪ್ರನಾಗಿರುವನು.''

ಆ ಕಾಲದಲ್ಲಿ ಮತಾಂತರ ಇರಲಿಲ್ಲ. ಇತರ ಜಾತಿಯವರನ್ನು ವಿಪ್ರರನ್ನಾಗಿಸುವುದಂತೂ ಕನಸಿನಲ್ಲಿಯೂ ಕಲ್ಪಿಸಿಕೊಳ್ಳಲಾಗದ ಕಾಲಘಟ್ಟ. ಇಂಥದರಲ್ಲಿ ದ್ವಾರಸ್ಥನೊಬ್ಬನು ಥಟ್ಟನೆ ವಿಪ್ರನಾಗಲು ಸಾಧ್ಯವೆ?

ರಾಜನಪಾತ್ರಧಾರಿಗೆಭಟನಪಾತ್ರಧಾರಿಯಎಡವಟ್ಟುತಿಳಿಯಿತು. ''ಹೋಗಿ ಅದೇನೆಂದು ಮತ್ತೆ ಅರಿತು ಬಾ'' ಎಂದು ಹೂಂಕರಿಸಿದ. ಮತ್ತೆ ಬಂದ ಭಟನು ''ವಿಪ್ರನೊಬ್ಬನುದ್ವಾರಸ್ಥನಾಗಿರುವನು'' ಎಂದ. ನಾಟಕಮುಂದುವರಿಯಿತು.

ಎಡವಟ್ಟುಗಳಿಗೂ, ನಾಟಕಗಳಿಗೂ ಬಿಡಲಾರದನಂಟು. ಒಮ್ಮೆ ರಸಪೂರ್ಣವಾಗಿ ನಡೆಯುತ್ತಿದ್ದ ನಾಟಕವೊಂದರಲ್ಲಿ ರಂಗದಲ್ಲಿದ್ದ ಇಬ್ಬರು ನಟರೂ ತಮ್ಮ ಮಾತುಗಳನ್ನು ಮರೆತರು. ಹಾಗೆ ಮರೆತಾಗ ಮಾತನ್ನು ನೆನಪಿಸಲೆಂದೇ ಇದ್ದ ಪ್ರಾಂಪ್ಟರ್‌ಸೈಡ್‌ವಿಂಗಿನಿಂದಡೈಲಾಗನ್ನುಎರುಪಿಸುವಿನಲ್ಲಿನುಡಿದ. ಆದರೂ ನಟರುಬೆಬ್ಬೆಬ್ಬೆ. ''ಯಾಕ್ರೋ, ಡೈಲಾಗ್ ಕೇಳಿಸ್ತಿಲ್ವಾ?'' ಪ್ರಾಂಪ್ಟರ್ ಕೊಂಚ ದನಿಯೇರಿಸಿ ಕೇಳಿದ.

ಸೈಡ್‌ವಿಂಗಿನ ಸಮೀಪಕ್ಕೇ ನಡೆದ ನಟನೊಬ್ಬನು ''ಕೇಳಿಸ್ತಿದೆ, ಸ್ಪಷ್ಟವಾಗಿ ಕೇಳಿಸ್ತಿದೆ. ಆದರೆ ಆ ಡೈಲಾಗ್ ನನ್ನದೋ, ಅವನದೋ?'' ಎಂದ.

ಸೈಡ್‌ವಿಂಗಿನ ಪ್ರಾಂಪ್ಟಿಂಗು ವಿಫಲವಾದ ಮತ್ತೊಂದು ಪ್ರಸಂಗವು ಕೈಲಾಸಂರ 'ನಂ ಕಂಪ್ನಿ' ನಾಟಕದಲ್ಲಿ ಕಂಡುಬರುತ್ತದೆ. ಮಕ್ಕಳಿಲ್ಲದ ರಾಜದಂಪತಿಗಳಿಗೆ ತಪಸ್ಸು ಮಾಡಿದರೆ ಮಕ್ಕಳಾಗುತ್ತೆಂದು ವಿಪ್ರನೊಬ್ಬನು ನುಡಿದ ಕಾರಣ ರಾಜನು ಕಾಡಿಗೆ ಹೊರಡುವನು. ಅವನನ್ನು ತಡೆಯಲೆಂದು ನಾಡಿಗರು ಯತ್ನಿಸುತ್ತಾ, 'ಪಾಡುಪಾರ್ವಪೇಳ್ವನೆಂದು ನಾಡು ಬಿಡುವುದೇ, ಭೂಪ, ನಾಡ ಬಿಡುವುದೇ' ಎಂದು ಹಾಡಬೇಕಿತ್ತು.

ಏರುಧ್ವನಿಯ ನಾಡಿಗರ ಪಾತ್ರಧಾರಿಯೊಬ್ಬನು 'ನಾಡ ಬುಡುವುದೇ... ಭೂಪ, ನಾಡ ಬುಡುವುದೇ...' ಎಂದು ಹಾಡಿದ.

''ಏಯ್! ಬು ಅಲ್ಲ ಕಣೋ, ಬೀ ಕಣೋ'' ಎಂದ ಪ್ರಾಂಪ್ಟರ್.

''ನಾಡು ಬುಡುವುದೇ, ಭೀಪಾ, ನಾಡ ಬುಡುವುದೇ'' ಎಂದ ಏರುಕಂಠಿ.

''ಅದಲ್ವೋ, ಮೊದಲ ಬು ಕಣೋ...''

''ನಾಡ ಬಿಡುವುದೇ ಭೀಪಾ ನಾಡ ಬಿಡುವುದೇ...''

''ಥೂ! ಇವನು ಸರಿಹೋಗಲ್ಲ ಕಣ್ರೋ... ವಾದ್ಯದ ಸದ್ದು ಏರಿಸ್ರೋ'' ಎಂದ ಪ್ರಾಂಪ್ಟರ್.

ಖ್ಯಾತ ನಟ ಕಾಲಾಪಿಳ್ಳಣ್ಣರನ್ನು ಕುರಿತಾದ ಪ್ರಸಂಗವೊಂದಿದೆ. ಒಳ್ಳೆಯ ಸಂಗೀತಗಾರರಾಗಿದ್ದ ಅವರು ಹಾಡಿನ ಒಂದೇ ಸಾಲನ್ನು ವಿಸ್ತರಿಸಿ ಹಾಡುತ್ತಾ ಸಂಗೀತರಸಿಕರ ಮನವನ್ನು ಗೆಲ್ಲುವುದರಲ್ಲಿದ್ದರು. ಆದರೆ ಸಭೆಯಲ್ಲಿರುವ ಎಲ್ಲರಿಗೂಸಂಗೀತದಗಂಧವಿರಬೇಕೆಂಬನಿಯಮವಿಲ್ಲವಲ್ಲ. ಸಭಿಕರಲ್ಲೊಬ್ಬನು ಎದ್ದುನಿಂತು, ''ಸ್ವಾಮಿ, ಕೆಲವೊಮ್ಮೆ ಮುಂದಿನ ಮಾತು ಮರೆತ್ಹೋಗೋದು ಸಹಜವೇ. ಪರವಾಯಿಲ್ಲ ಬಿಡಿ, ಪಕ್ಕದವನಿಗೆ ಮಾತಾಡಕ್ಹೇಳಿ, ಮುಂದಿನ ಮಾತುಗಳು ನೆನಪಿಗೆ ಬಂದಾವು'' ಎಂದಿದ್ದ!

ಪೌರಾಣಿಕ ನಾಟಕಗಳಲ್ಲಿ ಆಧುನಿಕತೆಯ ಸುಳಿವು ತೂರಿ ನಗೆಯೆಬ್ಬಿಸುವ ಪ್ರಸಂಗಗಳು ಅನೇಕವಿವೆ. ಶ್ರೀ ಎಂ.ಎನ್. ಅಶ್ವಥ್ ಬರೆದಿರುವ 'ಸೀ ಕಿಸ್ನ ಸಂದಾನ' ನಾಟಕವು ಇಂತಹ ಹಾಸ್ಯ ಪ್ರಸಂಗಗಳ ಮಾಲೆಯೇ ಆಗಿದೆ. ಇದೋ ಆ ನಾಟಕದ ಒಂದು ಸಣ್ಣ ಝಲಕ್:

''ಎಲ್ಲೈ ಸೀ ಕಿಸ್ನ, ಮಾಯಾವಿ! ಪಾಂಡವರು ಮಾಂಸ ಮಾರ್ತಾರೆ; ಯುಧಿಷ್ಠಿರನು ಮಾಂಸ ಮಾರ್ತಾನೆ. ಭೀಮಸೇನನು ಮಾಂಸ ಮಾರ್ತಾನೆ; ಹರ್ಜುನನುಮಾಂಸಮಾರ್ತಾನೆ; ನಕುಲಸಹದೇವರುಮಾಂಸಮಾರ್ತಾರೆ'' ಎಂದು ಅಬ್ಬರಿಸಿದ ದುರ್ಯೋಧನ ಪಾತ್ರಧಾರಿ.

''ಲೇ, ಪಾಂಡವರುಯಾವಾಗ, ಎಲ್ಲಿಮಾಂಸದಂಗಡಿಇಟ್ಕೊಂಡಿದ್ರೋ?'' ಹೈರಾಣಾದರು ನಾಟಕ ಕಲಿಸುವ ಮೇಷ್ಟು.

''ನೀವೇ ಏಳಿದ್ರಲ್ಲ ಮೇಸ್ಟ್ರೇ!''

''ಎಲ್ಲಿ, ಆ ಸ್ಕ್ರಿಪ್ಟ್ ತೊಗೊಂಡ್ಬಾ.'' ನಟನು ಸ್ಕ್ರಿಪ್ಟ್ ತಂದ, ಸಾಲುಗಳನ್ನು ತೋರಿಸಿದ. ಅದರಲ್ಲಿದ್ದ 'ಮಹಾ ಸಮರ್ಥರೆ..' ಇವನ ನಾಲಿಗೆಗೆ ಅಟಕಾಯಿಸಿಕೊಂಡು 'ಮಾಂಸ ಮಾರ್ತಾರೆ' ಎಂದಾಗಿತ್ತು.

ಇದೇ ನಾಟಕದಲ್ಲಿ ದ್ರೌಪದಿಯು 'ಅರ್ಜುನನೀನು ಓಗು; ನಾನು ಹೊಳೆಗೆ ಓಗುತ್ತೇನೆ'' ಎನ್ನುತ್ತಾಳೆ. ನಾಟಕದಮೇಷ್ಟ್ರು ''ನೀನ್ಯಾಕಮ್ಮಹೊಳೆಗೆಹೋಗ್ಬೇಕು? ನೀನು ರಾಣಿ ಕಣಮ್ಮಾ, ದ್ರೌಪದಿ. ನೀನು ಹೋಗಬೇಕಾದ್ದು ಹೊಳೆಗೆ ಅಲ್ಲ, ಒಳಗೆ!'' ಎಂದುತಿದ್ದುತ್ತಾನೆ. ದುರ್ಯೋಧನನು 'ದುರ್ವೇದನ' ಆಗಿ, ದುಶ್ಶಾಸನನು 'ದುಶ್ವಾಸನ' ಆಗಿ (ಆಗಾಗ್ಗೆ ಹೆಂಡ ಏರಿಸುವುದರಿಂದ ದುಶ್ವಾಸನನೇ) ಶಕುನಿಯು 'ಸಕುನ್ನಿ'ಯಾಗಿ, ಇಡೀ ನಾಟಕವು ವಿನೋದಪೂರ್ಣವಾಗಿದೆ.

ವೇದಿಕೆಯ ಮೇಲೆ ಒಂದು ವಿಧದ ವಿನೋದ ಕಂಡರೆ ವೇದಿಕೆಯ ಹೊರಗೆ ಮತ್ತೊಂದು ರೀತಿಯ ವಿನೋದ ಕಂಡುಬರುತ್ತದೆ. 'ರಾಮಾಯಣ' ನಾಟಕವು ಆ ಹಳ್ಳಿಯಲ್ಲಿ ಹಲವಾರು ಪ್ರದರ್ಶನಗಳನ್ನು ಕಂಡಿತ್ತು. ಸೀತೆಯ ಪಾತ್ರಧಾರಿಯ ಅಭಿನಯಕ್ಕೆ ಸಭಿಕರು ಎಂಟು ಗೇಣು (ಮಾರು!) ಹೋಗಿದ್ದರು. ಮರುದಿನ ಪರದೆ ಏರಿಸುವುದಕ್ಕೆ ಮುಂಚೆ ನಟನಟಿಯರನ್ನೆಲ್ಲ ಒಗ್ಗೂಡಿಸಲು ನೋಡಿದಾಗ ಸೀತೆ ನಾಪತ್ತೆ! ''ರಾವಣನೇ ಬರದೆ ಸೀತೆ ಎಲ್ಹೋದ್ಳೋ?'' ಕಂಪನಿಯ ಯಜಮಾನರು ಕಕ್ಕಾಬಿಕ್ಕಿಯಾಗಿದ್ದರು.

''ಹನುಮಂತನೂ ಕಾಣ್ತಿಲ್ಲ ನನ್ನೊಡೆಯ'' ಬಿನ್ನವಿಸಿದ ಯಜಮಾನರ ಆಪ್ತ. ವಿಚಾರಿಸಿದಾಗ ತಿಳಿದ ಅಂಶವೆಂದರೆ ಸೀತೆಗೆ ಚೂಡಾಮಣಿಯನ್ನು ಕೊಡುವಸನ್ನಿವೇಶದಲ್ಲಿದಿನವೂಹನುಮನಪಾತ್ರಧಾರಿಯುಪ್ರೇಮಮಯ ನೋಟವನ್ನು ಬೀರುತ್ತಿದ್ದನಂತೆ, ಕೆಲವು ಪಿಸುನುಡಿಗಳನ್ನೂ ಆಡುತ್ತಿದ್ದನಂತೆ. ಸೀತೆಯ ಪಾತ್ರಧಾರಿಯೂ ಅದಕ್ಕೆ ಸ್ಪಂದಿಸಿದ ಕಾರಣ ರಾವಣನಿಗೆ ಚಾನ್ಸೇ ಕೊಡದೆ ಹನುಮನೇ ಸೀತೆಯನ್ನು ಹಾರಿಸಿಕೊಂಡು ಹೋಗಿದ್ದ!

ಸೀತೂ ಕಂಪನಿ ಪ್ರಸಿದ್ಧಿಯ ಉತ್ತುಂಗದಲ್ಲಿದ್ದ ಸಮಯ. ಕಂಪನಿಯ ನಾಟಕಗಳಲ್ಲಿ ಜನಮನವನ್ನು ಹೆಚ್ಚಾಗಿ ಆಕರ್ಷಿಸುತ್ತಿದ್ದುದು ಸ್ತ್ರೀಪಾತ್ರಗಳೇ. ಸುಂದರಿಯರಿರಲ್ ರಸಿಕರ್ ದೂರವಿರ್ಪರೇಂ! ಊರಿನ ಧನಿಕನೊಬ್ಬನಿಗೆ ಪಾತ್ರಧಾರಿಯೊಬ್ಬಳ ಮೇಲೆ ಮನಸ್ಸಾಯಿತು. ಧನಿಕನು, ''ಎಷ್ಟೇ ಖರ್ಚಾದ್ರೂ ಸರಿ, ಆ ಹುಡುಗಿ ನನಗೆ ಬೇಕು'' ಎಂದು ಕಂಪನಿಯ ಮುಖ್ಯಸ್ಥರ ಬೆನ್ನುಬಿದ್ದ. ''ಅವಳು ಯಾರನ್ನೂ ಭೇಟಿ ಮಾಡಲ್ಲ ಅಂತಾಳೆ'' ಎಂದರು ಕಂಪನಿಯವರು.

''ಕೇಳಿದಷ್ಟುಕೊಡ್ತೀನಿ!'' ಎಂದಸಾಹುಕಾರರನ್ನು ಗ್ರೀನ್‌ರೂಂನಿಂದದೂರ ಇರಿಸುವುದೇ ಹರಸಾಹಸವಾಯಿತು. ಕಡೆಗೂ ಒಂದುದಿನ ಆ ರೂಪಸಿಯನ್ನು ಸಿರಿವಂತನ ಬಳಿಗೆ ಮಾಲಿಕರು ಕರೆದುಕೊಂಡು ಬಂದೇಬಿಟ್ಟರು.

''ಹುಡುಗೀನ್ಕರ್ಕೊಂಬರ್ತೀನೀಂತ ಪಂಚೆ ಶಲ್ಯದ ಆಸಾಮೀನ ಕರ್ಕೊಂಬಂದ್ರಲ್ಲ!'' Howಹಾರಿದರು ಸಾಹುಕಾರರು.

''ಕ್ಷಮಿಸಿ ಸಾಹುಕಾರ್ರೇ. ಹುಡುಗಿಯ ಪಾತ್ರದವನು ಹುಡುಗ ಅಂತ ಗೊತ್ತಾದ್ರೆ ಕಲೆಕ್ಷನ್ ಡೌನ್ ಆಗತ್ತೇಂತ ನಿಮ್ಮಿಂದ ವಿಷಯ ಮುಚ್ಚಿಟ್ಟು ಇಷ್ಟು ದಿನ ತಳ್ಳಿದೆ'' ರಹಸ್ಯ ಹೊರಗೆಡವಿದರು ಕಂಪನಿಯವರು. ಸೀತೂ ಕಂಪನಿಯಸೀತೂವಿನ ಬೆಡಗು, ಬಿನ್ನಾಣ ಸ್ತ್ರೀಯರನ್ನೂ ನಾಚಿಸುವಂತಿದ್ದವು. ಸೀತೂ ಸೀರೆಯ ನೆರಿಗೆಯನ್ನು ಚಿಮ್ಮಿಸಿಕೊಂಡು ನಡೆಯುವ ರೀತಿಯನ್ನು ಕಲಿಯಲೆಂದೇ ಅನೇಕ ಹೆಂಗಳೆಯರು ಅವರ ಬಳಿ ಬರುತ್ತಿದ್ದರಂತೆ.

ರಂಗನಾಟಕಗಳನ್ನು ಆಕಾಶವಾಣಿಯಲ್ಲಿಯೂ ಬಿತ್ತರಿಸಲು ಅನುಕೂಲವಾಗುವಂತೆ ರೇಡಿಯೋ ನಾಟಕಗಳ ಶಕೆ ಆರಂಭವಾಯಿತು. ಧಾರವಾಡ ಆಕಾಶವಾಣಿಯಲ್ಲಿಡಾ.ಎಚ್.ಕೆ.ರಂಗನಾಥ್‌ಮತ್ತುಖ್ಯಾತನಟಿಯಮುನಾಮೂರ್ತಿಯವರು ಅಸಂಖ್ಯಾತ ನಾಟಕ ಪ್ರಯೋಗಗಳನ್ನು ಕೈಗೊಂಡು ಯಶಸ್ವಿಯಾದವರು. ಹಾಗೊಂದು ನಾಟಕದ ಸನ್ನಿವೇಶ. ಡೈಲಾಗುಗಳನ್ನು ಹಾಳೆಗಳಲ್ಲಿ ಬರೆದುಕೊಂಡು ಓದುತ್ತಾ, ಆ ಹಾಳೆಯ ಡೈಲಾಗ್ ಮುಗಿದಾಕ್ಷಣ ಸದ್ದಾಗದಂತೆ ಹಾಳೆಯನ್ನು ಜಾರಿಸಿ ಮುಂದಿನ ಹಾಳೆಗೆ ಹೋಗುವುದು ಅಂದಿನ ಕ್ರಮ. ನಾಟಕದ ಒಂದು ಹಂತದಲ್ಲಿ ''ಮಗು ಕಾಣಿಸ್ತಿಲ್ವಂತೆ'' ಎಂಬ ಮಾತು; ಅದಕ್ಕೆ ಯಮುನಾಮೂರ್ತಿಯವರ ಸ್ಪಂದನ ಇದ್ದಿತು. ಆದರೆ '... ಕಾಣಿಸ್ತಿಲ್ವಂತೆ' ಎನ್ನುವ ಸಮಯಕ್ಕೆ ಸರಿಯಾಗಿ ಯಮುನಾಮೂರ್ತಿಯವರ ಕೈಯಲ್ಲಿದ್ದ ಹಾಳೆಗಳು ಜಾರಿ, ಕ್ರಮವಿಹೀನವಾಗಿ ನೆಲದ ಮೇಲೆ ಹರಡಿಕೊಂಡವು. ಹಾಳೆಗಳನ್ನು ಸದ್ದಿಲ್ಲದೆ ಎತ್ತಿ, ಕ್ರಮದಲ್ಲಿ ಜೋಡಿಸಿಕೊಂಡು ಮುಂದಿನ ಡೈಲಾಗ್ ಕೈಗೆತ್ತಿಕೊಳ್ಳಬೇಕಾಗಿತ್ತು. ಅಲ್ಲಿಯವರೆಗೂ ಪ್ರಸಾರದಲ್ಲಿ ನಿಶ್ಶಬ್ದವಿರಲು ಸಾಧ್ಯವಿಲ್ಲವಲ್ಲ! ಹಾಳೆಗಳನ್ನು ಹೆಕ್ಕಿ, ಜೋಡಿಸುವವರೆಗೆ ಯಮುನಾಮೂರ್ತಿಯವರು ''ಅಯ್ಯೋ! ಆ ಮಗುವಿನ ತಾಯಿ ಎಷ್ಟು ಅಳ್ತಿರ್ತಾಳೋ; ಭಗವಂತಾ! ಯಾಕಪ್ಪಾ ಇಂತಹ ಪರಿಸ್ಥಿತಿ ತಂದ್ಬಿಟ್ಟೆ...'' ಮುಂತಾದ ಗೋಳುಪದಗಳನ್ನಾಡುತ್ತಾ ಪರಿಸ್ಥಿತಿಯನ್ನು ನಿಭಾಯಿಸಿದ್ದರು.

ರಂಗನಾಥರು ಅಭಿನಯಿಸುತ್ತಿದ್ದ ಪ್ರಸಂಗವೊಂದರಲ್ಲಿ ಸಹನಟಿಯು ''ಹೊರಡೋಣವೇ ಪ್ರಾಣನಾಥ'' ಎನ್ನಬೇಕಿತ್ತು, ಅದಕ್ಕುತ್ತರವಾಗಿ ಇವರು ''ನಡೆ ಪ್ರಾಣಪ್ರಿಯೆ'' ಎನ್ನಬೇಕಿತ್ತು. ನಟಿಯ ಬಾಯಲ್ಲಿ ಹೊರಡುತ್ತಿದ್ದ 'ನಾತ'ವನ್ನು 'ನಾಥ'ಕ್ಕೆತರಿಸಲು ಬಹಳವೇ ಪ್ರಯತ್ನಗಳಾದವು. ಕಡೆಗೊಮ್ಮೆ 'ನಾಥ' ಎಂದಾಗ, 'ಸರಿ, ಲೈವ್ ಹೋಗೋಣ' ಎಂದು ಮುಂದಾದರು. ಆದರೆ ಲೈವ್‌ನಲ್ಲಿ ಮತ್ತೆ 'ಹೊರಡೋಣವೇ ಪ್ರಾಣನಾತ' ಎಂದಳು ನಟಿ. ರೋಸಿಹೋದ ರಂಗನಾಥರು, ''ನಡೆ ಅಲ್ಪಪ್ರಾಣಪ್ರಿಯೆ'' ಎಂದರು!

ನಟನೆಗೆ ಉಚ್ಚಾರ, ಮುಖಭಾವಗಳೇ ಜೀವಾಳ. ರೇಡಿಯೋದಲ್ಲಂತೂ ಧ್ವನಿಯ ಏರಿಳಿತಗಳು, ಸ್ಪಷ್ಟ ಉಚ್ಚಾರಗಳೇ ಭಾವವಾಹಕಗಳು. ಅಂತಿರುವಾಗ 'ಮುಂದಿನ ಕಾರ್ಯಕ್ರಮ ಗೌತಮಬುದ್ಧ' ಎನ್ನಬೇಕಾದವನು 'ಮುಂದಿನ ಕಾರ್ಯಕ್ರಮ ಭೌತಮ ಗುದ್ದ' ಎಂದಿದ್ದ!

ಕಾವ್ಯೇಷುನಾಟಕಂರಮ್ಯಂ. ಇಂತಹ ಪ್ರಸಂಗಗಳು ವೇದಿಕೆಯ ಮೇಲೂ, ವೇದಿಕೆಯಿಂದ ಹೊರಗೂ ಜನರಿಗೆ ಆಪ್ಯಾಯಮಾನವಾಗುತ್ತವೆ. ನಾಟಕ ಗೆಲ್ಗೆ; ವಿನೋದಮಪಿ ಗೆಲ್ಗೆ; ವಿನೋದನಾಟಕಂ ಗೆಲ್ಗೆ, ವಾಳ್ಗೆ.

ಮಹಿಳಾ ಪರ ಹೋರಾಟಗಳಲ್ಲಿ ಭಾರತೀಯ ದೃಷ್ಟಿಕೋನವಿರಲಿ

ದಿವಾಕರ ಹನಕೋಡು

ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಮಹಿಳೆಯರಿಗೆ ಶ್ರೇಷ್ಠವಾದ ಸ್ಥಾನ ನೀಡಲಾಗಿದೆ.

ಲೇಖಕಿ ಭಾನು ಮುಷ್ತಾಕ್‌ರವರು ''ಕನ್ನಡ ಭಾಷೆಯನ್ನು ಕನ್ನಡ ಭುವನೇಶ್ವರಿಯೆಂದು ಮಂದಾಸನದಲ್ಲಿ ಕೂರಿಸಿ ಪೂಜಿಸುತ್ತೀರಿ. ಮತ್ತೊಂದೆಡೆ ಮಹಿಳೆಯರನ್ನು ಶೋಷಣೆ ಮಾಡುತ್ತೀರಿ. ಕನ್ನಡ ಭಾಷೆಯ ವಿಷಯಕ್ಕೆ ಬಂದಾಗ ಒಬ್ಬ ಮುಸ್ಲಿಂ ಮಹಿಳೆಯಾದ ನಾನು ಎಲ್ಲಿ ನಿಲ್ಲಬೇಕೆಂದು ಗೊತ್ತಾಗುತ್ತಿಲ್ಲ'' ಎಂದು ಈ ಹಿಂದೆ ಹೇಳಿಕೆ ನೀಡಿದ್ದರು.

ಮಹಿಳೆಯರನ್ನು ಪೂಜಿಸುವುದರ ಮೂಲಕ, ಅವಳನ್ನು ಆರಾಧಿಸುವ ಮೂಲಕ ಅವಳ ಶೋಷಣೆ ನಡೆಯುತ್ತಿದೆ. ಅವಳನ್ನು ತಮಗೆ ಸಮಾನಳೆಂಬಂತೆ ನಡೆಸಿಕೊಳ್ಳುವುದಿಲ್ಲ. ಒಂದೋ ದೇವಿ, ತಾಯಿಯೆಂಬಂತೆ ನೋಡುತ್ತಾರೆ. ಇಲ್ಲವೇ ದಾಸಿಯಂತೆ ನಡೆಸಿಕೊಳ್ಳುತ್ತಾರೆ ಎಂಬುದು ಪಾಶ್ಚಿಮಾತ್ಯರ ದೃಷ್ಟಿಯಲ್ಲಿ ಯೋಚಿಸುವ ಬಹಳ ಮಂದಿ ಸ್ತ್ರೀವಾದಿಗಳ ವಾದ.

ಆದರೆ ಹೆಣ್ಣನ್ನು ದೇವಿಯಾಗಿ, ತಾಯಿಯಾಗಿ ನೋಡಿದವನು ಹೆಣ್ಣನ್ನು ಕೀಳಾಗಿ ಕಾಣಲು ಸಾಧ್ಯವೇ?! ಶಕ್ತಿಸ್ವರೂಪಿಣಿಯ ರೂಪದಲ್ಲಿ, ಮಾತೃಸ್ವರೂಪಿಣಿಯ ರೂಪದಲ್ಲಿ ಪದೇ ಪದೇ ನೋಡುತ್ತಾ, ಆರಾಧಿಸುತ್ತಾ ಬಂದವರಿಗೆ ಹೆಣ್ಣನ್ನು ಕಂಡಾಗ ಗೌರವದ, ಆದರದ ಭಾವನೆಗಳೇ ಮೊದಲು ಬರುವುದು ಸಹಜ.

ಭಾರತೀಯ ಸಂಸ್ಕೃತಿಯಲ್ಲಿ ಭೂಮಿತಾಯಿಯಿಂದ ನದಿಯವರೆಗೆ ಯಾವೆಲ್ಲಾ ಪ್ರಾಕೃತಿಕ ಶಕ್ತಿಗಳು ನಮ್ಮನ್ನು ಪೊರೆಯುತ್ತಿದೆಯೋ ಅವುಗಳೆಲ್ಲವನ್ನೂ ಹೆಣ್ಣಿನ ರೂಪದಲ್ಲಿ, ತಾಯಿಯ ರೂಪದಲ್ಲಿ ನೋಡುವ ದೃಷ್ಟಿ ಜನಮಾನಸದಲ್ಲಿ ತುಂಬಾ ಆಳವಾಗಿ ಬೇರೂರಿದೆ.

ಸ್ತ್ರೀವಾದಿಗಳು ಒಮ್ಮೆ 'ದ್ರೌಪದಿ ಪ್ರತಾಪ' ಎಂಬ ಯಕ್ಷಗಾನ ಪ್ರಸಂಗವನ್ನು ನೋಡಬೇಕು. ಇದು ಮೂಲ ಮಹಾಭಾರತದಲ್ಲಿ ಇಲ್ಲದ ಒಂದು ಕಾಲ್ಪನಿಕ ಕತೆಯಾದರೂ ತುಂಬಾ ಸೊಗಸಾಗಿದೆ. ಇದರಲ್ಲಿ.... ಕುರುಕ್ಷೇತ್ರ ಯುದ್ಧಾನಂತರ ಯುದ್ಧವನ್ನು ಗೆದ್ದ ಶ್ರೇಯಸ್ಸು ಯಾರಿಗೆ ಸಲ್ಲಬೇಕು ಎಂಬ ಚರ್ಚೆ ಪಾಂಡವ ಪಾಳೆಯದಲ್ಲಿ ನಡೆಯುತ್ತದೆ. ಈ ವಿಷಯವಾಗಿ ಭೀಮಾರ್ಜುನರಲ್ಲಿ ಜಗಳ ನಡೆದು ಅವರಿಬ್ಬರ ಮಧ್ಯೆ ಕಾಳಗವೇ ನಡೆದು ಬಿಡುತ್ತದೆ! ತಮ್ಮನೆಂಬ ವಾತ್ಸಲ್ಯ ಭಾವದಿಂದ ಅರ್ಜುನನೊಡನೆ ಕಠಿಣವಾಗಿ ಹೋರಾಡಲು ಭೀಮನಿಗೆ ಸಾಧ್ಯವಾಗದ ಕಾರಣ ಆತ ಸೋಲುತ್ತಾನೆ. ತನ್ನ ಸೋಲಿನ ನಂತರ ತುಂಬಾ ಯೋಚಿಸಿದ ಭೀಮನು ಮಡದಿ ದ್ರೌಪದಿಯನ್ನು ಅರ್ಜುನನವಿರುದ್ಧ ಯುದ್ಧಕ್ಕೆ ಕಳಿಸುತ್ತಾನೆ. (ಒಂದೊಂದು ವರ್ಷ ಒಬ್ಬೊಬ್ಬರ ಬಳಿ ದ್ರೌಪದಿ ಇರುವಂತೆ ಪಾಂಡವರು ತಮ್ಮಲ್ಲಿ ಮಾಡಿಕೊಂಡ ಒಪ್ಪಂದದ ಪ್ರಕಾರ ಆ ವರ್ಷ ದ್ರೌಪದಿಯು ಭೀಮಸೇನನ ಜೊತೆ ಇರುತ್ತಾಳೆ) ಅರ್ಜುನ ದ್ರೌಪದಿಯರ ಮಧ್ಯೆ ನಡೆದ ಯುದ್ಧದಲ್ಲಿ ದ್ರೌಪದಿ ಗೆಲ್ಲುತ್ತಾಳೆ!

ಆಗ ಅರ್ಜುನನ ಸೋಲಿನಿಂದ ನೊಂದ ಸುಭದ್ರೆಯು ದ್ರೌಪದಿಯ ಮೇಲೆ ಯುದ್ಧಕ್ಕೆ ಬಂದು ಸೋಲುತ್ತಾಳೆ. ತಂಗಿಯ ಸಹಾಯಕ್ಕೆ ಬಂದ ಶ್ರೀ ಕೃಷ್ಣನು ದ್ರೌಪದಿಯ ಜೊತೆ ಯುದ್ಧ ಮಾಡಲು ತೊಡಗುತ್ತಾನೆ. ಆ ಕಾಳಗದಲ್ಲಿಯೂ ದ್ರೌಪದಿಗೇ ಗೆಲುವಾಗುತ್ತದೆ!! ಕೃಷ್ಣನು ತನ್ನ ಆತ್ಮದಂತಿರುವ ಮಹಾಶಿವನನ್ನು ಪ್ರಾರ್ಥಿಸಲು ಪರಶಿವನೇ ಸಮರಕ್ಕೆ, ಯುದ್ಧಕ್ಕೆ ಬಂದು ಹೋರಾಡಿದರೂ ಆ ಕಾಳಗದಲ್ಲಿಯೂ ದ್ರೌಪದಿಯೇ ಗೆಲ್ಲುತ್ತಾಳೆ!! ಇದರ ಪರಿಣಾಮವಾಗಿ ಪಾರ್ವತಿಯು ಮಹಾಕಾಳಿಯ ರೂಪದಲ್ಲಿ ರಣಾಂಗಣಕ್ಕೆ ಬರುತ್ತಾಳೆ. ಮಹಾಕಾಳಿ ಮತ್ತು ದ್ರೌಪದಿಯರ ಯುದ್ಧವನ್ನು ಶ್ರೀಕೃಷ್ಣ ಮತ್ತು ನಾರದರು ಬಂದು ತಡೆಯುತ್ತಾರೆ.

ದ್ರೌಪದಿಯಲ್ಲಿದ್ದ ಮಹಾಶಕ್ತಿಯ ಅಂಶವನ್ನು ಮಹಾಕಾಳಿಯು ತನ್ನತ್ತ ಸೆಳೆದುಕೊಳ್ಳುವಂತೆ ಶ್ರೀಕೃಷ್ಣನು ಸೂಚಿಸಿದಾಗ ಪಾಂಡವ ಪಕ್ಷಕ್ಕೆ ಶಕ್ತಿ ತುಂಬಲು ಪಾಂಚಾಲಿಯಲ್ಲಿ ಸನ್ನಿವಿಷ್ಟವಾಗಿದ್ದ ಮಹಾಕಾಳಿಯ ಶಕ್ತಿ ಮರಳಿ ತನ್ನ ಮೂಲಸ್ಥಾನವಾದ ಪಾರ್ವತಿಯನ್ನು ಸೇರುವ ಮೂಲಕ ಕಥೆ ಸುಖಾಂತ್ಯವಾಗುತ್ತದೆ. ಈ ಪ್ರಸಂಗದ ಸೂತ್ರಧಾರನಾದ ಶ್ರೀಕೃಷ್ಣನು ಪಾಂಡವರು ಗೆಲ್ಲುವುದಕ್ಕೆ ಮುಖ್ಯ ಕಾರಣ ದ್ರೌಪದಿಯಲ್ಲಿದ್ದ ಮಹಾಶಕ್ತಿಯ ಅಂಶ ಎಂದು ಸಾರುವುದರೊಂದಿಗೆ ಪ್ರಸಂಗ ಮುಕ್ತಾಯವಾಗುತ್ತದೆ. ಸ್ತ್ರೀಪರವಾದ ಭಾಷಣ ಎಂದಾಕ್ಷಣ ಸೀತೆಯನ್ನು ಕಾಡಿಗಟ್ಟಿದ ಕಥೆಯನ್ನೋ, ಮನುಸ್ಮೃತಿಯ ಒಂದು ಸಾಲನ್ನೋ ಮತ್ತೆ ಮತ್ತೆ ಚರ್ವಿತಚರ್ವಣ ಎನ್ನುವಂತೆ ಭಾಷಣ ಮಾಡುವ ಎಲ್ಲರೂ ಒಮ್ಮೆ ಮಹಾಭಾರತದ ದ್ರೌಪದಿಯಂತಹ ದಿಟ್ಟ ಮಹಿಳೆಯ ಬಗೆಗೂ ಮುಕ್ತ ಮನಸ್ಸಿನಿಂದ ವಿಚಾರ ಮಾಡಿ ನೋಡಬೇಕು. ನಮ್ಮ ಜನಪದ ಲೋಕದಲ್ಲಿ ಬರುವ ಇಂತಹ ಕತೆಗಳನ್ನು ತಿಳಿದುಕೊಳ್ಳಬೇಕು.

ರಾಮಾಯಣದಲ್ಲಿ ದಶರಥನು ಯುದ್ಧಕ್ಕೆ ಹೋಗುವಾಗ ತನ್ನ ಕಿರಿಯ ಪತ್ನಿಯಾದ ಕೈಕೇಯಿಯನ್ನೂ ಕರೆದುಕೊಂಡು ಹೋಗುತ್ತಾನೆ. ಯುದ್ಧದಲ್ಲಿ ಸಹಾಯ ಮಾಡಿದಳೆಂದು ಆಕೆಗೆ ವರವನ್ನೂ ಕೊಡುವುದರಿಂದಲೇ ರಾಮಾಯಣದ ಕತೆಗೆ ಮುಖ್ಯವಾದ ತಿರುವು ಸಿಕ್ಕಿತಲ್ಲವೇ!!

ನರಕಾಸುರನ ಜತೆ ಯುದ್ಧ ಮಾಡುವಾಗ ಕೃಷ್ಣನೊಂದಿಗೆ ಪತ್ನಿ ಸತ್ಯಭಾಮೆಯೂ ರಣರಂಗಕ್ಕೆ ಬಂದಿರುತ್ತಾಳೆ. ಯುದ್ಧದ ಮಧ್ಯದಲ್ಲಿ ಕೃಷ್ಣನು ಬಳಲಿರುವಾಗ ಸತ್ಯಭಾಮೆಯು ಅಸುರನೊಡನೆ ಯುದ್ಧವನ್ನು ಮುಂದುವರೆಸಿ ಕೃಷ್ಣನಿಗೆ ಬೇಕಾಗಿದ್ದ ವಿಶ್ರಾಂತಿಯನ್ನು ಒದಗಿಸುತ್ತಾಳೆ.

ಭೂಮಿ ಆದಿಪರಾಶಕ್ತಿಯಿಂದ ಸೃಷ್ಟಿಸಲ್ಪಟ್ಟಿರುತ್ತದೆ. ಲೋಕದ ಸಮರ್ಥ ನಿರ್ವಹಣೆಗಾಗಿ ಆಕೆಯೇ ತ್ರಿಮೂರ್ತಿಗಳನ್ನು ಸೃಷ್ಟಿಸಿ ಕರ್ತವ್ಯಗಳನ್ನು ಹಂಚಿರುತ್ತಾಳೆ.

ಪ್ರತಿಬಾರಿ ರಾಕ್ಷಸರಿಂದ ವಿಪತ್ತು ಬಂದಾಗಲೆಲ್ಲಾ ಆದಿಪರಾಶಕ್ತಿಯು ಖಳ ರಕ್ಕಸರನ್ನು ಸಂಹರಿಸಿ ಲೋಕವನ್ನು ಕಾಪಾಡುತ್ತಾಳೆ. ಬ್ರಹ್ಮ, ವಿಷ್ಣು, ರುದ್ರ, ಇಂದ್ರಾದಿ ದೇವತೆಗಳೆಲ್ಲಾ ಸೋತು ಕೈಚೆಲ್ಲಿದಾಗ ಮಹಾದುರ್ಗೆಯು ದುಷ್ಟ ರಾಕ್ಷಸರನ್ನು ಸಂಹರಿಸಿ ಲೋಕವನ್ನು ಕಾಪಾಡುತ್ತಾಳೆ.

ಭಾರತದ ಪುರಾಣಗಳಲ್ಲಿ, ಸಂಸ್ಕೃತಿಯಲ್ಲಿ, ನಾಗರಿಕತೆಯಲ್ಲಿ ಮಹಿಳೆಯನ್ನು ಯಾವ ರೀತಿ ಪೂಜನೀಯ ಸ್ಥಾನದಲ್ಲಿ ಇಟ್ಟಿದ್ದಾರೆ ಎಂಬುದನ್ನು ಎಲ್ಲರೂ ತಿಳಿಯಬೇಕಾದ ಅವಶ್ಯಕತೆ ಇದೆ. ಯಾವೆಲ್ಲಾ ಶ್ರೇಷ್ಠ ಸಂಗತಿಗಳಿವೆಯೋ ಅವೆಲ್ಲವನ್ನೂ ಸ್ತ್ರೀರೂಪದಲ್ಲಿ ಕಂಡು ಗೌರವಿಸುವ ಗುಣ ಭಾರತೀಯರಲ್ಲಿದೆ.

ಐಶ್ವರ್ಯಕ್ಕೆ ಸಂಬಂಧಪಟ್ಟ ಹಣ, ಭೂಮಿ, ಸಂಪತ್ತು, ಧಾನ್ಯ, ವಾಹನ, ಗೋಸಂಪತ್ತು ಎಲ್ಲವನ್ನೂ ಲಕ್ಷ್ಮೀ ಎಂದು ಪೂಜಿಸುತ್ತಾರೆ. ಎಲ್ಲಾ ವಿದ್ಯೆ–ಕಲೆಗಳನ್ನೂ ಸರಸ್ವತಿಯ ರೂಪದಲ್ಲಿ ಕಂಡು ಆರಾಧಿಸುತ್ತಾರೆ.

ಶಕ್ತಿಯ ರೂಪದಲ್ಲಿರುವ ಎಲ್ಲವನ್ನೂ ಮಹಾಶಕ್ತಿ, ಮಹಾಕಾಳಿಯ ರೂಪದಲ್ಲಿ ಕಂಡು ನಮಿಸುತ್ತೇವೆ. ಕವಿ ಬಂಕಿಮಚಂದ್ರರು ಭಾರತಮಾತೆಯನ್ನು ವರ್ಣಿಸುವಾಗ ಹೇಳಿದ್ದಾರೆ,

ಹೇ ಬಲಾ ಮಾತಾಮಿ ಅಬಲಾ
ಬಹುಬಲಧಾರಿಣಿ, ರಿಪುದಲವಾರಿಣಿ

(ನಿನ್ನನ್ನು ಅಬಲೆಯೆಂದು ಕರೆದವರ್‍ಯಾರು?! ನೀನು ಅಬಲೆಯಲ್ಲ, ಮಹಾಬಲಶಾಲಿ, ಶತ್ರುಗಳನ್ನು ನಾಶಮಾಡುವ ಶಕ್ತಿಶಾಲಿನಿ) ಎಂದು ವರ್ಣಿಸಿದ್ದಾರೆ.

ರಾಮಾಯಣದಲ್ಲಿ ರಾಮನ ಅಶ್ವಮೇಧದ ಕುದುರೆಯನ್ನು ಮಾಯಾಪುರಿ ಎಂಬ ಸ್ತ್ರೀರಾಜ್ಯದ ಯೋಧೆಯರು ಕಟ್ಟಿ ರಾಮನ ಸೈನ್ಯದೊಡನೆ ಕಾದಾಡಿದ ಕತೆಯನ್ನು ನೋಡಿದರೆ ಮಹಾಭಾರತದಲ್ಲಿ ಪಾಂಡವರ ಅಶ್ವಮೇಧದ ಕುದುರೆಯನ್ನು ಕಟ್ಟಿ ಅರ್ಜುನನೊಡನೆ ಯುದ್ಧ ಮಾಡಿದ ಸ್ತ್ರೀರಾಜ್ಯದ ರಾಣಿ ಪ್ರಮೀಳೆಯ ಪ್ರಸಂಗವನ್ನು ನಾವು ಕಾಣುತ್ತೇವೆ.

ಪ್ರಸಿದ್ಧ ಮಧುರೆಯ ಮೀನಾಕ್ಷಿ ದೇಗುಲದ ಸ್ಥಳ ಪುರಾಣದ ಪ್ರಕಾರ ಪಾಂಡ್ಯರ ರಾಜಕುಮಾರಿ ಮೀನಾಕ್ಷಿಯು ಭೂಲೋಕದ ಎಲ್ಲಾ ರಾಜರುಗಳನ್ನು ಯುದ್ಧದಲ್ಲಿ ಗೆದ್ದು ಸ್ವರ್ಗಲೋಕಕ್ಕೆ ದಾಳಿ ಮಾಡುತ್ತಾಳೆ. ಇಂದ್ರನನ್ನೂ ಯುದ್ಧದಲ್ಲಿ ಸೋಲಿಸುತ್ತಾಳೆ. ಕೊನೆಗೆ ಪರಶಿವನನ್ನೇ ವರಿಸುತ್ತಾಳೆ.

ಶ್ರೀ ಶ್ರೀ ಶಂಕರಾಚಾರ್ಯರಿಗೂ ಮಂಡನ ಮಿಶ್ರರಿಗೂ ವೇದಾಂತದ ವಿಚಾರವಾಗಿ ವಾಗ್ವಾದ ನಡೆಯುವಾಗ ಇಬ್ಬರಲ್ಲಿ ಜಯಶಾಲಿ ಯಾರು ಆಗುವರೆಂದು ತೀರ್ಮಾನಿಸಲು ತೀರ್ಪುಗಾರರು ಒಬ್ಬರು ಬೇಕಾಗುತ್ತದೆ. ಆಗ ಯತಿವರೇಣ್ಯರು ಮಂಡನ ಮಿಶ್ರರ ಪತ್ನಿ ಉಭಯ ಭಾರತೀ ದೇವಿಯವರೇ ತೀರ್ಪುಗಾರರಾಗಲಿ ಎಂದು ಹೇಳುತ್ತಾರೆ!! ಹೀಗೆ ಅನೇಕ ಸಂದರ್ಭಗಳಲ್ಲಿ ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಮಹಿಳೆಯರಿಗೆ ಶ್ರೇಷ್ಠವಾದ ಸ್ಥಾನವನ್ನೇ ನೀಡಲಾಗಿದೆ.

ಕೆಲವು ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಧಾರ್ಮಿಕ ಆಚರಣೆಗಳ ಕುರಿತ ಸಂವಾದ ಕಾರ್ಯಕ್ರಮವೊಂದು ನಡೆಯಿತು. ರಜಸ್ವಲೆಯಾದ ಮಹಿಳೆ ಹೊರಗೆ ಕೂರಬೇಕೆ? ಬೇಡವೇ? ಎಂಬ ಬಗ್ಗೆ ಚರ್ಚೆ ನಡೆದಾಗ ಹೆಚ್ಚಿನ ಮಹಿಳೆಯರು ಅವಳಿಗೆ ಮುಟ್ಟಿನ ಮೂರು ದಿನಗಳ ಕಾಲ ಮೈಲಿಗೆಯ ನೆವದಲ್ಲಿ ವಿಶ್ರಾಂತಿ ನೀಡುವುದು ಸರಿಯಾದ ಕ್ರಮ ಎಂದು ಹೇಳಿದರು. ಆ ಸಮಯದಲ್ಲಿ ಗಂಡಂದಿರು ಅಡಿಗೆ ಮಾಡಲಿ, ಅಡಿಗೆ ಮನೆಯ ಅನುಭವ, ಸಂಕಷ್ಟಗಳ ಪರಿಚಯ ಅವರಿಗೂ ಆಗಲಿ, ನಮಗೂ ಏಕತಾನತೆಯ ಕೆಲಸ ಕಾರ್ಯಗಳಿಂದ ಬಿಡುವು ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು. ಇಲ್ಲಿ ಅನೇಕ ಆಚರಣೆಗಳ ಬಗ್ಗೆ ಸಂವಾದ ನಡೆಯುವಾಗ ಗಂಡ ಮಾಡಿದ ಧಾರ್ಮಿಕ ಆಚರಣೆಗಳಿಂದ ಬರುವ ಪುಣ್ಯದಲ್ಲಿ (ಹೆಂಡತಿಯು ಭಾಗವಹಿಸಲಿ ಅಥವಾ ಭಾಗವಹಿಸದಿರಲಿ) ಹೆಂಡತಿಗೆ ಅರ್ಧಪಾಲು ಸಿಗುತ್ತದೆ ಎಂದು ತುಂಬಾ ಖುಷಿಯಿಂದ ಹೇಳಿಕೊಂಡ ಗೃಹಿಣಿಯರನ್ನು ನಾವು ಕಂಡೆವು.

ಇದೆಲ್ಲವನ್ನೂ ವಿಮರ್ಶಿಸುವಾಗ ಭಾರತೀಯ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಪಾಶ್ಚಿಮಾತ್ಯ ದೃಷ್ಟಿಕೋನದಿಂದ ನೋಡಿ ಟೀಕೆ, ಟಿಪ್ಪಣಿ ಮಾಡುವುದು ಸರಿಯಲ್ಲ ಎಂದು ತಿಳಿಯುತ್ತದೆ. ಭಾರತೀಯ ನಾರಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ, ಅವಳ ಹೋರಾಟದ ಬಗ್ಗೆ ನಾವು ಭಾರತೀಯ ದೃಷ್ಟಿಕೋನದಿಂದಲೇ ನೋಡಿ ವಿಮರ್ಶಿಸಬೇಕಾದದ್ದು ಇಂದು ತುಂಬಾ ಅಗತ್ಯವಾಗಿದೆ.

ಪತ್ರ ಮಿತ್ರ

ಬಡ್ಡಿ ಮನ್ನಾ: ಆರ್ಥಿಕ ಶಿಸ್ತು ತಪ್ಪದಿರಲಿ

ಸರ್ಕಾರಗಳು ಜನಪರ ಕ್ರಮಗಳ ಮೂಲಕ ಜನಮನ ಗೆಲ್ಲುವುದು ಹೊಸದೇನಲ್ಲ. ಇತ್ತೀಚೆಗೆ ಸಂಚಾರ ದಂಡ ಮನ್ನಾ ಮೂಲಕ ಸಾರ್ವಜನಿಕರಿಗೆ ಕೆಲವು ಮಟ್ಟಿನ ನೆರವು ನೀಡಿದ ಸರ್ಕಾರ, ಇದೀಗ ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವವರಿಗೆ ಯುಗಾದಿ ಕಾಣಿಕೆಯಾಗಿ ಏಪ್ರಿಲ್‌ನಿಂದ ಮೂರು ತಿಂಗಳ ಅವಧಿಗೆ ಒಟಿಎಸ್ ಜಾರಿಗೊಳಿಸಿ ಬಡ್ಡಿ ಮನ್ನಾ ಘೋಷಿಸಿರುವುದು ಗಮನಾರ್ಹ ಬೆಳವಣಿಗೆ. ಹಬ್ಬದ ಸಂದರ್ಭದಲ್ಲಿ ಇಂತಹ ಸಡಿಲಿಕೆಗಳು ಸಾಮಾನ್ಯ ಜನರಿಗೆ ತಾತ್ಕಾಲಿಕ ಉಸಿರಾಟ ನೀಡುವುದರಲ್ಲಿ ಸಂಶಯವಿಲ್ಲ. ಆದರೆ, ಈ ರೀತಿಯ ನಿರ್ಧಾರಗಳ ದೀರ್ಘಾವಧಿಯ ಪರಿಣಾಮಗಳ ಬಗ್ಗೆ ಚಿಂತನೆ ಅಗತ್ಯವಾಗಿದೆ.

ಒಂದು ಕಡೆ ನೋಡಿದರೆ, ಬಾಕಿ ಬಿಲ್ ಪಾವತಿಸಲು ಅಸಮರ್ಥರಾಗಿದ್ದವರಿಗೆ ಬಡ್ಡಿ ಮನ್ನಾ ಒಂದು ಅವಕಾಶ. ವರ್ಷಗಳ ಕಾಲ ಬಾಕಿ ಉಳಿದಿರುವ ಮೊತ್ತವನ್ನು ಪಾವತಿಸಲು ಇದೊಂದು ಪ್ರೇರಣೆಯಾಗಿ ಪರಿಣಮಿಸಬಹುದು. ಇದರ ಫಲವಾಗಿ ಸರ್ಕಾರಕ್ಕೂ ಮೂಲ ಬಾಕಿ ಮೊತ್ತ ವಾಪಸು ಸಿಗುವ ಸಾಧ್ಯತೆ ಇದೆ. ಹೀಗಾಗಿ, ಇದು ಬಾಕಿ ವಸೂಲಾತಿಗೆ ಸಹಾಯಕವಾಗುವ ಕ್ರಮವೆಂದು ಪರಿಗಣಿಸಬಹುದು.

ಆದರೆ, ಇನ್ನೊಂದು ಮುಖವೂ ಇದೆ. ಪದೇ ಪದೇ ಬಡ್ಡಿ ಮನ್ನಾ ನೀಡುವ ಪದ್ಧತಿ ಬೆಳೆದರೆ, ಅದು ಪಾವತಿ ಶಿಸ್ತಿಗೆ ಧಕ್ಕೆಯಾಗುವ ಸಾಧ್ಯತೆ ಇದೆ. ಸಮಯಕ್ಕೆ ಸರಿಯಾಗಿ ಬಿಲ್ ಪಾವತಿಸುವ ನಾಗರಿಕರಲ್ಲಿ ಅಸಮಾಧಾನ ಮೂಡುವುದು ಸಹಜ. 'ಬಾಕಿ ಇಟ್ಟರೆ ಮನ್ನಾ ಸಿಗುತ್ತದೆ' ಎಂಬ ಮನೋಭಾವ ಬೆಳೆದುಬಂದರೆ, ಅದು ಆಡಳಿತದ ವಿಶ್ವಾಸಾರ್ಹತೆಗೆ ಹಾನಿ ಉಂಟುಮಾಡಬಹುದು. ಸರ್ಕಾರದ ಈ ನಿರ್ಧಾರದಿಂದಾಗಿ ಬಡ್ಡಿ ರೂಪದಲ್ಲಿ ಜಲಮಂಡಳಿಗೆ ಬರಬೇಕಾಗಿದ್ದ ಸುಮಾರು 311 ಕೋಟಿ ರೂ. ಮನ್ನಾ ಆಗಲಿದೆ. ಬಡ್ಡಿ ರೂಪದಲ್ಲಿ ಬರಬೇಕಾಗಿದ್ದ ಆದಾಯ ಕಡಿಮೆಯಾದರೆ, ನೀರು ಸರಬರಾಜು ಮಂಡಳಿಗಳಂತಹ ಸಂಸ್ಥೆಗಳ ಆರ್ಥಿಕ ಸ್ಥಿತಿ ದುರ್ಬಲಗೊಳ್ಳುವ ಸಾಧ್ಯತೆ ಇದೆ. ಇದು ಅಂತಿಮವಾಗಿ ಸಾರ್ವಜನಿಕ ಸೇವೆಗಳ ಗುಣಮಟ್ಟಕ್ಕೂ ಪರಿಣಾಮ ಬೀರುವ ಅಪಾಯವಿದೆ.

ಹೀಗಾಗಿ, ಇಂತಹ ಮನ್ನಾ ಕ್ರಮಗಳನ್ನು ತಾತ್ಕಾಲಿಕ ಮತ್ತು ಅಪರೂಪದ ಕ್ರಮಗಳಾಗಿ ಮಾತ್ರ ಪರಿಗಣಿಸುವುದು ಸೂಕ್ತ. ಬಡ್ಡಿ ಮನ್ನಾವನ್ನು ಎಲ್ಲರಿಗೂ ಸಾಮಾನ್ಯವಾಗಿ ಅನ್ವಯಿಸುವ ಬದಲು, ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮಾತ್ರ ಸೀಮಿತಗೊಳಿಸುವುದು ಉತ್ತಮ. ಜೊತೆಗೆ, ನಿಯಮಿತವಾಗಿ ಬಿಲ್ ಪಾವತಿಸುವವರಿಗೆ ಪ್ರೋತ್ಸಾಹಕ ರಿಯಾಯಿತಿಗಳನ್ನು ನೀಡುವ ಮೂಲಕ ಪಾವತಿ ಶಿಸ್ತನ್ನು ಉತ್ತೇಜಿಸುವುದು ಅಗತ್ಯ. ಒಟ್ಟಿನಲ್ಲಿ, ಬಡ್ಡಿ ಮನ್ನಾ ಜನಪರ ಕ್ರಮವಾಗಿದ್ದರೂ, ಆರ್ಥಿಕ ಶಿಸ್ತಿನ ಮೌಲ್ಯವನ್ನು ಕುಗ್ಗಿಸದಂತೆ ಸರ್ಕಾರ ಸಮತೋಲನ ಸಾಧಿಸಬೇಕು. ತಾತ್ಕಾಲಿಕ ಸಡಿಲಿಕೆ ಮತ್ತು ದೀರ್ಘಾವಧಿಯ ಆರ್ಥಿಕ ಸ್ಥಿರತೆ – ಈ ಎರಡರ ನಡುವಿನ ಸಮನ್ವಯವೇ ಉತ್ತಮ ಆಡಳಿತದ ಲಕ್ಷಣವಾಗುತ್ತದೆ.

–ಜಿ.ನಾಗೇಂದ್ರ ಕಾವೂರು, ಸಂಡೂರು

ಈಗ ಸರಿಯೆ?

ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಈಗಾಗಲೇ ಪ್ರಾರಂಭವಾಗಿದ್ದು ಮಾರ್ಚ್ 31ರಂದು ತೃತೀಯ ಭಾಷೆಯ ಪರೀಕ್ಷೆಗಳು ನಡೆಯಲಿರುವಾಗ ಸರಕಾರವು ಹಿಂದಿ ಭಾಷೆಯ ಪರೀಕ್ಷೆಗಳಿಗೆ ಅಂಕಗಳನ್ನು ನೀಡದೆ ಗ್ರೇಡ್ ನೀಡುವುದಾಗಿ ಪ್ರಕಟಿಸಿದೆ. ವಿದ್ಯಾರ್ಥಿಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಕಾರಣ ನೀಡಲಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಯಾವುದೇ ನಿರ್ಣಯ ತೆಗೆದುಕೊಳ್ಳುವುದಿದ್ದರೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ತೆಗೆದುಕೊಳ್ಳಬೇಕು. ಈಗ ಪ್ರಕಟಿಸಿದ ನಿರ್ಣಯವನ್ನು ಮುಂದಿನ ವರ್ಷಕ್ಕೆ ಅನ್ವಯಿಸಲಿ, ಈ ವರ್ಷಕ್ಕೆ ಬೇಡ. ಅನೇಕ ವಿದ್ಯಾರ್ಥಿಗಳು ತೃತೀಯ ಭಾಷೆ ವಿಷಯವನ್ನೂ ಕಷ್ಟಪಟ್ಟು ಓದಿರುತ್ತಾರೆ. ಅದರಲ್ಲಿಯೂ ನೂರಕ್ಕೆ ನೂರು ಪಡೆಯಬೇಕೆಂದು ಪ್ರಯತ್ನಿಸಿದವರಿಗೆ ಆಗಬಹುದಾದ ನಿರಾಶೆಯನ್ನು ಸರಕಾರ ಗಮನಿಸಿಲ್ಲ. ವರ್ಷದ ಪ್ರಾರಂಭದಿಂದಲೂ ಎಲ್ಲ ವಿಷಯಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆಯುವಂತೆ ಶಿಕ್ಷಣ ಕೊಡಲು ಪ್ರಯತ್ನ ಮಾಡುವುದನ್ನು ಬಿಟ್ಟು ಅನ್ಯ ಮಾರ್ಗಕ್ಕಿಳಿಯುವುದು ಸಮಂಜಸವಲ್ಲ. ಜಾಣ ನಾಗರಿಕರನ್ನು, ಅಭ್ಯಾಸದ ಒತ್ತಡ ಸಹಿಸುವಂಥವರನ್ನು ತಯಾರು ಮಾಡುವತ್ತ ಸರಕಾರ ಗಮನಹರಿಸಿದರೆ ನಮ್ಮ ರಾಜ್ಯದ, ದೇಶದ ಭವಿಷ್ಯ ಉಜ್ವಲವಾಗುವುದು.

–ರವೀಂದ್ರ ಸೋ. ಆಕಳವಾಡಿ, ಧಾರವಾಡ

ಅತಿರೇಕದ ಆದೇಶ

ದೆಹಲಿಯ ದೊರೆಯೊಬ್ಬ ತನ್ನ ಅತಿರೇಕ ವರ್ತನೆಯಿಂದ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ವರ್ಗಾಯಿಸಿ ನಗೆಪಾಟಲಿಗೀಡಾದ ಕಥೆಯನ್ನು ನಾವೆಲ್ಲಾ ಕೇಳಿದ್ದೇವೆ. ನಮ್ಮ ಶಿಕ್ಷಣ ಸಚಿವರೂ ತಮ್ಮ ಅತಿರೇಕ ವರ್ತನೆಯಿಂದ ನಾಗರಿಕರ ಮನವನ್ನು ಕ್ಷೋಭೆಗೀಡು ಮಾಡುತ್ತಿದ್ದಾರೆ.

'ನಮ್ಮ ಶಿಕ್ಷಣ ಸಚಿವರಿಗೆ ಕನ್ನಡದಲ್ಲಿ ಸರಿಯಾಗಿ ಮಾತನಾಡಲು ಬರುತ್ತಿಲ್ಲ' ಎಂದ ವಿದ್ಯಾರ್ಥಿಯೊಬ್ಬನ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಆದೇಶಿಸಿದ ವಿಚಾರ ನಮಗೆಲ್ಲಾ ನೆನಪಿದೆ. ಮೊನ್ನೆ ಮೊನ್ನೆ ಒಂದನೆಯ ತರಗತಿಗೆ ಪ್ರವೇಶ ಪಡೆಯಲು ಆರು ವರ್ಷಗಳ ವಯಸ್ಸನ್ನು ಕಡ್ಡಾಯ ಮಾಡಿದ್ದ ಶಿಕ್ಷಣ ಸಚಿವರು, ಬಳಿಕ ತಮ್ಮ ಬಣ್ಣ ಬದಲಾಯಿಸಿ 5 ವರ್ಷ 10 ತಿಂಗಳಿಗೇ ಮಕ್ಕಳನ್ನು ಒಂದನೆಯ ತರಗತಿಗೆ ಸೇರಿಸಬಹುದೆಂದು ಆದೇಶ ಮಾಡಿದ್ದಾರೆ. ಒಂದಷ್ಟು ದಿನ ಪೋಷಕರನ್ನು ಚಿಂತೆಗೀಡು ಮಾಡಿ ಏನು ಪುರುಷಾರ್ಥ ಸಾಧಿಸಿದರೋ?!

ಇದೀಗ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಯನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂದು ಪರಿಗಣಿಸಿ ತೀರ್ಪು ನೀಡಿದ್ದಾರೆ. ವಿನಾಕಾರಣ ಹಿಂದಿ ದ್ವೇಷವನ್ನು ಪ್ರದರ್ಶಿಸಿ ಕನ್ನಡದ ಉಟ್ಟು ಓರಾಟಗಾರರಿಗೆ, ಹಿಂದಿ ವಿರೋಧಿಗಳಿಗೆ ಮುದ ನೀಡಿದ್ದಾರೆ.

ಬಾಲ್ಯದಲ್ಲಿ ಭಾಷಾಧ್ಯಯನ ಶ್ರಮವೇ ಅಲ್ಲ. ಬಹಳಕಾಲ ಅಧ್ಯಾಪಕವೃತ್ತಿಯಲ್ಲಿದ್ದ ನಾನು ಮಕ್ಕಳು ಕನ್ನಡ– ಸಂಸ್ಕೃತ– ಇಂಗ್ಲಿಷ್– ಹಿಂದಿ ಭಾಷೆಗಳಲ್ಲಿ ಪ್ರಾವೀಣ್ಯ ಪಡೆದುದನ್ನು ನೋಡಿದ್ದೇನೆ.

ಸಚಿವರ ಆದೇಶದಿಂದ ಹೆಚ್ಚಿನ ಶಾಲೆಗಳಲ್ಲಿರುವ ಹಿಂದಿ ಅಧ್ಯಾಪಕರ ಶ್ರಮ, ವಿದ್ಯಾರ್ಥಿಗಳ ಉತ್ಸಾಹ ಕುಗ್ಗಿ ಹೋಗುವುದರಲ್ಲಿ ಸಂಶಯವಿಲ್ಲ.

–ಎಂ. ಸುಬ್ರಹ್ಮಣ್ಯ ಭಟ್, ಮುಡಿಪು

ಮಧ್ಯಪ್ರಾಚ್ಯ ಯುದ್ಧದಲ್ಲಿ ಇರಾನ್ ಪರ ನಿಂತ ಹೌತಿಗಳಿಂದ ಇಸ್ರೇಲ್ ಮೇಲೆ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ

ಸಮರಕ್ಕೆ ಹೌತಿ ಬಂಡುಕೋರರ ಸೇರ್ಪಡೆ

ದುಬೈ: ಇರಾನ್ ಬೆಂಬಲಿತ ಹೌತಿ ಬಂಡುಕೋರರು ಶನಿವಾರ ಮುಂಜಾನೆ ಇಸ್ರೇಲ್ ಗುರಿಯಾಗಿಸಿ ಕ್ಷಿಪಣಿ ಹಾರಿಸಿರುವುದಾಗಿ ಹೇಳಿಕೊಂಡಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಪ್ರಾರಂಭವಾದ ಯುದ್ಧದ ನಂತರ ಇದು ಅವರ ಮೊದಲ ದಾಳಿಯಾಗಿದ್ದು, ಇಸ್ರೇಲ್ ಸೇನೆ ಆ ಕ್ಷಿಪಣಿಗಳನ್ನು ಆಕಾಶದಲ್ಲೇ ಹೊಡೆದುರುಳಿಸಿರುವುದಾಗಿ ತಿಳಿಸಿದೆ.

ಒಂದು ತಿಂಗಳಿನಿಂದ ಮುಂದುವರಿಯುತ್ತಿರುವ ಯುದ್ಧವು ಅಮೆರಿಕ ಮತ್ತು ಇಸ್ರೇಲ್, ಇರಾನ್ ಮೇಲೆ ದಾಳಿ ನಡೆಸಿದ ನಂತರ ಆರಂಭಗೊಂಡಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಇಸ್ರೇಲ್ ಹಾಗೂ ಪಕ್ಕದ ಗಲ್ಫ್ ರಾಷ್ಟ್ರಗಳ ಮೇಲೆ ದಾಳಿಗಳನ್ನು ನಡೆಸಿದೆ. ಈ ಸಂಘರ್ಷವು ಜಾಗತಿಕ ವಿಮಾನ ಸಂಚಾರಕ್ಕೆ ಅಡ್ಡಿಪಡಿಸಿದ್ದು, ತೈಲ ರಫ್ತಿಗೆ ಹೊಡೆತ ನೀಡಿದೆ ಹಾಗೂ ಇಂಧನದ ಬೆಲೆಗಳನ್ನು ಏರಿಸಿದೆ.

ಹೌತಿ ದಾಳಿಯಿಂದ ಸಂಘರ್ಷ ಮತ್ತಷ್ಟು ಸಂಕೀರ್ಣ: ಹೌತಿ ಸೇನೆಯ ಬ್ರಿಗೇಡಿಯರ್ ಜನರಲ್ ಯಹ್ಯಾ ಸರೀ, ಇಸ್ರೇಲ್‌ನ ದಕ್ಷಿಣ ಭಾಗದಲ್ಲಿರುವ ಸೈನಿಕ ನೆಲೆಗಳನ್ನು ಗುರಿಯಾಗಿಸಿಕೊಂಡು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹಾರಿಸಲಾಗಿದೆ ಎಂದು ಹೇಳಿದ್ದಾರೆ. ಈ ವೇಳೆ ಇಸ್ರೇಲ್‌ನ ಬೀರ್ ಶೆಬಾ ನಗರ ಮತ್ತು ಪ್ರಮುಖ ಅಣು ಸಂಶೋಧನಾ ಕೇಂದ್ರದ ಸುತ್ತಮುತ್ತ ಸೈರನ್‌ಗಳು ಮೊಳಗಿವೆ.

ಟೆಲ್ ಅವೀವ್‌ನಲ್ಲಿ ಸ್ಫೋಟಗಳ ಸದ್ದು ಕೇಳಿಬಂದಿದ್ದು, ಅಗ್ನಿಶಾಮಕ ದಳವು 11 ಸ್ಥಳಗಳಲ್ಲಿ ರಕ್ಷಣಾಕಾರ್ಯ ನಡೆಸಿದೆ. ಹೌತಿ ದಾಳಿಗಳು ಮುಂದುವರಿದರೆ ಕೆಂಪು ಸಮುದ್ರ ಮಾರ್ಗದ ವಾಣಿಜ್ಯ ಸಾಗಣೆಗೂ ಅಪಾಯ ಎದುರಾಗುವ ಸಾಧ್ಯತೆ ಇದೆ.

ಇರಾನ್ ಅಣು ಸೌಕರ್ಯಗಳ ಮೇಲೆ ಇಸ್ರೇಲ್ ದಾಳಿ: ಇಸ್ರೇಲ್ ತನ್ನ ದಾಳಿಗಳನ್ನು ಟೆಹ್ರಾನ್‌ನ ಹೃದಯ ಭಾಗದಲ್ಲಿರುವ ಕ್ಷಿಪಣಿ ಉತ್ಪಾದನಾ ಕೇಂದ್ರಗಳ ಮೇಲೆ ಕೇಂದ್ರೀಕರಿಸಿದೆ. ಇರಾನ್‌ನ ಅಣುಶಕ್ತಿ ಸಂಸ್ಥೆ ಪ್ರಕಾರ, ಅರಾಕ್‌ನ ಶಹೀದ್ ಖೊಂಡಾಬ್ ಹೆವಿ ವಾಟರ್ ಸಂಕೀರ್ಣ ಮತ್ತು ಯಜ್ದ್ ಪ್ರಾಂತ್ಯದ ಯೆಲ್ಲೋಕೇಕ್ ಉತ್ಪಾದನಾ ಘಟಕ ಗುರಿಯಾಗಿವೆ. ಈ ದಾಳಿಯಿಂದ ಯಾವುದೇ ಹಾನಿಯಾಗಿಲ್ಲ ಎಂದು ಇರಾನ್ ಹೇಳಿದರೂ, ಇಸ್ರೇಲ್ ಇದನ್ನು ತನ್ನ ಅಣು ಕಾರ್ಯಕ್ರಮದ ಮೇಲೆ ದೊಡ್ಡ ಹೊಡೆತವೆಂದು ಹೇಳಿದೆ. ಇರಾನ್ ಇದಕ್ಕೆ ಪ್ರತಿದಾಳಿ ಮಾಡುವುದಾಗಿ ಎಚ್ಚರಿಸಿದೆ.

ಹಾರ್ಮುಜ್ ಮಹತ್ವ, ಜಾಗತಿಕ ಪರಿಣಾಮ: ಹಾರ್ಮುಜ್ ಜಲಸಂಧಿ ಜಗತ್ತಿನ ತೈಲ ಸಾಗಣೆಯನ್ನು ನಿರ್ವಹಿಸುವ ಪ್ರಮುಖ ಮಾರ್ಗವಾಗಿದೆ. ಯುದ್ಧದಿಂದ ಈ ಮಾರ್ಗದ ನಿಯಂತ್ರಣ ಗಂಭೀರ ಪರಿಣಾಮಗಳನ್ನು ಉಂಟುಮಾಡಿದೆ. ತೈಲ ಮಾತ್ರವಲ್ಲದೆ, ರಸಗೊಬ್ಬರ ವ್ಯಾಪಾರಕ್ಕೂ ಇದು ಪ್ರಮುಖವಾಗಿದೆ. ಇದರ ಪರಿಣಾಮವಾಗಿ ಕೃಷಿ ಮತ್ತು ಆಹಾರ ಭದ್ರತೆಯ ಮೇಲೆ ಜಾಗತಿಕ ಮಟ್ಟದಲ್ಲಿ ಒತ್ತಡ ಹೆಚ್ಚಾಗಿದೆ.

ರಾಜತಾಂತ್ರಿಕ ಪ್ರಯತ್ನ, ಸೈನಿಕ ಚಟುವಟಿಕೆ: ಅಮೆರಿಕ ಅಧ್ಯಕ್ಷರು ಯುದ್ಧ ಅಂತ್ಯಕ್ಕೆ ಮಾತುಕತೆ ಉತ್ತಮವಾಗಿ ಸಾಗುತ್ತಿವೆ ಎಂದು ಹೇಳಿದರೂ, ಇರಾನ್ ಇದನ್ನು ತಳ್ಳಿಹಾಕಿದೆ. ಅಮೆರಿಕ ನೀಡಿದ 15 ಅಂಶಗಳ ಪ್ರಸ್ತಾವವನ್ನು ಇರಾನ್ ತಿರಸ್ಕರಿಸಿ, ತನ್ನದೇ ಐದು ಅಂಶಗಳ ಯೋಜನೆಯನ್ನು ಮುಂದಿಟ್ಟಿದೆ. ಇದರಲ್ಲಿ ಪರಿಹಾರ ಹಣ ಮತ್ತು ಜಲಸಂಧಿಯ ಮೇಲಿನ ಸ್ವಾಯತ್ತತೆಯ ಮಾನ್ಯತೆ ಸೇರಿವೆ. ಈ ನಡುವೆ ಅಮೆರಿಕ ಸುಮಾರು 2,500 ಮೆರೈನ್ಸ್ ಮತ್ತು 1,000 ಪ್ಯಾರಾಟ್ರೂಪರ್‌ಗಳನ್ನು ಮಧ್ಯಪ್ರಾಚ್ಯಕ್ಕೆ ಕಳುಹಿಸಿದೆ.

ಸಾವಿನ ಸಂಖ್ಯೆ ಹೆಚ್ಚಳ: ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 19 ಮಂದಿ ಸಾವಿಗೀಡಾಗಿದ್ದಾರೆ. ಲೆಬನಾನ್‌ನಲ್ಲಿ 1,100ಕ್ಕೂ ಹೆಚ್ಚು ಜನರು ಮೃತರಾಗಿದ್ದಾರೆ. ಅಮೆರಿಕದ 13 ಸೈನಿಕರು ಮೃತಪಟ್ಟಿದ್ದು, ಇರಾಕ್‌ನಲ್ಲಿ 80 ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ. ಗಲ್ಫ್ ರಾಷ್ಟ್ರಗಳಲ್ಲಿ 20 ಜನರು ಮೃತಪಟ್ಟಿದ್ದಾರೆ. ಇದರ ಜತೆಗೆ ಇರಾನ್‌ನಲ್ಲಿ 82,000 ಕಟ್ಟಡಗಳು ಹಾನಿಗೊಳಗಾಗಿದ್ದು, ಲಕ್ಷಾಂತರ ಜನರು ವಾಸಸ್ಥಳ ಕಳೆದುಕೊಂಡಿದ್ದಾರೆ.

ಮಾನವೀಯ ನೆರವು: ಸಂಯುಕ್ತ ರಾಷ್ಟ್ರಗಳ ವಿನಂತಿಯ ಮೇರೆಗೆ ಇರಾನ್ ಹಾರ್ಮುಜ್ ಜಲಸಂಧಿ ಮೂಲಕ ಮಾನವೀಯ ಸಹಾಯ ಮತ್ತು ಕೃಷಿ ಸರಕುಗಳ ಸಾಗಣೆಗೆ ಅನುಮತಿ ನೀಡಲು ಒಪ್ಪಿದೆ. ಇದು ಯುದ್ಧದ ನಡುವೆ ಒಂದು ಸಣ್ಣ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗಿದೆ. ಆದರೆ, ಒಟ್ಟಾರೆ ಪರಿಸ್ಥಿತಿ ಇನ್ನೂ ಗಂಭೀರವಾಗಿದ್ದು, ಯುದ್ಧ ಇನ್ನಷ್ಟು ವಿಸ್ತಾರಗೊಳ್ಳುವ ಭೀತಿ ಇದೆ.





ಸುಮಾರು 47,000 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತ ಹಡಗು ಜಗ್ ವಸಂತ್ ಪಶ್ಚಿಮ ಏಷ್ಯಾದ ಉದ್ವಿಗ್ನತೆಯ ನಡುವೆ ಹಾರ್ಮುಜ್ ಜಲಸಂಧಿ ದಾಟಿ ಗುಜರಾತಿನ ವದಿನಾರ್ ಬಂದರಿಗೆ ತಲುಪಿದೆ.

ಯುಎಇಯಲ್ಲಿ ಐವರು ಭಾರತೀಯರಿಗೆ ಗಾಯ

ದುಬೈ: ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಅಲ್ಲಿನ ಸೇನೆ ಬ್ಯಾಲಿಸ್ಟಿಕ್ ಕ್ಷಿಪಣಿಯೊಂದನ್ನು ಹೊಡೆದುರುಳಿಸಿದಾಗ ಅದರ ಅವಶೇಷಗಳು ಬಿದ್ದು ಐವರು ಭಾರತೀಯರು ಗಾಯಗೊಂಡಿದ್ದಾರೆ ಎಂದು ಶುಕ್ರವಾರ ಅಧಿಕೃತ ವರದಿಗಳು ತಿಳಿಸಿವೆ. ಕ್ಷಿಪಣಿಯನ್ನು ತಡೆದಾಗ ಅದರ ಚೂರುಗಳು ವಸತಿ ಪ್ರದೇಶದ ಮೇಲೆ ಬಿದ್ದಿದ್ದರಿಂದ ಈ ಘಟನೆ ಸಂಭವಿಸಿದೆ ಎಂದು ತಿಳಿದುಬಂದಿದೆ. ಸ್ಥಳೀಯ ತುರ್ತು ಸೇವಾ ಸಿಬ್ಬಂದಿ ಸಂತ್ರಸ್ತರನ್ನು ಹತ್ತಿರದ ಆಸ್ಪತ್ರೆಗಳಿಗೆ ದಾಖಲಿಸಿದ್ದು, ಸಣ್ಣಪುಟ್ಟ ಗಾಯಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಐವರೂ ಪ್ರಸ್ತುತ ಅಪಾಯದಿಂದ ಪಾರಾಗಿದ್ದಾರೆ ಎಂದು ವರದಿಗಳು ತಿಳಿಸಿವೆ. ಕ್ಷಿಪಣಿ ನಿಗದಿತ ಗುರಿಯನ್ನು ತಲುಪುವ ಮೊದಲೇ ಅದನ್ನು ವಾಯು ರಕ್ಷಣಾ ವ್ಯವಸ್ಥೆಯ ಮೂಲಕ ಯಶಸ್ವಿಯಾಗಿ ನಾಶಪಡಿಸಿರುವುದಾಗಿ ಯುಎಇ ರಕ್ಷಣಾ ಸಚಿವಾಲಯ ಖಚಿತಪಡಿಸಿದೆ. ಈ ಕ್ಷಿಪಣಿಯ ಮೂಲದ ಬಗ್ಗೆ ಅಧಿಕಾರಿಗಳು ಪೂರ್ಣ ಪ್ರಮಾಣದ ತನಿಖೆ ಪ್ರಾರಂಭಿಸಿದ್ದಾರೆ.

20 ಅಮೆರಿಕ ಸೈನಿಕರಿಗೆ ಗಾಯ, ಹಲವಾರು ವಿಮಾನಗಳಿಗೆ ಹಾನಿ

ಸೌದಿ ಅರೇಬಿಯಾದ ಪ್ರಿನ್ಸ್ ಸುಲ್ತಾನ್ ಏರ್ ಬೇಸ್ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಅಮೆರಿಕದ 20ಕ್ಕೂ ಹೆಚ್ಚು ಸೈನಿಕರು ಗಾಯಗೊಂಡಿದ್ದಾರೆ, ಹಲವಾರು ವಿಮಾನಗಳು ಹಾನಿಗೊಳಗಾಗಿವೆ ಎಂದು ಮೂಲಗಳು ತಿಳಿಸಿವೆ. ಶುಕ್ರವಾರ ಮಾತ್ರವೇ ಆರು ಕ್ಷಿಪಣಿಗಳು ಮತ್ತು 29 ಡ್ರೋನ್‌ಗಳ ಮೂಲಕ ದಾಳಿ ನಡೆದಿದ್ದು, ಕನಿಷ್ಠ 15 ಸೈನಿಕರು ಗಾಯಗೊಂಡಿದ್ದಾರೆ. ಈ ತಾಣವು ಸೌದಿ ವಾಯುಪಡೆಯ ನಿಯಂತ್ರಣದಲ್ಲಿದ್ದರೂ, ಅಮೆರಿಕದ ಪಡೆಗಳು ಕೂಡ ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ದಾಳಿಯಲ್ಲಿ ಇಬ್ಬರು ಸೈನಿಕರು ತೀವ್ರವಾಗಿ ಗಾಯಗೊಂಡಿದ್ದು, ಅಮೆರಿಕದ ಇಂಧನ ಮರುಪೂರಣ ವಿಮಾನಗಳನ್ನು ಗುರಿಯಾಗಿಸಲಾಗಿದೆ. ಘಟನೆಯ ನಂತರ ವಿಮಾನಗಳಿಗೆ ಆಗಿರುವ ಹಾನಿಯನ್ನು ತೋರಿಸುವ ಉಪಗ್ರಹ ಚಿತ್ರಗಳು ಅಂತರ್ಜಾಲದಲ್ಲಿ ಪ್ರಕಟವಾಗಿವೆ. ಹೆಸರು ಹೇಳಲು ಬಯಸದ ಇಬ್ಬರು ಅಧಿಕಾರಿಗಳು, ಸಾವುನೋವು ಮತ್ತು ಹಾನಿಯನ್ನು ಖಚಿತಪಡಿಸಿದ್ದಾರೆ. ತಿಂಗಳ ಕಾಲ ನಡೆದ ಈ ಸಂಘರ್ಷದಲ್ಲಿ 300ಕ್ಕೂ ಹೆಚ್ಚು ಸೈನಿಕರು ಗಾಯಗೊಂಡಿದ್ದಾರೆ ಎಂದು ಯುಎಸ್ ಸೆಂಟ್ರಲ್ ಕಮಾಂಡ್ ವರದಿ ಮಾಡಿದೆ. ಹೆಚ್ಚಿನವರು ಕರ್ತವ್ಯಕ್ಕೆ ಮರಳಿದ್ದರೂ, 30 ಮಂದಿ ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ ಮತ್ತು 10 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ. ಈ ಹಿಂದೆ ಮಾ.1ರಂದು ಇದೇ ವಾಯುನೆಲೆಯ ಮೇಲೆ ಇರಾನ್ ದಾಳಿ ನಡೆಸಿತ್ತು. ಅದರಲ್ಲಿ ಆರ್ಮಿ ಸಾರ್ಜೆಂಟ್ ಬೆಂಜಮಿನ್ ಎನ್. ಪೆನ್ನಿಂಗ್ಟನ್ ಸಾವನ್ನಪ್ಪಿದ್ದರು. ಇರಾನ್ ಸೇನೆಯನ್ನು ಸಂಪೂರ್ಣವಾಗಿ ನಾಶಪಡಿಸಲಾಗಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹೇಳಿಕೆ ನೀಡಿದ ಮರುದಿನವೇ ಈ ದಾಳಿ ನಡೆದಿದೆ. ಈ ಯುದ್ಧದಲ್ಲಿ ಒಟ್ಟು 13 ಸೈನಿಕರು ಮೃತಪಟ್ಟಿದ್ದಾರೆ.

ಅಮೆರಿಕದ ಟೊಮಾಹಾಕ್ ಕ್ಷಿಪಣಿಗಳ ದಾಸ್ತಾನು ಇಳಿಕೆ

ವಾಷಿಂಗ್ಟನ್: ಇರಾನ್ ವಿರುದ್ಧದ ಯುದ್ಧದ ಮೊದಲ ನಾಲ್ಕು ವಾರಗಳಲ್ಲಿ ಅಮೆರಿಕದ ಮಿಲಿಟರಿ 850ಕ್ಕೂ ಹೆಚ್ಚು ಟೊಮಾಹಾಕ್ ಕ್ರೂಸ್ ಕ್ಷಿಪಣಿಗಳನ್ನು ಪ್ರಯೋಗಿಸಿದ್ದು, ಇದರಿಂದ ಶಸ್ತ್ರಾಸ್ತ್ರ ದಾಸ್ತಾನು ಕ್ಷೀಣಿಸುವ ಕಳವಳ ಉಂಟಾಗಿದೆ. ಕ್ಷಿಪಣಿಗಳ ಹೆಚ್ಚಿನ ಬಳಕೆಯ ನಂತರ ಮಧ್ಯಪ್ರಾಚ್ಯದಲ್ಲಿ ಪ್ರಸ್ತುತ ಕ್ಷಿಪಣಿಗಳ ಮಟ್ಟ ಆತಂಕಕಾರಿ ಅನ್ನುವಷ್ಟು ಕಡಿಮೆಯಿದೆ ಎಂದು ಪೆಂಟಗನ್ ಅಧಿಕಾರಿಗಳು ವಿವರಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲಿ ಪಡೆಗಳನ್ನು ಒಳಗೊಂಡ ಜಂಟಿ ಮಿಲಿಟರಿ ಕಾರ್ಯಾಚರಣೆಯಾದ ಆಪರೇಷನ್ ಎಪಿಕ್ ಫ್ಯೂರಿ ಸಮಯದಲ್ಲಿ ಈ ನಿಖರ-ನಿರ್ದೇಶಿತ ಶಸ್ತ್ರಾಸ್ತ್ರಗಳನ್ನು ಹೆಚ್ಚು ಬಳಸಲಾಗಿತ್ತು. ಟೊಮಾಹಾಕ್‌ಗಳ ಭಾರಿ ಬಳಕೆ, ಇತರ ಪ್ರದೇಶಗಳಿಂದ ಶಸ್ತ್ರಾಸ್ತ್ರಗಳನ್ನು ತರಿಸುವ ಮತ್ತು ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ಆಂತರಿಕ ಚರ್ಚೆಗಳಿಗೆ ಕಾರಣವಾಗಿದೆ. ಪ್ರಸ್ತುತ ಉತ್ಪಾದನಾ ಸಾಮರ್ಥ್ಯ, ವರ್ಷಕ್ಕೆ ಸುಮಾರು 600 ಕ್ಷಿಪಣಿಗಳನ್ನು ತಯಾರಿಸಲು ಅವಕಾಶ ನೀಡುತ್ತದೆ. ಆದರೆ ಕಳೆದ ರಕ್ಷಣಾ ಬಜೆಟ್‌ನಲ್ಲಿ ಕೇವಲ 57 ಘಟಕಗಳಿಗೆ ಮಾತ್ರ ಅನುಮೋದನೆ ನೀಡಲಾಗಿತ್ತು. ಪ್ರತಿ ಕ್ಷಿಪಣಿಯ ವೆಚ್ಚ ಸುಮಾರು 3.6 ಮಿಲಿಯನ್ ಯುಎಸ್ ಡಾಲರ್ ಆಗಿದ್ದು, ಇದನ್ನು ನಿರ್ಮಿಸಲು ಎರಡು ವರ್ಷಗಳವರೆಗೆ ಸಮಯ ಬೇಕಾಗುತ್ತದೆ.ತನ್ನ ಕಾರ್ಯತಂತ್ರದ ಗುರಿಗಳನ್ನು ಸಾಧಿಸಲು ಮಿಲಿಟರಿ ಬಳಿ ಸಾಕಷ್ಟು ಯುದ್ಧಸಾಮಗ್ರಿಗಳಿವೆ, ಎಂದು ಪೆಂಟಗನ್ ವಕ್ತಾರರು ತಿಳಿಸಿದ್ದಾರೆ. ಆದರೂ, ಈ ಬಾರಿ ಅಮೆರಿಕ ದಾಸ್ತಾನಿನ ಸುಮಾರು ನಾಲ್ಕನೇ ಒಂದು ಭಾಗದಷ್ಟು ಕ್ಷಿಪಣಿಗಳನ್ನು ಬಳಸಿದೆ ಎಂದು ವಿಶ್ಲೇಷಕರು ಅಂದಾಜಿಸಿದ್ದಾರೆ.

ಕ್ಷಿಪಣಿಗಳ ಮೇಲೆ ಭಾರತದ ಜನತೆಗೆ ಧನ್ಯವಾದ ಎಂದು ಉಲ್ಲೇಖ

ಇಸ್ರೇಲ್ ಮೇಲೆ ಇರಾನ್ ಮತ್ತೆ ದಾಳಿ

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧ ಪರಿಸ್ಥಿತಿ ಜಗತ್ತಿನ ಗಮನ ಸೆಳೆದಿದೆ. ಇಸ್ರೇಲ್ ಮೇಲೆ ಇರಾನ್ ಮತ್ತೆ ದಾಳಿ ಆರಂಭಿಸಿದ್ದು, ಇಸ್ರೇಲಿ ಸೈನಿಕ ನೆಲೆಗಳನ್ನು ಗುರಿಯಾಗಿಸಿಕೊಂಡಿದೆ. ಇರಾನ್ ಹಲವು ಹಂತಗಳಲ್ಲಿ ಕ್ಷಿಪಣಿಗಳು ಮತ್ತು ಡ್ರೋನ್‌ಗಳ ಮೂಲಕ ದಾಳಿಗಳನ್ನು ಮುಂದುವರಿಸುತ್ತಿದೆ.ಇತ್ತೀಚಿನ ದಾಳಿಗಳಲ್ಲಿ ಅಶ್ದೋಡ್ ಪ್ರದೇಶದ ತೈಲ ಸಂಗ್ರಹಣಾ ಟ್ಯಾಂಕ್‌ಗಳು ಮತ್ತು ಡಿಪೋಗಳು, ಮೋದಿಯಿನ್ ಪ್ರದೇಶದ ಸೈನಿಕ ನೆಲೆಗಳು ಸೇರಿದಂತೆ ಪ್ರಮುಖ ತಂತ್ರಜ್ಞಾನ ಕೇಂದ್ರಗಳನ್ನು ಗುರಿಯಾಗಿಸಲಾಗಿದೆ. ಜತೆಗೆ, ಅಲ್-ಧಫ್ರಾ, ಅಲ್-ಉದ್ದೈರ್ ಮತ್ತು ಅಲಿ ಅಲ್-ಸೇಲಂ ವಾಯುನೆಲೆಗಳಲ್ಲಿರುವ ಅಮೆರಿಕನ್ ಸೈನಿಕ ಮೂಲಸೌಕರ್ಯಗಳ ಮೇಲೆಯೂ ದಾಳಿ ನಡೆದಿದೆ. ಈ ಪ್ರದೇಶಗಳಲ್ಲಿ ಸಾರಿಗೆ ವಿಮಾನಗಳು ಹಾಗೂ ಡ್ರೋನ್‌ಗಳ ನಿರ್ವಹಣೆಗಾಗಿ ಬಳಸುವ ಹ್ಯಾಂಗರ್‌ಗಳಿಗೂ ಹಾನಿಯಾಗಿದೆ ಎಂದು ವರದಿಯಾಗಿದೆ.

ಗಮನ ಸೆಳೆದ ವಿಚಿತ್ರ ಸಂಗತಿ: ಈ ದಾಳಿಗಳ ನಡುವೆ ಒಂದು ವಿಚಿತ್ರ ಸಂಗತಿ ಗಮನ ಸೆಳೆದಿದೆ. ಇರಾನ್ ತನ್ನ ಕ್ಷಿಪಣಿಗಳ ಮೇಲೆ "ಭಾರತದ ಜನತೆಗೆ ಧನ್ಯವಾದ" ಮತ್ತು "ಜರ್ಮನ್ ಜನತೆಗೆ ಧನ್ಯವಾದ" ಎಂಬ ಸಂದೇಶಗಳನ್ನು ಬರೆದಿದೆ. ಭಾರತಕ್ಕೆ ಧನ್ಯವಾದ ಹೇಳಿರುವುದು ಇದೇ ಮೊದಲ ಬಾರಿಯಲ್ಲ ಎಂದು ಹೇಳಲಾಗುತ್ತಿದೆ. ಇದಕ್ಕೂ ಮೊದಲು, ಭಾರತದಲ್ಲಿನ ಇರಾನ್ ರಾಯಭಾರಿ ಕಚೇರಿ ಕಾಶ್ಮೀರ ಜನರ ಬೆಂಬಲವನ್ನು ಉಲ್ಲೇಖಿಸಿ ಕೃತಜ್ಞತೆ ವ್ಯಕ್ತಪಡಿಸಿತ್ತು.

ಕಾಶ್ಮೀರ ಪ್ರದೇಶದಲ್ಲಿ ಇರಾನ್‌ಗೆ ಬೆಂಬಲವಾಗಿ ಜನರು ದೇಣಿಗೆ ಸಂಗ್ರಹಿಸಿರುವುದಾಗಿ ವರದಿಯಾಗಿದೆ. ಈ ದೇಣಿಗೆಗಳಲ್ಲಿ ಹಣ ಮಾತ್ರವಲ್ಲದೆ, ಚಿನ್ನ, ಬೆಳ್ಳಿ ಮತ್ತು ಇತರ ಬೆಲೆಬಾಳುವ ವಸ್ತುಗಳೂ ಸೇರಿವೆ. ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಸಹ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕೊಡುಗೆ ನೀಡಿದ್ದಾರೆ. ಕೆಲ ಮಕ್ಕಳು ತಮ್ಮ ಉಳಿತಾಯ ಹಣವನ್ನು ನೀಡಿದರೆ, ಕೆಲವು ಯುವತಿಯರು ತಮ್ಮ ಆಭರಣಗಳನ್ನು ದಾನ ಮಾಡಿದ್ದಾರೆ. ಈ ಬೆಂಬಲದ ಹಿನ್ನೆಲೆ ಇರಾನ್ ಭಾರತೀಯರಿಗೆ ಧನ್ಯವಾದ ಹೇಳುತ್ತಿರುವುದಾಗಿ ವಿಶ್ಲೇಷಿಸಲಾಗುತ್ತಿದೆ.

ಕಿರುಸುದ್ದಿ

ಛತ್ತೀಸ್‌ಗಢ: ಮೂವರು ಮಾವೋಗಳ ಶರಣಾಗತಿ

ಕಂಕೇರ್: ಓರ್ವ ಮಹಿಳಾ ನಕ್ಸಲ್ ಸಹಿತ ಮೂವರು ನಕ್ಸಲರು ಶನಿವಾರ ಛತ್ತೀಸ್‌ಗಢದ ಕಂಕೇರ್ ಜಿಲ್ಲೆಯಲ್ಲಿ ಶರಣಾಗತರಾಗಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ರಾಧಿಕಾ ಕುಂಜಮ್, ಸಂದೀಪ್ ಕಡಿಯಮ್ ಮತ್ತು ರೈನು ಪಡ್ಡಾ ಶರಣಾದ ನಕ್ಸಲರು. ಕುಂಜಮ್ ಮತ್ತು ಕಡಿಯಮ್ ನಿಷೇಧಿತ ನಕ್ಸಲ್ ಸಂಘಟನೆಯ ಪ್ರದೇಶ ಸಮಿತಿ ಸದಸ್ಯರಾಗಿದ್ದು, ಎರಡು ಸೆಲ್ಫ್ ಲೋಡಿಂಗ್ ರೈಫಲ್‌ಗಳು ಮತ್ತು. 303 ರೈಫಲ್‌ಗಳನ್ನು ಪೊಲೀಸರಿಗೆ ಒಪ್ಪಿಸಿರುವುದಾಗಿ ಪೊಲೀಸ್ ಅಧೀಕ್ಷಕ ನಿಖಿಲ್ ರಖೇಛ ತಿಳಿಸಿದ್ದಾರೆ. ಶರಣಾಗತ ನಕ್ಸಲರು ನೀಡಿದ ಮಾಹಿತಿ ಮೇರೆಗೆ, ವಲಯದಲ್ಲಿ ಸಕ್ರಿಯರಿರುವ ಇತರ ನಕ್ಸಲರನ್ನು ಸಂಪರ್ಕಿಸಿ, ಹಿಂಸೆ ತೊರೆದು ಸಮಾಜದ ಹೆದ್ದರಿಗೆ ಸೇರುವಂತೆ ಮನವೊಲಿಸುವ ನಿಟ್ಟಿನಲ್ಲಿ, ಅವರ ಪತ್ತೆಗಾಗಿ ಶೋಧ ನಡೆದಿದೆ. ಮಾ. 25,26ರಂದು ಆರು ಮಂದಿ ನಕ್ಸಲೀಯರು ಛತ್ತೀಸ್‌ಗಢ ಜಿಲ್ಲೆಯಲ್ಲಿ ಪೊಲೀಸರಿಗೆ ಶರಣಾಗಿದ್ದರು. ವಲಯದಲ್ಲಿರುವ ಮಿಕ್ಕ ಮಾವೋವಾದಿಗಳು ಕೂಡ ಹಿಂಸೆ ತೊರೆದು ಶರಣಾಗುವಂತೆ ಬಸ್ತಾರ್ ವಲಯದ ಐಜಿಪಿ ಸುಂದರ್‌ರಾಜ್ ಪಟ್ಟಿಲಿಂಗಂ ನಕ್ಸಲರಿಗೆ ಮರು ಮನವಿ ಮಾಡಿದ್ದಾರೆ.

ರಾಮನವಮಿ ಮೆರವಣಿಗೆ ಮೇಲೆ ಕಿಡಿಗೇಡಿಗಳ ಕಲ್ಲು

ಕೋಲ್ಕತ್ತಾ: ಶ್ರೀ ರಾಮನವಮಿ ಮೆರವಣಿಗೆಗೆ ದುಷ್ಕರ್ಮಿಗಳ ಕಲ್ಲು ತೂರಾಟದಿಂದ ಹಿಂಸೆ ಭುಗಿಲೆದ್ದು, ಎರಡು ಗುಂಪುಗಳು ಘರ್ಷಣೆಗಿಳಿದ ಹಿನ್ನೆಲೆಯಲ್ಲಿ ಮುರ್ಶಿದಾಬಾದ್ ಜಿಲೆಯ ರಘುನಾಥಗಂಜ್ ಮತ್ತು ಜಂಗಿಪುರ ಪ್ರದೇಶಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಹಿಂಸಾಚಾರಗಳಿಗೆ ಸಂಬಂಧಿಸಿ ಇದುವರೆಗೆ 30 ಮಂದಿಯನ್ನು ಬಂಧಿಸಲಾಗಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಹಿರಿಯ ಪೊಲೀಸ್‌ಅಧಿಕಾರಿ ತಿಳಿಸಿದ್ದಾರೆ . ಬಂಧಿತರ ವಿವರಗಳನ್ನು ಪೊಲೀಸರು ಬಹಿರಂಗಪಡಿಸಿಲ್ಲ. ಜಂಗಿಪುರ ಆಸ್ಪತ್ರೆ ಮತ್ತು ಸಮೀಪದ ಪ್ರದೇಶಗಳಲ್ಲಿ ಪ.ಬಂಗಾಳ ಪೊಲೀಸ್ ಸಿಬ್ಬಂದಿ, ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳು ಗಸ್ತು ತಿರುಗುತ್ತಿದ್ದು, ಜನರಲ್ಲಿ ಧೈರ್ಯ ಮೂಡಿಸಲು ಆರ್‌ಎಎಫ್ ರೂಟ್ ಮಾರ್ಚ್ ನಡೆಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಪ್ರದೇಶದಲ್ಲಿನ ಹಲವು ಅಂಗಡಿಗಳು, ಮಾರುಕಟ್ಟೆಗಳು ಮುಚ್ಚಿವೆ. ರಸ್ತೆಗಳಲ್ಲಿ ಬೆರಳೆಣಿಕೆಯ ಜನರು ಓಡಾಡುತ್ತಿದ್ದಾರೆ. ವಾಹನ ಸಂಚಾರ ಮಾತ್ರ ಎಂದಿನಂತಿದೆ. ಪ್ರದೇಶದಲ್ಲಿ ಸಬ್ ಡಿವಿಜನಲ್ ಆಸ್ಪತ್ರೆಯಿದ್ದು, ಜನರಿಗೆ ಯಾವುದೇ ತೆರ ಅನಾನುಕೂಲವಾಗದಂತೆ ನೋಡಿಕೊಳ್ಳುತ್ತಿದ್ದೇವೆ. ನಮ್ಮ ಅಧಿಕಾರಿಗಳು, ಅರೆಸೇನಾ ಪಡೆ ಸಿಬ್ಬಂದಿ ಗರಿಷ್ಠ ಸಂಖ್ಯೆಯಲ್ಲಿ ಸ್ಥಳದಲ್ಲಿ ಪಹರೆಯಲ್ಲಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ. ಶ್ರೀರಾಮನವಮಿ ಶೋಭಾಯಾತ್ರೆಯಂಗ ಭಕ್ತಿ ಸಂಗೀತದ ವ್ಯವಸ್ಥೆ ಮಾಡಲಾಗಿತ್ತು. ಸಂಗೀತದ ಸದ್ದು ಜೋರಾಯಿತೆಂದು ದುಷ್ಕರ್ಮಿಗಳ ಗುಂಪೊಂದು ರಘುನಾಥಗಂಜ್‌ನ ಮಕೆಂಝಿ ಪಾರ್ಕ್ ಬಳಿ ರಾಮಭಕ್ತರಲ್ಲಿ ಕ್ಯಾತೆ ತೆಗೆದು ಜಗಳಕ್ಕಿಳಿದಿದ್ದಾರು.

ಸೇನೆಗೆ 2,000 ಪ್ರಹಾರ್ ಮಶೀನ್ ಗನ್ ಹಸ್ತಾಂತರ

ಗ್ವಾಲಿಯರ್: ಮೇಕ್ ಇನ್ ಇಂಡಿಯಾ ಉಪಕ್ರಮದನ್ವಯ ದೇಶದಲ್ಲಿಯೇ ಉತ್ಪಾದಿಸಲ್ಪಟ್ಟ 2,000 ಪ್ರಹಾರ್ ಲಘು ಮಶೀನ್ ಗನ್‌ಗಳನ್ನು(ಎಲ್‌ಎಂಜಿ) ಅದಾನಿ ಡಿಫೆನ್ಸ್ ಭಾರತೀಯ ಸೇನೆಗೆ ಶನಿವಾರ ಹಸ್ತಾಂತರಿಸಿದೆ. ಗ್ವಾಲಿಯರ್ ನಗರದ ಹೊರವಲಯದಲ್ಲಿನ ಸಣ್ಣ ಶಸ್ತ್ರಾಸ್ತ್ರಗಳ ಉತ್ಪಾದನಾ ಘಟಕದಲ್ಲಿ 7.62 ಎಂ.ಎಂ ಬಂದೂಕುಗಳನ್ನು ಅದಾನಿ ಡಿಫೆನ್ಸ್ ಮತ್ತು ಏರೋಸ್ಪೇಸ್ ಉತ್ಪಾದನೆ ಮಾಡಿದೆ.

ಗಡಿ ಪ್ರದೇಶಗಳಲ್ಲಿ, ಅದರಲ್ಲೂ ಮುಖ್ಯವಾಗಿ ಲೈನ್ ಆಫ್ ಆಕ್ಚುವಲ್ ಕಂಟ್ರೋಲ್ (ಎಲ್‌ಎಸಿ) ಮತ್ತು ಲೈನ್ ಆಫ್ ಕಂಟ್ರೋಲ್(ಎಲ್‌ಒಸಿ)ನಲ್ಲಿ ರಕ್ಷಣಾ ನಿಯೋಜನೆಗಾಗಿ ಭಾರತ ಸಾಕಷ್ಟು ರಕ್ಷಣಾ ಹೂಡಿಕೆ ನಡೆಸುತ್ತಿದೆ. ಈ ಸಂದರ್ಭ ಹೊಸ ಶಸ್ತ್ರಾಸ್ತ್ರಗಳು ಸೇನೆಯ ಬಲ ಹೆಚ್ಚಿಸಲಿದ್ದು, ಒಟ್ಟಾರೆ ಯುದ್ಧ ಕಾರ್ಯಾಚರಣಾ ಸಾಮರ್ಥ್ಯವನ್ನು ಹಾಗೂ ಯುದ್ಧ ಸನ್ನದ್ಧತೆಯನ್ನು ಹೆಚ್ಚಿಸಲಿದೆ. 508 ಎಂ.ಎಂ. (20 ಇಂಚಿನ) ಬ್ಯಾರೆಲ್ ಉದ್ದವನ್ನು ಪ್ರಹರ್ ಹೊಂದಿರಲಿದೆ. ಲಘು ಮಶೀನ್ ಗನ್‌ನ 8 ಕೆ.ಜಿ. ತೂಕವಿರಲಿದ್ದು, 1,100 ಎಂ.ಎಂ. ಉದ್ದವಿರಲಿದೆ. ಇದಲ್ಲದೆ ಪ್ರಹರ್ ಬಂದೂಕು 1,000 ಮೀ. ದೂರದವರೆಗೂ ದಾಳಿ ನಡೆಸಬಲ್ಲ ಸಾಮರ್ಥ್ಯವನ್ನು ಹೊಂದಿರಲಿದೆ. ಗ್ವಾಲಿಯರ್ ಘಟಕದಲ್ಲಿ ನಡೆದ ಔಪಚಾರಿಕ ಸಮಾರಂಭದಲ್ಲಿ ಶನಿವಾರ ಲಘು ಮಶೀನ್ ಗನ್‌ಗಳನ್ನು ಸೇನೆಗೆ ಹಸ್ತಾಂತರಿಸಲಾಯಿತು. ರಕ್ಷಣಾ ಸಚಿವಾಲಯದ ರಕ್ಷಣಾ ಸ್ವಾಮ್ಯ ಅಧಿಕಾರಿ ಎ.ಅನ್ಬರಸು, ಅದಾನಿ ಡಿಫೆನ್ಸ್ ಮತ್ತು ಏರೋಸ್ಪೇಸ್ ಸಿಇಒ ಆಶಿಶ್ ರಾಜ್‌ವಂಶಿ ಮತ್ತು ಹಿರಿಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಇದ್ದರು.

ತ.ನಾಡು: ಡಿಎಂಕೆ 164 ಅಭ್ಯರ್ಥಿಗಳ ಪಟ್ಟಿ ಪ್ರಕಟ

ಚೆನ್ನೈ: ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಪಕ್ಷವು ಏ.23ರಂದು ನಡೆಯಲಿರುವ ವಿಧಾನಸಭೆ ಚುನಾವಣೆಗಾಗಿ 164 ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಶನಿವಾರ ಘೋಷಿಸಿದೆ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹಾಗೂ ಅವರ ಪುತ್ರ ಮತ್ತು ಉಪ ಮುಖ್ಯಮಂತ್ರಿಯಾದ ಉದಯನಿಧಿ ಅವರನ್ನು ಅವರ ಪ್ರಸ್ತುತ ನಗರ ಕ್ಷೇತ್ರಗಳಿಂದ ಮತ್ತೆ ಅಭ್ಯರ್ಥಿಗಳನ್ನಾಗಿ ಘೋಷಿಸಲಾಗಿದೆ.



ಇದರಿಂದ ಹಲವಾರು ಕ್ಷೇತ್ರಗಳಲ್ಲಿ ಪ್ರತಿಸ್ಪರ್ಧಿ ಎಐಎಡಿಎಂಕೆಯೊಂದಿಗೆ ನೇರ ಸ್ಪರ್ಧೆ ಏರ್ಪಡಲಿದೆ.

ಕಾಂಗ್ರೆಸ್ ಹಾಗೂ ಎಡಪಂಥೀಯ ಪಕ್ಷಗಳನ್ನು ಒಳಗೊಂಡ ಮೈತ್ರಿ ಪಕ್ಷಗಳೊಂದಿಗೆ ನಡೆದ ಹಲವು ದಿನಗಳ ಸೀಟ್ ಹಂಚಿಕೆ ಮಾತುಕತೆಗಳನ್ನು ಪೂರ್ಣಗೊಳಿಸಿದ ಡಿಎಂಕೆ, ಅವರಿಗೆ ಮೀಸಲಾದ ಕ್ಷೇತ್ರಗಳನ್ನು ಗುರುತಿಸಿದೆ. ಇದಾದ ಕೆಲವೇ ನಿಮಿಷಗಳಲ್ಲಿ, ಡಿಎಂಕೆ ಮುಖ್ಯ ಕಚೇರಿ ಅಣ್ಣಾ ಅರಿವಾಲಯಂದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸ್ಟಾಲಿನ್ ತಮ್ಮ ಪಕ್ಷದ 164 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದರು. ಸೀಟ್ ಹಂಚಿಕೆ ಮಾತುಕತೆಯಲ್ಲಿ ಯಾವುದೇ ವಿಳಂಬವಾಗಿಲ್ಲ ಎಂದು ಸ್ಟಾಲಿನ್ ಹೇಳಿದ್ದಾರೆ. ಸಹನೆಯುತ ಚರ್ಚೆಗಳು ಎಲ್ಲರೂ ತೃಪ್ತರಾಗುವಂತೆ ಮಾಡಿವೆ ಎಂದು ಅವರು ಹೇಳಿದರು. ಜೊತೆಗೆ ಮೈತ್ರಿ ಪಕ್ಷಗಳೊಂದಿಗೆ ಏಕತೆ ಕಾಪಾಡಲು ಪ್ರಯತ್ನಿಸುತ್ತಿದ್ದೇನೆ ಎಂದೂ ತಿಳಿಸಿದ್ದಾರೆ.

ನಕ್ಸಲ್ ಪಿಡುಗು ನಿರ್ನಾಮದ ಬಗ್ಗೆ ನಾಳೆ ಲೋಕ ಚರ್ಚೆ

ಹೊಸದಿಲ್ಲಿ: ದೇಶವನ್ನು ನಕ್ಸಲ್ ಪಿಡುಗಿನಿಂದ ಮುಕ್ತಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರದ ಪ್ರಯತ್ನಗಳ ಬಗ್ಗೆ ಲೋಕಸಭೆಯಲ್ಲಿ ಸೋಮವಾರ ಚರ್ಚೆ ನಡೆಯಲಿದೆ. ಮಾರ್ಚ್ 30ರ ಲೋಕಸಭಾ ಕಲಾಪ ಯಾದಿಯನ್ವಯ, ಸದನದ ನಿಯಮ 193ರಡಿ, ವಾಮಪಂಥೀಯ ತೀವ್ರವಾದದಿಂದ ದೇಶವನ್ನು ಮುಕ್ತಗೊಳಿಸುವ ಪ್ರಯತ್ನಗಳು ಎಂಬ ವಿಷಯವನ್ನು ಸರಕಾರ ಚರ್ಚೆಗೆ ಪಟ್ಟಿ ಮಾಡಿದೆ.

2026ರ ಮಾ.31ರೊಳಗೆ ನಕ್ಸಲ್ ಪಿಡುಗನ್ನು ದೇಶದಿಂದ ಸಂಪೂರ್ಣ ನಿರ್ಮೂಲನೆ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಹಿಂದೆ ಹೇಳಿದ್ದರು. ಲೋಕಸಭೆಯ ಕಲಾಪಗಳ ನೀತಿ ನಿಯಮಾವಳಿಗಳ 193ನೇ ನಿಯಮದಕ್ಕಿ ನೀಡಲಾಗಿರುವ ನೋಟೀಸ್ ಮೇರೆಗೆ ,ನಕ್ಸಲ್ ವಿಷಯವನ್ನು ಚರ್ಚೆಗೆ ನಿಗದಿಪಡಿಸಲಾಗಿದೆ. ಟಿಡಿಪಿ ಸಂಸದ ಬೈರೆಡ್ಡಿ ಶಬರಿ ಮತ್ತು ಶಿವಸೇನಾ ಸದಸ್ಯ ಶ್ರೀಕಾಂತಂ ಶಿಂಧೆ ನೋಟೀಸ್ ನೀಡಿದ್ದರು.

ಮೋದಿ ಸರ್ಕಾರದಲ್ಲಿ ದೇಶದ ಜನತೆಗೆ ಸಂಪೂರ್ಣ ಭರವಸೆ: ಕೇಂದ್ರ ಗೃಹ ಸಚಿವ ಶಾ

ತೈಲ ಬೆಲೆ ಏರಿಕೆ ಇಲ್ಲದ ಏಕೈಕ ದೇಶ ಭಾರತ

ಹೊಸದಿಲ್ಲಿ: ಜಗತ್ತಿನಾದ್ಯಂತ ಇಂಧನ ದರ ಮಿತಿಮೀರಿ ಹೆಚ್ಚುತ್ತಿದ್ದರೂ ಭಾರತದಲ್ಲಿ ಮಾತ್ರ ಪೆಟ್ರೋಲ್, ಡೀಸೆಲ್ ದರಗಳಲ್ಲಿ ಯಾವುದೇ ಹೆಚ್ಚಳವಾಗಿಲ್ಲ. ಇದಕ್ಕೆ ಕಾರಣೀಭೂತ ನರೇಂದ್ರ ಮೋದಿ ಸರ್ಕಾರದಲ್ಲಿ ಸಂಪೂರ್ಣ ಭರವಸೆ ಕಾಯ್ದುಕೊಳ್ಳಿ ಎಂದು ದೇಶವಾಸಿಗಳಿಗೆ ಗೃಹ ಸಚಿವ ಶಾ ಕರೆ ನೀಡಿದ್ದಾರೆ. ದೇಶದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಅಥವಾ ಇಂಧನ ಕೊರತೆ ಇಲ್ಲ. ಜಾಗತಿಕ ಬಿಕ್ಕಟ್ಟಿನ ಹೊರತೂ ಪೂರೈಕೆ ಮತ್ತು ದರಗಳನ್ನು ಸೂಕ್ತವಾಗಿ ನಿರ್ವಹಿಸುವಲ್ಲಿ ಭಾರತ ಸರಕಾರ ಯಶಸ್ವಿಯಾಗಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ ಯಾವುದೇ ಲಾಕ್‌ಡೌನ್ ಇಲ್ಲ. ಇಂಧನ, ಅನಿಲ ವಹಿವಾಟುಗಳು ದೇಶದಲ್ಲಿ ಮಾಮೂಲಾಗಿರುವುದು ಮತ್ತು ಜನರಿಗೆ ಅಬಾಧಿತವಾಗಿ ಇವನ್ನು ನಾವು ಪೂರೈಸುತ್ತೇವೆ ಎಂದವರು ಟೈಮ್ಸ್ ನೌ ಸಮ್ಮಿಟ್‌ಗೆ ಸಂದರ್ಶನದಲ್ಲಿ ತಿಳಿಸಿದ್ದಾರೆ. ಜನರಿಗೆ ಯಾವ ಕಾರಣಕ್ಕೂ ಕಷ್ಟವಾಗಕೂಡದು ಎಂಬುದು ಸರಕಾರ ಕಾಳಜಿ. ಹಾಗಾಗೀ ಸರಕಾರ ತೈಲ ಉತ್ಪನ್ನಗಳ ಮೇಲಿನ ಅಬ್ಕಾರಿ ಸುಂಕ ಕಡಿತಗೊಳಿಸಿ, ಹಣಕಾಸು ಹೊರೆಯನ್ನು ಸ್ವಯಂ ಹೊತ್ತುಕೊಂಡಿದೆ ಎಂದು, ಸರಕಾರ ಬಿಕ್ಕಟ್ಟನ್ನು ಸರಿಯಾಗಿ ನಿಭಾಯಿಸುತ್ತಿಲ್ಲ ಎಂಬ ಟೀಕೆಗಳಿಗೆ ಸಚಿವರು ಪ್ರತ್ಯುತ್ತರಿಸಿದರು.

ಜಗತ್ತಿನ ಇತರ ದೇಶಗಳಲ್ಲಿ ಪರಿಸ್ಥಿತಿ ತೀರಾ ಗಂಭೀರವಾಗಿದೆ. ಫಿಲಿಪ್ಪೈನ್ಸ್‌ನಲ್ಲಿ ರಾಷ್ಟ್ರೀಯ ತುರ್ತುಸ್ಥಿತಿ ಘೋಷಿಸಲಾಗಿದೆ. ಶ್ರೀಲಂಕಾದಲ್ಲಿ 8ಲೀಟರ್ ಮೀರಿ ಇಂಧನ ಪೂರೈಕೆ ಇಲ್ಲ. ಥೈಲ್ಯಾಂಡ್‌ನಲ್ಲಿ ವರ್ಕ್ ಫ್ರಂ ಹೋಮ್ ಜಾರಿಯಾಗಿದೆ. ವಿಯೆಟ್ನಾಂ ಮತ್ತು ಪಾಕಿಸ್ಥಾನಗಳಲ್ಲಿ ವಿಮಾನಗಳ ಹಾರಾಟ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆ ಮತ್ತು ವಾರದ ದುಡಿಮೆ ದಿನಗಳನ್ನು ನಾಲ್ಕಕ್ಕೆ ಇಳಿಸಲಾಗಿದೆ.

ವಿಯೆಟ್ನಾಂನಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರಗಳಲ್ಲಿ ಶೇ.50ರಷ್ಟು ಹೆಚ್ಚಳವಾಗಿದೆ. ಪಾಕಿಸ್ಥಾನದಲ್ಲಿ 17ರಿಂದ 20ಶೇಕಡಾ ಏರಿಕೆಯಾಗಿದೆ. ಯುರೋಪ್‌ನಲ್ಲಿ 20ರಿಂದ 30ಶೇಕಡಾ ಹೆಚ್ಚಳವಾದರೆ ಇಂಗ್ಲೆಂಡ್‌ನಲ್ಲಿ 7ರಿಂದ 13ಶೇ.ಹೆಚ್ಚಳವಾಗಿದೆ. ಆಸ್ಟ್ರೇಲಿಯಾದಲ್ಲಿ ಶೇ.18ರಷ್ಟು , ಅಮೆರಿಕದಲ್ಲಿ ಶೇ.17ರಿಂದ 34ರಷ್ಟು , ಕಾಂಬೋಡಿ ಶೇ. 19 ಮತ್ತು ನೈಜೀರಿಯಾದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರದಲ್ಲಿ 40ರಿಂದ 48ಶೇಕಡಾ ಏರಿಕೆಯಾಗಿದೆ ಎಂದು ಸಚಿವ ಶಾ ಮಾಹಿತಿ ನೀಡಿದರು. ಪೆಟ್ರೋಲ್ , ಡೀಸೆಲ್ ದರಗಳಲ್ಲಿ ಶೂನ್ಯ ಏರಿಕೆ ಮತ್ತು ಇಂಧನ ಪೂರೈಕೆ ಅಬಾಧಿತವಾಗಿರುವ ರಾಷ್ಟ್ರವೊಂದಿದ್ದರೆ ಅದು ಭಾರತ ಮಾತ್ರ ಎಂದು ಸಚಿವರು ಗಮನ ಸೆಳೆದರು.

ಸಂಪೂರ್ಣ ಹೊರೆಹೊತ್ತ ರಾಷ್ಟ್ರ ಕೂಡ ಭಾರತ

ಬಿಕ್ಕಟ್ಟಿನ ಸಂಪೂರ್ಣ ಹೊರೆಯನ್ನು ಸ್ವಯಂ ಭರಿಸಿಕೊಂಡ ರಾಷ್ಟ್ರ ಕೂಡ ಭಾರತ ಮಾತ್ರ. ಇನ್ಯಾವ ದೇಶಗಳೂ ಈ ರೀತಿ ಪೂರ್ಣ ಹೊರೆಯನ್ನು ವಹಿಸಿಕೊಂಡಿಲ್ಲ. ಕೇಂದ್ರ ಸರಕಾರ ಕಳೆದ 11 ವರ್ಷಗಳಲ್ಲಿ ಕೈಗೊಂಡ ಕ್ರಮಗಳಿಂದಾಗಿ ಭಾರತೀಯ ಆರ್ಥಿಕತೆಯಿಂದು ಅದೆಷ್ಟು ಚೈತನ್ಯಶೀಲವಾಗಿದೆಯೆಂದರೆ, ಸರ್ಕಾರ ತನ್ನ ಅಬಕಾರಿ ಸುಂಕವನ್ನೂ ಕಡಿತಗೊಳಿಸಲು ಶಕ್ತವಾಗಿದೆ. 2014ರಲ್ಲಿ ಅಸ್ತಿತ್ವದಲ್ಲೇ ಇದ್ದಿರದ ತೈಲ ಮೀಸಲನ್ನು ಕೇಂದ್ರ ಸರ್ಕಾರ ಹೆಚ್ಚಿಸಿದೆ ಮಾತ್ರವಲ್ಲ, ತೈಲ ಖರೀದಿಯನ್ನೂ ವೈವಿಧ್ಯಗೊಳಿಸಿದೆ. ಹಿಂದೆ ಭಾರತ 27ರಾಷ್ಟ್ರಗಳಿಗೆ ಸೀಮಿತವಾಗಿ ತೈಲ ಆಮದು ಮಾಡುತ್ತಿತ್ತು . ಇಂದು ಈ ಸಂಖ್ಯೆ 42ಕ್ಕೆ ನೆಗೆದಿದೆ ಎಂದು ಸಚಿವ ಶಾ ಹೆಮ್ಮೆ ವ್ಯಕ್ತಪಡಿಸಿದರು. ವಿಪಕ್ಷ ನಾಯಕ ರಾಹುಲ್ ಗಾಂಧಿಯನ್ನು ನಂಬಬೇಡಿ ಎಂದು ಜನರಿಗೆ ಸಚಿವರು ಸಲಹೆಯಿತ್ತರು.

ಸಚಿವ ರಾಜನಾಥ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿ ಒಪ್ಪಿಗೆ

ಕ್ಷಿಪಣಿ ರಕ್ಷಣಾ ವ್ಯವಸ್ಥೆ ವಿಸ್ತರಣೆ

ಹೊಸದಿಲ್ಲಿ: ಭಾರತದ ದೂರಗಾಮಿ ವಾಯು ರಕ್ಷಣಾ ಸಾಮರ್ಥ್ಯಗಳನ್ನು ಹೆಚ್ಚಿಸಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿ 2.38 ಲಕ್ಷ ಕೋಟಿ ರೂ.ಗಳ ಖರೀದಿ ಯೋಜನೆಗೆ ಅನುಮೋದನೆ ನೀಡಿದೆ.

ಈ ರಕ್ಷಣಾ ಉತ್ತೇಜನದ ಪ್ರಮುಖ ಭಾಗವಾಗಿ, ರಷ್ಯಾದಿಂದ ಹೆಚ್ಚುವರಿ ಐದು ಎಸ್-400 ಟ್ರಯಂಫ್ ದೂರಗಾಮಿ ಭೂಮಿಯಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆಗಳನ್ನು ಖರೀದಿಸಲಾಗುತ್ತಿದೆ. ಈ ವ್ಯವಸ್ಥೆಗಳು 400 ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವ ಶತ್ರು ವಿಮಾನಗಳು, ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಪತ್ತೆಹಚ್ಚಿ ನಾಶಪಡಿಸುವ ಸಾಮರ್ಥ್ಯ ಹೊಂದಿವೆ. 2018ರಲ್ಲಿ ನಡೆದ ಐದು ಘಟಕಗಳ ಮೊದಲ ಒಪ್ಪಂದದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದ್ದು, ಇದರೊಂದಿಗೆ ಒಟ್ಟು ಎಸ್-400 ವ್ಯವಸ್ಥೆಗಳ ಸಂಖ್ಯೆ ಹತ್ತಕ್ಕೆ ಏರಲಿದೆ.

ಗಡಿಗಳಲ್ಲಿ ಕಣ್ಗಾವಲು: ಕ್ಷಿಪಣಿ ವ್ಯವಸ್ಥೆಗಳ ಜತೆಗೆ 100 ಮಾನವರಹಿತ ಕಾಂಬ್ಯಾಟ್ ಏರಿಯಲ್ ವೆಹಿಕಲ್ಸ್ (ಯುಸಿಎವಿ) ಮತ್ತು 120 ಲೋಯಿಟರಿಂಗ್ ಮ್ಯೂನಿಷನ್‌ಗಳ ಖರೀದಿಗೆ ಮಂಡಳಿ ಅನುಮತಿ ನೀಡಿದೆ. ಚೀನಾ ಮತ್ತು ಪಾಕಿಸ್ತಾನದ ಗಡಿಗಳಲ್ಲಿ ಕಣ್ಗಾವಲು ಮತ್ತು ಆಕ್ರಮಣಕಾರಿ ಕಾರ್ಯಾಚರಣೆಗಳನ್ನು ಬಲಪಡಿಸಲು ಈ ಯುಸಿಎವಿಗಳನ್ನು ಬಳಸಿಕೊಳ್ಳುವ ಯೋಜನೆಯಿದೆ. ಅಲ್ಲದೆ, 200 ಬ್ರಹ್ಮೋಸ್ ಎಕ್ಸ್‌ಟೆಂಡೆಡ್ ರೇಂಜ್ ಕ್ರೂಸ್ ಕ್ಷಿಪಣಿಗಳು ಮತ್ತು 400 ಸುಧಾರಿತ ಟೋಡ್ ಆರ್ಟಿಲರಿ ಗನ್ ಸಿಸ್ಟಮ್‌ಗಳ ಸ್ಥಳೀಯ ಉತ್ಪಾದನೆಗೂ ಅನುಮೋದನೆ ನೀಡಲಾಗಿದೆ.

ಮಿಲಿಟರಿ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಉತ್ತೇಜಿಸಲು ಈ ಹೆಚ್ಚಿನ ಯೋಜನೆಗಳು ಬೈ ಇಂಡಿಯನ್-ಐಡಿಡಿಎಂ ವರ್ಗದಲ್ಲಿ ಬರುತ್ತವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಈ ಯೋಜನೆ, ಭಾರತೀಯ ನೌಕಾಪಡೆ ಮತ್ತು ವಾಯುಪಡೆಗಾಗಿ ದೇಶೀಯ ಎಲೆಕ್ಟ್ರಾನಿಕ್ ಯುದ್ಧ ಸಾಮಗ್ರಿಗಳು ಮತ್ತು ಹೆಚ್ಚಿನ ಎತ್ತರದಲ್ಲಿ ಹಾರುವ ಕಣ್ಗಾವಲು ಡ್ರೋನ್‌ಗಳ ಅಭಿವೃದ್ಧಿಯನ್ನು ಒಳಗೊಂಡಿದೆ.

ಪ್ರಾದೇಶಿಕ ಭದ್ರತಾ ಸವಾಲುಗಳ ಹಿನ್ನೆಲೆಯಲ್ಲಿ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದ್ದು, ಇದು ಇತ್ತೀಚಿನ ವರ್ಷಗಳಲ್ಲಿ ಒಂದೇ ದಿನದಲ್ಲಿ ನೀಡಲಾದ ಅತಿದೊಡ್ಡ ರಕ್ಷಣಾ ಅನುಮೋದನೆಗಳಲ್ಲಿ ಒಂದಾಗಿದೆ. ಈ ಖರೀದಿ ಪ್ರಕ್ರಿಯೆ, ಸಶಸ್ತ್ರ ಪಡೆಗಳ ಯಂತ್ರಾಂಶಗಳನ್ನು ಆಧುನೀಕರಿಸುವ ಗುರಿ ಹೊಂದಿರುವ ಬಹು-ವರ್ಷದ ಒಪ್ಪಂದಗಳನ್ನು ಒಳಗೊಂಡಿರುತ್ತದೆ.

ರಾಜ್ಯದ ಆರ್ಥಿಕ ವ್ಯವಸ್ಥೆ ಹದಗೆಟ್ಟಿದೆ: ಬೊಮ್ಮಾಯಿ

ಬಾಗಲಕೋಟೆ: ರಾಜ್ಯದ ಜನರು ಸರ್ಕಾರದ ಮೇಲೆ ಇಟ್ಟ ಭರವಸೆ ಹುಸಿಯಾಗಿದೆ. ರಾಜ್ಯದ ಆರ್ಥಿಕ ವ್ಯವಸ್ಥೆ ಹದಗೆಟ್ಟಿದೆ. ಕೋವಿಡ್ ಸಂದರ್ಭದಲ್ಲಿ ಕೂಡ ಬಿಜೆಪಿ ಸರ್ಕಾರ ಆರ್ಥಿಕ ವ್ಯವಸ್ಥೆಯನ್ನು ಸರಿಯಾಗಿಟ್ಟುಕೊಂಡಿತ್ತು. ಆದರೆ, ಕಾಂಗ್ರೆಸ್ ಸರ್ಕಾರದ ಅವಧಿ ಮುಗಿಯುತ್ತಿದ್ದಂತೆ 6ರಿಂದ 7 ಲಕ್ಷ ಕೋಟಿ ರೂ.ಸಾಲವನ್ನು ರಾಜ್ಯದ ಜನರ ಮೇಲೆ ಹೊರೆಸಲಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ನವನವಗರದ ಬಿಜೆಪಿ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಮಾತನಾಡಿ, ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ನೀಡುತ್ತಿಲ್ಲ ಎನ್ನುವ ಸಿದ್ದರಾಮಯ್ಯನವರು ಯುಪಿಎ ಸರ್ಕಾರವಿದ್ದಾಗ 700 ಕೋಟಿ ರೂ. ರೈಲ್ವೆ ಇಲಾಖೆಗೆ ನೀಡುತ್ತಿತ್ತು. ಈಗಿನ ನರೇಂದ್ರ ಮೋದಿ ಸರ್ಕಾರ ರಾಜ್ಯಕ್ಕೆ 7 ಸಾವಿರ ಕೋಟಿ ರೂ. ಅನುದಾನ ರೈಲ್ವೆ ಯೋಜನೆಗೆ ನೀಡುತ್ತಿದೆ ಎಂದು ಹೇಳಿದರು. ದೇಶಕ್ಕೆ ದೊಡ್ಡ ಸಮಸ್ಯೆ ಎದುರಾದಾಗ ಪ್ರಧಾನಿ ನರೇಂದ್ರ ಮೋದಿಯವರು ರಾಜ್ಯದ ಎಲ್ಲ ಮುಖ್ಯಮಂತ್ರಿಗಳ ಸಭೆ ನಡೆಸಿದರೆ ರಾಜ್ಯದ ಸಿಎಂ ಮಾತ್ರ ಗೈರು ಉಳಿಯುತ್ತಾರೆ. ನೀತಿ ಆಯೋಗದ ಸಭೆಗೂ ಹೋಗುವುದಿಲ್ಲ. ಕರ್ತವ್ಯ ಲೋಪವನ್ನು ರಾಜ್ಯದ ಸಿಎಂ ಎಸಗುವ ಮೂಲಕ ಉದ್ದಟತನ ಪ್ರದರ್ಶನ ಮಾಡುತ್ತಾರೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿವರ್ಷ 18 ಸಾವಿರ ಕೋಟಿ ರೂ.ಯುಕೆಪಿ ಯೋಜನೆಗೆ ಮೀಸಲಿಟ್ಟು ಯೋಜನೆಯನ್ನು ಮುಗಿಸುತ್ತೇವೆ ಎಂದು ಭರವಸೆ ನೀಡಿದವರು ಇತ್ತೀಚಿಗೆ ಬಜೆಟ್ ಮಂಡಿಸಿದಾಗ ಕೇವಲ 3 ಸಾವಿರ ಕೋಟಿ ಮೀಸಲಿಟ್ಟಿದ್ದಾರೆ. ಜನರ ಕಣ್ಣಿಗೆ ಮಣ್ಣು ಎರಚುವ ಕೆಲಸವನ್ನು ಕಾಂಗ್ರೆಸ್ ಮಾಡಿದೆ. ಕ್ಷಮೆಗೆ ಅರ್ಹವಿಲ್ಲದ ಅಪರಾಧವನ್ನು ಈ ಸರ್ಕಾರ ಮಾಡಿದೆ ಎಂದು ದೂರಿದರು.



ಕಲಬುರಗಿ ಜಿಲ್ಲೆಯ ಯಡ್ರಾಮಿಯ ಬಸವೇಶ್ವರ ಜಾತ್ರಾ ಮಹೋತ್ಸವ ಸಂಭ್ರಮದಿಂದ ಶನಿವಾರ ನೆರವೇರಿತು.

ಕೈ ಅಭ್ಯರ್ಥಿ ಪರ ಮತಯಾಚನೆ

ಬಾಗಲಕೋಟೆ: ದಿ.ಎಚ್.ವೈ.ಮೇಟಿ ಅವರ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲು ಉಮೇಶ ಮೇಟಿ ಅವರನ್ನು ಬೆಂಬಲಿಸಿ ಕಾಂಗ್ರೆಸ್ ಗೆಲ್ಲಿಸಬೇಕು ಎಂದು ಮಾಜಿ ಸಚಿವ ಅಜಯಕುಮಾರ ಸರನಾಯಕ ಹೇಳಿದರು.



ತಾಲೂಕಿನ ಬೇವೂರಗ್ರಾಮದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಪಕ್ಷದ ಚುನಾವಣೆ ಸಭೆಯಲ್ಲಿ ಅವರು ಮಾತನಾಡಿದರು. ಗ್ರಾಮೀಣ ಭಾಗದ ಬಡಜನತೆಯ ಅನುಕೂಲಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಸರಕಾರ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಹಳ್ಳಿ ಹಳ್ಳಿಗಳಲ್ಲಿ ಈ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮೇಟಿ ಅವರ ಜನಪರ ಕಾರ್ಯಗಳನ್ನು ಗಮನಿಸಿ ಗ್ರಾಮೀಣ ಜನತೆ ಮತ್ತೊಮ್ಮೆ ಕಾಂಗ್ರೆಸ್ ಅಭ್ಯರ್ಥಿಗೆ ಆಶೀರ್ವದಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕರ್ನಾಟಕ ಪ್ರದೇಶಯುವಕಾಂಗ್ರೆಸ್‌ರಾಜ್ಯ ಪ್ರಧಾನ ಕಾರ್ಯದರ್ಶಿರಾಹುಲ್ ಜಾರಕಿಹೊಳಿ ಮಾತನಾಡಿ, ಎಚ್.ವೈ.ಮೇಟಿಅವರು ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ತಮ್ಮ ಅವಧಿಯಲ್ಲಿ ಈ ಭಾಗದಲ್ಲಿ ನಿರಂತರ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ. ಅವರ ಪುತ್ರ ಉಮೇಶ ಅವರನ್ನು ಎಲ್ಲರೂ ಬೆಂಬಲಿಸಬೇಕು ಎಂದು ಕೋರಿದರು. ಅಭ್ಯರ್ಥಿ ಉಮೇಶ ಮೇಟಿ, ಸಂಯುಕ್ತಾ ಪಾಟೀಲ ಮಾತನಾಡಿದರು. ಸರಳ ಸ್ವಭಾವ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕಳಕಳಿಯಿಂದ ಎಚ್.ವೈ. ಮೇಟಿ ಅವರು ಅಪಾರ ಜನರ ಪ್ರೀತಿ ಗಳಿಸಿದ್ದಾರೆ. ನಗರದಲ್ಲಿ ವೈದ್ಯಕೀಯ ಮಹಾವಿದ್ಯಾಲಯ ಆಗಬೇಕೆಂಬ ಅವರ ಕನಸು ಕೂಡ ನನಸಾಗಲಿದೆ ಎಂದು ಹೇಳಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಪ್ರತಿಪಕ್ಷದವರು ಆಯವ್ಯಯವನ್ನು ಎಷ್ಟೇ ಟೀಕಿಸಿದರೂ ಮಾವಿನ ಹಣ್ಣು ಬೇವಿನ ಹಣ್ಣು ಆಗಲು ಸಾಧ್ಯವಿಲ್ಲ - ಸಿದ್ದರಾಮಯ್ಯ

- ಆಳುವ ಪಕ್ಷದವರು ಎಷ್ಟೇ ಹೊಗಳಿದರೂ ಬೇವಿನ ಹಣ್ಣು ಮಾವಿನ ಹಣ್ಣು ಆಗಲು ಸಾಧ್ಯವಿಲ್ಲ ಅಂತಲೂ ವಾದಮಾಡಬಹುದು!

ದಿನ ಭವಿಷ್ಯ

ಮೇಷ
ಕಹಿಸಿಹಿ ನೆನಪುಗಳ ಮಿಶ್ರಣ ಈ ದಿನ. ಹೆಚ್ಚಿದ ಖರ್ಚು ಚಿಂತೆಗೆ ಕಾರಣವಾಗಲಿದೆ. ಆತ್ಮೀಯರ ಜತೆಗಿನ ಭೇಟಿಯಿಂದ ಸಂತೋಷ.

ವೃಷಭ
ಪ್ರಗತಿಗೆ ಬೇಕಾದ ಹಾದಿ ನಿಮ್ಮ ಮುಂದಿದೆ. ಸರಿಯಾದ ರೀತಿಯಲ್ಲಿ ಅದರ ಬಳಕೆ ಮಾಡಿಕೊಳ್ಳಿ. ಅನವಶ್ಯ ದ್ವೇಷ ಭಾವನೆ ಮುಂದುವರಿಸಬೇಡಿ.

ಮಿಥುನ
ಆದಾಯ- ವೆಚ್ಚದ ಮಧ್ಯೆ ಸಮತೋಲನ ಇರಲಿ. ಖರ್ಚು ಹೆಚ್ಚಾಗಿ ತಾಪತ್ರಯ ಪಡುವಿರಿ. ಮಾನಸಿಕ ಶಾಂತಿಗೆ ಹಾತೊರೆಯುವಿರಿ.

ಕಟಕ
ಉದ್ಯೋಗ ಅವಕಾಶ ಹೆಚ್ಚಲಿದೆ. ಕೆರಿಯರ್ ಉನ್ನತಿಗೆ ಆದ್ಯತೆ ಕೊಡಿ. ನಿಮ್ಮನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಕೊಡಬೇಡಿ.

ಸಿಂಹ
ಕೆಲಸದ ಮೇಲೆ ಉತ್ಸಾಹ ಕಳಕೊಳ್ಳುವಿರಿ. ಕೆಲವರ ಮೇಲೆ ಅಸಹನೆ ಹೆಚ್ಚಲಿದೆ. ಶಾಂತ ಮನಸ್ಥಿತಿಯಿಂದ ಯೋಚಿಸಿ ಕಾರ್ಯವೆಸಗಿ.

ಕನ್ಯಾ
ಅಶಾಂತ ಮನಸ್ಥಿತಿ. ಆಪ್ತರ ಜತೆಗೆ ಭಿನ್ನಮತ ಉಂಟಾದೀತು. ನಿಮಗೆ ಸಂಬಂಧಿಸದ ವಿಚಾರದಲ್ಲಿ ತಲೆಕೆಡಿಸಿಕೊಳ್ಳದಿರಿ. ವೆಚ್ಚ ಹೆಚ್ಚಲಿದೆ.

ತುಲಾ
ನೆಗೆಟಿವ್ ಚಿಂತನೆಯ ವ್ಯಕ್ತಿಗಳನ್ನು ದೂರವಿಡಿ. ಅವರ ಪ್ರಭಾವಕ್ಕೆ ಸಿಲುಕದಿರಿ. ಹಳೆಯ ಸ್ನೇಹಿತರ ಭೇಟಿ. ಕೌಟುಂಬಿಕ ಸಮಾಧಾನ.

ವೃಶ್ಚಿಕ
ಕುಟುಂಬ ಸದಸ್ಯರ ಜತೆ ಆತ್ಮೀಯ ಕಾಲಕ್ಷೇಪ. ಸಣ್ಣಪುಟ್ಟ ವಿಷಯಗಳು ಮನಸ್ಸು ಕೆಡಿಸಲು ಅವಕಾಶ ಕಲ್ಪಿಸಬೇಡಿ. ಸಹನೆಯಿಂದ ವರ್ತಿಸಿ.

ಧನು
ಪ್ರಮುಖ ಕೆಲಸಕ್ಕೆ ನೆರವು ಪಡಕೊಳ್ಳಿ. ಏಕಾಂಗಿ ಪ್ರಯತ್ನ ಫಲ ನೀಡದು. ಹೊಟ್ಟೆ ಸಮಸ್ಯೆ ಕಾಡಬಹುದು. ಆಪ್ತರ ಸಂಗದಲ್ಲಿ ಆನಂದ.

ಮಕರ
ನಿಮ್ಮ ವ್ಯವಹಾರ ಉನ್ನತಿಗೆ ಹೊಸ ಚಿಂತನೆ ಅಳವಡಿಸಿ. ಹಳೆಯ ದಾರಿ ಫಲ ನೀಡದು. ಎಲ್ಲರನ್ನು ನಂಬಿ ಕೆಡಬೇಡಿ. ಕೌಟುಂಬಿಕ ಸಹಕಾರ.

ಕುಂಭ
ಹಣಕ್ಕೆ ಸಂಬಂಧಿಸಿದ ಬಿಕ್ಕಟ್ಟು ಪರಿಹಾರ. ಸೂಕ್ತ ನೆರವು ಲಭ್ಯ. ಸಂಬಂಧದಲ್ಲಿ ಅನುಮಾನಕ್ಕೆ ಆಸ್ಪದ ನೀಡಬೇಡಿ. ವಸ್ತು ಖರೀದಿ, ಧನವ್ಯಯ.

ಮೀನ
ಬಿಡುವಿಲ್ಲದ ದಿನ. ಕೆಲವು ಹೊಣೆಗಾರಿಕೆ ಪೂರೈಸಬೇಕಾದ ಬದ್ಧತೆ. ಆಪ್ತರ ಜತೆ ಪ್ರವಾಸ ಸಂಭವ. ಭಾವನಾತ್ಮಕ ಏರುಪೇರು.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 9,0,2,6

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಕಿಡಿ

ತೆರಿಗೆ ಲೂಟಿ ನಿಲ್ಲಿಸಿ: ಅಶೋಕ್

ಬೆಂಗಳೂರು: ಮೊದಲು ನಿಮ್ಮ ಸರ್ಕಾರದ ತೆರಿಗೆ ಲೂಟಿಯನ್ನು ನಿಲ್ಲಿಸಿ, ನಂತರ ಬೇರೆಯವರಿಗೆ ಬುದ್ಧಿ ಹೇಳಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ವಿಪಕ್ಷ ನಾಯಕ ಆರ್.ಅಶೋಕ್ ತಿರುಗೇಟು ನೀಡಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಬಗ್ಗೆ ಶಿವಕುಮಾರ್ ಅವರು ನೀಡಿರುವ ಹೇಳಿಕೆಗಳು ಅತ್ಯಂತ ಹಾಸ್ಯಾಸ್ಪದ ಮತ್ತು ವಿಪರ್ಯಾಸದಿಂದ ಕೂಡಿವೆ ಎಂದು ಟೀಕಿಸಿದ್ದಾರೆ. ಕೇಂದ್ರ ಸರ್ಕಾರದತ್ತ ಬೆರಳು ತೋರಿಸುವ ಮುನ್ನ ತಮ್ಮದೇ ಕಾಂಗ್ರೆಸ್ ಸರ್ಕಾರ ಕನ್ನಡಿಗರ ಜೇಬಿಗೆ ಹೇಗೆ ಕತ್ತರಿ ಹಾಕುತ್ತಿದೆ ಎಂಬುದಕ್ಕೆ ಅವರು ಮೊದಲು ಉತ್ತರಿಸಬೇಕು. ಮೇ 2023ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಸಿಎಂ, ಡಿಸಿಎಂ ಜೋಡಿ ಜನ ಸಾಮಾನ್ಯರ ಹೊಟ್ಟೆಯ ಮೇಲೆ ಹೊಡೆದು ತಮ್ಮ ಗ್ಯಾರಂಟಿಗಳ ವೈಫಲ್ಯವನ್ನು ಮುಚ್ಚಿ ಹಾಕಲು ಪೆಟ್ರೋಲ್ ಮತ್ತು ಡೀಸೆಲ್ ಅನ್ನು ತಮ್ಮ ಪಾಲಿನ ಎಟಿಎಂ ಮಾಡಿಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಜನರಿಗೆ ದೊಡ್ಡ ಮಟ್ಟದ ನೆರವು

ಕೇಂದ್ರ ಸರ್ಕಾರ ಕೇಂದ್ರ ತೆರಿಗೆಯನ್ನು 10 ರೂ. ನಷ್ಟು ಕಡಿತಗೊಳಿಸಿ ಜನರಿಗೆ ದೊಡ್ಡ ಮಟ್ಟದ ನೆರವು ನೀಡಿದೆ. ಆದರೆ ನೀವು ಕೇವಲ 10 ಪೈಸೆಯನ್ನೂ ಕಡಿಮೆ ಮಾಡುವ ಮನಸ್ಸು ಮಾಡಿಲ್ಲ. ನಿಮಗೆ ನಿಜವಾಗಿಯೂ ಬಡವರ ಬಗ್ಗೆ ಕಾಳಜಿ ಇದ್ದರೆ, ಮೊದಲು ನೀವು ಏರಿಸಿರುವ ಈ 5.5 ರೂ. ದರವನ್ನು ವಾಪಸ್ ಪಡೆಯಿರಿ. ಕೇವಲ ಪತ್ರಿಕಾಗೋಷ್ಠಿ ನಡೆಸಿ ಸುಳ್ಳು ಹೇಳುವುದು ನಾಯಕತ್ವವಲ್ಲ. ಕರ್ನಾಟಕದ ಜನತೆಗೆ ನಿಮ್ಮ ಹಿಟ್ ಅಂಡ್ ರನ್ ರಾಜಕೀಯ ಚೆನ್ನಾಗಿ ಅರ್ಥವಾಗಿದೆ ಎಂದು ಟೀಕಾ ಪ್ರಹಾರ ನಡೆಸಿದ್ದಾರೆ.

ನಿಮ್ಮ ಕಾಂಗ್ರೆಸ್ ಸರ್ಕಾರದ ತೆರಿಗೆ ಲೂಟಿಯ ವರದಿ ಸ್ಪಷ್ಟವಾಗಿದೆ ಎಂದಿರುವ ಅವರು, 2024 ರ ಜೂನ್‌ನಲ್ಲಿ ಪೆಟ್ರೋಲ್ ಬೆಲೆಯನ್ನು ಸುಮಾರು 3 ರೂ. ಮತ್ತು ಡೀಸೆಲ್ ಬೆಲೆಯನ್ನು 3.5 ರೂ.ಗೆ ಹೆಚ್ಚಿಸಿದ ಕಾಂಗ್ರೆಸ್ ಸರ್ಕಾರ, ಏಪ್ರಿಲ್ 2025 ರಲ್ಲಿ ಮತ್ತೆ ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 2 ರೂ.ನಷ್ಟು ಹೆಚ್ಚಿಸಿದೆ. ಇದರ ಒಟ್ಟು ಪರಿಣಾಮವೆಂದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಕರ್ನಾಟಕದಲ್ಲಿ ಡೀಸೆಲ್ ಬೆಲೆ ಬರೋಬ್ಬರಿ 5.5 ರೂ.ಗಳಷ್ಟು ಹೆಚ್ಚಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಇದು ಅಂತರಾಷ್ಟ್ರೀಯ ಮಾರುಕಟ್ಟೆಯ ಏರಿಳಿತವಲ್ಲ, ಬದಲಿಗೆ ಕೇವಲ ರಾಜ್ಯ ಸರ್ಕಾರದ ತೆರಿಗೆ ದಾಹದಿಂದ ಆಗಿರುವ ಬೆಲೆ ಏರಿಕೆ. ಕೇಂದ್ರ ಸರ್ಕಾರದತ್ತ ಬೆರಳು ತೋರಿಸುವ ಶಿವಕುಮಾರ್ ಅವರೇ, ರಾಜ್ಯದ ರೈತರು, ವಾಹನ ಸವಾರರು ಮತ್ತು ಜನಸಾಮಾನ್ಯರಿಗೆ ನಿಮ್ಮ ಸರ್ಕಾರ ನೀಡುತ್ತಿರುವ ಈ ಶಿಕ್ಷೆಗೆ ನಿಮ್ಮ ಬಳಿ ಉತ್ತರವಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಕೇಂದ್ರ ಸರ್ಕಾರವು 2025 ರ ಏಪ್ರಿಲ್ ನಲ್ಲಿ ಅಬಕಾರಿ ಸುಂಕವನ್ನು ಮಾರ್ಪಾಡು ಮಾಡಿದಾಗ, ಅದರ ಹೊರೆ ಜನಸಾಮಾನ್ಯರ ಮೇಲೆ ಬೀಳದಂತೆ ತೈಲ ಕಂಪನಿಗಳೇ ಭರಿಸುವಂತೆ ನೋಡಿಕೊಂಡಿತು. ಆದರೆ ಕರ್ನಾಟಕದ ಕಾಂಗ್ರೆಸ್ ಸರ್ಕಾರ ತೆರಿಗೆ ಏರಿಸಿದಾಗಲೆಲ್ಲಾ ಅದರ ನೇರ ಹೊರೆ ಬಡವರ ಮೇಲೆ ಬೀಳುತ್ತಿದೆ ಎಂದು ಟೀಕಿಸಿದ್ದಾರೆ.

ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಬದ್ಧ: ಎಂಬಿಪಾ

ಬೆಂಗಳೂರು: ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳ ಬೆಳವಣಿಗೆ, ನೀರಾವರಿ ಸೌಲಭ್ಯ, ಉತ್ಕೃಷ್ಟ ಸಂಸ್ಥೆಗಳ ಸ್ಥಾಪನೆ ವಿಚಾರದಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿದೆ. ರಾಜ್ಯಕ್ಕೆ ಬರುತ್ತಿರುವ ಸೆಮಿ ಕಂಡಕ್ಟರ್ ಯೋಜನಾ ಪ್ರಸ್ತಾವನೆಗಳಿಗೆ ಅದು ಆದ್ಯತೆಯ ಮೇರೆಗೆ ಒಪ್ಪಿಗೆ ಕೊಡು ತ್ತಿಲ್ಲ. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಕಳಕಳಿ ವ್ಯಕ್ತಪಡಿಸಿರುವ ಬಿಜೆಪಿ ನಾಯಕ ಅರವಿಂದ ಬೆಲ್ಲದ ಅವರು ಈ ಸಂಬಂಧ ಗಮನ ಹರಿಸಿದರೆ ಅದಕ್ಕೆ ನಮ್ಮ ಸಹಕಾರವೂ ಇರಲಿದೆ ಎಂದು ಬೃಹತ್, ಮಧ್ಯಮ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.



ಈ ಸಂಬಂಧ ವಿರೋಧ ಪಕ್ಷದ ಉಪ ನಾಯಕ ಬೆಲ್ಲದ ಅವರು ಮಾಡಿರುವ ಎಕ್ಸ್ ಪೋಸ್ಟ್‌ಗೆ ಪ್ರತಿಕ್ರಿಯಿಸಿದರುವ ಸಚಿವ ಪಾಟೀಲ, ರಾಜ್ಯದಲ್ಲಿ 59 ಅತೀ ಹಿಂದುಳಿದ ತಾಲ್ಲೂಕುಗಳಿದ್ದು, ಇಷ್ಟೂ ತಾಲ್ಲೂಕುಗಳು ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕದಲ್ಲೇ ಇರುವುದು ವಾಸ್ತವವಾಗಿದೆ. ಇಲ್ಲೆಲ್ಲ ನೀರಾವರಿ ಸೌಲಭ್ಯ ಒದಗಿಸಲು ಎಲ್ಲ ಸರಕಾರಗಳೂ ಪ್ರಯತ್ನಿಸಿವೆ. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಕೂಡ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಿದ್ದು, ಇನ್ನೂ ಹೆಚ್ಚಿನ ಸಂಸ್ಥೆಗಳಿಗೆ ಅವಕಾಶವಿದೆ ಎಂದರು.

ಕರ್ನಾಟಕ ಬಿಟ್ಟು ಬೇರೆಬೇರೆ ರಾಜ್ಯ ಗಳ ಪ್ರಸ್ತಾವನೆಗಳಿಗೆ ಒಪ್ಪಿಗೆ ನೀಡುತ್ತಿರುವ ಕೇಂದ್ರ ಸರಕಾರವು ಕರ್ನಾಟಕದ ಕಡೆಗೂ ಗಮನ ನೀಡಬೇಕು. ಇಡೀ ದೇಶದಲ್ಲೇ ಅತ್ಯುತ್ತಮ ತಂತ್ರಜ್ಞಾನ ಹೊಂದಿರುವ ನಮ್ಮ ರಾಜ್ಯಕ್ಕೆ ಇದರಿಂದ ತೀವ್ರ ಅನ್ಯಾಯವಾಗುತ್ತಿದೆ. ಬೆಲ್ಲದ ಅವರು ಇದರ ಬಗ್ಗೆಯೂ ದನಿ ಎತ್ತಬೇಕು ಎಂದು ಅವರು ಆಗ್ರಹಿಸಿದ್ದಾರೆ. ಈ ಸಂಬಂಧವಾಗಿ ಬೆಲ್ಲದ ಅವರು ತಮ್ಮ ಪಕ್ಷದ ಸಂಸದರ ಮತ್ತು ಹಿರಿಯ ನಾಯಕರ ನಿಯೋಗವನ್ನು ದೆಹಲಿಗೆ ಕೊಂಡೊಯ್ದು ಸಮಿಕಂಡಕ್ಟರ್ ಉದ್ಯಮ ಬರಲು ಸಹಕರಿಸಬೇಕು ಎಂದರು.

ಮೋದಿ-ಟ್ರಂಪ್ ಮಧ್ಯೆ ಮಾತ್ರ ಮಾತು: ಎಂಇಎ

ಪುಟ ೧➔ **ಜಾಗತಿಕ ಶಾಂತಿ ಪುನರುಚ್ಚರಿಸಿದ್ದ ಮೋದಿ:** ಸಂಭಾಷಣೆಯಲ್ಲಿ, ಜಾಗತಿಕ ಶಾಂತಿ, ಸ್ಥಿರತೆ ಮತ್ತು ಆರ್ಥಿಕ ಸಮೃದ್ಧಿ ನೆಲೆಗೊಳಿಸಲು ಹಾರ್ಮುಜ್ ಜಲಸಂಧಿಯನ್ನು ತೆರೆಯುವುದು ಮತ್ತು ಅದರ ಸುರಕ್ಷತೆ ಖಚಿತಪಡಿಸುವುದು ಮುಖ್ಯ ಎಂಬುದನ್ನು ಮೋದಿ ಪುನರುಚ್ಚರಿಸಿದ್ದಾರೆ.

ಮಸ್ಕ್ ಪಾತ್ರದ ಬಗ್ಗೆ ನ್ಯೂಯಾರ್ಕ್ ಟೈಮ್ಸ್ ವರದಿ: ಮೋದಿ ಮತ್ತು ಟ್ರಂಪ್ ನಡುವಿನ ಮಂಗಳವಾರದ ದೂರವಾಣಿ ಕರೆಯಲ್ಲಿ ಎಲಾನ್ ಸೇರಿಕೊಂಡಿದ್ದರೆಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿತ್ತು. ಯುದ್ಧ ಸಂಕಷ್ಟದ ಸಮಯದಲ್ಲಿ ಎರಡು ರಾಷ್ಟ್ರಾಧ್ಯಕ್ಷರ ನಡುವಿನ ಸಂಭಾಷಣೆಯಲ್ಲಿ ಖಾಸಗಿ ವ್ಯಕ್ತಿಯೊಬ್ಬರು ಭಾಗವಹಿಸಿದ್ದು ಬಹಳ ಅಪರೂಪದ ಸಂಗತಿ. ಯುದ್ಧ ಸಂದರ್ಭದಲ್ಲಿ ಇಬ್ಬರು ನಾಯಕರ ದೂರವಾಣಿ ಕರೆಯಲ್ಲಿ ಒಬ್ಬ ಖಾಸಗಿ ವ್ಯಕ್ತಿಯೊಬ್ಬ ಭಾಗವಹಿಸಿದ್ದು ಅನಿರೀಕ್ಷಿತ ಬೆಳವಣಿಗೆಯೆಂದು ಹೆಸರು ಹೇಳಲು ಇಚ್ಚಿಸದ ಅಮೆರಿಕ ಅಧಿಕಾರಿಗಳು ಮಾಹಿತಿ ನೀಡಿರುವುದಾಗಿ ನ್ಯೂಯಾರ್ಕ್ ಟೈಮ್ಸ್ ಉಲ್ಲೇಖಿಸಿದೆ. ಮೋದಿ-ಟ್ರಂಪ್ ದೂರವಾಣಿ ಕರೆಯಲ್ಲಿ ಮಸ್ಕ್ ಭಾಗವಹಿಸಿದ್ದು, ಟ್ರಂಪ್ ಮತ್ತು ಮಸ್ಕ್ ನಡುವಿನ ಸಂಬಂಧ ಸುಧಾರಣೆಯ ಸೂಚಕವೆಂದೂ ವರದಿ ಮಾಡಿತ್ತು. ಕಳೆದ ವರ್ಷ ಟ್ರಂಪ್ ಟಾಸ್ಕ್‌ಫೋರ್ಸ್‌ನಿಂದ ಮಸ್ಕ್ ಹೊರನಡೆದಿದ್ದು, ಅವರಿಬ್ಬರ ನಡುವಿನ ಆತ್ಮೀಯತೆ ಹಳಸಿತ್ತು.

ಸೌದಿ ರಾಜಕುಮಾರನ ಜತೆ ಮೋದಿ ಚರ್ಚೆ

ಪುಟ ೧➔ ಮಧ್ಯಪ್ರಾಚ್ಯ ಯುದ್ಧ ಪರಿಸ್ಥಿತಿಯ ಕುರಿತು ಇಬ್ಬರು ನಾಯಕರು ಮಾತುಕತೆ ನಡೆಸಿದ್ದು, ಹಡಗುಗಳ ಮುಕ್ತ ಸಂಚಾರ ಖಚಿತಪಡಿಸಲು ಉಭಯ ನಾಯಕರು ಒಪ್ಪಿಕೊಂಡಿದ್ದಾರೆ. ಸೌದಿ ಅರೇಬಿಯಾ ರಾಜಕುಮಾರ ಮತ್ತು ಪ್ರಧಾನಿ ಮೊಹಮ್ಮದ್ ಬಿನ್ ಸಲ್ಮಾನ್ ಅವರೊಂದಿಗೆ ಮಾತನಾಡಿದ್ದೇನೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಬಿಕ್ಕಟ್ಟಿನ ಕುರಿತಾಗಿ ಚರ್ಚಿಸಿದ್ದೇವೆ ಎಂದು ಮೋದಿ ಎಕ್ಸ್ ನಲ್ಲಿ ತಿಳಿಸಿದ್ದಾರೆ. ಸೌದಿಯಲ್ಲಿ ಭಾರತೀಯ ಸಮುದಾಯದ ಅಭಿವೃದ್ಧಿಗೆ ನಿರಂತರ ಬೆಂಬಲ ನೀಡುತ್ತಿರುವ ಸಲ್ಮಾನ್ ಅವರಿಗೆ ಮೋದಿ ಕೃತಜ್ಞತೆ ಸಲ್ಲಿಸಿದ್ದಾರೆ. ಫೆ.28ರ ಬಳಿಕ ಇದು ಎರಡನೇ ಬಾರಿ ಉಭಯ ನಾಯಕರು ದೂರವಾಣಿ ಸಂಭಾಷಣೆ ನಡೆಸಿದ್ದಾರೆ.

ಭಾರತದಿಂದ ವಿಶ್ವ ಗೆಲ್ಲುವ ಕಾರ್ಯ

ಪುಟ ೧➔ ಪ್ರಾಚೀನ ಭಾರತೀಯ ಪರಂಪರೆಯು ಅಮೋಘವಾಗಿದೆ ಎಂಬುದಕ್ಕೆ ಇದುವೇ ನಿದರ್ಶನವಾಗಿದೆ ಎಂದರು.

ಸಂಘ ರಾಜಕೀಯ ಪಕ್ಷವಲ್ಲ, ಅದು ಸಮಾಜದ ಸಂಘಟನೆ. ಇದು ಯಾವುದೇ ಪ್ರಕ್ರಿಯೆಯಿಂದ ಹುಟ್ಟಿದುದಲ್ಲ, ಸಮಾಜದ ಅವಶ್ಯಕತೆಯನ್ನು ಪೂರೈಸಲು ಸಂಘ ಸ್ಥಾಪಿತವಾಗಿದೆ.

ಸಂಘ ಎಂದರೆ ಸಂಘಟಿತ ಹಿಂದು ಸಮಾಜವಾಗಿದೆ. ಜಗತ್ತಿನ ಅತ್ಯಂತ ವಿಶಿಷ್ಟ ಸಂಘಟನೆಯಾಗಿದೆ. ಅನೇಕ ದೇಶಗಳಲ್ಲಿ ಸಂಘ ಸಾಮಾಜಿಕ ಸೇವೆಯನ್ನು ನೆರವೇರಿಸುತ್ತಿರುವುದನ್ನು ಸ್ಮರಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀಶೈಲ-ಯಡೂರ ಪೀಠದ ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಇತರರ ಸುಖ-ದುಃಖಗಳಲ್ಲಿ ಪಾಲ್ಗೊಳ್ಳುವುದು ನಿಜವಾದ ಮಾನವ ಧರ್ಮವಾಗಿದೆ. ವಿದ್ಯಾರ್ಥಿ ಜೀವನದಲ್ಲಿಯೇ ಮಕ್ಕಳು ಸಮಾಜಸೇವೆಯ ವ್ರತವನ್ನು ಕೈಗೊಳ್ಳಬೇಕು ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ ಭಾಗವತ್ ಅವರು ಮಠದಿಂದ ನಿರ್ಮಿಸಿದ ಗುರುಕುಲದ ಸಭಾಭವನ ಉದ್ಘಾಟನೆ, ಗೋಶಾಲೆಯ ಗೋ-ಆಹಾರ ತುಲಾಭಾರ ಹಾಗೂ ಪದವಿ ವಿದ್ಯಾರ್ಥಿಗಳ ಸಂವಾದ ಹಾಗೂ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಂವಾದದಲ್ಲಿ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಡಾ.ಮೋಹನ ಭಾಗವತ್ ಅವರು ಸವಿವರವಾಗಿ ಉತ್ತರಿಸಿದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ಶಿವಾಚಾರ್ಯ ಸಂಸ್ಥೆಗಳ ರಾಷ್ಟ್ರೀಯ ಉಪಾಧ್ಯಕ್ಷಚಂದ್ರಶೇಖರಶಿವಾಚಾರ್ಯ ಸ್ವಾಮೀಜಿ, ನೂಲದ ಸುರಗೀಶ್ವರ ಮಠದ ಗುರುಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಶ್ರೀಕಾಂತ ಉಮರಾಣಿ, ಶಿವಲಿಂಗಯ್ಯ ಅಲ್ಲಾಯನವರ, ಶಿವಾನಂದ ಹಕಾರೆ ಸೇರಿದಂತೆ ಸಂಘದ ಪದಾಧಿಕಾರಿಗಳು, ಸ್ಥಳೀಯ ಮುಖಂಡರು ಭಾಗವಹಿಸಿದ್ದರು.

3 ಇಂಜಿನಿಯರಿಂಗ್ ವಿದ್ಯಾರ್ಥಿಗಳ ಸಾವು

ಮಾಗಡಿ: ರಸ್ತೆ ಅಪಘಾತದಲ್ಲಿ ಮೂವರು ವಿದ್ಯಾರ್ಥಿಗಳು ಮೃತಪಟ್ಟಿರುವ ಘಟನೆ ತಾಲೂಕಿನ ಕುದೂರು ಪೊಲೀಸ್ ಠಾಣಾ ವ್ಯಾಪ್ತಿಯ ಮರೂರು ಹ್ಯಾಂಡ್ ಪೋಸ್ಟ್ ಬಳಿ ಶನಿವಾರ ಮುಂಜಾನೆ ಸಂಭವಿಸಿದೆ. ಬೆಂಗಳೂರಿನ ಪ್ರತಿಷ್ಠಿತ ಕಾಲೇಜುಗಳ ವಿದ್ಯಾರ್ಥಿಗಳಾಗಿದ್ದ ಮನೋಜ್ (21) ಅಭಿಲಾಷ್ (21) ನವೀನ್ (21) ಮೃತಪಪಟ್ಟ ದುರ್ದೈವಿಗಳು. ಅಪಘಾತದ ತೀವ್ರತೆಗೆ ಮನೋಜ್ ಮತ್ತು ಅಭಿಲಾಷ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ನವೀನ್ ಅವರನ್ನು ನೆಲಮಂಗಲದ ಸರ್ಕಾರಿ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಅವರು ಕೊನೆಯುಸಿರೆಳೆದಿದ್ದಾರೆ ಎಂದು ತಿಳಿದುಬಂದಿದ್ದು, ಈ ಘಟನೆಗೆ ಸಂಬಂಧಿಸಿದಂತೆ ಕುದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ನೇಪಾಳ ಮಾಜಿ ಪ್ರಧಾನಿ ಶರ್ಮಾ ಒಲಿ ಬಂಧನ

ಪುಟ ೧➔ ಭಕ್ತಪುರದಲ್ಲಿ ಒಲಿ ಅವರನ್ನು ವಶಕ್ಕೆ ಪಡೆದ ಪೊಲೀಸರು, ನಂತರ ಹೃದಯ ಮತ್ತು ಮೂತ್ರಪಿಂಡದ ಸಮಸ್ಯೆಗಳ ಕಾರಣ ತ್ರಿಭುವನ್ ವಿಶ್ವವಿದ್ಯಾಲಯದ ಬೋಧನಾ ಆಸ್ಪತ್ರೆಗೆ ದಾಖಲಿಸಿದರು. ಲೇಖಕ್ ಅವರನ್ನು ಸೂರ್ಯವಿನಾಯಕದ ಅವರ ನಿವಾಸದಲ್ಲಿ ಬಂಧಿಸಲಾಯಿತು. ಇಬ್ಬರೂ ಪ್ರಸ್ತುತ ಕಠ್ಮಂಡು ಜಿಲ್ಲಾ ಪೊಲೀಸರ ವಶದಲ್ಲಿದ್ದಾರೆ. ಸಿಪಿಎನ್-ಯುಎಂಎಲ್ ಪಕ್ಷ ಒಲಿ ಬಿಡುಗಡೆಗೆ ಆಗ್ರಹಿಸಿ ದೇಶಾದ್ಯಂತ ಪ್ರತಿಭಟನೆ ನಡೆಸುವುದಾಗಿ ಘೋಷಿಸಿದೆ. ತನಿಖೆ ಆರಂಭಿಸಲು ಭಾನುವಾರ ಇಬ್ಬರನ್ನೂ ಕಠ್ಮಂಡು ಜಿಲ್ಲಾ ನ್ಯಾಯಾಲಯಕ್ಕೆ ಹಾಜರುಪಡಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ.

ಜೋಡೆತ್ತಿನ ಗಾಡಿ ಓಟದ ಸ್ಪರ್ಧೆ

ಚಿಕ್ಕಮಗಳೂರು: ಕೊಲ್ಲಾಪುರದಮ್ಮನ ಜಾತ್ರಾ ಮಹೋತ್ಸವ ಪ್ರಯುಕ್ತ ನಗರದ ಕೋಟೆ ಸಮೀಪದ ಏರ್‌ಪೋರ್ಟ್ ಮೈದಾನದಲ್ಲಿ ಏಪ್ರಿಲ್ 3ರಂದು ಅಂತಾರಾಜ್ಯ ಮಟ್ಟದ ಜೋಡಿತ್ತಿನ ಗಾಡಿ ಓಟದ ಸ್ಪರ್ಧೆಯಲ್ಲಿ ಆಯೋಜಿಸಲಾಗಿದೆ. ವಿಜೇತ ತಂಡಕ್ಕೆ ಪ್ರಥಮ 2 ಲಕ್ಷ ರೂ., ದ್ವಿತೀಯ 1.50 ಲಕ್ಷ, ತೃತೀಯ 1 ಲಕ್ಷ ರೂ. ಹಾಗೂ ಚತುರ್ಥ ಸ್ಥಾನಕ್ಕೆ 50 ಸಾವಿರ ನಗದು ಬಹುಮಾನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್: 8217454263, 9632455504, 6363760026, 9591611297 ಸಂಪರ್ಕಿಸಬಹುದು.

ಹುಸಿ ಬಾಂಬ್ ಬೆದರಿಕೆ: ಆರೋಪಿ ಬಂಧನ

ಮೈಸೂರು: ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಸಂದೇಶಗಳನ್ನು ಕಳುಹಿಸಿ ರಾಜ್ಯದಲ್ಲಿ ಆತಂಕ ಸೃಷ್ಟಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ದೆಹಲಿ ಪೊಲೀಸರು ಮೈಸೂರಿನಲ್ಲಿ ಬಂಧಿಸಿದ್ದಾರೆ.

ಮೈಸೂರಿನ ಬೃಂದಾವನ ಬಡಾವಣೆಯ 2ನೇ ಹಂತ, 6ನೇ ಕ್ರಾಸ್‌ನಲ್ಲಿರುವ ಮನೆಯೊಂದರಿಂದ ಕಾರ್ಯಾಚರಣೆ ನಡೆಸುತ್ತಿದ್ದ ಶ್ರೀನಿವಾಸ್ ಅಲಿಯಾಸ್ ಶ್ರೀನಿವಾಸ್ ಲೂಯಿಸ್ ಬಂಧಿತ ಆರೋಪಿ. ಈತ ದೇಶದ ನಾನಾ ಭಾಗಗಳಿಗೆ ಒಟ್ಟು 1,100ಕ್ಕೂ ಹೆಚ್ಚು ಬಾಂಬ್ ಬೆದರಿಕೆ ಇಮೇಲ್ ಮಾಡಿ, ವಿಧ್ವಂಸಕ ಕೃತ್ಯ ನಡೆಸುವ ಆತಂಕ ಸೃಷ್ಟಿಸಿದ್ದ. ನ್ಯಾಯಾಲಯಗಳು, ವಿವಿಧ ನಗರಗಳ ಪ್ರತಿಷ್ಠಿತ ಶಾಲೆ-ಕಾಲೇಜುಗಳು, ಸರ್ಕಾರಿ ಕಚೇರಿಗಳು ಸೇರಿದಂತೆ ರೈಲು ನಿಲ್ದಾಣ, ವಿಮಾನ ನಿಲ್ದಾಣಕ್ಕೂ ಕೂಡ ಬಾಂಬ್ ಇಟ್ಟಿರುವ ಬಗ್ಗೆ ಕರೆ ಮಾಡುವುದು, ಇಮೇಲ್ ಮಾಡುವುದನ್ನು ಮಾಡಿದ್ದ.

ಬೆದರಿಕೆ ಸಂದೇಶಗಳನ್ನು ಕಳುಹಿಸಿ ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಿದ್ದ. ಒಂದೇ ತಿಂಗಳಲ್ಲಿ ಹಲವು ಬಾರಿ ಇಂತಹ ಸಂದೇಶಗಳನ್ನು ರವಾನಿಸಿದ್ದ ಆರೋಪಿ ಈ ಕೃತ್ಯವನ್ನು ನಿಗೂಢವಾಗಿ ಮುಂದುವರಿಸುತ್ತಿದ್ದ. ಬಾಂಬ್ ಬೆದರಿಕೆಯ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆಯನ್ನು ತೀವ್ರಗೊಳಿಸಲಾಗಿತ್ತು. ಖಚಿತ ಮಾಹಿತಿ ಮೇಲೆ ದೆಹಲಿ ಪೊಲೀಸ್ ತಂಡವು ಮೈಸೂರಿನ ವಿ.ವಿ ಪುರಂ ಪೊಲೀಸ್ ಠಾಣೆಯ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ.

ಭದ್ರತೆಗೆ ಸಂಬಂಧಿತ ಚುನಾವಣೆ

ಪುಟ ೧➔ ಮಮತಾ ಬ್ಯಾನರ್ಜಿ ಇದುವರೆಗೂ ಬಲಿಪಶು ಕಾರ್ಡ್ ರಾಜಕೀಯ ಮಾಡಿಕೊಂಡು ಬಂದವರು. ಕೆಲವೊಮ್ಮೆ ಈಕೆ ತನ್ನ ಗಾಯದ ಬಗ್ಗೆ ಮಾತನಾಡಿದರೆ, ಹಲವಾರು ಬಾರಿ ಚುನಾವಣಾ ಆಯೋಗವನ್ನು ನಿಂದಿಸುತ್ತಿದ್ದರು ಮತ್ತು ಹಲವು ಬಾರಿ ಇದೇ ರೀತಿಯ ಇನ್ನಿತರ ನೆಪ ಮುಂದಿಟ್ಟು ಸಾಂವಿಧಾನಿಕ ಸಂಸ್ಥೆಗಳನ್ನು ನಿಂದಿಸುತ್ತಿದ್ದರು. ಆದರೆ ಬಂಗಾಳದ ಜನರಿಗೀಗ ಮಮತಾ ದೀದಿಯ ಸಂತ್ರಸ್ತ-ಕಾರ್ಡ್ ರಾಜನೀತಿಯ ಮರ್ಮ ಚೆನ್ನಾಗಿ ಅರಿವಾಗಿದೆ ಎಂದರು.

ಮತಕ್ಕಾಗಿ ಎಸ್‌ಐಆರ್‌ಗೆ ವಿರೋಧ: ಚುನಾವಣಾ ಆಯೋಗದಿಂದ ಇತರ ರಾಜ್ಯಗಳಲ್ಲೂ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ನಡೆದಿದೆ. ಆದರೆ ಎಲ್ಲೂ ಪಶ್ಚಿಮ ಬಂಗಾಳದ ಸಿಎಂ ಮಮತಾ ಬ್ಯಾನರ್ಜಿಯಂತೆ ಅನಗತ್ಯ ವಿರೋಧ ವ್ಯಕ್ತಪಡಿಸಿದವರಿಲ್ಲ. ಮಮತಾ ಬ್ಯಾನರ್ಜಿ ಟಿಎಂಸಿಯ ಅಲ್ಪಸಂಖ್ಯಾತರ ವೋಟ್ ಬ್ಯಾಂಕ್ ಕಾಪಾಡುವ ಏಕೈಕ ಉದ್ದೇಶದಿಂದ ಎಸ್‌ಐಆರ್‌ಗೆ ವಿರೋಧಗಳನ್ನು ಸೃಷ್ಟಿಸಿದ್ದಾರೆ. ಮೇಲಾಗಿ ಚುನಾವಣಾ ಆಯೋಗದಂತಹ ಸಾಂವಿಧಾನಿಕ ಸಂಸ್ಥೆಗಳನ್ನು ನಿಂದಿಸುವುದು ಬಂಗಾಳಿ ಸಂಸ್ಕೃತಿಯಲ್ಲ ಎಂದು ಸಚಿವ ಶಾ ಗುಡುಗಿದರು.

ಅಕ್ರಮ ನುಸುಳುಕೋರರು ದೇಶಕ್ಕೆ ಅಪಾಯಕಾರಿ: ಅಸ್ಸಾಂ ಗಡಿ ಮುಖೇನ ದೇಶಕ್ಕೆ ಅಕ್ರಮವಾಗಿ ನುಸುಳುವ ನುಸುಳುಕೋರರ ಪಿಡುಗು ಬಿಜೆಪಿ ಅಧಿಕಾರಕ್ಕೆ ಬಂದ ನಂತರ ನಿಂತಿದೆ. ಅಕ್ರಮ ನುಸುಳುಕೋರರಿಗೆ ಇದೀಗ ಉಳಿದಿರುವ ಅಂತಿಮ ದಾರಿ ಪಶ್ಚಿಮ ಬಂಗಾಳ ಮಾತ್ರ. ಇಲ್ಲಿಂದಲೇ ಗಡಿ ನುಸುಳುವ ಅಕ್ರಮ ನುಸುಳುಕೋರರು ದೇಶಾದ್ಯಂತ ವಿವಿಧ ರಾಜ್ಯಗಳಲ್ಲಿ ಚದುರಿಬಿಡುತ್ತಾರೆ. ಹಾಗಾಗೀ ಬಂಗಾಳದ ಚುನಾವಣೆ ಬಂಗಾಳದ ಪಾಲಿಗೆ ಮಾತ್ರವಲ್ಲ ಇಡೀ ದೇಶದ ಪಾಲಿಗೆ ಮಹತ್ವದ ಚುನಾವಣೆಯಾಗಿದೆ. ಇಡೀ ದೇಶದ ಭದ್ರತೆಯು ಬಂಗಾಳದ ಚುನಾವಣೆ ಜತೆ ಲಿಂಕ್ ಹೊಂದಿದೆ. ಪಶ್ಚಿಮ ಬಂಗಾಳ ಗಡಿಗಳ ಮೂಲಕ ನಡೆಯುತ್ತಿರುವ ಅಕ್ರಮ ನುಸುಳುವಿಕೆಯು ರಾಷ್ಟ್ರೀಯ ಭದ್ರತೆಗೆ ಆತಂಕಕಾರಿಯಾಗಿದೆ. ಈಶಾನ್ಯ ವಲಯವನ್ನು ಭಾರತದ ಇತರ ಪ್ರದೇಶಗಳೊಂದಿಗೆ ಜೋಡಿಸುವ ನಿರ್ಣಾಯಕ ಸಿಲಿಗುರಿ ಕಾರಿಡಾರ್‌ನ ಭದ್ರತೆ ಕೂಡ ಟಿಎಂಸಿ ಸರಕಾರದ ತುಷ್ಟೀಕರಣ-ವೋಟ್‌ಬ್ಯಾಂಕ್ ರಾಜನೀತಿಯಿಂದಾಗಿ ಇಂದು ಗಂಡಾಂತರದಲ್ಲಿದೆ ಎಂದು ಸಚಿವ ಶಾ ಕಟು ಟೀಕಾಪ್ರಹಾರ ಮಾಡಿದರು.

ಗಡಿಗೆ ಬೇಲಿ ಹಾಕಲೂ ಬಿಡದ ಮಮತಾ

ಪುಟ ೧➔ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಬರೇ 45ದಿನಗಳೊಳಗೆ ಅಗತ್ಯ ಜಮೀನನ್ನು ಕೇಂದ್ರ ಸರಕಾರಕ್ಕೆ ಹಸ್ತಾಂತರಿಸಲಿದೆ ಎಂದು ಸಚಿವ ಶಾ ಭರವಸೆ ನೀಡಿದರು.



2026ರ ಚುನಾವಣೆಯು ಭಯ ಮತ್ತು ವಿಶ್ವಾಸ ನಡುವಣ ಆಯ್ಕೆಯಾಗಿದೆ. ಬಂಗಾಳದ ಜನತೆ ಇವರೆಡರಲ್ಲಿ ಒಂದನ್ನು ಆಯ್ಕೆ ಮಾಡಬೇಕು. ಕಳೆದ 15 ವರ್ಷಗಳಿಂದ ರಾಜ್ಯದಲ್ಲಿ ಭಯ, ಭ್ರಷ್ಟಾಚಾರ, ತುಷ್ಟೀಕರಣ ರಾಜನೀತಿಗಳೇ ಮೇಳೈಸಿವೆ. ಮಮತಾ ಬ್ಯಾನರ್ಜಿ ಸುಳ್ಳು ಮತ್ತು ಹಿಂಸಾಚಾರ ಆಧಾರಿತ ಹೊಸ ರೀತಿಯ ರಾಜನೀತಿಯನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಟಿಎಂಸಿ ಅಧಿಕಾರ ಹಿಡಿದದ್ದೂ ಸುಳ್ಳು, ಭಯ ಹುಟ್ಟಿಸುವಿಕೆ ಮತ್ತು ಹಿಂಸಾಚಾರಗಳ ಬಲದಿಂದಲೇ. 2011ರಿಂದ ಬಿಜೆಪಿ ಇದರ ವಿರುದ್ಧ ಹೋರಾಡುತ್ತಲೇ ಬಂದಿದೆ ಎಂದು ಅಮಿತ್ ಶಾ ವಿವರಿಸಿದರು.

ಏಕತೆಯಿಂದ ಬಿಕ್ಕಟ್ಟು ಎದುರಿಸಿ

ಪುಟ ೧➔ ಜೇವರ್‌ನಲ್ಲಿ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟಿಸಿ ಪ್ರಧಾನಿ ಮೋದಿ ಮಾತನಾಡಿದರು. ಇಂದಿನ ಕಾರ್ಯಕ್ರಮವು ವಿಕಸಿತ ಉತ್ತರಪ್ರದೇಶ ಮತ್ತು ವಿಕಸಿತ ಭಾರತದತ್ತ ಯಾನದಲ್ಲಿ ಹೊಸ ಅಧ್ಯಾಯವೊಂದರ ಆರಂಭವನ್ನು ಸಾಂಕೇತಿಸಿದೆ ಎಂದು ನೆಮ್ಮದಿ ವ್ಯಕ್ತಪಡಿಸಿದರು.

ಧನಾತ್ಮಕ-ವ್ಯಾಪಕ ಚರ್ಚೆ: ಪಶ್ಚಿಮ ಏಷ್ಯಾ ಸನ್ನಿವೇಶ ಬಗ್ಗೆ ತಾನು ಸಂಸತ್ತಿನಲ್ಲಿ ವಿವರವಾಗಿ ಚರ್ಚಿಸಿದ್ದೇನೆ ಮತ್ತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ತೀರಾ ಧನಾತ್ಮಕ ಮತ್ತು ವ್ಯಾಪಕ ಚರ್ಚೆ ನಡೆಸಿದ್ದೇನೆ. ಇಂತಹ ಸನ್ನಿವೇಶದಲ್ಲಿ ರಾಜಕೀಯ ಪಕ್ಷಗಳು ಮುಖ್ಯವಾಗಿ ಉತ್ತರಪ್ರದೇಶದ ರಾಜಕೀಯ ಪಕ್ಷಗಳು ತೀರಾ ಬೇಜವಾಬ್ದಾರಿಯ ಹೇಳಿಕೆಗಳನ್ನು ನೀಡುವುದರಿಂದ ಹಿಂದೆ ಸರಿಯಬೇಕು ಎಂದು ಮನವಿ ಮಾಡಿದರು.

ದೇಶಕ್ಕೆ ಘಾಸಿ ಮಾಡುವಂತಹ ಆರೋಪ ಮಾಡುವುದರಿಂದ ಸದರಿ ವ್ಯಕ್ತಿಗಳಿಗೆ ರಾಜಕೀಯ ಚರ್ಚೆಗಳಲ್ಲಿ ಕೆಲವು ಅಂಕಗಳು ಲಭಿಸಬಹುದು. ಆದರೆ ಇವರನ್ನು ದೇಶವಾಸಿ ಜನತೆ ಎಂದಿಗೂ ಕ್ಷಮಿಸುವುದಿಲ್ಲ ಎಂದು ಎಚ್ಚರಿಸಿದರು. ಕೋವಿಡ್ ಪಿಡುಗಿನ ಸಂದರ್ಭ ಪ್ರಚಾರ ಮಾಡಲಾಗಿದ್ದ ತಪ್ಪು ಮಾಹಿತಿಗಳನ್ನು ಮತದಾರರು ಒಗ್ಗಟ್ಟಿನಿಂದ ತಿರಸ್ಕರಿಸಿದ್ದಾರೆಂದು ಪ್ರಧಾನಿ ನೆನಪಿಸಿದರು.

ಜನಸಾಮಾನ್ಯರಿಗೂ ಪೂರಕ ವಾಯುಯಾನ ನೀತಿ: ಸರಕಾರದ ವಿಮಾನಯಾನ ನೀತಿಯತ್ತ ಗಮನ ಸೆಳೆದ ಪ್ರಧಾನಿ, ಬಿಜೆಪಿ ನೇತೃತ್ವದ ಸರಕಾರ ಜನರಿಗೆ ಸುಗಮ ವಿಮಾನ ಪಯಣಕ್ಕೆ ಪೂರಕ ಅವಕಾಶ ಕಲ್ಪಿಸಿದೆ ಮತ್ತು ವಿಮಾನ ನಿಲ್ದಾಣಗಳ ಮೂಲಸೌಕರ್ಯ ವಿಸ್ತರಣೆಗೆ ಆದ್ಯತೆ ನೀಡಿದೆ.

ವಿಮಾನ ಪಯಣವು ದೇಶದ ಜನಸಾಮಾನ್ಯ ಕುಟುಂಬಗಳಿಗೂ ಸುಗಮವಾಗಬೇಕೆಂಬ ಆಶಯದಿಂದಲೇ ಉಡಾನ್ ಸ್ಕೀಮ್‌ನ್ನು ಸರಕಾರ ಆರಂಭಿಸಿತ್ತು. ತತ್‌ಪರಿಣಾಮ ಕಳೆದ ಕೆಲವು ವರ್ಷಗಳಲ್ಲಿ ಈ ಸ್ಕೀಮ್‌ನಡಿ 1.6ಕೋಟಿ ಜನರು ಕೈಗೆಟುಕುವ ದರದಲ್ಲಿ ವಿಮಾನ ಯಾನ ಕೈಗೊಂಡಿದ್ದಾರೆ. ಮುಂಬರುವ ವರ್ಷಗಳಲ್ಲಿ ದೇಶದ ಸಣ್ಣ ಪುಟ್ಟ ನಗರಗಳಲ್ಲಿ ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ, 200 ಹೆಲಿಪ್ಯಾಡ್‌ಗಳ ನಿರ್ಮಾಣದ ಯೋಜನೆಗಳು ಸರಕಾರದ ಚಿಂತನೆಯಲ್ಲಿದ್ದು, ಸುಮಾರು 29ಸಾವಿರ ಕೋಟಿ ರೂ.ಅಂಗೀಕೃತ ಅಂದಾಜು ವೆಚ್ಚದಲ್ಲಿ ಈ ಸ್ಕೀಮ್‌ನ್ನು ಸರಕಾರ ವಿಸ್ತರಿಸಿದೆ ಎಂದು ಮಾಹಿತಿ ನೀಡಿದರು. ಉತ್ತರಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ್ ಯೋಗಿ, ನಾಗರಿಕ ವಿಮಾನಯಾನ ಸಚಿವ ಕಿಂಜರಪು ರಾಮ್ ಮೋಹನ್ ನಾಯ್ಡು ಮತ್ತಿತರ ಗಣ್ಯರು ಪ್ರಧಾನಿ ಜತೆಗಿದ್ದರು.

ಆರ್ಥಿಕ ಚಟುವಟಿಕೆಗೆ ವೇಗ

ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ವಲಯದ ಆರ್ಥಿಕ ಚಟುವಟಿಕೆಗೆ ವೇಗ ನೀಡಲಿದೆ ಮತ್ತು ಪಶ್ಚಿಮ ಉತ್ತರಪ್ರದೇಶದ ರೈತರು, ಸಣ್ಣ ವ್ಯಾಪಾರಿಗಳು ಹಾಗೂ ಯುವಶಕ್ತಿಗೆ ಹೊಸ ಅವಕಾಶಗಳನ್ನೂ ಸೃಜಿಸಲಿದೆ ಎಂದು ಭರವಸೆ ವ್ಯಕ್ತಪಡಿಸಿದರು. ರಾಜ್ಯದ ಪ್ರಮುಖ ವಿಪಕ್ಷ ಸಮಾಜವಾದಿ ಪಕ್ಷವನ್ನು ತರಾಟೆಗೆತ್ತಿಕೊಂಡು, ನೋಯ್ಡಾವು ವಿಪಕ್ಷಕ್ಕೆ ಸುಲಿಗೆಗಾಗಿ ಎಟಿಎಂ ಆಗಿತ್ತು. ಆದರೆ ಬಿಜೆಪಿ ಆಡಳಿತದಲ್ಲೀಗ ನೋಯ್ಡಾವು ಅಭಿವೃದ್ಧಿಯ ಶಕ್ತಿಶಾಲಿ ಇಂಜಿನ್ ಆಗಿ ಹೊರಹೊಮ್ಮುತ್ತಿದೆ. ಹಿಂದಿನ ಸರಕಾರಗಳಿಂದ ನಿರ್ಲಕ್ಷ್ಯಕ್ಕೀಡಾಗಿದ್ದ ನೋಯ್ಡಾವಿಂದು ಜಗತ್ತನ್ನೇ ಎದುರುಗೊಳ್ಳಲು ಸಜ್ಜಾಗಿದೆ, ತನ್ಮೂಲಕ ಸ್ವಾವಲಂಬೀ ಭಾರತದ ಸ್ಫೂರ್ತಿಯನ್ನು ಪ್ರತಿಫಲಿಸಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಜನರ ಸುರಕ್ಷೆಗೆ ಅಗತ್ಯ ಕ್ರಮ

ಪುಟ ೧➔ ಕಚ್ಚಾತೈಲ ಮತ್ತು ಅನಿಲಗಳಿಗೆ ಭಾರತವು ಸಂಘರ್ಷ ಸಂತ್ರಸ್ತ ವಲಯಗಳನ್ನು ಅವಲಂಬಿಸಿದೆ. ಈ ವಿಚಾರದಲ್ಲಿ ದೇಶದ ಕುಟುಂಬಗಳು ಮತ್ತು ರೈತರಿಗೆ ಹೊರೆಯಾಗಕೂಡದೆಂದು ಸರಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ.

ವಚನ ಸಾಹಿತ್ಯಕ್ಕೆ ಕೊಡುಗೆ ಅಪಾರ: ಶಿರಿಯಣ್ಣವರ

ಧಾರವಾಡ: ಸ್ಥಳೀಯ ಚನ್ನಬಸವೇಶ್ವರ ನಗರದ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಸಭಾಂಗಣದಲ್ಲಿ ಶಿವಶರಣ ಅಲ್ಲಮಪ್ರಭು ಜಯಂತಿ ಜರುಗಿತು. ನಿವೃತ್ತ ಅಧಿಕಾರಿ ಮಡಿವಾಳಪ್ಪ ಶಿರಿಯಣ್ಣವರ ಮಾತನಾಡಿ, 12ನೇ ಶತಮಾನದ ಅನುಭವ ಮಂಟಪದ ಪೀಠಾಧ್ಯಕ್ಷ ಅಲ್ಲಮಪ್ರಭುಗಳು ವಚನ ಸಾಹಿತ್ಯ ನೀಡಿದ ಕೊಡುಗೆಸ್ಮರಿಸಿದರು. ವೈರಾಗ್ಯನಿಧಿ ಅಕ್ಕಮಹಾದೇವಿ ವೈರಾಗ್ಯದ ಕುರಿತು ವಿಶ್ವಕ್ಕೆ ಪರಿಚಯ ಮಾಡಿದ ಶ್ರೇಯಸ್ಸು ಹೊಂದಿದ್ದು, ಯಾವುದೇ ಸಂಪತ್ತಿಗೆ ಆಸೆ ಮಾಡದೆ, ಜ್ಞಾನಕ್ಕೆ ಒತ್ತು ನೀಡಿದ್ದಾಗಿ ತಿಳಿಸಿದರು. ಮಹಾಸಭಾದ ಉಪಾಧ್ಯಕ್ಷ ಶಂಕರ ಕುಂಬಿ, ಸ್ತ್ರೀ ಸಮಾನತೆ, ಕಾಯಕ ಹಾಗೂ ದಾಸೋಹ, ಮಾನವೀಯ ಮೌಲ್ಯಗಳಿಗೆ ಆದ್ಯತೆ ನೀಡಿದ 12ನೇ ಶತಮಾನವು ಶರಣರ ಸುವರ್ಣಯುಗ ಎಂದರು. ಕಾರ್ಯಕ್ರಮದಲ್ಲಿ ನಿರ್ದೇಶಕ ಬಸವರಾಜ ಗೋಲಪ್ಪನವರ, ಚಂದ್ರಶೇಖರ ಅಮೀನಗಡ ಇದ್ದರು. ಪ್ರಧಾನ ಕಾರ್ಯದರ್ಶಿ ಶಿವಶರಣ ಕಲಬಶೆಟ್ಟರ ಸ್ವಾಗತಿಸಿದರು. ಡಾ. ಸುವರ್ಣಾ ಬಿರಾದಾರ ನಿರೂಪಿಸಿ, ವಂದಿಸಿದರು.

ಹುಬ್ಬಳ್ಳಿ — ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	1801	5290
ಒಣ ಮೆಣಸಿನಕಾಯಿ	1000	63111
ಹೆಸರುಕಾಳು	1495	7086
ಜೋಳ	1105	4216
ಈರುಳ್ಳಿ	500	2100
ಆಲೂಗಡ್ಡೆ	1400	1800
ಸೋಯಾಬಿನ್	3011	5500
ಗೋಧಿ	1610	4026

CHANGE OF NAME

I, **MANJUNATH MANNERKAR** (old name) Resident of Main Road, Arvatagi, House No 1, Aravatagi, Dharwad, Karnataka - 580007, have changed my name as **MANJUNATH SURESH MANNERKAR** (new name) henceforth I will be called and recognized by new name for all future purposes, dated: 28/03/2026.

CHANGE OF NAME

I, **SAGARA BAGADI** (old name) Resident of Chetana Colony, Hosur, Unkal Bypass Road, Vidyanagar Hubli 580021, have changed my name as **SAGAR BAGADI** (new name) henceforth I will be called and recognized by new name for all future purposes, dated: 28/03/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಜಾಹೀರಾತಿಗಾಗಿ ಸಂಪರ್ಕಿಸಿ
8892497927

ನಗರ ಯೋಜನಾ ಪ್ರಾಧಿಕಾರ ಕಾರ್ಯಾಲಯ, ಗಂಗಾವತಿ

ಸಂ. ನಯೋಪ್ರಾಗಂ/ತಾಂತ್ರಿಕ/ಭೂ.ಉ.ಬ/2025-26 ದಿನಾಂಕ:- 23/02/2026

:- ಸಾರ್ವಜನಿಕ ಪ್ರಕಟಣೆ :-

ಗಂಗಾವತಿ ನಗರ ಯೋಜನಾ ಪ್ರಾಧಿಕಾರದ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕು, ವಡ್ಡರಹಟ್ಟಿ ಗ್ರಾಮದ ರಿ.ಸ.ನಂ.28/3 ರಲ್ಲಿ ಕ್ಷೇತ್ರ 02 ಎಕರೆ 10ಗುಂಟೆ ಪೈಕಿ 02 ಗುಂಟೆ 'ಅ' ಖರಾಬು ಹೊರತುಪಡಿಸಿ, ಉಳಿದ ಕ್ಷೇತ್ರ 02ಎಕರೆ 08ಗುಂಟೆ ಹಾಗೂ ರಿ.ಸ.ನಂ. 28/7 ರಲ್ಲಿ ಕ್ಷೇತ್ರ 01ಎಕರೆ 05ಗುಂಟೆ ಪೈಕಿ 02ಗುಂಟೆ 'ಅ' ಖರಾಬು ಹೊರತುಪಡಿಸಿ, ಉಳಿದ ಕ್ಷೇತ್ರ 01ಎಕರೆ 03ಗುಂಟೆ ಒಟ್ಟು ಕ್ಷೇತ್ರ 03ಎಕರೆ 15ಗುಂಟೆ ಪೈಕಿ 04ಗುಂಟೆ 'ಅ' ಖರಾಬು ಹೊರತುಪಡಿಸಿ, ಉಳಿದ ಕ್ಷೇತ್ರ 03ಎಕರೆ 11 ಗುಂಟೆ ಜಮೀನು ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆ ಪರಿಷ್ಕೃತ-01 ರ ನಕ್ಷೆಯಲ್ಲಿ ಕೈಗಾರಿಕೆ ವಲಯದಲ್ಲಿ ಕಾಯ್ದಿರಿಸಲಾಗಿದೆ. ಆದರೆ ಅರ್ಜಿದಾರರಾದ ಎನ್. ಸೂರಿಬಾಬು ಸಾ:ವಡ್ಡರಹಟ್ಟಿ ಇವರು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕು, ವಡ್ಡರಹಟ್ಟಿ ಗ್ರಾಮದ ರಿ.ಸ.ನಂ.28/3 ರಲ್ಲಿ ಕ್ಷೇತ್ರ 02ಎಕರೆ 10ಗುಂಟೆ ಪೈಕಿ 02ಗುಂಟೆ 'ಅ' ಖರಾಬು ಹೊರತುಪಡಿಸಿ, ಉಳಿದ ಕ್ಷೇತ್ರ 02 ಎಕರೆ 08 ಗುಂಟೆ ಹಾಗೂ ರಿ.ಸ.ನಂ. 28/7 ರಲ್ಲಿ ಕ್ಷೇತ್ರ 01ಎಕರೆ 05ಗುಂಟೆ ಪೈಕಿ 02ಗುಂಟೆ 'ಅ' ಖರಾಬು ಹೊರತುಪಡಿಸಿ, ಉಳಿದ ಕ್ಷೇತ್ರ 01ಎಕರೆ 03ಗುಂಟೆ ಒಟ್ಟು ಕ್ಷೇತ್ರ 03ಎಕರೆ 15ಗುಂಟೆ ಪೈಕಿ 04ಗುಂಟೆ 'ಅ' ಖರಾಬು ಹೊರತುಪಡಿಸಿ, ಉಳಿದ ಕ್ಷೇತ್ರ 03ಎಕರೆ 11ಗುಂಟೆ ಜಮೀನನ್ನು ಕೈಗಾರಿಕಾ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಈ ಕಛೇರಿಗೆ ಅರ್ಜಿಯನ್ನು ಈ ಕೆಳಕಾಣಿಸಿದ ಸಾರ್ವಜನಿಕ ಹಿತಾಸಕ್ತಿ ಅಂಶಗಳನ್ನು ನೀಡಿರುತ್ತಾರೆ.

1) ಸದರಿ ಪ್ರದೇಶವನ್ನು ವಸತಿ ಉದ್ದೇಶಕ್ಕಾಗಿ ಪರಿವರ್ತಿಸಿದರೆ ಸ್ಥಳೀಯ ನಾಗರೀಕರಿಗೆ ವಸತಿ ಬೆಳವಣಿಗೆಗೆ ಅನುಕೂಲವಾಗುವುದು.
2) ಸದರಿ ಪ್ರದೇಶವನ್ನು ವಸತಿ ಉದ್ದೇಶಕ್ಕಾಗಿ ಪರಿವರ್ತಿಸಿದರೆಗಂಗಾವತಿ ಗ್ರಾಮವು ಅಭಿವೃದ್ಧಿ ಹೊಂದಲು ಅನುಕೂಲವಾಗುವುದು.
3) ಸದರಿ ಪ್ರದೇಶವನ್ನು ವಸತಿ ಉದ್ದೇಶಕ್ಕಾಗಿ ಪರಿವರ್ತಿಸಿದರೆ ಪರಿಸರ ಮಾಲಿನ್ಯ ಉಂಟಾಗದಂತೆ ಎಚ್ಚರವಹಿಸಲಾಗುವುದು.

ಆದ್ದರಿಂದ ಈ ಮೇಲ್ಕಾಣಿಸಿದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕು, ವಡ್ಡರಹಟ್ಟಿ ಗ್ರಾಮದ ರಿ.ಸ.ನಂ.28/3 ರಲ್ಲಿ ಕ್ಷೇತ್ರ 02ಎಕರೆ 10ಗುಂಟೆ ಪೈಕಿ 02ಗುಂಟೆ 'ಅ' ಖರಾಬು ಹೊರತುಪಡಿಸಿ, ಉಳಿದ ಕ್ಷೇತ್ರ 02ಎಕರೆ 08 ಗುಂಟೆ ಹಾಗು ರಿ.ಸ.ನಂ. 28/7 ರಲ್ಲಿ ಕ್ಷೇತ್ರ 01ಎಕರೆ 05ಗುಂಟೆ ಪೈಕಿ 02ಗುಂಟೆ 'ಅ' ಖರಾಬು ಹೊರತುಪಡಿಸಿ, ಉಳಿದ ಕ್ಷೇತ್ರ 01 ಎಕರೆ 03ಗುಂಟೆ ಒಟ್ಟು ಕ್ಷೇತ್ರ 03ಎಕರೆ 15ಗುಂಟೆ ಪೈಕಿ 04ಗುಂಟೆ 'ಅ' ಖರಾಬು ಹೊರತುಪಡಿಸಿ, ಉಳಿದ ಕ್ಷೇತ್ರ 03ಎಕರೆ 11ಗುಂಟೆ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ(1)(ಸಿ) ರನ್ವಯ ಕೈಗಾರಿಕೆ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆಯನ್ನು ಮಾಡಲು ಸಾರ್ವಜನಿಕರ ಸಲಹೆ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಲಿಖಿತ ಮೂಲಕ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಸದಸ್ಯ ಕಾರ್ಯದರ್ಶಿಗಳು, ನಗರ ಯೋಜನಾ ಪ್ರಾಧಿಕಾರ, ಗಂಗಾವತಿ ಇವರ ಹೆಸರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಛೇರಿಯ ಸಮಯದಲ್ಲಿ ಪ್ರಕಟಣೆ ನೀಡಿದ 15 ದಿನಗಳೊಳಗಾಗಿ ಸ್ವೀಕರಿಸಲಾಗುವುದು. 15 ದಿನ ಆದ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ಸದಸ್ಯ ಕಾರ್ಯದರ್ಶಿಗಳು,
ನಗರ ಯೋಜನಾ ಪ್ರಾಧಿಕಾರ ಗಂಗಾವತಿ.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಪಲ್ಪ್ ವುಡ್ ವಿಂಗ್, ಶಿವಮೊಗ್ಗ.

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಆರ್.ಟಿ.ಓ ಕಛೇರಿ ಹತ್ತಿರ, ಶಿವಮೊಗ್ಗ
ಸಂ/ಕ.ಅ.ಅ.ನಿ.ನಿ/ಕಾ.ನಿ/ಶಿಮೊ/ಎ-6/ಸಿ.ಆರ್-120/25-26/862 ದಿ:25.03.2026

ಸಂಕ್ಷಿಪ್ತ ಇ-ಬಿಡ್ ಪ್ರಕಟಣೆ

ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಶಿವಮೊಗ್ಗ ಇವರ ಅಧೀನದಲ್ಲಿರುವ ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ ಹಾಗೂ ಬೆಂಗಳೂರು ವಿಭಾಗಗಳ ವಿವಿಧ ನೆಡುತೋಪುಗಳಲ್ಲಿ ದೊರೆಯುವ ನೀಲಗಿರಿ / ಅಕೇಶೀಯಾ / ಸುಬಬೂಲ್ / ಕ್ಯಾಜುರಿನಾ ಮೆದುಮರಗಳನ್ನು ಮಾರಾಟ ಮಾಡುವ ಬಗ್ಗೆ ಕರ್ನಾಟಕ ರಾಜ್ಯದ ಅಥವಾ ಇನ್ನಿತರೆ, ಪಲ್ಪ್ & ಪೇಪರ್ / ರೇಯಾನ್ ಗ್ರೇಡ್ ಪಲ್ಪ್, ಎಂ.ಡಿ.ಎಫ್ ಬೋರ್ ತಯಾರಿಕಾ ಕಾರ್ಖಾನೆಗಳಿಂದ / ಸರಬರಾಜುದಾರರಿಂದ / ಇನ್ನಿತರೆ ಮೆದುಮರ ಬಳಕೆಯ ಕಾರ್ಖಾನೆಗಳಿಂದ / ಇ-ಪೋರ್ಟಲ್ ಮುಖಾಂತರ ಇ-ಟೆಂಡರ್ ಆಹ್ವಾನಿಸಲಾಗಿದೆ.

1. ಇ-ಟೆಂಡರ್ : ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in/ 2. ಇ-ಪ್ರೊಕರ್‌ಮೆಂಟ್ ಪೋರ್ಟಲ್ ನಲ್ಲಿ ಇ-ಟೆಂಡರ್ ಸ್ವೀಕರಿಸುವ ದಿನಾಂಕ 23.04.2026 ರ 17.30 ಘಂಟೆಯವರೆಗೆ.

ಬಿಡ್ಡಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಕಚೇರಿ ಕೆಲಸದ ದಿನಗಳಲ್ಲಿ ಮೇಲಿನ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಕಚೇರಿ ದೂರವಾಣಿ ಸಂಖ್ಯೆ 080-46010000, 080-68948777 ಅಥವಾ ಕಚೇರಿಯ ದೂರವಾಣಿ ಸಂಖ್ಯೆ 08182-272155 ಗಳಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/153/03/2101



ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್

ನೋಂದಾಯಿತ ಕಚೇರಿ: ಟೈಮ್ಸ್ ಸ್ಕ್ವೇರ್, ಯುನಿಟ್ ಸಂ. 3ಬಿ, 2ನೇ ಮಹಡಿ, ಮಿತ್ತಲ್ ಇಂಡಸ್ಟ್ರಿಯಲ್ ಎಸ್ಟೇಟ್ ಎದುರು, ಅಂಧೇರಿ- ಕುರ್ಲಾ ರಸ್ತೆ, ಮರೋಲ್ ನಾಕಾ, ಅಂಧೇರಿ ಪೂರ್ವ, ಮುಂಬೈ- 400059. ಶಾಖಾ ಕಚೇರಿ: 2/4, ಶಿರೂರು ಪಾರ್ಕ್, ಮೋದಿ ಹಾಸ್ಟೆಲ್ ಪಕ್ಕ, ವಿದ್ಯಾನಗರ, ಹುಬ್ಬಳ್ಳಿ- 580031

ನಿಯಮ 8(1)ರ ಅಡಿಯಲ್ಲಿ ಸ್ವಾಧೀನ ನೋಟಿಸ್

ಈ ಕೆಳಗೆ ಸಹಿ ಮಾಡಿರುವ ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ & ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002- ಇನ್ನು ಮುಂದೆ ಕಾಯ್ದೆ ಎಂದು ಕರೆಯಲಾಗುವುದು- ಮತ್ತು ಸೆಕ್ಷನ್ 13(12)ರ ಅಡಿಯಲ್ಲಿ ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ರೂಲ್-2002ರ ನಿಯಮಾವಳಿ 3ರ ಅನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕಲಂ (ಬಿ) ನಲ್ಲಿ ಹೆಸರಿಸಿರುವ ಸಾಲಗಾರರು ಮತ್ತ ಈ ಕೆಳಗೆ ಕಲಂ (ಸಿ) ಅಡಿಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕಗಳಂದು ಮತ್ತು ಕಲಂ (ಡಿ) ಅಡಿಯಲ್ಲಿ ಸೂಚಿಸಿರುವ ಬಾಕಿ ಮೊತ್ತವನ್ನು ಈ ನೋಟಿಸ್/ಗಳನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಪಾವತಿಸುವಂತೆ ಡಿಮ್ಯಾಂಡ್ ನೋಟಿಸ್ ನೀಡಿ ಗಮನ ಸೆಳೆಯಲಾಗಿತ್ತು.
ಸಾಲಗಾರರು ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕೆಳಗೆ ಸಹಿ ಮಾಡಿದ ಅಧಿಕಾರಿಯು ಮೇಲೆ ಹೇಳಿದ ಕಾಯ್ದೆಯ ಸೆಕ್ಷನ್ 13(4) ಮತ್ತು ಮೇಲೆ ಹೇಳಿದ (ಇ) ನಿಯಮಾವಳಿಯ ನಿಯಮ 3ರ ಅನ್ವಯ ಈ ಕೆಳಗೆ ಪ್ರತಿ ಖಾತೆಯ ಮುಂದೆ ವಿವರಿಸಲಾದ (ಎಫ್) ಭದ್ರತಾ ಆಸ್ತಿಗಳನ್ನು ವಶಕ್ಕೆ ಪಡೆದಿರುತ್ತಾರೆ.
ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಜನಸಾಮಾನ್ಯರಿಗೆ ಸಾಮಾನ್ಯವಾಗಿ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಈ ಕೆಳಗೆ ಕಲಂ (ಇ) ನಲ್ಲಿ ಹೆಸರಿಸಿರುವ ಈ ಆಸ್ತಿಯ ಸಂಬಂಧ ಯಾವುದೇ ವಹಿವಾಟು ನಡೆಸಬಾರದು ಹಾಗೂ ಈ ಆಸ್ತಿಗೆ ಸಂಬಂಧಿಸಿದ ಯಾವುದೇ ವ್ಯವಹಾರವು ಕಲಂ (ಡಿ) ನಲ್ಲಿ ಹೆಸರಿಸಿರುವ ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್‌ನ ಮೊತ್ತ, ಬಡ್ಡಿ ಹಾಗೂ ಇತರ ಶುಲ್ಕಗಳಿಗೆ ಅನುಸಾರವಾಗಿರುತ್ತದೆ.
ವೆಚ್ಚಗಳು, ಶುಲ್ಕಗಳು ಮತ್ತು ಖರ್ಚುಗಳ ಸಹಿತ ಮಾರಾಟ ಅಧಿಸೂಚನೆಗಿಂತ ಮುನ್ನ ಸಂಪೂರ್ಣ ಮೊತ್ತವನ್ನು ಪಾವತಿಸಿ ಭದ್ರತಾ ಆಸ್ತಿಗಳನ್ನು ಮರುಸ್ವಾಧೀನಪಡಿಸಿಕೊಳ್ಳಲು ಲಭ್ಯವಿರುವ ಸಮಯಾವಕಾಶಕ್ಕೆ ಸಂಬಂಧಿಸಿದಂತೆ ಕಾಯ್ದೆಯ ಸೆಕ್ಷನ್ 13(8)ಕ್ಕೆ ಸಾಲಗಾರರ ಗಮನವನ್ನು ಸೆಳೆಯಲಾಗುತ್ತಿದೆ.

ಕ್ರಮ ಸಂಖ್ಯೆ	ಸಾಲಗಾರರ ಹೆಸರು ಮತ್ತು ವಿಳಾಸ & ಸಾಲ ಖಾತೆ ಸಂಖ್ಯೆ	[illegible]	[illegible]	ಸ್ಥಿರಾಸ್ತಿಯು ವಿವರಣೆ	[illegible]
[ಎ]	[ಬಿ]	[ಸಿ]	[ಡಿ]	[ಇ]	[ಎಫ್]
1.	ಸಾಲ ಖಾತೆ ಸಂಖ್ಯೆಗಳು ವಿಟಿ0003083 1. ಮೆಸರ್ಸ್ ಅರುಣಾನಂದ್ ಫ್ಯಾಬ್ರಿಕೇಶನ್ ವರ್ಕ್ (ಸಾಲಗಾರರು) 2. ಮಂಜುನಾಥ ಸಿದ್ದಪ್ಪ ದಾನಮ್ಮನವರ & ನೀಲವ್ವ ಮಂಜುನಾಥ ದಾನಮ್ಮನವರ (ಸಹ ಸಾಲಗಾರರು) ನೋಂದಾಯಿತ ಕಂಪನಿಯ ವಿಳಾಸ: ಕಮ್ಮಾರ ಬೀದಿ, ಗುಡೇನಕಟಿ, ಅಂಚೆ ಗುಡೇನಕಟ್ಟಿ, ಜಿಲ್ಲೆ ಧಾರವಾಡ, ಕರ್ನಾಟಕ- 581113 ಮತ್ತು ವಸತಿ ವಿಳಾಸ: ಕಮ್ಮಾರ ಬೀದಿ, ಗುಡೇನಕಟಿ, ಅಂಚೆ ಗುಡೇನಕಟ್ಟಿ, ಜಿಲ್ಲೆ ಧಾರವಾಡ, ಕರ್ನಾಟಕ- 581113	05-09-2025	15,63,016.29/- 04.09.2025	ಗುಡೇನಕಟ್ಟಿ ಗ್ರಾಮಪಂಚಾಯ್ತಿ ಖಾತೆ ಸಂಖ್ಯೆ 72/1, ಆರ್‌ಡಿಪಿಆರ್ ಸಂಖ್ಯೆ 151300400700100181 ವಸತಿ ಆಸ್ತಿಯ ಕಟ್ಟಡವೂ ಸೇರಿದಂತೆ ಎಲ್ಲ ತುಂಡು ಮತ್ತು ತುಣುಕುಗಳು. ನಿವೇಶನದ ಒಟ್ಟು ವಿಸ್ತೀರ್ಣ: 43.82 ಚದರ ಮೀಟರ್‌ಗಳು. ಒಟ್ಟು ನಿರ್ಮಿತ ಕ್ಷೇತ್ರದ ವಿಸ್ತೀರ್ಣ: 43.82 ಚದರ ಮೀಟರ್‌ಗಳು. ವಿಳಾಸ: ಗುಡೇನಕಟ್ಟಿ ಗ್ರಾಮ, ಕುಂದಗೋಳ ಬ್ಲಾಕ್, ಕೂಂದಗೋಳ ತಾಲೂಕು, ಧಾರವಾಡ ಜಿಲ್ಲೆ. ಆಸ್ತಿಯ ವಿಳಾಸ (ಆಸ್ತಿಯ ಸ್ಥಳ)- ಜಿಪಿ ನಂ. 72/1, 72/2, ಅಸೆಸ್‌ಮೆಂಟ್ ನಂ. 151300400700100181 & 151300400700100182. ವಿಳಾಸ: ಮಾರುತಿ ದೇವಾಲಯ ಹತ್ತಿರ, ಕುಂಬಾರ ಓಣಿ, ಉತ್ತರಕ್ಕೆ: ಸರ್ಕಾರಿ ರಸ್ತೆ, ದಕ್ಷಿಣಕ್ಕೆ: ಮಂಜುನಾಥ ಎಸ್.ದಾನಮ್ಮನವರ್ ಅವರ ಆಸ್ತಿ, ಪೂರ್ವಕ್ಕೆ: ಸರ್ಕಾರಿ ರಸ್ತೆ, ಪಶ್ಚಿಮಕ್ಕೆ: ರೇಖಾ ಎಸ್.ದಾನಮ್ಮನವರ ಭೂಮಿ.	24-ಮಾರ್ಚ್-2026

ದಿನಾಂಕ: 29/03/2026 ಸ್ಥಳ: ಧಾರವಾಡ
ಅಧಿಕೃತ ಅಧಿಕಾರಿ: ಮೆಸರ್ಸ್ ಮಿಂಟಿಫಿ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್

ಶ್ರೀರಾಮ್ ಫೈನಾನ್ಸ್ ಲಿ.

SHRIRAM Finance

ಆಡಳಿತ ಕಚೇರಿ : 6 ನೇ ಮಹಡಿ (ಹಂತ 2), ಕಟ್ಟಡದ ಸಂಖ್ಯೆ. ಕ್ಯೂ2, ಔರಮ್ ಕ್ಯೂ, ಜೆನ್ 4/1, ಟಿಟಿಸಿ ಥಾಣೆ ಬೇಲಾಪುರ್ ರಸ್ತೆ, ಘನ್ಸೋಲಿ, ನವಿ ಮುಂಬೈ - 400710, ನೋಂದಾಯಿತ ಕಚೇರಿ: ಶ್ರೀ ಟವರ್ಸ್, ಪ್ಲಾಟ್ ನಂ.14ಎ, ದಕ್ಷಿಣ ಹಂತ, ಇಂಡಸ್ಟ್ರಿಯಲ್ ಎಸ್ಟೇಟ್, ಗ್ಯೂಂಡಿ, ಚೆನ್ನೈ - 600032, ಮೊಬೈಲ್: 8431166309

ಚಿನ್ನಾಭರಣ ಹರಾಜು ಹಾಗೂ ಆಹ್ವಾನ ಸೂಚನಾ ಪತ್ರ

ಈ ಕೆಳಕಂಡ ಗ್ರಾಹಕರು ತಾವು ಬಾಕಿ ಉಳಿಸಿಕೊಂಡಿರುವ ಚಿನ್ನಾಭರಣಗಳ ಸಾಲದ ಸೌಲಭ್ಯ (ಸೌಲಭ್ಯ) ವನ್ನು ಶ್ರೀ ರಾಮ ಫೈನಾನ್ಸ್ ಲಿ. (ಎಸ್‌ಎಫ್‌ಎಲ್) ಯವರು ತೀರಿಸಲು ಸೂಚನಾ ಪತ್ರಗಳನ್ನು ಕಳುಹಿಸಿದ್ದರೂ ಕೂಡ ಬಾಕಿ ತೀರಿಸಲು ವಿಫಲರಾಗಿರುವುದರಿಂದ ಗ್ರಾಹಕರು ಅಡಮಾನ ಮಾಡಿದಂತಹ ಚಿನ್ನಾಭರಣಗಳು ಹರಾಜು ಪ್ರಕ್ರಿಯೆಯನ್ನು ನಾವು ಈ ಕೆಳಕಂಡ ಹರಾಜು ದಿನಾಂಕದಂದು ಮಾಡುತ್ತಿದ್ದೇವೆ. ಸದರಿ ಹರಾಜಿನ ಮೂಲಕ ಬಂದ ಹಣವನ್ನು ಒಂದು ವೇಳೆ ನಮಗೆ ಬರಬೇಕಾದ ಎಲ್ಲಾ ಬಾಕಿಗಳನ್ನು ಸರಿದೂಗಿಸಿ ಹೆಚ್ಚಿನ ಹಣ ಉಳಿದಲ್ಲಿ ಸಂಬಂಧಪಟ್ಟ ಗ್ರಾಹಕರಿಗೆ ಹಿಂದಿರುಗಿಸಲಾಗುವುದು ಮತ್ತು ಹರಾಜು/ಮಾರಾಟವಾದ ನಂತರವೂ ಬಂದ ಹಣ ತಮ್ಮ ಸಾಲದ ಒಟ್ಟು ಮೊತ್ತಕ್ಕಿಂತ ಕಡಿಮೆಯಾದಲ್ಲಿ ಬರಬೇಕಾದ ಬಾಕಿ ಹಣಕ್ಕಾಗಿ ಸೂಕ್ತ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು. ಶ್ರೀ ರಾಮ ಫೈನಾನ್ಸ್ ಲಿ. ರವರು ಈ ಕೆಳಕಂಡ ಗ್ರಾಹಕ ಖಾತೆಗಳ ಪಟ್ಟಿಯಲ್ಲಿ ಯಾವುದೇ ಒಂದು ಅಥವಾ ಕೆಲವು ಖಾತೆಗಳನ್ನು ಮುನ್ಸೂಚನೆಯಿಲ್ಲದೆ ತೆಗೆದು ಹಾಕುವ ಅಧಿಕಾರ ಹೊಂದಿರುತ್ತಾರೆ. ಮುಂದುವರಿದು ಶ್ರೀ ರಾಮ ಫೈನಾನ್ಸ್ ಲಿ. ರವರು ಹರಾಜು ಪ್ರಕ್ರಿಯ ದಿನಾಂಕವನ್ನು ನಿರೀಕ್ಷಿಸಲು ಸಾಧ್ಯವಾಗದ ಸಂದರ್ಭದಲ್ಲಿ ಬದಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ.

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ, ಸುಕೃತಿ ಕಾಂಪ್ಲೆಕ್ಸ್, ಸೆಕ್ಟರ್ ನಂ -05 ಪ್ಲಾಟ್ ನಂ -50 / ಬಿ ಬಾಗಲಕೋಟೆ :-ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಬಾಗಲಕೋಟೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಜೈತುನಬಿ ಶಾಬಾಜ್ ತಪಾಲ್		ಬುಮ್ಮಣ್ಣ ಕಿಲಬನೂರು	
		ಉಮರ್ಫಾರುಕ್ ಹೊನ್ಯಾಲ್	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಭೂಷಣ್ ಭವನ, 1ನೇ ಮಹಡಿ, ಹೊಸ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು, ಬೆಂಗಳೂರು ರಸ್ತೆ, ಬಳ್ಳಾರಿ-583101 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಬಳ್ಳಾರಿ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಹಸನ್ ಸಾಬ್	QBLL2RE2510280012	ಕುರುಬ ಹೊನ್ನೂರುಸ್ವಾಮಿ	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ, ಒದ್ದಾಪುರ ಕಾಂಪ್ಲೆಕ್ಸ್, ಗಾಂಧಿ ವೃತ್ತದ ಹತ್ತಿರ, ಎಂ ಜಿ ರಸ್ತೆ, ಗಂಗಾವತಿ- 583227 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಗಂಗಾವತಿ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಹನುಮೇಶ್	QGNVTPJ2509120003	ರಾಘವೇಂದ್ರ ರಾವ್	QGNVTPJ2510160001

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ವಾಸುದೇವ ವಾರಣೇಕರ್ ಕಾಂಪ್ಲೆಕ್ಸ್ ಕೊಪ್ಪಳ- 583231 ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಕೊಪ್ಪಳ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ದೊಡ್ಡ ಬಸಪ್ಪ	QKOP2PJ2509190006	ವಿನೋದ್	QKOP2PJ2506060009
ರವಿ ಕುಮಾರ್	QKOP2PJ2509230001	ಸಾಗರ್	
ಎಸ್ ಶಿವಾಜಿ	QKOP2PJ2507310003		

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ, ಅಲಾಚೇಚ್ ಪ್ಲಾಜಾ, ರಾಷ್ಟ್ರೀಯ ವೈದ್ಯಕೀಯ ಎದುರು, ರಜಾವಿ, ಆಳಂದ, ಗುಲ್ಬರ್ಗ - 585304 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಆಳಂದ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಶರಣಬಸಪ್ಪ	TALANRE2510300002	ರಾಚಯ್ಯ	
ರಾಚಯ್ಯ		ಶರಣಬಸಪ್ಪ	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 2ನೇ ಮಹಡಿ ಬಾಗೋಡಿ ಕಾಂಪ್ಲೆಕ್ಸ್, ಭಾರತ್ ಟಾಕೀಸ್ ಹತ್ತಿರ, ಕೆಇಬಿ, ರಸ್ತೆ, ರಾಯಚೂರು ಜಿಲ್ಲೆ, ದೇವದುರ್ಗ - 584111 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ದೇವದುರ್ಗ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಸಂಜೀವ್ ಕುಮಾರ್	TDEODPJ2510170009	ಸುನಿಲ್	TDEODRE2509170009

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಪಾಟೀಲ್ ಕಾಂಪ್ಲೆಕ್ಸ್, ಭರತ್ ಗ್ಯಾಸ್ ಮೇಲೆ, ಬಿಜಾಪುರ ಕ್ರಾಸ್, ಬಿಜಾಪುರ ಕ್ರಾಸ್, ಜೆವರ್ಗಿ :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಜೇವರ್ಗಿ

ಹೆಸರು	ಲೋನ್ ನಂಬರ್
ಮಹೇಬೂಬ್ ಪಟೇಲ್	TJWRGPJ2509120002

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, #2,1ನೇ ಮಹಡಿ ಶ್ರೀ ಸಾಯಿ ಕೃಷ್ಣ ಕಾಂಪ್ಲೆಕ್ಸ್, ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಎದುರು, ಕುಷ್ಟಗಿ - 583277 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಕುಷ್ಟಗಿ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಫಕೀರಪ್ಪ	TKUSTPJ2509020002	ಅಭಿಷೇಕ	
ಕಳಕಪ್ಪ	TKUSTPJ2509040002	ನಾಗರಾಜ್	
ಮಂಜುನಾಥ್	TKUSTPJ2506240002	ಯಮನೂರಪ್ಪ	
ಶಿವರಾಜ	TKUSTPJ2505170002		

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 4080/ಎ2, ಬಿಲ್ ಮೆಮೋರಿಯಲ್ ಸ್ಕೂಲ್ ಎದುರು ಮುಧೋಳ-587313:- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಮುಧೋಳ

ಹೆಸರು	ಲೋನ್ ನಂಬರ್
ಸಾಯಿದಾಸಾಬ್ ಸರವಣನ್	TMDOLRE2508220001

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 2ನೇ ಮಹಡಿ ಪಾಟೀಲ್ & ಪಾಟೀಲ್ ಕಾಂಪ್ಲೆಕ್ಸ್, ಚಿಂಚೋಳಿ ರಸ್ತೆ ಸೇಡಂ - 585222 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಸೇಡಂ

ಹೆಸರು	ಲೋನ್ ನಂಬರ್
ಶಿವಕುಮಾರ್ ಡಿ	TSEDAPJ2509010001

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಸಂಖ್ಯೆ-17-30 ರಿಂದ 17-36, ಪೋಸ್ಟಲ್ ಕಾಂಪ್ಲೆಕ್ಸ್, ಕೋರಿ ಆಸ್ಪತ್ರೆಯ ಮೇಲಿನ 2ನೇ ಮಹಡಿ ಮುಖ್ಯ ರಸ್ತೆ ಶಹಾಬಾದ್ -585228 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಶಹಾಬಾದ್

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಗುಂಡಮ್ಮ	TSHABPJ2510060003	ದೀಪಕ್	
ಮೊಹಮ್ಮದ್ ಶಾರುಖ್	TSHABPJ2508260005	ಸುನಿಲ್	
ಶಿವಕುಮಾರ್	TSHABPJ2506200001	ಸುನಿಲ್	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಸ್ಯಾನ್ ಕಾಂಪ್ಲೆಕ್ಸ್, ಬಂಡಲ್ ಕ್ರಾಸ್ ಹತ್ತಿರ, ಐಸಿಐಸಿಐ ಬ್ಯಾಂಕ್ ಎದುರು, ಸಿಂದಗಿ - 586128 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಸಿಂದಗಿ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಅಶ್ವಿನಿ ಚಿಕ್ಕಪ್ಪ ಬೂದಿಹಾಳ್	TSIDGPJ2510240010	ಅಮಿತ್ ರಾಥೋಡ್	
ಹುಸೇನಸಾಬ್ ಮೀರಾಸಾಬ್ ಮಣೂರು	TSIDGPJ2507150006	ಜ್ಯೋತಿ ಮಂಜುನಾಥ ಮನಗುಳ್ಳಿ	
ಮುಕ್ತಾಬಾಲ್ ಕಾಳೆ	TSIDGPJ2510080001	ಮಮತಾಜ್ ಮಣೂರು	
ನಿಜಗೆಪ್ಪ ಹನಮಂತ್ ಪಯತಿ	TSIDGPJ2510030003	ಪರಮೇಶ್ವರ ಬಸವರಾಜ ಸುಲ್ಪಿ	
ಸಾಹೇಬಲಾಲ್ ಹವಲದಾರ	TSIDGPJ2507020003	ಪ್ರಿಯಾಂಕಾ ಜಂಬಗಿ	
ಸಂತೋಷ ಮಾನಗೇರಿ		ಸಲೀಂ ಹುಸೇನಸಾಬ್ ಬಾಗವಾನ್	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ, ಸೌದಿ ಕಟ್ಟಡ ಹೊಸ ವಿಟ್ಠಲ ಮಂದಿರ ವಿಜಯಪುರ- 586101 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ವಿಜಯಪುರ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಅಶೋಕ ಬರಗುಡಿ	QBIJ1PJ2510060004	ರಾಕೇಶ್ ಬಿ ಹಳ್ಳದಮನಿ	QBIJ1PJ2508140001
ಬಲಿರಾಮ್ ರಾಥೋಡ್	QBIJ1PJ2510270001	ಸಚಿನ್ ಪವಾರ	QBIJ1PJ2510060007
ಲಲಿತಾ ಗಣಿ	QBIJ1PJ2510200004	ಸಚಿನ್ ಆರ್ ಬಜಂತ್ರಿ	QBIJ1RE2510140005
ಮಹಾದೇವಿ ಅಡಿವೆಪ್ಪ ಗುಬ್ಬಲ	QBIJ1PJ2510150008	ಶಬೀರ್ ಮುಂದಾಸಸಾಬ್ ಯಮಕನಮರಡಿ	QBIJ1PJ2510030003
ಮಾರುತಿ ಮೋರ್	QBIJ1PJ2509290001	ವಿಟ್ಠಲ್ ವಾಘ್ಮೋರೆ	QBIJ1PJ2510090008
ಮೊಹಮ್ಮದ್ ಜೈದ್ ಖುರೇಷಿ	QBIJ1PJ2509240002	ರಮೇಶ್ ಚಾಲುಲ್	
		ವಿಶಾಲ್ ಗೋಲಾಪಿ	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಒನ್ನೆಸ್ ಪ್ರೈಡ್ ಸರ್ವೆ ನಂ.1363, ನಂ. 4855/76, 1ನೇ ಮಹಡಿ, ಸದಾಶಿವ್ ನಗರ, ಬೆಳಗಾವಿ-590019:- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಬೆಳಗಾವಿ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಮಲಪ್ರಭಾ ಜಾಧವ್	QBLG2PJ2507220003	ಶಶಿಕಾಂತ ಕೃಷ್ಣ ಸ್ವಣ್ಣವರ್	
ಸುನಿಲ್ ವಿದ್ಯಾಧರ್ ಯರಡಿ	QBLG2PJ2501010002	ಶಶಿಕಾಂತ ಕೃಷ್ಣ ಸ್ವಣ್ಣವರ್	
ಕಿರಣ್ ನಾರಾಯಣ ಲೋಹರ್		ಶಶಿಕಾಂತ ಕೃಷ್ಣ ಸ್ವಣ್ಣವರ್	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಗೋಲ್ಡ್ ಲೋನ್, 1ನೇ ಮಹಡಿ, ಗಾಂಧಿ ಚೌಕ್, ದತ್ತಾತ್ರೇಯ ದೇವಸ್ಥಾನದ ಹತ್ತಿರ ಧಾರವಾಡ- 580001 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಧಾರವಾಡ I

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಅಕ್ಕಮ್ಮ ಮುಕ್ಕಳ್	QDHR1RE2510110003	ಸಾತಯ್ಯ ನಾನು ಉಣಕಲ್	QDHR1PJ2510160008
ಅಕ್ಕಮ್ಮ ಮುಕ್ಕಳ್	QDHR1PJ2510060014	ಅಲ್ಲಾಸಾಬ್ ಮಕ್ತುಮ್ಸಾಬ್ ಕೊಣ್ಣೂರು	
ಕೇಶವ್ ಆದಿನ್	QDHR1RE2509300018	ಮೋಹನ್ ಕುಮಾರ್	
ರವಿ ಅಗಡಿ	QDHR1PJ2509130008	ಮೋಹನ್ ಕುಮಾರ್	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ, ಜಿಜಿ ಮಗಾವಿ ಚೇಂಬರ್ಸ್ ಪಿ.ಬಿ ರಸ್ತೆ ಹಾವೇರಿ - 581110 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಹಾವೇರಿ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಬಸವರಾಜ ಗೋಳಪ್ಪ ಉಪ್ಪಿನ	QHAVRPJ2507190004	ಮಹ್ಮದಖಾಸಿಮ ಬಾಬುಸಾಬ್ ಗುತ್ತಲ್	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ ಶ್ರೀಯಾ ಶಿವಶಕ್ತಿ ಅವೆನ್ಯೂ ಬಿಲ್ಡಿಂಗ್, ಎಂ ತಿಮ್ಮಸಾಗರ್ ಎಕ್ಸ್‌ಟೆನ್ಷನ್ ಪುರುಷೋತ್ತಮ್ ನಗರ ತತ್ವದರ್ಶಿ ಆಸ್ಪತ್ರೆ ರಸ್ತೆ ಹುಬ್ಬಳ್ಳಿ 580021:- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಹುಬ್ಬಳ್ಳಿ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಮಂಜುನಾಥ ಬಡಿಗೇರ್	QHUB2PJ2510310003	ಶಂಕ್ರಪ್ಪ ಬಿ ಹುಲಸೋಗಿ	QHUB2PJ2510060007
ಮಂಜುನಾಥ ಪರಶುರಾಮ ಉಳ್ಳಿಕಾಶಿ	QHUB2PJ2509230003	ಉಷಾ ಪಿಸೆ	QHUB2RE2510060009
ನಂದೀಶ್ವರ ಸಿದ್ದಯ್ಯ ದೊಡ್ಡಮನಿ	QHUB2PJ2509020004	ಫಕ್ಕೀರಗೌಡ ಈಶ್ವರಗೌಡ ತೆಂಬ ಆದಮನಿ	
ಸತೀಶ್ ಮುರಗೋಡು	QHUB2RE2510030005	ಮಣಿಕಂಠ ಸಿದ್ದನಗೌಡ ನೀಲಪ್ಪಗೌಡ	
ಸವಿತಾ	QHUB2RE2510060010	ಮಂಜುನಾಥ ಈಶ್ವರಪ್ಪ ನೂಲ್ವಿ	
		ರಮೇಶ್ ಕೋಪರ್ಡೆ	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ, ಬಾಲಾಜಿ ಕಾಂಪ್ಲೆಕ್ಸ್, ಹೆಚ್‌ಡಿಎಫ್‌ಸಿ ಬ್ಯಾಂಕ್ ಹತ್ತಿರ, ಪಿ ಬಿ ರಸ್ತೆ, ರಾಣೆಬೆನ್ನೂರು - 581115 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ರಾಣೆಬೆನ್ನೂರು-II

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಶರತ್ ಸುರೇಶಪ್ಪ ನಿಲಪ್ಪ ಆನವರ	QRNB2PJ2509240006	ಶರತ್ ಸುರೇಶಪ್ಪ ನಿಲಪ್ಪ ಆನವರ	QRNB2PJ2510060001

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಓರ್ಯೋನ್ ಕಾಂಪ್ಲೆಕ್ಸ್, 1ನೇ ಮಹಡಿ ಮೋತಿ ಬಾಗ್ ಇಂಡಸ್ಟ್ರೀಸ್ ಕಾಂಪೌಂಡ್, ಬೈಲ್ಹೊಂಗಲ ಬೆಳಗಾವಿ - 591102 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಬೈಲಹೊಂಗಲ

ಹೆಸರು	ಲೋನ್ ನಂಬರ್
ಮಲಿಕ್ಜಾನ್ ಕಿತ್ತೂರು	TBAILPJ2508110001

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಖಾದರ್ ಭಾನು ಪ್ರಸಾದ್ ಕಾಂಪ್ಲೆಕ್ಸ್ 13 PW ರಸ್ತೆ, ಅರಣ್ಯ ಕಚೇರಿ ಎದುರು, ಚನ್ನಗೇರಿ, ದಾವಣಗೆರೆ - 577213 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಚನ್ನಗಿರಿ

ಹೆಸರು	ಲೋನ್ ನಂಬರ್
ಬಸವರಾಜ ಆರ್ ಎಂ	TCGRIPJ2510150002

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ, ರಂಗೋಲಿ ಕಾಂಪ್ಲೆಕ್ಸ್, ಜಯನಗರ ಕ್ರಾಸ್ ಚಿಕ್ಕೋಡಿ- 591201:- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಚಿಕ್ಕೋಡಿ _ಎಚ್‌ಪಿ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಸಚಿನ್ ವಿಠಲ್ ನಾಯ್ಕ	TCHKDPJ2508290003	ಲತಾ ಕಿರಣ್ ಬಾಕೋಳಿ	
ಸಲೀಮಹೇದಿ ತಶರಿಫಲ್ಲ ಮೋಮಿನ್	TCHKDPJ2510240002		

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಪಿ ಜೆ ಎಕ್ಸ್ಟೆನ್ಷನ್, ಎವಿಕೆ ಕಾಲೇಜು ರಸ್ತೆ, ದಾವಣಗೆರೆ - 577005 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ ದಾವಣಗೆರೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಕಿರಣ್ ಕುಮಾರ್ ಹೆಚ್	TDVNGPJ2506250002	ಪ್ರಕಾಶ್ ಜಿ	TDVNGPJ2508210002
ಪ್ರಕಾಶ್ ಜಿ	TDVNGPJ2506250003		

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ ಸಂಗಮ್ ಕಾಂಪ್ಲೆಕ್ಸ್ ಬಸ್ ನಿಲ್ದಾಣದ ಎದುರು ಗಜೇಂದ್ರಗಡ -582114 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ ಗಜೇಂದ್ರಗಡ

ಹೆಸರು	ಲೋನ್ ನಂಬರ್
ಪರಶುರಾಮ ಉಮೇಶ ಮುಗಳಿ	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಗೌಲರ್‌ಪೇಟ್, ಅಶೋಕ ಟೆಕ್ಸ್‌ಟೈಲ್ ಹತ್ತಿರ, ಮುನ್ಸಿಪಾಲ್ ರಸ್ತೆ, ಹರಪನಹಳ್ಳಿ :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಹರಪನಹಳ್ಳಿ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಟಿ ಶಂಕರನಾಯಕಾ	THRPNPJ2509180005	ಪಿಂಜಾರ್ ಶಮಿವುಲ್ಲಾ	
ಮಾರೇಶ ಮೈದೂರು	THRPNPJ2507180005	ಶಂಕರ ನಾಯ್ಕ	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಎಸ್‌ಎಲ್‌ವಿ ಪ್ಲಾಜಾ 01 ಮಹಡಿ, ಶಿವಮೊಗ್ಗ ರಸ್ತೆ ಹೊಳಲ್ಕೆರೆ -577526 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಹೊಳಲ್ಕೆರೆ

ಹೆಸರು	ಲೋನ್ ನಂಬರ್
ಸತೀಶ್	THOLKPJ2506110002

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ವಾಲಾಡ್ ಬಿಲ್ಡಿಂಗ್, ಬಂಗಲ್ ಕಟ್ಟಿ ಹತ್ತಿರ, ಟಿಎಂಸಿ ರಸ್ತೆ ನರಗುಂದ. (ಜಿಲ್ಲೆ-ಗದಗ್)-582207 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ನರಗುಂದ

ಹೆಸರು	ಲೋನ್ ನಂಬರ್
ಪಡಿಯಪ್ಪ ನಿಂಗಪ್ಪ ಸಜ್ಜಿರ್ ಒಟ್ಟಿ	TNARGPJ2509300001

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 4886,1ನೇ ಮಹಡಿ, ಅಂಗಡಿ ಕಟ್ಟಡ, ಅಂಕಲಿ ರಸ್ತೆ ರಾಯಬಾಗ್ - 591317 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ರಾಯಬಾಗ್

ಹೆಸರು	ಲೋನ್ ನಂಬರ್
ಅಜಿತ್ ಬಸ್ತವಾಡೆ	TRABGPJ2509110004

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, # ಸಂಖ್ಯೆ .3338/41, ಕೆನರಾ ಬ್ಯಾಂಕ್ ಮೇಲಿನ ಸೊಪ್ಪೆಲ್ಲಿ ಕಾಂಪ್ಲೆಕ್ಸ್, ಲಕ್ಷ್ಮಿ ನಗರ ಬೆಳಗಾವಿ ರಸ್ತೆ ರಾಮದುರ್ಗ -591123 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ರಾಮದುರ್ಗ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಅರುಣ್ ಬಸವರಾಜ ಅಂಗಡಿ	TRMDRPJ2507100005	ಚೇತನ್ ಅರ್ಜುನ್ ಮಾಲಿ	
ಅರುಣ್ ಬಸವರಾಜ ಅಂಗಡಿ	TRMDRPJ2508070005	ಮಹಾದೇವಿ ಭೀಮಪ್ಪ ಬರ್ಕಿ	
ಚನ್ನಪ್ಪ ಫಕೀರಪ್ಪ ಜಮಖಂಡಿ	TRMDRRE2509300006	ಮಾರುತಿ ಪರಶುರಾಮ ಹುಬ್ಬರಮಟ್ಟಿ	
ನಜೀರಹ್ಮದ್ ಮಕ್ತುಮಸಾಬ್ ಬೆಸ್	TRMDRPJ2507250003	ಶಿಲ್ಪಾ ಶಿಡ್ಲೆಪ್ಪ ಮಾದಾರ	
ರಂಗಪ್ಪ ಬಸಪ್ಪ ಕುದರಿ	TRMDRPJ2509050001	ವೀರಪ್ಪ ಹಲಗಿ	
ಶಿವಪ್ಪ ಮಂಚಾಲ	TRMDRPJ2508220001	ವೀರಪ್ಪ ಹಲಗಿ	
ವಿನಾಯಕ ಗೌಡಪ್ಪ ಪಾಟೀಲ್	TRMDRPJ2508090001	ವಿಟ್ಠಲ ಅಜ್ಜಪ್ಪ ಗೌರಿಗುಡಿ	
ಅಪ್ಪಣ್ಣ ಶಿವಪ್ಪ ಚಂದರಗಿ			

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ, ನಂದಗೋಕುಲ, C/o ಕೃಷ್ಣ ಕೋಳಿವಾಡ್, ಪ್ಲಾಟ್ ಸಂಖ್ಯೆ 1994/28, ಹೌಸಿಂಗ್ ಸೊಸೈಟಿ, ಸವಣೂರು ಹುಬ್ಬಳ್ಳಿ ರಸ್ತೆ, ಬಿಎಸ್‌ಎನ್‌ಎಲ್ ಕಚೇರಿ ಹತ್ತಿರ, ಹಾವೇರಿ ಜಿಲ್ಲೆ ಶಿಗ್ಗಾಂವ್ -581205:- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಟಿಪಿಜಿಟಿಎನ್_ಶಿಗ್ಗಾಂವ್

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಜೀವನ್ ಜಗದೀಶ ಕಡಪ್ಪನವರ		ನಾಗರಾಜ ದೇವೇಂದ್ರಪ್ಪ ಕಮ್ಮಾರ	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ, ಬಿವಿಕೆ ಪ್ಲಾಜಾ, ಜೆಎಂಎಫ್‌ಸಿ ಕೋರ್ಟ್ ಹತ್ತಿರ, ಟಿ ಜಿ ರಸ್ತೆ, ಹಾನಗಲ್ - 581104 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಹಾನಗಲ್ ಶಾಖೆ

ಹೆಸರು	ಲೋನ್ ನಂಬರ್
ಫಾರೂಕ್ ಅಹ್ಮದ್ ಹುಬ್ಬಳ್ಳಿ	THNGAPJ2509120001

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಯುರೇಕಾ ಜಂಕ್ಷನ್, 2ನೇ ಮಹಡಿ, ಟಿ.ಬಿ. ರಸ್ತೆ, ಹುಬ್ಬಳ್ಳಿ -580029 :- ಹರಾಜು ದಿನಾಂಕ ಮತ್ತು ಸಮಯ: 16-04-2026, ಬೆಳಿಗ್ಗೆ 10.30

ಹುಬ್ಬಳ್ಳಿ ಶಾಖೆ

ಹೆಸರು	ಲೋನ್ ನಂಬರ್
ನವೀನ್ ಷಣ್ಮುಖ ಧಲಭಂಜನ	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಸ್ವಾಮಿ ಕಟ್ಟಡ, ನೆಲಮಹಡಿ, ಪ್ಲಾಟ್ ಸಂಖ್ಯೆ 17ನೇ, ಪೋಕಲ್ವಾರ್ ಆಸ್ಪತ್ರೆ ಹತ್ತಿರ, ಬೀದರ್ ನಾಂದೇಡ್ ರಸ್ತೆ, ಔರಾದ್, ಬೀದರ್-ಜಿಲ್ಲೆ-585326 ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಔರಾದ್ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಲಾಲು	TAURDRE2510140002	ಕಂಠಯ್ಯ	
ರವಿ	TAURDPJ2510290008	ಪ್ರಕಾಶ್	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ಪದ್ಮ ಕಾಲೇಜ್ ಎದುರು, ವೀರಭದ್ರೇಶ್ವರ ಬ್ಯಾಂಕ್ ಹತ್ತಿರ, ಮುಖ್ಯ ರಸ್ತೆ ಚಿಂಚೋಳಿ-585307:- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಚಿಂಚೋಳಿ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಅಂಜಮ್ಮ	TCHOLPJ2510100001	ಕೃಷ್ಣ	
ಅನಶಮ್ಮ			

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ, ಸಿಂಗನಾಳ್ ಶರಣಪ್ಪ ಕಾಂಪ್ಲೆಕ್ಸ್, ಆರ್ ಜಿ ರಸ್ತೆ ಗಂಗಾವತಿ - 583227 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಗಂಗಾವತಿ 1 ಶಾಖೆ

ಹೆಸರು	ಲೋನ್ ನಂಬರ್
ಮಂಜುನಾಥ	TGANVPJ2507090002

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ ಬಸವ ಕಾಂಪ್ಲೆಕ್ಸ್ ಇಂಡಿಯನ್ ಬ್ಯಾಂಕ್ ಮೇಲೆ ಕೊಪ್ಪಳ - 583231 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಕೊಪ್ಪಳ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಕಲ್ಯಾಣಕುಮಾರ್	TKOPPPJ2509220003	ಕಲ್ಯಾಣಕುಮಾರ್	

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, ನೀಲಪ್ಪ ಕಾಂಪ್ಲೆಕ್ಸ್ ಬಳ್ಳಾರಿ ಮುಖ್ಯ ರಸ್ತೆ, ಎಲ್‌ಎಲ್‌ಸಿ ಆಫೀಸ್ ಎದುರು, ಕುರುಗೋಡು 583116 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ಕುರುಗೋಡು ಶಾಖೆ

ಹೆಸರು	ಲೋನ್ ನಂಬರ್
ಗುಡದಲ್ ಶಿವಪ್ಪ	KURDRPJ2509300002

ಈ ಕೆಳಗಿನ ವಿಳಾಸದಲ್ಲಿ ಹರಾಜು ನಡೆಯಲಿದೆ: ಶ್ರೀರಾಮ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ ಗುರುಕೃಪಾ ಕಾಂಪ್ಲೆಕ್ಸ್ ಐಡಿಬಿಐ ಬ್ಯಾಂಕ್ ಸೋಲಾಪುರ ರಸ್ತೆ ಹತ್ತಿರ ವಿಜಯಪುರ- 586103 :- ಹರಾಜು ದಿನಾಂಕ ಮತ್ತು ಸಮಯ: 14-04-2026, ಬೆಳಿಗ್ಗೆ 10.30

ವಿಜಯಪುರ ಶಾಖೆ

ಹೆಸರು	ಲೋನ್ ನಂಬರ್
ಶೌಸಿಫ್ ಕಣ್ಣೂರು	BJPURRE2510150001

ಹೆಚ್ಚಿನ ಮಾಹಿತಿಗಳಿಗಾಗಿ, ಷರತ್ತು ಹಾಗೂ ನಿಭಂದನೆಗಳಿಗಾಗಿಯಾಗಲಿ, ಹರಾಜಿನಲ್ಲಿ ಭಾಗವಹಿಸುವುದು ಮತ್ತು ಹೆಸರನ್ನು ನೊಂದಾಯಿಸಿಕೊಳ್ಳಲು ಆಸಕ್ತಿ ಉಳ್ಳವರು **ಮೊಬೈಲ್: 8431166309 / 9632758166 / 9901066688** ಕರೆ ಮಾಡಿ ಸಂಪರ್ಕಿಸಬಹುದು. ಒಂದು ವೇಳೆ ಹರಾಜು ನಿಗದಿ ಪಡಿಸುವ ದಿನದಂದು ಸಮಯದ ಅಭಾವದಿಂದ ಮುಗಿಸಲಾಗದ ಪಕ್ಷದಲ್ಲಿ ಕಛೇರಿಯ ಕೆಲಸದ ಮುಂದಿನ ದಿನಗಳಲ್ಲಿ ನಿಗದಿತ ಷರತ್ತು ಹಾಗೂ ನಿಭಂದನೆಗಳಿಗನುಗುಣವಾಗಿ ನೆಡೆಸಲಾಗುವುದು. ಒಂದು ವೇಳೆ ಯಾವುದೇ ಗ್ರಾಹಕ ಮೃತ್ಯು ಹೊಂದಿದ್ದಲ್ಲಿ ಅತನ/ಅವಳ ವಾರಸುದಾರರಿಗೆ ಹರಾಜಿನ ಎಲ್ಲಾ ಷರತ್ತು ಹಾಗೂ ನಿಭಂದನೆಗಳು ಅನ್ವಹಿಸುವುದು.

ದಿನಾಂಕ: 28.03.2026

ಸಹಿ/- ಅಧಿಕೃತ ಅಧಿಕಾರಿ,
ಶ್ರೀರಾಮ್ ಫೈನಾನ್ಸ್ ಲಿ. ಪರವಾಗಿ

ವೈರಮುಡಿ ಕಿರೀಟಧಾರಣ ಮಹೋತ್ಸವ

ಮೇಲುಕೋಟೆ: ಶ್ರೀ ಚಲುವನಾರಾಯಣಸ್ವಾಮಿಯವರ ವಿಶ್ವ ವಿಖ್ಯಾತ ವೈರಮುಡಿ ಕಿರೀಟಧಾರಣ ಮಹೋತ್ಸವ ಮಹಾವಿಷ್ಣುವಿನ ಅನುಗ್ರಹಕ್ಕೆ ಪ್ರಮುಖ ದಿನವಾದ ಶನಿವಾರ ರಾತ್ರಿ ಲಕ್ಷಾಂತರಭಕ್ತರ ಜಯಘೋಷದೊಂದಿಗೆ ವಿಜೃಂಭಣೆಯಿಂದ ನೆರವೇರಿತು.


ಪರಾಭವನಾಮ ಸಂವತ್ಸರದ ಮೀನ-ಚೈತ್ರಮಾಸದ ಪುಷ್ಯ ನಕ್ಷತ್ರದ ಶುಭದಿನಕೂಡಿದ ಬ್ರಹ್ಮೋತ್ಸವದ ನಾಲ್ಕನೇತಿರುನಾಳ್ ದಿನದಂದು ಸಾಕ್ಷಾತ್ ಭಗವಂತನದ್ದೆಂದೇ ಪ್ರತೀತಿಯಿರುವ ವೈರಮುಡಿ ಕಿರೀಟವನ್ನು ಶ್ರೀದೇವಿ ಭೂದೇವಿಯರೊಂದಿಗೆ ಗರುಡಾರೂಢನಾದ ಚಲುವನಾರಾಯಣ ಸ್ವಾಮಿಗೆ ರಾತ್ರಿ 8.40 ಗಂಟೆಗೆ ತೊಡಿಸಲಾಯಿತು.

ಇದಕ್ಕೂ ಮುನ್ನಗರುಡದೇವನ ಉತ್ಸವ ನಡೆದನಂತರ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸಮಕ್ಷಮದಲ್ಲಿ ಮಹಾಮಂಗಳಾರತಿ ನೆರವೇರಿಸಿ, ಭಕ್ತರ ಗೋವಿಂದನಾಮ ಘೋಷಣೆಯೊಂದಿಗೆ ವೈರಮುಡಿ ಉತ್ಸವಕ್ಕೆ ಚಾಲನೆ ದೊರೆಯಿತು ವೈರಮುಡಿಧರಿಸಿ ಭವ್ಯತೋಮಾಲೆಗಳು ದಿವ್ಯಾಭರಣಗಳೊಂದಿಗೆ ಗಂಡಬೇರುಂಡರೂಪಿ ಪ್ರಭಾವಳಿಯೊಂದಿಗೆ ಅಲಂಕೃತನಾದ ಚಲುವನಾರಾಯಣಸ್ವಾಮಿಯ ವೈರಮುಡಿ ಉತ್ಸವ ಗಂಡುಬೇರುಂಡ ಸ್ವರೂಪಿಯಾದ ರಾಜಗೋಪುರದಬಳಿ ಬರುತ್ತಿದ್ದಂತೆ ಭಕ್ತರ ಹರ್ಷೋದ್ಗಾರ ಮುಗಿಲುಮುಟ್ಟಿತ್ತು.

ಸುಶ್ರಾವ್ಯ ಮಂಗಳವಾದ್ಯ ದೊಂದಿಗೆ ಸಾಗಿದ ಸ್ವಾಮಿಯ ಉತ್ಸವವನ್ನು ಮೈಸೂರು ಮಹಾರಾಜರು ವೈರಮುಡಿ ತ್ಸವ ವೀಕ್ಷಿಸುತ್ತಿದ್ದ ಪುಷ್ಪಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು. ಮಹಾರಾಜರು ದರ್ಶನ ಮಾಡಿದ್ದಾರೆಂದು ಪರಿಭಾವಿಸಿ ಮತ್ತೆ ಉತ್ಸವಕ್ಕೆ ಚಾಲನೆ ನೀಡಲಾಯಿತು.

ರಾಜಮುಡಿ ಕಿರೀಟ ಹಸ್ತಾಂತರ

ಮೇಲುಕೋಟೆಗೆ ಬಂದ ವೈರಮುಡಿ-ರಾಜಮುಡಿ ತಿರುವಾಭರಣ ಪೆಟ್ಟಿಗೆಗಳನ್ನು ಚಿನ್ನದ ಪಲ್ಲಕ್ಕಿಯಲ್ಲಿ ಭವ್ಯಮೆರವಣಿಗೆಯಲ್ಲಿ ತರಲಾಯಿತು. ರಾತ್ರಿ 7ಗಂಟೆಯ ವೇಳೆಗೆ ಚೆಲುವನಾರಾಯಣಸ್ವಾಮಿ ಸನ್ನಿಧಿಯ ಮುಂಭಾಗ ನವರಂಗದ ಮಧ್ಯಭಾಗದಲ್ಲಿ ರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ತೆರೆದು ರಾಜಮುಡಿ ಕಿರೀಟ, ಗಂಡ ಬೇರುಂಡ ಪದಕ ಪದ್ಮಪಾದ ಶಂಖ,ಚಕ್ರ, ಗದಾಂಗಿ ಸೇರಿದಂತೆ 16ವಿಧದ ವಜ್ರಾಭರಣಗಳನ್ನು ಜಿಲ್ಲಾಧಿಕಾರಿ ಕುಮಾರ ಸಮಕ್ಷಮ ಪರಿಶೀಲಿಸಿ ಸ್ಥಾನೀಕರು ಅರ್ಚಕರು ಪರಿಚಾರಕರಿಗೆ ಹಸ್ತಾಂತರ ಮಾಡಲಾಯಿತು. ವೈರಮುಡಿ ತಿರುವಾಭರಣ ಪೆಟ್ಟಿಗೆಯನ್ನು ನೇರವಾಗಿ ದೇವರ ಅಲಂಕಾರಕ್ಕೆ ನೀಡಲಾಯಿತು. ರಾಜಮುಡಿಕಿರೀಟ ಮತ್ತು ತಿರುವಾಭರಣಗಳು ಏ.2ರವರೆಗೆ ಬ್ರಹ್ಮೋತ್ಸವದಲ್ಲಿ ಚೆಲುವನಾರಾಯಣಸ್ವಾಮಿಯನ್ನು ಅಲಂಕರಿಸಲಿವೆ.



ವೈರಮುಡಿ ತಿರುವಾಭರಣ ಪೆಟ್ಟಿಗೆಗೆ ವಿಶೇಷ ಪೂಜೆ

ಮೇಲುಕೋಟೆಯ ಯತಿರಾಜದಾಸರ್ ಗುರುಪೀಠದಲ್ಲಿ ಕೊನೆಯ ಸಾಂಪ್ರದಾಯಿಕ ಪೂಜೆ ನೆರವೇರಿದ ನಂತರ ವೈರಮುಡಿ-ರಾಜಮುಡಿ ತಿರುವಾಭರಣಪೆಟ್ಟಿಗೆಗಳಿದ್ದ ಬಂಗಾರದ ಪಲ್ಲಕ್ಕಿ ದೇವಾಲಯ ಪ್ರವೇಶಿಸಿದರು. ಇದಕ್ಕೂ ಮೊದಲು ಪೇಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮೇಲುಕೋಟೆ ಒಕ್ಕಲಿಗ ಮುಖಂಡರು. ಆದಿಚುಂಚನಗಿರಿ ಶಾಖಾಮಠದ ಮುಂದೆ ಚುಂಚನಗಿರಿ ಶ್ರೀಗಳು ಪೂಜೆ ಸಲ್ಲಿಸಿದರು. ಪ್ರಥಮಪೂಜೆ ಮಂಡ್ಯದ ಲಕ್ಷ್ಮೀಜನಾರ್ಧನ ದೇಗುಲದಲ್ಲಿ ನಡೆದರೆ ಕೊನೆಯ ಪೂಜೆ ಯತಿರಾಜದಾಸರ್ ಗುರುಪೀಠದಿಂದ ಸಾಂಪ್ರದಾಯಿಕ ಪದ್ಧತಿಯಂತೆ ನೆರವೇರಿತು.



ಗಮನ ಸೆಳೆದ ಮಹಾರಾಜರ ದರ್ಶನ ಮಂಟಪ

ಈ ವರ್ಷ ಮಹಾರಾಜರು ವೈರಮುಡಿ ದರ್ಶನಮಾಡುತ್ತಿದ್ದ ಮಂಟಪವನ್ನು ವಿವಿದ ಪುಷ್ಪ ಹಾಗೂ ತಳಿರುತೋರಣದಿಂದ ನಿರ್ಮಿಸಿದ್ದು ಅರ್ಥಪೂರ್ಣವಾಗಿತ್ತು. ಕೇವಲ ನಡಚಪ್ಪರದಿಂದ ಮಾಡುತ್ತಿದ್ದ ಈ ವ್ಯವಸ್ಥೆ ಬಗ್ಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಕಳೆದ ವರ್ಷ ಆಕರ್ಷಕ ಮಂಟಪ ನಿರ್ಮಿಸಿ ಬದಲಾವಣೆ ತಂದಿದ್ದು ಈ ವರ್ಷ ಮತ್ತಷ್ಟು ಆಕರ್ಷಕವಾಗಿ ಮಂಟಪ ನಿರ್ಮಿಸಲಾಗಿತ್ತು ಇದೇ ಪ್ರಥಮವಾಗಿ ನರಸಿಂಹಸ್ವಾಮಿ ಬೆಟ್ಟ ದೇವಾಲಯದ ರಾಜಗೋಪುರ ಭುವನೇಶ್ವರಿ ಮಂಟಪ, ರಾಯಗೋಪುರ ಮಾದರಿಯಲ್ಲಿ ಸ್ವಾಗತಕಮಾನುಗಳನ್ನು ನಿರ್ಮಿಸಿದ್ದು ಭಕ್ತರ ಆಕರ್ಷಣೆಗೆ ಕಾರಣವಾಗಿತ್ತು.

ಭಕ್ತರ ಪ್ರಶಂಸೆಗೆ ಪಾತ್ರವಾದ ವ್ಯವಸ್ಥೆಗಳು

ದೇವಾಲಯದ ಪ್ರಾಂಗಣದಲ್ಲಿ ಸಾಮಾನ್ಯ ಭಕ್ತರು ವಿಶ್ರಾಂತಿಗಾಗಿ ಹಾಕಿದ್ದ ರೆಡ್ ಕಾರ್ಪೆಟ್ ಕುಡಿಯುವ ನೀರಿನ ವ್ಯವಸ್ಥೆ, ನಿರಂತರ ಸ್ವಚ್ಚತೆ, ಪೊಲೀಸ್ ಸಹಾಯಕೇಂದ್ರಗಳು, ವೈಧ್ಯಕೀಯ ಸೇವೆ, ರಾಜ್ಯರಸ್ತೆಸಾರಿಗೆ ಸಂಸ್ಥೆಯ ಬಸ್ ಸೌಕರ್ಯ, ದೇವಾಲಯದ ಒಳಭಾಗದ ಧಾರ್ಮಿಕ ಕೈಂಕರ್ಯಗಳನ್ನು ಬಿತ್ತರಿಸಲು ಹಾಕಿದ್ದ ಎಲ್.ಇ.ಡಿ ಪರದೆಗಳು ಉತ್ಸವದ ಬೀದಿಗಳಲ್ಲಿದ್ದ ತೆರೆದ ಚರಂಡಿಗಳಲ್ಲಿ ಭಕ್ತರು ಬೀಳುವುದನ್ನು ತಪ್ಪಿಸಲು ಚರಂಡಿಮೇಲೆ ಹಲಗೆಗಳನ್ನು ಹಾಕಿದ ಸೇರಿದಂತೆ ಮಾಡಿದ ವ್ಯವಸ್ಥೆಗಳು ಭಕ್ತಸ್ನೇಹಿಯಾಗಿತ್ತು.



ಕಿರುಸುದ್ದಿ

ಅಸ್ಸಾಂ ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚು: ಡಿಕೆಶಿ

ಬೆಂಗಳೂರು: ಅಸ್ಸಾಂ ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದು, ಜನರು ನರಳುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಅವರು ಕೊಟ್ಟ ಭರವಸೆಗಳು ಈಡೇರಿಲ್ಲ. ಹೀಗಾಗಿ ಅಸ್ಸಾಂನಲ್ಲಿ ಭಾರಿ ಬದಲಾವಣೆ ಆಗಲಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.



ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬಳಿ ಮಾಧ್ಯಮಗಳಿಗೆ ಶನಿವಾರ ಪ್ರತಿಕ್ರಿಯೆ ನೀಡಿದರು. ನಾನು ಅಸ್ಸಾಂ ಚುನಾವಣಾ ಪ್ರಚಾರಕ್ಕೆ ತೆರಳುತ್ತಿದ್ದು,ಕೇರಳಕ್ಕೂ ಹೋಗಬೇಕು ಹಾಗೂ ಕರ್ನಾಟಕದ ಉಪಚುನಾವಣೆಗಳನ್ನು ನೋಡಿಕೊಳ್ಳಬೇಕು. ಅಸ್ಸಾಂನಲ್ಲಿ ಆಡಳಿತ ಕುಸಿದಿದೆ. ಈ ಕಾರಣಕ್ಕೆ ಅಲ್ಲಿನ ಜನ ಬದಲಾವಣೆ ಬಯಸಿ ದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ ಜನರ ಪ್ರಗತಿ ಆಗಿಲ್ಲ ಎಂದರು. ಅಸ್ಸಾಂನಲ್ಲಿ ಸಚಿವ ಸಂಪುಟ ಪುನಾರಚನೆ ಬಳಿಕ ಅಸ್ಸಾಂ ಬಿಜೆಪಿಯಲ್ಲಿ ಆಂತರಿಕ ಕಲಹ ಹೆಚ್ಚಿದೆ. ಅವರ ಪಕ್ಷದಲ್ಲಿ ಯಾರೂ ಸಂತೋಷವಾಗಿಲ್ಲ, ಬಿಜೆಪಿಗರು ತಮ್ಮಪಕ್ಷದಲ್ಲಿ ಅವಕಾಶವಿಲ್ಲ ಎಂದು ಬೇಸರಗೊಂಡಿದ್ದಾರೆ ಎಂದರು.

ಖಾಸಗಿ ಆಸ್ಪತ್ರೆಗಳಲ್ಲಿ ಒಪಿಡಿ ಚಿಕಿತ್ಸೆಗೆ ಮಾತ್ರ ಅವಕಾಶ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳ ವೈದ್ಯರು ತಮ್ಮ ಕರ್ತವ್ಯದ ಅವಧಿ ಬಳಿಕ ಖಾಸಗಿ ಆಸ್ಪತ್ರೆಗಳಲ್ಲಿ ಒಳ ರೋಗಿಗಳಿಗೆ ಚಿಕಿತ್ಸೆ ನೀಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದ್ದು, ಕೇವಲ ಹೊರ ರೋಗಿಗಳಿಗೆ ಮಾತ್ರ ಚಿಕಿತ್ಸೆ ನೀಡಬಹುದಾಗಿದೆ ಎಂದು ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ಸರ್ಕಾರಿ ವೈದ್ಯರು ಮತ್ತು ಸರ್ಕಾರಿ ಅರೆ ವೈದ್ಯಕೀಯ ಸಿಬ್ಬಂದಿ ಖಾಸಗಿ ವೈದ್ಯಕೀಯ ವೃತ್ತಿ ಮಾಡುತ್ತಿರುವ ಬಗ್ಗೆ ಆಯಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಹಾಗೂ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರಿಗೆ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸುವ ಮುಖಾಂತರ ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಿದ ಕುರಿತು ಖಾತರಿಪಡಿಸಬೇಕಾಗಿರುತ್ತದೆ. ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಕೇವಲ ಹೊರರೋಗಿಗಳಿಗೆ ಚಿಕಿತ್ಸೆ (ಒಪಿಡಿ) ನೀಡುತ್ತಿರುವ ಕುರಿತು ದೃಢಪಡಿಸಬೇಕಿದೆ.

ಕಾರು ಡಿಕ್ಕಿ: ಅಂಬುಲೆನ್ಸ್ ಪಲ್ಟಿ

ಬಾಗಲಕೋಟೆ: ನವನಗರದ ಬಸ್ ನಿಲ್ದಾಣ ಹತ್ತಿರ ಹಾಯ್ದು ಹೋಗುತ್ತಿದ್ದ ಅಂಬುಲೆನ್ಸ್‌ಗೆ ಇನೋವಾ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಅಂಬುಲೆನ್ಸ್ ಪಲ್ಟಿಯಾದ ಘಟನೆ ಶುಕ್ರವಾರ ಸಾಯಂಕಾಲ ನಡೆದಿದೆ. ನವನಗರದ ನಗರದ ಬಸ್ ನಿಲ್ದಾಣದ ಸರ್ಕಲ್ ಬಳಿಯ ಪೆಟ್ರೋಲ್ ಬಂಕ್ ಬಳಿ ರಭಸವಾಗಿ ಬಂದ ಇನ್ನೋವಾ ಕಾರು ಬಾಗಲಕೋಟೆಯ ಎಪಿಎಂಸಿ ಮಾರ್ಗದಿಂದ ನವನಗರದ ಜಿಲ್ಲಾ ಆಸ್ಪತ್ರೆ ಕಡೆಗೆ ಹೋಗುತ್ತಿದ್ದ ಅಂಬುಲೆನ್ಸ್ ಗೆ ಡಿಕ್ಕಿಯಿಂದ ತತಕ್ಷಣವೇ ಪಲ್ಟಿಯಾಗಿದೆ. ಜಿಲ್ಲಾಸ್ಪತ್ರೆ ಕಡೆಗೆ ಸಾಗುತ್ತಿದ್ದ ಅಂಬುಲೆನ್ಸ್ ಹಾಗೂ ಕಾಳಿದಾಸ ವೃತ್ತದ ದಿಕ್ಕಿಗೆ ತೆರಳುತ್ತಿದ್ದ ಕಾರಿನ ನಡುವೆ ಈ ಅಪಘಾತ ಸಂಭವಿಸಿದೆ. ಡಿಕ್ಕಿಯ ಪರಿಣಾಮ ಅಂಬುಲೆನ್ಸ್ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದೆ. ಘಟನೆಯ ವೇಳೆ ಅಂಬುಲೆನ್ಸ್‌ನಲ್ಲಿದ್ದ ಕೆಲ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ತಕ್ಷಣವೇ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಅಪಘಾತದ ಬಳಿಕ ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಬಾಗಲಕೋಟೆ ಸಂಚಾರಿ ಪೊಲೀಸರು ಪರಿಶೀಲನೆ ನಡೆಸಿ, ವಾಹನಗಳನ್ನು ತೆರವುಗೊಳಿಸಿ ಸಂಚಾರವನ್ನು ಸುಗಮಗೊಳಿಸಿದರು.

ತಮಿಳುನಾಡು ಚುನಾವಣಾ ಪ್ರಚಾರಕ್ಕೆ ಹೋಗಲ್ಲ: ಸಿದ್ದರಾಮಯ್ಯ

ಎರಡೂ ಕಡೆ ಗೆಲುವು: ಸಿಎಂ

ಮೈಸೂರು: ವಿಧಾನಸಭೆಯ ಎರಡು ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಯಲ್ಲಿ ಎರಡು ಕ್ಷೇತ್ರಗಳನ್ನೂ ನಾವು ಗೆಲ್ಲುತ್ತೇವೆ. ಅಲ್ಲದೇ ಎಲ್ಲಾ ಚುನಾವಣೆಗಳಲ್ಲೂ ಕಠಿಣ ಸ್ಪರ್ಧೆ ಇರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶನಿವಾರ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರದ ಉಪಚುನಾವಣೆ ನಡೆಯುತ್ತಿದೆ.

ಎರಡು ಕ್ಷೇತ್ರಗಳಲ್ಲಿ ನಾವೇ ಗೆಲ್ಲುತ್ತೇವೆ. ದಾವಣಗೆರೆ ಕ್ಷೇತ್ರದಲ್ಲಿ ಯಾವ ಗೊಂದಲವೂ ಇಲ್ಲ. ಕಳೆದ ಮೂರು ಉಪ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ನಾವೇ ಗೆದ್ದಿದ್ದೇವೆ. ಏ. 5ರಂದು ಕೇರಳಕ್ಕೆ ಪ್ರಚಾರಕ್ಕೆ ಹೋಗುತ್ತೇನೆ. ತಮಿಳುನಾಡು ಚುನಾವಣಾಪ್ರಚಾರಕ್ಕೆಹೋಗುವುದಿಲ್ಲ.ಕೇರಳದಿಂದ ಬಂದ ಮೇಲೆ ಬಾಗಲಕೋಟೆ,ದಾವಣಗೆರೆ ಕ್ಷೇತ್ರದಲ್ಲಿ ಪ್ರಚಾರ ಮಾಡುವೆ ಎಂದರು.

ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶಕ್ಕೂ,ಸಿಎಂ ಕುರ್ಚಿಯ ವಿಚಾರಕ್ಕೂ ಸಂಬಂಧವೇ ಇಲ್ಲ. ನಮ್ಮದು ಹೈಕಮಾಂಡ್ ಪಕ್ಷ. ಹೈಕಮಾಂಡ್ ಹೇಳಿದರೆ ಉಳಿದ ಎರಡು ಬಜೆಟ್ ಮಂಡಿಸುತ್ತೇನೆ ಎಂದು ಅಧಿವೇಶನದಲ್ಲಿ ಹೇಳಿರುವೆ. ಈಗಲೂ ಅದನ್ನೇ ಹೇಳುತ್ತೇನೆ. ಫಲಿತಾಂಶಕ್ಕೂ, ಸಿಎಂ ಸ್ಥಾನದ ವಿಷಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಸ್ಪಷ್ಟಪಡಿಸಿದರು.



ಡ್ರಗ್ಸ್ ಮುಕ್ತ ಕರ್ನಾಟಕ

ಮೈಸೂರಿನಲ್ಲೂ ಡ್ರಗ್ಸ್ ತಯಾರಿಕೆ ಪತ್ತೆಯಾಗಿರುವುದಕ್ಕೆ ಪ್ರತಿಕ್ರಿಯಿಸಿದ ಸಿಎಂ, ಈಗಷ್ಟೇ ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ. ಡ್ರಗ್ಸ್ ಜಾಲ ಪತ್ತೆ ಮಾಡಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಕರ್ನಾಟಕವನ್ನು ಡ್ರಗ್ಸ್ ಮುಕ್ತ ರಾಜ್ಯವನ್ನಾಗಿ ಮಾಡಲು ನಾವು ಹೋರಾಡುತ್ತಿದ್ದೇವೆ. ಡ್ರಗ್ಸ್‌ನ ಲಿಂಕ್ ಯಾವುದೇ ಆಗಿರಲಿ, ಏನೇ ಆಗಿದ್ದರೂ ಕೂಡ ನಾವು ಅದನ್ನು ತಡೆಯುತ್ತೇವೆ ಎಂದರು.

ಹಿಂದಿ ಕಡ್ಡಾಯ ಹೇರಿಕೆಯಿಲ್ಲ

ಶಿಕ್ಷಣದಲ್ಲಿ ದ್ವಿಭಾಷಾ ಸೂತ್ರ ಜಾರಿಯ ವಿಚಾರದಲ್ಲಿ ರಾಜ್ಯಸರ್ಕಾರ ಮಾಡಿರುವ ನಿರ್ಧಾರದಲ್ಲಿ ಅಚಲವಾಗಿದ್ದು, ಎಲ್ಲರೂ ಸರ್ಕಾರದ ತೀರ್ಮಾನವನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿದರು. ಶಿಕ್ಷಣದಲ್ಲಿ ತ್ರಿಭಾಷಾ ನೀತಿಯ ಬದಲಿಗೆ ದ್ವಿಭಾಷಾ ನೀತಿಯನ್ನು ಜಾರಿಗೆ ತರಲು ಸರ್ಕಾರ ತೀರ್ಮಾನಿಸಿದೆ. ಯಾರೋ ಕೆಲವರು ವಿರೋಧ ಮಾಡಿದರು ಎನ್ನುವ ಕಾರಣಕ್ಕಾಗಿ ನಾವು ಹಿಂದೆ ಸರಿಯುವುದಿಲ್ಲ. ಎಲ್ಲಾ ದೃಷ್ಟಿಕೋನದಿಂದಲೂ ಪರಾಮರ್ಶಿಸಿ, ಸರ್ಕಾರ ನಿರ್ಧಾರ ಮಾಡಿದೆ ಎಂದು ಸಮರ್ಥಿಸಿಕೊಂಡರು. ಸರ್ಕಾರದ ನಿರ್ಧಾರವನ್ನು ಒಪ್ಪಿಕೊಳ್ಳಬೇಕಾಗಿದೆ ಎಂದರು.

ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಶಾಸಕ ಕೆ. ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ. ಡಿ.ತಿಮ್ಮಯ್ಯ, ಕೆ.ಶಿವಕುಮಾರ್, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಅನಂತು, ಕಾಡಾ ಅಧ್ಯಕ್ಷ ಎಚ್.ಡಿ.ಗಣೇಶ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ ಮತ್ತಿತರರು ಹಾಜರಿದ್ದರು.

ಕಾಂಗ್ರೆಸ್ ತಲೆಯಲ್ಲಿ ಮಾತ್ರ ಮನುವಾದ: ಛಲವಾದಿ

ಬೆಂಗಳೂರು: ಸರ್ವರಿಗೂ ಸಮಪಾಲು, ಸಮಬಾಳು ಕೊಡುವುದು ಬಿಜೆಪಿಯ ಕರ್ತವ್ಯ. ಮನುವಾದ ಬದುಕಿ ರುವುದು ಕಾಂಗ್ರೆಸ್ಸಿನ ತಲೆಯಲ್ಲಿ ಮಾತ್ರ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಶನಿವಾರ ಮಾಧ್ಯಮಗಳ ಜತೆ ಮಾತನಾಡಿ, ಮುಸಲ್ಮಾನ ಬಂಧುಗಳೆಲ್ಲ ನಮಗೆ ಮತ ಹಾಕುತ್ತಾರೆಂದು ನಾನು ಹೇಳಲಾರೆ. ಯಾಕೆಂದರೆ ಕಾಂಗ್ರೆಸ್ಸಿನವರು ಅವರ ತಲೆಗೆ ಬಿಟ್ಟ ಹುಳಗಳು ಸತ್ತಿಲ್ಲ, ಅವು ಬದುಕಿವೆ ಎಂದರು.

ಮುಸಲ್ಮಾನರು ಭಾರತದಲ್ಲಿ ಸುಭದ್ರವಾಗಿ ಬದುಕುತ್ತಿದ್ದಾರೆ. ಅವರನ್ನು ದಾರಿ ತಪ್ಪಿಸಿ ನಿಮ್ಮ ಮತಬ್ಯಾಂಕ್ ಮಾಡಿದ್ದೀರಿ. ಅವರೆಲ್ಲ ವಿರೋಧ ಮಾಡಿದರೂ ದೇಶ ಆಳುತ್ತಿದ್ದೇವೆ. ಅಂಬೇಡ್ಕರರ ಸಂವಿಧಾನ ಎಲ್ಲ ರೀತಿಯ ರಕ್ಷಣೆಯನ್ನು ಅವರಿಗೂ ಕೊಟ್ಟಿದೆ. ಆದ್ದರಿಂದ ಅವರು ಸುಭದ್ರತೆಯಿಂದ ಬದುಕುತ್ತಿದ್ದಾರೆ ಎಂದರು.

ಕಾಂಗ್ರೆಸ್ಸಿಗರೇ, ಬಿಜೆಪಿ ಗುಮ್ಮ ತೋರಿಸಿ ಎಷ್ಟು ದಿನ ನೀವು ಮುಸಲ್ಮಾನರನ್ನು ಇಟ್ಟುಕೊಳ್ಳಲು ಸಾಧ್ಯ. ಅವರಲ್ಲೂ ಯುವಕರು, ತಿಳಿದವರು ಇದ್ದು ಯೋಚನೆ ಮಾಡುತ್ತಾರೆ. ಕಾಂಗ್ರೆಸ್ ನಮಗೇನು ಮಾಡಿದೆ, ಮೋದಿಯವರು ನಮಗೇನಾದರೂ ಅನ್ಯಾಯ, ವಂಚನೆ ಮಾಡಿದ್ದಾರಾ ಎಂದು ಯೋಚಿಸುತ್ತಾರೆ. ಆ ಜನಾಂಗಗಳು ಯೋಚನೆಮಾಡಿಸ್ವಾಭಿಮಾನವನ್ನು ಉಳಿಸಿಕೊಳ್ಳಲಿ ಎಂದು ಹೇಳಿದರು.

ಖೋತಾ ಬಜೆಟ್

ರಾಜ್ಯದಲ್ಲಿ ಈ ಬಾರಿಯೂ ಖೋತಾ ಬಜೆಟ್ ಇದೆ. ಮುಖ್ಯಮಂತ್ರಿಗಳು 1 ಲಕ್ಷದ 32 ಸಾವಿರ 190 ಕೋಟಿ ಸಾಲ ಮಾಡಿದ್ದಾರೆ. ಇದಕ್ಕಾಗಿಯೇ ಅವರಿಗೆ ಸಾಲರಾಮಯ್ಯ ಎಂಬ ಬಿರುದು ಸಿಕ್ಕಿದೆ. ಸಾಲ ಮಾಡಿದ್ದನ್ನು ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಈ ಬಾರಿಯ ರಾಜ್ಯ ಬಜೆಟ್ ಅಧಿವೇಶನವು 20 ದಿನಗಳ ಕಾಲ ನಡೆದರೂ ಉತ್ತರ ಸಿಕ್ಕಿದ್ದು ಮಾತ್ರ ಬಹಳ ಕಡಿಮೆ ಎಂದರು.ಮಹದೇವಪ್ಪ ಅವರು ಸಮಾಜ ಕಲ್ಯಾಣ ಸಚಿವರಾದ ಬಳಿಕ ದಲಿತರನ್ನು ಸರ್ವನಾಶ ಮಾಡಿದ್ದಾರೆ. ಟೆಂಡರ್ ಇಲ್ಲದೇ ಗುತ್ತಿಗೆ ನೀಡುತ್ತಾರೆ. ಎಸ್‌ಇಪಿ, ಟಿಎಸ್‌ಪಿ ಹಣದಲ್ಲಿ ಯಾರಿಂದಲೋ ಒಂದು ಪತ್ರ ಪಡೆದು 5 ಕೋಟಿ, 10 ಕೋಟಿ ಎಂದು ಬರೆದುಕೊಡುತ್ತಾರೆ ಎಂದು ಟೀಕಿಸಿದರು.

ಟಿಕೆಟ್ ನಿರಾಕರಿಸಿದ ಶಾಸಕ ಸುರೇಶ್ ಕುಮಾರ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯ ವೀಕ್ಷಣೆಯ ಟಿಕೆಟ್ ಅನ್ನು ಶಾಸಕ ಸುರೇಶ್ ಕುಮಾರ್ ನಿರಾಕರಿಸಿದ್ದು, ಮುಂಬರುವ ಐಪಿಎಲ್ ಪಂದ್ಯಗಳಿಗೆ ಸಂಬಂಧಿಸಿದಂತೆ ನನ್ನ ಹೆಸರಿನಲ್ಲಿ ಯಾವುದೇ ಟಿಕೆಟ್ ಅಥವಾ ಪಾಸ್‌ಗಳನ್ನು ವಿತರಿಸಬಾರದೆಂದು ಸಭಾಧ್ಯಕ್ಷ ಯು.ಟಿ ಖಾದರ್‌ಗೆ ಪತ್ರ ಬರೆದಿದ್ದಾರೆ.



ಐಬಿಎ ವ್ಯಾಪ್ತಿಯಲ್ಲಿ ಜನಸಾಮಾನ್ಯರು ಅನುಭವಿಸುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಸದನದಲ್ಲಿ ಚರ್ಚೆ ನಡೆಯುತ್ತಿದ್ದಾಗ, ದಿಢೀರನೆ ಚಿನ್ನಸ್ವಾಮಿ ಸ್ಟೇಡಿಯಂನ ಐಪಿಎಲ್ ಪಂದ್ಯ, ಶಾಸಕರಿಗೆ ಟಿಕೆಟ್ ಹಂಚಿಕೆ ಹಾಗೂ ಶಾಸಕರ ಮರ್ಯಾದೆಯ ಕುರಿತು ಚರ್ಚೆಗಳು ಪ್ರಾರಂಭವಾದದ್ದು ತಮಗೆ ತಿಳಿದೇ ಇದೆ. ಜನರ ಪರವಾಗಿ ಧ್ವನಿ ಎತ್ತಬೇಕಾದ ಸದನದಲ್ಲಿ ಜನಸೇವಕರಾದ ನಮಗೆ ವಿಐಪಿ ಮರ್ಯಾದೆ ಸಿಗಬೇಕೆಂಬ ಆಗ್ರಹ ವ್ಯಕ್ತವಾಗುತ್ತಿರುವುದು ನಿಜಕ್ಕೂ ದುರಂತ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಜನಸಾಮಾನ್ಯರ ಅದೆಷ್ಟೋ ಗಂಭೀರ ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ ವರ್ಷಾನುಗಟ್ಟಲೆ ಪರಿಹಾರ ಸಿಗುವುದಿಲ್ಲ, ಆದರೆ ಶಾಸಕರ ಸೌಲಭ್ಯ ಟಿಕೆಟ್ ವಿಚಾರ ಬಂದಾಗ 24 ಗಂಟೆಯೊಳಗೆ ಸ್ಪಂದಿಸುವ ಉತ್ಸುಕತೆಯನ್ನು ಸರ್ಕಾರತೋರಿರುವುದುಜನಸಾಮಾನ್ಯರಲ್ಲಿ ಆಶ್ಚರ್ಯ ಹಾಗೂ ಜನಪ್ರತಿನಿಧಿಗಳ ಬಗ್ಗೆ ತಿರಸ್ಕಾರ ಮೂಡುವಂತೆ ಮಾಡಿದೆ ಬೇಸರ ವ್ಯಕ್ತಪಡಿಸಿದ್ದಾರೆ.

ಮಾಧ್ಯಮಗಳ ವರದಿ ಪ್ರಕಾರ ಶಾಸಕರಿಗೆ ತಲಾ 2 ಹಾಗೂ ಮುಂದಿನ ದಿನಗಳಲ್ಲಿ 5 ಟಿಕೆಟ್, ಪಾಸ್ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿದುಬಂದಿದೆ. ಸಮಾಜವಾದಿ ಎಂದು ಹೇಳಿಕೊಳ್ಳುವ ಸರ್ಕಾರದ ಆಡಳಿತದಲ್ಲಿ ಈ ವಿಐಪಿ ಸಂಸ್ಕೃತಿಗೆ ಪುರಸ್ಕಾರ ಸಿಗುತ್ತಿರುವುದು ಆಘಾತಕಾರಿ ಎಂದಿದ್ದಾರೆ.

ಕಳೆದ ವರ್ಷ ಇದೇ ಐಪಿಎಲ್ ಪಂದ್ಯದ ಸಂದರ್ಭದಲ್ಲಿ ನಡೆದ ದುರಂತದಲ್ಲಿ 11 ಜನ ಅಮಾಯಕರು ಪ್ರಾಣ ಕಳೆದುಕೊಂಡ ಘಟನೆಯ ಆಕ್ರಂದನ ಇಂದಿಗೂ ನನ್ನ ಕಿವಿಯಲ್ಲಿ ಮಾರ್ದನಿಸುತ್ತಿದೆ. ಆ ನೋವಿನ ನಡುವೆ ನಾವು ಐಪಿಎಲ್ ಟಿಕೆಟ್‌ಗಾಗಿ ಸದನದಲ್ಲಿ ಪಟ್ಟು ಹಿಡಿಯುವುದು ನಮ್ಮನ್ನು ಜನರ ದೃಷ್ಟಿಯಲ್ಲಿ ಇನ್ನಷ್ಟು ಕನಿಷ್ಠರನ್ನಾಗಿಸುತ್ತದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಹಾಗೂ ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿ, ಸರ್ಕಾರ ಅಥವಾ ಕೆಎಸ್‌ಸಿಎ ವತಿಯಿಂದ ಶಾಸಕರಿಗೆ ನೀಡಲಾಗುವ ಐಪಿಎಲ್ ಪಂದ್ಯದ ಯಾವುದೇ ಪಾಸ್ ಅಥವಾ ಟಿಕೆಟ್‌ಗಳನ್ನು ನಾನು ಸವಿನಯವಾಗಿ ನಿರಾಕರಿಸುತ್ತಿದ್ದೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಬಿಜೆಪಿಯವರಿಗೆ ನಿರಾಸೆ: ಎಂ.ಬಿ.ಪಾಟೀಲ್

ಬೆಂಗಳೂರು: ರಾಜ್ಯದ2 ವಿಧಾನಸಭಾಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿಯವರಿಗೆ ನಿರಾಸೆಯಾಗುವುದು ಮಾತ್ರವಲ್ಲ, 2028ರ ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲೂ ನಿರಾಸೆಯಾಗಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಶನಿವಾರಸುದ್ದಿಗಾರರೊಂದಿಗೆಮಾತನಾಡಿದ ಅವರು, ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲುವುದು ಮಾತ್ರವಲ್ಲ, 2028ರ ವಿಧಾನಸಭೆಯಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೊಮ್ಮೆ ಗೆದ್ದು ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಗೊಂದಲ ಬಗೆಹರಿದಿದೆ. ಬಂಡಾಯವಾಗಿ ಸ್ಪರ್ಧಿಸಿದ್ದ ಸಾಧಿಕ್ ಪೈಲ್ವಾನ್ ಅವರ ಮನವೊಲಿಸಲಾಗಿದೆ. ಅವರು ಕಾಂಗ್ರೆಸ್ ಅಭ್ಯರ್ಥಿ ಪರ ಚುನಾವಣೆ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ. ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರೂ ಸೇರಿದಂತೆ ನಾಯಕರು ಅವರ ಮನವೊಲಿಸಿದ್ದಾರೆ ಎಂದರು.

ಅಲ್ಪಸಂಖ್ಯಾತರಿಗೆ ನಾವು ಕೇವಲ ಭರವಸೆ ನೀಡುತ್ತಿಲ್ಲ. ಈಗಾಗಲೇ ಮೂರು ಬಾರಿ ಅಬ್ದುಲ್ ಜಬ್ಬಾರ್ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿದ್ದೇವೆ. ಮುಂದೆಯೂ ರಾಜ್ಯಸಭೆ ಸದಸ್ಯರನ್ನಾಗಿ ಮಾಡುವ ಅವಕಾಶ ಇದೆ ಎಂದು ತಿಳಿಸಿದರು. ಬಾಗಲಕೋಟೆಯಲ್ಲಿ ನಮ್ಮ ಪಕ್ಷದ ಸಾಕಷ್ಟು ಸ್ಥಳೀಯ ನಾಯಕರಿದ್ದು, ಮತದಾರರ ಮನಗೆಲ್ಲುವ ಪ್ರಯತ್ನ ಮಾಡುತ್ತಿದ್ದಾರೆ. ಶಾಸಕರಾಗಿದ್ದವರು ಮೃತಪಟ್ಟಾಗ ಅವರ ಕುಟುಂಬದವರಿಗೆ ಟಿಕೆಟ್ ಕೊಡುವ ಪದ್ಧತಿಯನ್ನು ಮುಂದುವರೆಸಿದ್ದೇವೆ. ಈ ವಿಚಾರದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಸಚಿವ ಜಮೀರ್ ಅಹಮ್ಮದ್ ಖಾನ್ ಕೂಡ ಉಪ ಚುನಾವಣೆಯ ಪ್ರಚಾರದಲ್ಲಿ ಭಾಗಿಯಾಗುತ್ತಾರೆ ಎಂದು ಹೇಳಿದರು.



ಮಾತೃಭಾಷೆಗೆ ಆದ್ಯತೆ

ಶಿಕ್ಷಣದಲ್ಲಿ ಮಾತೃಭಾಷೆಗೆ ಆದ್ಯತೆ ದೊರೆಯಬೇಕು. ಪ್ರಾಥಮಿಕ ಶಿಕ್ಷಣದಿಂದ ವೈದ್ಯಕೀಯ ಶಿಕ್ಷಣದವರೆಗೂ ಕನ್ನಡ ಭಾಷೆ ಕಲಿಕೆ ಇರಬೇಕು, ಕನ್ನಡದ ಜೊತೆಗೆ ಹಿಂದಿ ಕಲಿಕೆಯೂ ಆಗಬೇಕು. ಹಿಂದಿ ಭಾಷೆ ಕಲಿತರೆ ತಪ್ಪಿಲ್ಲ. ಆದರೆ ಹಿಂದಿಯನ್ನು ರಾಷ್ಟ್ರ ಭಾಷೆಯನ್ನಾಗಿ ಇನ್ನು ಒಪ್ಪಿಕೊಂಡಿಲ್ಲ. ಹೀಗಾಗಿ ಸರ್ಕಾರ ಈ ರೀತಿಯ ತೀರ್ಮಾನ ತೆಗೆದುಕೊಂಡಿರಬೇಕು ಎಂದು ಸಚಿವ ಪಾಟೀಲ್ ತಿಳಿಸಿದರು. ತೈಲ ಅಭಾವ ಪರಿಸ್ಥಿತಿಯು ಕೇವಲ ಕೈಗಾರಿಕಾ ಮಾತ್ರವಲ್ಲ ಎಲ್ಲಾ ಕ್ಷೇತ್ರಗಳ ಮೇಲೂ ವ್ಯತಿರಿಕ್ತ ಪರಿಣಾಮವಾಗುತ್ತದೆ. ಇದು ರಾಜ್ಯಕ್ಕೆ ಮಾತ್ರವಲ್ಲ ದೇಶ ಹಾಗೂ ಜಗತ್ತಿಗೂ ಅನ್ವಯ ಆಗುತ್ತದೆ ಎಂದು ಪಾಟೀಲ್ ಹೇಳಿದರು.

ಮತ ಪ್ರಚಾರದ ವೇಳೆ ಪ್ರದೀಪ್ ಈಶ್ವರ್ ಹೈಡ್ರಾಮಾ!

ದಾವಣಗೆರೆ: ತಾಕತ್ತಿದ್ದರೆ ದಾವಣಗೆರೆಗೆ ಬಾ... ಎಂಬ ಮಾಜಿ ಮೇಯರ್ ಬಿ.ಜಿ. ಅಜಯಕುಮಾರ್ ಸವಾಲು ಸ್ವೀಕರಿಸಿದ್ದ ಶಾಸಕ ಪ್ರದೀಪ್ ಈಶ್ವರ್ ಶನಿವಾರ ನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಎಂ.ಶಾಮನೂರು ಪರ ಪ್ರಚಾರಕ್ಕೆ ಆಗಮಿಸಿದ ವೇಳೆ ಹೈಡ್ರಾಮಾ ನಡೆಯಿತು. ನಗರದ ಕೆ.ಬಿ ಬಡಾವಣೆಯಲ್ಲಿ ರಾಘವೇಂದ್ರ ಸ್ವಾಮಿ ಮಠದಲ್ಲಿ ಪೂಜೆ ಸಲ್ಲಿಸಿದ ನಂತರ ತೆರೆದ ವಾಹನದಲ್ಲಿ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ರೋಡ್ ಶೋ ಆರಂಭಿಸಿದರು.

ಬಿಜೆಪಿ ಕಚೇರಿಗೆ ಸಾಗುವ ಮಾರ್ಗದಲ್ಲಿ ಪ್ರದೀಪ್ ಈಶ್ವರ್ ಕಾರಿನ ಮೇಲೆನಿಂತುಬರುತ್ತಿದ್ದಂತೆಬಿಜೆಪಿ, ಕಾಂಗ್ರೆಸ್ ಗುಂಪುಗಳುಮುಖಾಮುಖಿಯಾಗಿ,ಪರಸ್ಪರರವಿರುದ್ಧಘೋಷಣೆಕೂಗತೊಡಗಿದರು.ಶಾಸಕಪ್ರದೀಪ್ ಈಶ್ವರ್ ಕಾಂಗ್ರೆಸ್ ಬಾವುಟ ಹಿಡಿದು, ತೊಡೆ ತಟ್ಟುತ್ತಾ, ತಲೆಗೂದಲನ್ನು ಸವರಿಕೊಂಡವರಂತೆ ತಮ್ಮ ಕೂದಲನ್ನೂ ಅಲುಗಾಡಿಸಲು ನಿಮ್ಮಿಂದ ಆಗುವುದಿಲ್ಲವೆಂಬಂತೆ ವರ್ತಿಸಿದರು. ಇದರಿಂದ ಆಕ್ರೋಶಗೊಂಡ ಬಿಜೆಪಿ ಮುಖಂಡರು, ಕಾರ್ಯಕರ್ತರು ಕೈಯಲ್ಲಿ ಚಪ್ಪಲಿ ಹಿಡಿದು ನಿಂದಿಸಿದರೆ, ಬಿಜೆಪಿ ಮಹಿಳಾ ಮೋರ್ಚಾದವರು ಕೈಯಲ್ಲಿ ಪೊರಕೆ ಹಿಡಿದು, ತಮ್ಮ ಕೈಯಲ್ಲಿದ್ದ ಬಳೆಗಳನ್ನು ಬಿಚ್ಚಿ ಪ್ರದೀಪ್ ಈಶ್ವರಗೆ ತೋರಿಸಿದರು.

ನಾಳೆ ವಾಣಿಜ್ಯ ತೆರಿಗೆ ಕಚೇರಿಗಳ ಕಾರ್ಯಾಚರಣೆ


ಬೆಂಗಳೂರು: ಮಾ.30 ರ ಸೋಮವಾರ ಮಹಾವೀರ ಜಯಂತಿ ಪ್ರಯುಕ್ತ ಸಾರ್ವತ್ರಿಕ ರಜೆ ಇದ್ದರೂ ಸಹ ವಾಣಿಜ್ಯ ತೆರಿಗೆ ಇಲಾಖೆಯ ಎಲ್ಲಾ ಕಚೇರಿಗಳು ಅಂದು ಕಾರ್ಯನಿರ್ವಹಿಸಲಿವೆ. ಈ ಕುರಿತು ವಾಣಿಜ್ಯ ತೆರಿಗೆಗಳ ಆಯುಕ್ತರು ಆದೇಶ ಹೊರಡಿಸಿದ್ದಾರೆ. 2025-26ರ ಆರ್ಥಿಕ ವರ್ಷದ ಮುಕ್ತಾಯದ ಹಿನ್ನೆಲೆಯಲ್ಲಿ, ತೆರಿಗೆದಾರರ ಅನುಕೂಲಕ್ಕಾಗಿ ಅವಕಾಶ ಕಲ್ಪಿಸಲಾಗಿದೆ. ಸಾರ್ವತ್ರಿಕ ರಜೆಯ ದಿನದಂದು ವಾಣಿಜ್ಯ ತೆರಿಗೆ ಕಚೇರಿಗಳ ಕಾರ್ಯಾಚರಣೆ ನಡೆಸಲಿವೆ.



ಕುಂವೀ ಒಳನೋಟದ ಸೂರ್ಯನ ಚೂರುಗಳು
ಅಪೂರ್ವರಾಗಂಗಳ್
ಲೇ: ಕುಂ. ವೀರಭದ್ರಪ್ಪ
ಪ್ರ: ಅಂಕಿತ ಪುಸ್ತಕ ಪ್ರಕಾಶನ, ಬೆಂ.
ಮೊದಲ ಮುದ್ರಣ: 2026
ಪುಟ: 304 ರೂ. 350
ಸಂಪರ್ಕ: 080-26617100 / 9019190502



ಗ್ರಾಮಾಫೋನ್ ಪಿನ್ ರಹಸ್ಯ
ಬಂಗಾಳಿ ಮೂಲ: ಶರದೇಂದು ಬಂದೋಪಾಧ್ಯಾಯ
ಕನ್ನಡಕ್ಕೆ: ಎಂ.ವಿ. ನಾಗರಾಜರಾವ್
ಪ್ರ: ಅಂಕಿತ ಪುಸ್ತಕ ಪ್ರಕಾಶನ, ಬೆಂ.
ಮೊದಲ ಮುದ್ರಣ: 2026
ಪುಟ: 200 ರೂ. 250
ಸಂಪರ್ಕ: 9019190502



ಅನಾಮಧೇಯ ಕರೆ
ರೋಚಕ ಪತ್ತೇದಾರಿ ಕಾದಂಬರಿ
ಲೇ: ರವಿರಾಜ ಬೈಕಂಪಾಡಿ
ಪ್ರ: ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು
ಮೊದಲ ಮುದ್ರಣ: 2026
ಪುಟ: 206 ರೂ. 250
ಸಂಪರ್ಕ: 080-26617100

₹12 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ

ಮೈಸೂರು: ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ಪೊಲೀಸರು 12 ಕೋಟಿ ರೂಪಾಯಿ ಮೌಲ್ಯದ ಡ್ರಗ್ಸ್ ದಾಸ್ತಾನು ಪತ್ತೆ ಮಾಡಿದ್ದಾರೆ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ದಾಸನಪುರ ಗ್ರಾಮದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮೈಸೂರು ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.



ಮೈಸೂರು ಸಿದ್ದಿಖಿ ಮೊಹಲ್ಲಾ ನಿವಾಸಿ ಮೊಹಮ್ಮದ್ ಇರ್ಫಾನ್ ಮತ್ತು ಹುಣಸೂರಿನ ಮೊಹಮ್ಮದ್ ಇರ್ಫಾನ್ ಆರೋಪಿಗಳಾಗಿದ್ದಾರೆ. ಹುಣಸೂರು ತಾಲೂಕಿನ ರತ್ನಪುರಿ-ದಾಸನಪುರ ಮಧ್ಯೆ ಇರುವ ಹುಣಸೂರು ನಗರದ ರಹಮತ್ ಮೊಹಲ್ಲಾದ ಇರ್ಫಾನ್ ಎಂಬುವವರಿಗೆ ಸೇರಿದ ತೋಟದ ಮನೆಯಲ್ಲಿ ಭಾರೀ ಪ್ರಮಾಣದ ಸಿಂತೆಟಿಕ್ ಡ್ರಗ್ಸ್ ಪ್ಯಾಕೆಟ್ ಮಾಡುತ್ತಿದ್ದರು.

ತೋಟದ ಮಾಲೀಕ ಮೊಹಮ್ಮದ್ ಇರ್ಫಾನ್ ಮೈಸೂರಿನ ಇರ್ಫಾನ್ ಎಂಬಾತ ಸೇರಿಕೊಂಡು ಈ ಕೃತ್ಯ ನಡೆಸುತ್ತಿದ್ದ. ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ ವೇಳೆ ಸ್ಥಳದಿಂದ ಪರಾರಿಯಾಗಲೆತ್ನಿಸಿದ ಆರೋಪಿಗಳನ್ನು ಸುಮಾರು 10 ಕಿ.ಮೀ.ವರೆಗೆ ಚೇಸ್ ಮಾಡಿ ಹುಣಸೂರು ನಗರಕ್ಕೆ ಸಮೀಪದ ಸಲೀಂ ಪ್ಯಾಲೆಸ್ ಬಳಿ ಬಂಧಿಸಿದ್ದಾರೆ.

ಇವರ ಜಮೀನಿನಲ್ಲಿ ಸಿಂಥೆಟಿಕ್ ಡ್ರಗ್ಸ್ ತಯಾರಿಕೆ ಮತ್ತು ಸಂಗ್ರಹಣೆ ನಡೆಸಲಾಗುತ್ತಿದ್ದುದನ್ನು ಪೊಲೀಸರು ಪತ್ತೆಹಚ್ಚಿದ್ದಾರೆ. ಹುಣಸೂರು ಟೌನ್ ರೆಹಮತ್ ಮೊಹಲ್ಲಾ ನಿವಾಸಿಯ ಶೆಡ್‌ನಲ್ಲಿ ಕಚ್ಚಾ ವಸ್ತುಗಳನ್ನು ಸಂಗ್ರಹಿಸಿಡಲಾಗಿತ್ತು ಎಂದು ತಿಳಿದುಬಂದಿದೆ ಎಂದು ಹೇಳಿದರು.

ಪೊಲೀಸರು ಜಪ್ತು ಮಾಡಿದ ವಸ್ತುಗಳು

ಪೊಲೀಸರು 7.35 ಕೆ.ಜಿ ತೂಕದ ಮೆಫೆಡ್ರೋನ್ ಮತ್ತು 41 ಕೆ.ಜಿ ತೂಕದ ಡ್ರಗ್ಸ್ ಪ್ರಿಕರ್ಸರ್ ವಸ್ತುಗಳನ್ನು ವಶಪಡಿಸಿಕೊಂಡಿದ್ದು, ಒಟ್ಟು 48 ಕೆ.ಜಿ ತೂಕದ ಡ್ರಗ್ಸ್ ಪದಾರ್ಥಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಗಳು ಈ ರೀತಿಯಾಗಿ ಸಿಂಥೆಟಿಕ್ ಡ್ರಗ್ಸ್ ತಯಾರಣೆ ಮತ್ತು ವಿತರಣೆ ಮಾಡುತ್ತಿದ್ದರು. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಹಿಂದಿ ಭಾಷೆಗೆ ಗ್ರೇಡಿಂಗ್ ವ್ಯವಸ್ಥೆ ಜಾರಿ: ಕನ್ನಡ ಸಂಘಟನೆ ಸಂಭ್ರಮ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಹಿಂದಿಗೆ ಗ್ರೇಡಿಂಗ್ ವ್ಯವಸ್ಥೆ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರ ಮನೆಯ ಮುಂದೆ ಕನ್ನಡ ಪರ ಸಂಘಟನೆಗಳಿಂದ ಸಂಭ್ರಮಾಚರಣೆ ನಡೆಯಿತು.

ಕರವೇ ಅಧ್ಯಕ್ಷ ನಾರಾಯಣಗೌಡ ನೇತೃತ್ವದಲ್ಲಿ ಮುಖಂಡರು, ಕಾರ್ಯಕರ್ತರ ನಿಯೋಗ, ಸಚಿವರ ಮನೆಗೆ ಭೇಟಿ ನೀಡಿ ಐತಿಹಾಸಿಕ ತೀರ್ಮಾನ ತೆಗೆದುಕೊಂಡಿದ್ದಕ್ಕಾಗಿ ಸಚಿವರಿಗೆ ಅಭಿನಂದನೆ ಸಲ್ಲಿಸಿದರು. ಬಳಿಕ ಮಾತನಾಡಿದ ಕರವೇ ಅಧ್ಯಕ್ಷ ನಾರಾಯಣಗೌಡ ಅವರು, ಹಿಂದಿ ಭಾಷೆ ಪರೀಕ್ಷೆಯಲ್ಲಿ ಉತ್ತೀರ್ಣವಾಗಲೇಬೇಕು ಎಂಬ ಬಲವಂತದ ಹೇರಿಕೆಯಿಂದ ಮಕ್ಕಳಿಗೆ ತೊಂದರೆಯಾಗುತ್ತಿತ್ತು. ಭಾಷೆಯ ದಬ್ಬಾಳಿಕೆಯಿಂದಾಗಿ ಲಕ್ಷಾಂತರ ಮಕ್ಕಳ ಭವಿಷ್ಯ ತೊಂದರೆಗೆ ಒಳಗಾಗುವುದನ್ನು ಸರಕಾರದ ಈ ತೀರ್ಮಾನ ತಪ್ಪಿಸಿದೆ. ಶಾಪಗ್ರಸ್ತ ವ್ಯವಸ್ಥೆಯಿಂದ ವಿಮೋಚನೆಯಾಗಿದೆ. ಮಕ್ಕಳ ಭವಿಷ್ಯ ಉಜ್ವಲವಾಗಲಿದೆ ಎಂದಿದ್ದಾರೆ.

ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇದನ್ನು ಅರ್ಥ ಮಾಡಿಕೊಳ್ಳಬೇಕು. ಮಹಾರಾಷ್ಟ್ರದಲ್ಲಿ ಬಿಜೆಪಿಯ ಆಡಳಿತವೇ ಇದ್ದರೂ ತ್ರಿಭಾಷಾ ಸೂತ್ರವನ್ನು ಕೈಬಿಟ್ಟಿದ್ದಾರೆ. ನಮ್ಮಲ್ಲಿ ಬಿಜೆಪಿಯವರು ಗ್ರೇಡಿಂಗ್ ಪದ್ಧತಿಗೆ ವಿರೋಧ ಮಾಡುತ್ತಿರುವುದು ಸರಿಯಲ್ಲ. ರಾಜಕೀಯ ಅಜೆಂಡಕ್ಕಾಗಿ ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟವಾಡಬೇಡಿ ಎಂದು ಎಚ್ಚರಿಕೆ ನೀಡಿದರು.

ಐಪಿಎಲ್ ಹವಾ 19
ಚುಟುಕು ಕ್ರಿಕೆಟ್ ಹಬ್ಬ
೧೧
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಭಾನುವಾರ, 29 ಮಾರ್ಚ್ 2026
ಹುಬ್ಬಳ್ಳಿ

ಕಿರುಸುದ್ದಿ

ಸ್ಯಾನ್ ಫ್ರಾನ್ಸಿಸ್ಕೊ ತಂಡಕ್ಕೆ ಅಶ್ವಿನ್



•**ಹೊಸದಿಲ್ಲಿ:** ಭಾರತದ ಮಾಜಿ ಅಂತಾರಾಷ್ಟ್ರೀಯ ಆಟಗಾರ ಆರ್. ಅಶ್ವಿನ್ ಅಮೆರಿಕದ ಟಿ20 ಲೀಗ್‌ನಲ್ಲಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಸ್ಯಾನ್ ಫ್ರಾನ್ಸಿಸ್ಕೊ ಯುನಿಕಾರ್ನ್ಸ್ ತಂಡದೊಂದಿಗೆ ಒಪ್ಪಂದಕ್ಕೆಳಿದಿರುವ ಅಶ್ವಿನ್, ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಆಡಲಿರುವ ಮೊದಲ ಭಾರತೀಯ ಕ್ಯಾಪ್ಡ್ ಆಟಗಾರರಾಗಿದ್ದಾರೆ ಎಂದು ತಂಡ ಶನಿವಾರ ಘೋಷಿಸಿದೆ. ''ಮೇಜರ್ ಲೀಗ್ ಕ್ರಿಕೆಟ್ ಇತ್ತೀಚಿನ ಸೀಸನ್‌ಗಳಲ್ಲಿ ವಿಶ್ವಮಟ್ಟದ ಆಟಗಾರರನ್ನು ಆಕರ್ಷಿಸುತ್ತಿದ್ದು, ಅಮೆರಿಕದ ದೇಶೀಯ ಕ್ರಿಕೆಟ್ ಪ್ರತಿಭೆಗಳಿಗೆ ಉತ್ತಮ ವೇದಿಕೆಯಾಗುತ್ತಿದೆ. ಇಂತಹ ಲೀಗ್‌ನ ಭಾಗವಾಗುವುದು ನನಗೆ ವಿಶೇಷ ಅವಕಾಶ,'' ಎಂದು ಅಶ್ವಿನ್ ತಿಳಿಸಿದ್ದಾರೆ. ''ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಆಡುತ್ತಿರುವ ಮೊದಲ ಭಾರತೀಯ ಆಟಗಾರ ಎಂಬ ಜವಾಬ್ದಾರಿಯನ್ನು ನಾನು ಸಂಪೂರ್ಣವಾಗಿ ಸ್ವೀಕರಿಸುತ್ತೇನೆ. ನನ್ನ ಗಮನ ತಂಡವನ್ನು ಗೆಲುವಿನತ್ತ ಕೊಂಡೊಯ್ಯುವುದು ಹಾಗೂ ಅಭಿಮಾನಿಗಳಿಗೆ ಉತ್ತಮ ಕ್ರಿಕೆಟ್ ನೀಡುವುದಾಗಿದೆ,'' ಎಂದು ಅವರು ಹೇಳಿದ್ದಾರೆ.

ಎರಡು ವಾರದವರೆಗೆ ಧೋನಿ ಅಲಭ್ಯ

•**ಚೆನ್ನೈ:** ಮಹೇಂದ್ರ ಸಿಂಗ್ ಧೋನಿ ಅವರನ್ನು ನೋಡಲು ಕಾತರದಿಂದ ಕಾಯುತ್ತಿದ್ದ ಸಮಸ್ತ ಚೆನ್ನೈ ಸೂಪರ್ ಕಿಂಗ್ಸ್ ಅಭಿಮಾನಿಗಳಿಗೆ ಭಾರೀ ನಿರಾಸೆಯಾಗಿದ್ದು, ಮೊದಲಿನ 2 ವಾರದ ಚೆನ್ನೈ ಪಂದ್ಯಗಳಿಗೆ ಧೋನಿ ಲಭ್ಯರಿಲ್ಲ ಎಂದು ಫ್ರಾಂಚೈಸಿ ಖಚಿತಪಡಿಸಿತು. ಕೇವಲ ಐಪಿಎಲ್ ಸಮಯದಲ್ಲಿ ಮಾತ್ರ ಕಾಣಿಸಿಕೊಳ್ಳುವ ಧೋನಿ ಈ ಬಾರಿ ಮತ್ತಷ್ಟು ಕಣ್ಮರೆಯಾಗಿದ್ದಾರೆ. ಗಾಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ. ರಿಹ್ಯಾಬ್‌ನಲ್ಲಿರುವ ಅವರು ನಮಗೆ ಅಲಭ್ಯರಾಗಿದ್ದಾರೆಂದು ಫ್ರಾಂಚೈಸಿ ಪ್ರಕಟಣೆಯಲ್ಲಿ ತಿಳಿಸಿದೆ. ಚೆನ್ನೈ ತಂಡದಲ್ಲಿ ಮೂವರು ವಿಕೆಟ್ ಕೀಪರ್‌ಗಳಿದ್ದಾರೆ. ಧೋನಿ ಹೊರತುಪಡಿಸಿ ಸಂಜು ಸ್ಯಾಮ್ಸನ್, ಉರ್ವಿಲ್ ಪಟೇಲ್ ಮತ್ತು ನೂತನ ಆಟಗಾರ ಕಾರ್ತಿಕ್ ಶರ್ಮ ವಿಕೆಟ್ ಕೀಪಿಂಗ್ ಮಾಡಬಲ್ಲರು. 16 ವರ್ಷದಲ್ಲಿ ಮೊದಲ ಬಾರಿಗೆ ಧೋನಿ ಅವರಿಲ್ಲದೆ ಚೆನ್ನೈ ತಂಡ ಕಣಕ್ಕಿಳಿಯುವುದು ಖಚಿತವಾಗಿದೆ. ಎರಡು ವಾರಗಳಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ನಾಲ್ಕು ಪಂದ್ಯಗಳನ್ನು ಹೊಂದಿದೆ.

ಶಾಟ್‌ಗನ್ ವಿಶ್ವಕಪ್ ಸ್ಕೀಟ್: ಫೈನಲ್ಗೇರದ ಭಾರತೀಯರು

•**ಹೊಸದಿಲ್ಲಿ:** ಟ್ಯಾಂಜಿಯರ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್‌ನ ಸ್ಕೀಟ್ ವಿಭಾಗದಲ್ಲಿ ಭಾರತೀಯ ಶೂಟರ್‌ಗಳು ಫೈನಲ್‌ಗೆ ಪ್ರವೇಶಿಸಲು ವಿಫಲರಾದರು. ಒಲಿಂಪಿಯನ್ ಮಹೇಶ್ವರಿ ಚೌಹಾಣ್ ಉತ್ತಮ ಹೋರಾಟ ನೀಡಿದರೂ, ಟಾಪ್ 8 ಸ್ಥಾನ ತಪ್ಪಿಸಿಕೊಂಡರು. ಮೊದಲ ದಿನ 75ರಲ್ಲಿ 69 ಅಂಕ ಗಳಿಸಿದ್ದ ಅವರು, ಕೊನೆಯ ಸುತ್ತುಗಳಲ್ಲಿ 23 ಮತ್ತು 21 ಹೊಡೆದು ಒಟ್ಟು 113 ಅಂಕಗಳಿಗೆ ತಲುಪಿದರು. ಫೈನಲ್ ಪ್ರವೇಶಕ್ಕೆ ಅಗತ್ಯವಾಗಿದ್ದ 115 ಅಂಕಗಳಿಗೆ ಅವರು ಎರಡು ಅಂಕಗಳಿಂದ ಹಿಂದುಳಿದರು. ದರ್ಶನಾ ರಾಥೋಡ್ ಕೊನೆಯ ಸುತ್ತಿನಲ್ಲಿ ಪರಿಪೂರ್ಣ 25 ಅಂಕ ಗಳಿಸಿದರೂ, ಒಟ್ಟು 112 ಅಂಕಗಳೊಂದಿಗೆ 19ನೇ ಸ್ಥಾನ ಪಡೆದರು. ಅವರ ಸಹೋದರಿ ಯಶಸ್ವಿ ರಾಥೋಡ್ 110 ಅಂಕಗಳೊಂದಿಗೆ 23ನೇ ಸ್ಥಾನ ಪಡೆದರು. ರ್ಯಾಂಕಿಂಗ್ ಅಂಕಗಳಿಗಾಗಿ ಸ್ಪರ್ಧಿಸಿದ್ದ ಅರೀಬಾ ಖಾನ್ ಮತ್ತು ಮಾನ್ಸಿ ರಘುವಂಶಿ ತಲಾ 112 ಅಂಕಗಳನ್ನು ಗಳಿಸಿದರು. ಪುರುಷರ ವಿಭಾಗದಲ್ಲಿ ಪರಂಪಾಲ್ ಸಿಂಗ್ ಗುರೋನ್ 117 ಅಂಕಗಳೊಂದಿಗೆ 26ನೇ ಸ್ಥಾನ ಪಡೆದರು. ಜ್ಯೋತಿರಾದಿತ್ಯ ಸಿಂಗ್ ಸಿಸೋಡಿಯಾ 108 ಅಂಕಗಳೊಂದಿಗೆ 62ನೇ ಸ್ಥಾನ ಹಾಗೂ ಮಾನ್ ಸಿಂಗ್ 105 ಅಂಕಗಳೊಂದಿಗೆ 65ನೇ ಸ್ಥಾನ ಪಡೆದರು. ರ್ಯಾಂಕಿಂಗ್ ಅಂಕಗಳಿಗಾಗಿ ಸ್ಪರ್ಧಿಸಿದ್ದ ಸುಖಬೀರ್ ಸಿಂಗ್ ಹರಿಕಾ 113 ಹಾಗೂ ಹರ್ಮೆಹರ್ ಸಿಂಗ್ ಲಾಲಿ 102 ಅಂಕ ಗಳಿಸಿದರು.

ತೇಜಸ್ವಿನ್‌ಗೆ ಡೆಕಾಥ್ಲಾನ್ ಸ್ವರ್ಣ

•**ಟೆಕ್ಸಾಸ್:** ಅಮೆರಿಕದಲ್ಲಿ ನಡೆದ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಭಾರತೀಯ ಅಥ್ಲೀಟ್ ತೇಜಸ್ವಿನ್ ಶಂಕರ್ ಡೆಕಾಥ್ಲಾನ್ ವಿಭಾಗದಲ್ಲಿ ಸ್ವರ್ಣ ಪದಕವನ್ನು ಗೆದ್ದಿದ್ದಾರೆ. ಇಲ್ಲಿ ನಡೆದ 2026ರ ಡೇವಿಡ್ ನೋಬಲ್ ರಿಲೇ ಕೂಟದಲ್ಲಿ 7,947 ಅಂಕಗಳ ಸಂಪಾದಿಸಿ ತೇಜಸ್ವಿನ್ ಅಗ್ರಸ್ಥಾನ ಪಡೆದಿದ್ದು, 8,000 ಅಂಕಗಳ ಮೈಲಿಗಲ್ಲನ್ನು ದಾಟಲು 53 ಅಂಕಗಳ ಕೊರತೆ ಅನುಭವಿಸಿದರು. ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಅರ್ಹತಾ ಮಾನದಂಡಗಳನ್ನು ದಾಟುವ ಮೂಲಕ ಶಂಕರ್ ಈ ಋತುವಿನಲ್ಲಿ ಅದ್ಭುತ ಆರಂಭವನ್ನು ಕಂಡಿದ್ದಾರೆ. ತೇಜಸ್ವಿನ್ ತಮ್ಮ ವೈಯಕ್ತಿಕ ಅತ್ಯುತ್ತಮ ಪ್ರದರ್ಶನವನ್ನು ಉತ್ತಮಪಡಿಸಿದ್ದು, ಶ್ರೇಷ್ಠ ಪ್ರದರ್ಶನ ನೀಡುವ ಮೂಲಕ ಭಾರತೀಯ ಡೆಕಾಥ್ಲಾನ್‌ಪಟು ದಾಖಲಿಸಿದ ಅತ್ಯುತ್ತಮ ಪ್ರದರ್ಶನವನ್ನು ದಾಖಲಿಸಿದ್ದಾರೆ.

ಭಾರತದ ನಾಲ್ಕು ತಂಡಗಳಿಗೆ ವಿಶ್ವ ಅಥ್ಲೆಟಿಕ್ಸ್ ರಿಲೇ ಅರ್ಹತೆ

ಚಂಡೀಗಢ: ಭಾರತೀಯ ಓಪನ್ ರಿಲೇ ಕಾರ್ನಿವಲ್‌ನಲ್ಲಿ ಶನಿವಾರ ಉತ್ತಮ ಪ್ರದರ್ಶನ ನೀಡಿದ ಭಾರತದ ನಾಲ್ಕು ರಿಲೇ ತಂಡಗಳು ವಿಶ್ವ ಅಥ್ಲೆಟಿಕ್ಸ್ ರಿಲೇ 2026 ಕೂಟಕ್ಕೆ ಅರ್ಹತೆಯನ್ನು ಸಂಪಾದಿಸಿದೆ. ಇವುಗಳಲ್ಲಿ ಪ್ರಮುಖವಾಗಿ ಭಾರತೀಯ ಪುರುಷರ 4 400 ಮೀ. ರಿಲೇ ತಂಡ ವಿಶ್ವ ಅಥ್ಲೆಟಿಕ್ಸ್ ರಿಲೇ ಅರ್ಹತೆ ಸಂಪಾದಿಸಿದ್ದು, ಪುರುಷರ 4 100 ಮೀ. ರಿಲೇ ತಂಡ ಅರ್ಹತೆಯನ್ನು ಸಂಪಾದಿಸುವಲ್ಲಿ ವಿಫಲವಾಗಿದೆ. ಉಳಿದಂತೆ ಭಾರತದ 4 100 ಮೀ. ಮಿಶ್ರ ರಿಲೇ, ಮಹಿಳೆಯರ 4 100 ಮೀ. ಮತ್ತು 4 400 ಮೀ. ಮಿಶ್ರ ರಿಲೇ ತಂಡಗಳು ಅರ್ಹತೆ ಸಂಪಾದಿಸಿವೆ.

ವಿರಾಟ್ ಆಟಕ್ಕೆ ಹೈದರಾಬಾದ್ ತತ್ತರ | ಬಿಟ್ಟಲ್ಲೇ ಶುರುಮಾಡಿದ ಆರ್‌ಸಿಬಿ | ಕಿಶನ್ ಹೋರಾಟ ವ್ಯರ್ಥ

ಹಾಲಿ ಚಾಂಪಿಯನ್ಸ್‌ಗೆ ಗೆಲುವಿನ ಆರಂಭ

▸ಪೃಥ್ವಿರಾಜ್ ಕುಲಕರ್ಣಿ

•**ಬೆಂಗಳೂರು:** ಹಾಲಿ ಚಾಂಪಿಯನ್ ಆರ್‌ಸಿಬಿ ಐಪಿಎಲ್ 2026ರ ಉದ್ಘಾಟನಾ ಪಂದ್ಯದಲ್ಲಿ ಸನ್ ರೈಸರ್ಸ್ ವಿರುದ್ಧ 26 ಎಸೆತಗಳು ಉಳಿದಿರುವಂತೆ 6 ವಿಕೆಟ್ ಜಯ ಸಾಧಿಸಿದ್ದು, ಗೆಲುವಿನ ಶುಭಾರಂಭ ಮಾಡಿದೆ.

ಆರ್‌ಸಿಬಿ ಅಭಿಮಾನಿಗಳಿಗೆ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಕ್ರಿಕೆಟ್ ಮರಳಿದ ಖುಷಿ. ತಮ್ಮ ನೆಚ್ಚಿನ ಆಟಗಾರ ವಿರಾಟ್ ಕೊಹ್ಲಿ ಸ್ಫೋಟಕ ಬ್ಯಾಟಿಂಗ್ ಆ ಖುಷಿಗೆ ಬೂಸ್ಟರ್! ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಹೈದರಾಬಾದ್ ತಂಡವನ್ನು 6 ವಿಕೆಟ್‌ನಿಂದ ಸೋಲಿಸಿದ ನಂತರ ಚಿನ್ನಸ್ವಾಮಿ ಕ್ರೀಡಾಂಗಣದ ತುಂಬಾ ಕೆಂಪು ಜೆರ್ಸಿ, ಕೈಯಲ್ಲಿ ಝಂಡಾ ಹಿಡಿದುಕೊಂಡು ಎಂದಿನಂತೆ ಮೈದಾನಕ್ಕೆ ಬಂದಿದ್ದ ಸಮಸ್ತ ಆರ್‌ಸಿಬಿ ಅಭಿಮಾನಿಗಳ ದಿನ ಸಂಭ್ರಮವಾಗಿ ಮುಕ್ತಾಯಗೊಂಡಿತು.

ನಿರೀಕ್ಷೆಗಳೊಂದಿಗೆ ಮೈದಾನಕ್ಕಿಳಿಸ ಹೈದರಾಬಾದ್ ಇಶಾನ್ ಕಿಶನ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 201 ರನ್ ಗಳಿಸಿತು. ಗುರಿ ಬೆನ್ನತ್ತಿದ ಆರ್‌ಸಿಬಿ 15.4 ಓವರ್‌ಗಳಲ್ಲೇ 203 ರನ್ ಗಳಿಸಿ ಪಂದ್ಯ ಮುಗಿಸಿತು.

ದೇವದತ್ತ ಪಡಿಕ್ಕಲ್ ಹಾಗೂ ವಿರಾಟ್ ಕೊಹ್ಲಿ ಪಂದ್ಯದ ಹೀರೋ ಎನಿಸಿದರು. ಜೇಕಬ್ ಡಫಿ ಪಂದ್ಯಶ್ರೇಷ್ಠ ಗೆದ್ದುಕೊಂಡರು. ಎದುರಾಳಿ ಪರ ಇಶಾನ್ ಕಿಶನ್ ಸ್ಫೋಟಕ ಬ್ಯಾಟಿಂಗ್ ಮಾಡಿ ಮಿಂಚಿದರು.

ಆರ್‌ಸಿಬಿ ಆಡಿದ್ದೇ ಆಟ: ಗುರಿ ಬೆನ್ನತ್ತುವಾಗ ಯಾವ ಕ್ಷಣಕ್ಕೂ ಆರ್‌ಸಿಬಿ ಅಭಿಮಾನಿಗಳು ಕೆಳಗೆ ಕೂಡಲಿಲ್ಲ. ಸ್ಥಳೀಯ ಪ್ರತಿಭೆ ಪಡಿಕ್ಕಲ್ ಹೈದರಾಬಾದ್ ಪಡೆಯ ವಿಶ್ವಾಸ ಮುರಿದು ಹಾಕಿದರು. ಅದೆಲ್ಲಾ ಆರಂಭದಲ್ಲಿ ಸಾಲ್ಟ್ ವಿಕೆಟ್ ಬಿದ್ದರೂ ವಿರಾಟ್ ಕೊಹ್ಲಿ ಹಾಗೂ ಪಡಿಕ್ಕಲ್ ಅವರ ಆಟಕ್ಕೆ ಕಿಂಚಿತ್ತು ಪರಿಣಾಮ ಬೀಳಲಿಲ್ಲ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಗಿಳಿದ ಪಡಿಕ್ಕಲ್ ಸಿಂಗಲ್, ಟುಡಿಗಳೊಂದಿಗೆ ಸೆಟ್ ಆಗುವ ಮುಲಾಜಿಗೆ ಬೀಳಲೇ ಇಲ್ಲ. ಮೊದಲ ಎಸೆತದಿಂದಲೂ ದಂಡಿಸಿ ಪಂದ್ಯವನ್ನು ಬೇಗನೇ ಮುಗಿಸಿಕೊಂಡು ಹೋಗುವ ಅವರ ನಿರ್ಧಾರ ಸ್ಫೋಟಕ ಬೌಂಡರಿ, ಗಗನದೆತ್ತರದ ಸಿಕ್ಸರ್‌ಗಳ ಮೂಲಕ ಗೋಚರಿಸಿತು. ಆರ್‌ಸಿಬಿ 8.1 ಓವರ್‌ಗಳಲ್ಲೇ 100 ರನ್ ಮುಟ್ಟಿತು. ಹೈದರಾಬಾದ್ ಸೋಲಿನ ರುಚಿ ನಿಧಾನವಾಗಿ ಸವಿಯಲಾರಂಭಿಸಿತು. ಅನುಭವಿ ಬೌಲರ್‌ಗಳಿಲ್ಲ, ಹೆಚ್ಚಿನ ವೇಗಿಗಳಿಲ್ಲ, ಮುಖ್ಯವಾಗಿ ಪ್ಯಾಟ್ ಕಮ್ಮಿನ್ಸ್ ಅವರ ಅಲಭ್ಯತೆ ತಂಡಕ್ಕೆ ಕಾಡಿದ್ದು ಸ್ಪಷ್ಟವಾಗಿ ಗೋಚರಿಸಿತು.

ಚಿತ್ರ: ಮೋಹನ್ ಕುಮಾರ್ ಬಿ.ಎನ್



ಸಂಕ್ಷಿಪ್ತ ಸ್ಕೋರ್
ಹೈದರಾಬಾದ್: 20 ಓವರ್‌ಗಳಲ್ಲಿ 201/9; ಕಿಶನ್ 80, ಅನಿಕೇತ್ 43; ಡಫಿ 22/3
ಬೆಂಗಳೂರು: 15.4 ಓವರ್‌ಗಳಲ್ಲಿ 203/4: ಕೊಹ್ಲಿ 69★, ಪಡಿಕ್ಕಲ್ 61, ಹೇಯ್ಸ್ 35/2

ಕೊಹ್ಲಿ ಆರ್ಭಟ, ಆರ್‌ಸಿಬಿ ಶುಭಾರಂಭ

ಪಡಿಕ್ಕಲ್‌ಗೆ ಸಾಥ್ ನೀಡುತ್ತಾ ಬೌಂಡರಿ ಸಿಕ್ಸರ್‌ಗಳ ಮೂಲಕ ಅಭಿಮಾನಿಗಳನ್ನು ರಂಜಿಸಿದ ವಿರಾಟ್ ಕೊಹ್ಲಿ ಎದುರಾಳಿಗಳನ್ನು ಕ್ರಮೇಣವಾಗಿ ಸೋಲಿಸುತ್ತಾ ಬಂದರು. ಪಡಿಕ್ಕಲ್ ವಿಕೆಟ್ ಒಪ್ಪಿಸಿದ ನಂತರ ತೀರಾ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. 12.3 ಓವರ್ ಅನ್ನುಷ್ಟರಲ್ಲಿ ಆರ್‌ಸಿಬಿ 163 ರನ್ ಮುಟ್ಟಿತು. 13ನೇ ಓವರ್‌ನಲ್ಲಿ ವೇಗಿ ಡೇವಿಡ್ ಪಾಯ್ನೆ ಸರಸರನೇ 2 ವಿಕೆಟ್ ಕಿತ್ತರು. ಸಮಯ ಮೀರಿ ಹೋಗಿತ್ತು ಪಂದ್ಯ ಗೆದ್ದಾಗಿತ್ತು. ಕೇವಲ ಔಪಚಾರಿಕ ಆಟವಷ್ಟೇ ಆಗ ಬಾಕಿಯಿತ್ತು. ಆರ್‌ಸಿಬಿ ನಾಗಾಲೋಟಕ್ಕೆ ಜಯ ಸಿಕ್ಕಂತಾಯಿತು. ಕೊನೆಯಲ್ಲಿ ಕೊಹ್ಲಿ ಅಜೇಯ 69 ರನ್ ಗಳಿಸಿದರೆ ಡೇವಿಡ್ 16 ರನ್ ಗಳಿಸಿದರು.

ಕ್ರೀಡಾಂಗಣ ಭದ್ರತೆಗೆ ಮಾಸ್ಟರ್‌ಪ್ಲಾನ್

ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯ ಅಚ್ಚುಕಟ್ಟಾದ ಪೊಲೀಸ್ ಭದ್ರತೆಯೊಂದಿಗೆ ಆರಾಮಾಗೇ ನಡೆಯಿತು. ಪಂದ್ಯ ಸಂಜೆ 7:30ಕ್ಕೆ ಶುರುವಾದರೂ ಅಭಿಮಾನಿಗಳು ಕೆಂಪು ಜೆರ್ಸಿಯೊಂದಿಗೆ ಮಧ್ಯಾಹ್ನದಿಂದಲೇ ಕಾಣಿಸಿಕೊಂಡರು. ಅಚ್ಚುಕಟ್ಟಾಗಿ ನಿಭಾಯಿಸಿದ ಪೊಲೀಸರು, ಎಂದಿನಂತೆ ಸೇರಿದ್ದ ಅಭಿಮಾನಿಗಳನ್ನು ವಿಭಿನ್ನ ಯೋಜನೆಗಳೊಂದಿಗೆ ನಿಯಂತ್ರಿಸಿದರು.

ಪೊಲೀಸ್ ಕಣ್ಗಾವಲು

ಮೈದಾನದ ಸುತ್ತಲೂ ಪೊಲೀಸ್ ಕಣ್ಗಾವಲಿತ್ತು. ಎಲ್ಲೆಲ್ಲೂ ಪೊಲೀಸ್ ಅಧಿಕಾರಿಗಳು, ಪೇದೆಗಳು ಜನರನ್ನು ಕಳುಹಿಸುತ್ತಾ ದಟ್ಟಣೆ ತಡೆದರು. ಖಾಕಿ ಕಣ್ಗಾವಲು ಕೇವಲ ಮೈದಾನಕ್ಕೆ ಸೀಮಿತವಾಗಿರಲಿಲ್ಲ. ಜನದಟ್ಟಣೆ ಮತ್ತು ಟ್ರಾಫಿಕ್ ತಡೆಯುವ ನಿಟ್ಟಿನಲ್ಲಿ ದೂರದ ಕಬ್ಬನ್ ಪಾರ್ಕ್, ಕ್ವೀನ್ಸ್ ರೋಡ್ ಮತ್ತು ಕ್ರೀಡಾಂಗಣದ ಸುತ್ತಲೂ ಬಂದೋಬಸ್ತ್ ವ್ಯವಸ್ಥೆಯನ್ನಿಟ್ಟಿತ್ತು.

ಟ್ರಾಫಿಕ್ ನಿರ್ವಹಣೆ

ಮೈದಾನದ ಸುತ್ತಲೂ ಅಚ್ಚುಕಟ್ಟಾದ ಟ್ರಾಫಿಕ್ ನಿಯಂತ್ರಣ ಮಾಡಿದ್ದು, ಭದ್ರತಾ ವಿಚಾರದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಮುಖ್ಯವಾಗಿ ಪಾರ್ಕಿಂಗ್‌ಗೆ ನಾಲ್ಕು ಸ್ಥಳಗಳನ್ನು ಆರಿಸಲಾಗಿತ್ತು. ಹೀಗಿರುವಾಗ ಪಂದ್ಯಕ್ಕೆ ಬಂದ ಅಭಿಮಾನಿಗಳೆಲ್ಲಾ ಮೈದಾನದ ಸುತ್ತಲೂ ಪಾರ್ಕಿಂಗ್ ಮಾಡಲೇ ಇಲ್ಲ. ಬೈಕು, ಕಾರುಗಳೊಂದಿಗೆ ಮೈದಾನಕ್ಕೆ ಬರಲೇ ಇಲ್ಲ. ರಸ್ತೆ ಬದಿಯಲ್ಲಿ ಯಾವುದೇ ಅಭಿಮಾನಿಗಳನ್ನು ನಿಲ್ಲಲು ಬಿಡಲಿಲ್ಲ. ರಸ್ತೆ ದಾಟುವಾಗಿ ಕೈಹಿಡಿದು ನಡೆಸಿದಂತೆ ಪೊಲೀಸರು ಜನರನ್ನು ಬಿಟ್ಟು ಬರುತ್ತಿದ್ದರು. ಮತ್ತೆ ತಮ್ಮ ಸ್ಥಳಗಳಲ್ಲಿ ಹೋಗಿ ನಿಲ್ಲುತ್ತಿದ್ದರು.



ಸದಾ ನಮ್ಮ ಹೃದಯದಲ್ಲಿ

ಯಾವಾಗಲೂ ಕೂಗಾಟ, ಕ್ರೇಜ್ ಮತ್ತು ಸೌಂಡ್‌ಗಾಗಿ ಹೆಸರುವಾಸಿಯಾಗಿರುವ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಒಂದು ಕ್ಷಣದ ಕಾಲ ಸ್ತಬ್ಧವಾಗಿ ನಿಂತಿತ್ತು. ಎಲ್ಲಾ ಜನರೂ ಎದ್ದು ನಿಂತು ಸಂತಾಪ ಸಲ್ಲಿಸುತ್ತಿದ್ದರೆ, ಇತ್ತ ಉಭಯ ತಂಡದ ಆಟಗಾರರು ಮೌನ ಆಚರಣೆ ಮಾಡಿದರು. ಕಾಲ್ತುಳಿತದಲ್ಲಿ ಮೃತಪಟ್ಟ 11 ಜನರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪಂದ್ಯಕ್ಕೂ ಮುನ್ನ ಸಮಸ್ತ ಜನರು ಮೌನ ಆಚರಣೆ ಮಾಡಿದರು.

- 11 ಖಾಲಿ ಆಸನಗಳು
- ಕಪ್ಪು ಪಟ್ಟಿ ಕಟ್ಟಿಕೊಂಡು ಕಣಕ್ಕೆ ಆರ್‌ಸಿಬಿ
- ಅಭ್ಯಾಸದ ವೇಳೆ ಎಲ್ಲ ಆರ್‌ಸಿಬಿ ಆಟಗಾರರಿಂದ 11 ನಂಬರ್ ಜೆರ್ಸಿ ಬಳಕೆ
- 11 ಆಸನಗಳಿಗೆ ಪುಷ್ಪ ಸಮರ್ಪಣೆ

ಪ್ರಮುಖ ಅಂಶಗಳು

- ಜನ ಸಂದಣಿ ನಿಯಂತ್ರಣ
- ಮೈದಾನ ಸುತ್ತಲೂ ಕಣ್ಗಾವಲು
- ಸಿಸಿ ಕ್ಯಾಮರಾಗಳೊಂದಿಗೆ ನಿಯಂತ್ರಣ
- ಎಐ ಕ್ಯಾಮರಾಗಳ ಕಣ್ಗಾವಲು
- ಟಿಕೆಟ್ ಇಲ್ಲದವರಿಗಿಲ್ಲ ನಿಲ್ಲುವುದಕ್ಕೂ ಅವಕಾಶ
- ಮೈದಾನ ಸುತ್ತಲೂ ಜನರು ಓಡಾಡುತ್ತಲೇ ಇದ್ದರು.
- ಒಂದೇ ಕಡೆ ನಿಲ್ಲಲು ಬಿಡದ ಪೊಲೀಸರು
- ಅಚ್ಚುಕಟ್ಟಾದ ಪಾರ್ಕಿಂಗ್ ವ್ಯವಸ್ಥೆ
- ಗೇಟಿನ ಹೊರಗಡೆ ಜನರಿಗೆ ನಿಲ್ಲಲು ಅವಕಾಶ ನೀಡಲಿಲ್ಲ

ಬಾಂಗ್ಲಾದಲ್ಲಿ ಐಪಿಎಲ್ ಪ್ರಸಾರಕ್ಕೆ ಅಸ್ತು

•**ಢಾಕಾ:** ಇಲ್ಲದ ಸಾಹಸಕ್ಕೆ ಕೈಹಾಕಿ ವಿಶ್ವಕಪ್ ಪಂದ್ಯಾವಳಿಯಿಂದಲೇ ಹೊರಬಿದ್ದು ಹಿನ್ನಡೆ ಅನುಭವಿಸಿರುವ ಬಾಂಗ್ಲಾ ದೇಶ ಕ್ರಿಕೆಟ್ ಸಂಸ್ಥೆ ಮತ್ತು ಅಲ್ಲಿನ ಸರ್ಕಾರ ಮತ್ತೊಮ್ಮೆ ಮಂಡಿಯೂರಿದೆ. ಬಾಂಗ್ಲಾದೇಶದಲ್ಲಿ ರದ್ದುಗೊಳಿಸಲಾಗಿದ್ದ ಐಪಿಎಲ್ ಪ್ರಸಾರಕ್ಕೆ ಬೇಡಿಕೆ ಹೆಚ್ಚಾಗುತ್ತಿದ್ದು, ಅವಕಾಶ ನೀಡುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ಹೊಸ ಮಾಹಿತಿ ಮತ್ತು ಪ್ರಸಾರ ಸಚಿವ ಜಹಿರುದ್ದೀನ್ ಸ್ವಪನ್ ಅವರು, ಐಪಿಎಲ್ ಪ್ರಸಾರಕ್ಕೆ ಯಾವುದೇ ಚಾನೆಲ್ ಅರ್ಜಿ ಸಲ್ಲಿಸಿದರೆ ಸರ್ಕಾರ ಸಕಾರಾತ್ಮಕವಾಗಿ ಪರಿಗಣಿಸುತ್ತದೆ ಎಂದು ತಿಳಿಸಿದ್ದಾರೆ.

ಈ ವರ್ಷದ ಜನವರಿಯಲ್ಲಿ ಮುಸ್ತಫಿಜುರ್ ರಹಮಾನ್ ಅವರನ್ನು ಐಪಿಎಲ್‌ನಿಂದ ಹೊರಗಿಟ್ಟ ಹಿನ್ನೆಲೆ, ಬಾಂಗ್ಲಾದೇಶ ಸರ್ಕಾರ ಐಪಿಎಲ್ ಪ್ರಸಾರವನ್ನು ನಿಷೇಧಿಸಿತ್ತು. ಈ ನಿಷೇಧವನ್ನು ಅಧಿಕೃತ ಸೂಚನೆಯ ಮೂಲಕ ಜಾರಿಗೊಳಿಸಲಾಗಿತ್ತು. ಆದರೆ ಈಗಿನ ಬೆಳವಣಿಗೆಗಳಲ್ಲಿ, ಹಿಂದಿನ ಸರ್ಕಾರ ಹೊರಡಿಸಿದ್ದ ಆ ಆದೇಶವನ್ನು ರದ್ದುಗೊಳಿಸಲಾಗಿದೆ. ಯಾವುದೇ ಚಾನೆಲ್ ಐಪಿಎಲ್ ಪ್ರಸಾರಕ್ಕೆ ಅರ್ಜಿ ಸಲ್ಲಿಸಿರಲಿಲ್ಲ, ಕ್ರೀಡೆ ಮತ್ತು ರಾಜಕೀಯವನ್ನು ನಾವು ಮಿಶ್ರಣಗೊಳಿಸಲು ಬಯಸುವುದಿಲ್ಲ,



ವ್ಯಾಪಾರಿಕ ದೃಷ್ಟಿಯಿಂದ ನೋಡುತ್ತೇವೆ. ಅರ್ಜಿ ಬಂದರೆ ನಾವು ಅದನ್ನು ಸಕಾರಾತ್ಮಕವಾಗಿ ಪರಿಗಣಿಸುತ್ತೇವೆ, ಎಂದು ಸಚಿವ ತಿಳಿಸಿದ್ದಾರೆ. ಇದಲ್ಲದೆ, ಐಪಿಎಲ್ ಅಧಿಕೃತ ಪ್ರಸಾರಕರಾದ ಸ್ಟಾರ್ ಸ್ಪೋರ್ಟ್ಸ್ ಕೂಡ ಟೂರ್ನಿಯನ್ನು ಪ್ರಸಾರ ಮಾಡಬಹುದು. ಕೇಬಲ್ ಆಪರೇಟರ್‌ಗಳ ಮೇಲೂ ಯಾವುದೇ ನಿರ್ಬಂಧ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಯಾರನ್ನೂ ನಾವು ಪ್ರಸಾರದಿಂದ ತಡೆಯುವುದಿಲ್ಲ, ಸ್ಟಾರ್ ಸ್ಪೋರ್ಟ್ಸ್ ಅಥವಾ ಸ್ಥಳೀಯ ಚಾನೆಲ್‌ಗಳು ಪ್ರಸಾರ ಮಾಡಲು ಬಯಸಿದರೆ, ನಾವು ಅವಕಾಶ ನೀಡುತ್ತೇವೆ, ಎಂದು ಸ್ವಪನ್ ಹೇಳಿದ್ದಾರೆ.

ಶುಭಾರಂಭದ ವಿಶ್ವಾಸದಲ್ಲಿ ಮುಂಬೈ

ಮುಂಬೈಗೆ ಆತ್ಮವಿಶ್ವಾಸ

ಇನ್ನು ಎದುರಾಳಿ ಮುಂಬೈ ತಂಡದಲ್ಲಿ ಚಾಂಪಿಯನ್‌ಗಳ ಪಡೆ. ವಿಶ್ವಕಪ್ ಗೆದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್, ರನ್ನರ್-ಅಪ್ ತಂಡದ ನಾಯಕ ಸ್ಯಾಂಟ್ನರ್, ಆಲ್-ರೌಂಡರ್ ಹಾರ್ದಿಕ್ ಪಾಂಡ್ಯ, ಅನುಭವಿ ರೋಹಿತ್ ಶರ್ಮ, ತಿಲಕ್ ವರ್ಮಾ ಸೇರಿದಂತೆ ಪ್ರಮುಖ ಬ್ಯಾಟರ್‌ಗಳಿದ್ದಾರೆ. ಬೌಲಿಂಗ್‌ನಲ್ಲೂ ಜಸ್‌ಪ್ರೀತ್ ಬೂಮ್ರಾ, ದೀಪಕ್ ಚಾಹರ್, ಟ್ರೆಂಟ್ ಬೋಲ್ಟ್ ಸೇರಿದಂತೆ ಅತ್ಯುತ್ತಮ ಬೌಲರ್‌ಗಳಿದ್ದು ಮುಂಬೈ ಭರವಸೆಯಲ್ಲಿದೆ.



•**ಮುಂಬೈ:** ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಎರಡನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಭಾನುವಾರದ ಸೂಪರ್ ಫೈಟ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಹೈದರಾಬಾದ್ ಹಾಗೂ ಆರ್‌ಸಿಬಿ ನಡುವಿನ ಪಂದ್ಯದೊಂದಿಗೆ ಐಪಿಎಲ್‌ಗೆ ಕಿಕ್‌ಸ್ಟಾರ್ಟ್ ಸಿಕ್ಕಿದೆ. ಪ್ರತಿಬಾರಿಯಂತೆ ಈ ಬಾರಿಯೂ ಹೌಸ್‌ಫುಲ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯುತ್ತಿದೆ. ಮುಂಬೈನ ವಾಂಖೆಡೆ ಕ್ರೀಡಾಂಗಣ ತಮ್ಮ ನೆಚ್ಚಿನ ಆಟಗಾರ, ಮುಂಬೈ ಕಾ ರಾಜಾ ಖ್ಯಾತಿಯ ರೋಹಿತ್ ಶರ್ಮ ಅವರ ಆಟವನ್ನು ನೋಡುವುದಕ್ಕೆ ಸಿದ್ಧರಾಗಿದ್ದಾರೆ.

ಕಳೆದ ಬಾರಿ ಸೆಮಿಫೈನಲ್ ಅಥ್ವಾ ಕ್ವಾಲಿಫೈಯರ್ ಪಂದ್ಯದಲ್ಲಿ ಮುಂಬೈ ಹೊರಬಿದ್ದಿತ್ತು. ಆರನೇ ಟ್ರೋಫಿ ಗೆಲ್ಲುವ ಪಣದೊಂದಿಗೆ ಕಣಕ್ಕಿಳಿಯುತ್ತಿರುವ ತಂಡದಲ್ಲಿ ಹಲವಾರು ಬದಲಾವಣೆಗಳುಂಟು. ಕೆಕೆಆರ್ ತಂಡ ಕಳೆದ ಬಾರಿ ನೀರಸ ಪ್ರದರ್ಶನ ನೀಡಿದ್ದುಂಟು. ಅದರ ಬೆನ್ನಲ್ಲೇ ಕೂಟದ ನಂತರ ತಂಡದಲ್ಲಿ ಸರ್ಜರಿ ಮಾಡಿಕೊಂಡು ಅತಿ ದೊಡ್ಡ ಹರ್ಷನೊಂದಿಗೆ ಮಿನಿ ಹರಾಜಿಗಿಳಿದಿತ್ತು. ತಂಡದ ಬದಲಾವಣೆಯೊಂದಿಗೆ ಹೊಸತಾಗಿ ಶುರು ಮಾಡುವ ತವಕದಲ್ಲಿ ಅಜಿಂಕ್ಯಾ ರಹಾನೆ ಪಡೆ ಕಾಣಿಸಿಕೊಂಡಿದೆ.

ಕೆಕೆಆರ್‌ಗೆ ಅಗ್ನಿಪರೀಕ್ಷೆ: ತೀರಾ ಹಿನ್ನಡೆಯೊಂದಿಗೆ ಕಳೆದ ಆವೃತ್ತಿ ಮುಗಿಸಿದೆ. ಸಾಲದಿದ್ದಕ್ಕೆ ತಂಡಕ್ಕೆ ಇಷ್ಟು ವರ್ಷ ಶಕ್ತಿಯಾಗಿ ನಿಂತಿದ್ದ ಆಂಡ್ರೆ ರಸೆಲ್ ನಿವೃತ್ತಿಯಾದರು. ತಂಡದಿಂದ ವೆಂಕಟೇಶ್ ಅಯ್ಯರ್ ಅವರನ್ನು ಆಯ್ಕೆ ಮಾಡಲಾಗಿರಲಿಲ್ಲ. ಈ ನಡುವೆ ಇದ್ದವರನ್ನು ಆಯ್ಕೆ ಮಾಡುವತ್ತ ಮುಂದಾದರೂ ಮುಸ್ತಾಫಿಝುರ್ ರೆಹಮಾನ್, ಹರ್ಷಿತ್ ರಾಣಾ ತಂಡದಿಂದ ಹೊರಬಿದ್ದಿದ್ದಾರೆ. ಇದಲ್ಲದೆ ಪಥಿರಾಣ ಬಗ್ಗೆ ಇನ್ನೂ ಮಾಹಿತಿ ಹೊರಬಿಳ್ಳದ ಕಾರಣದಿಂದಾಗಿ ಬೌಲಿಂಗ್ ವಿಭಾಗದಲ್ಲಿ ಭಾರೀ ಹಿನ್ನಡೆಯಾಗಿದೆ. ಬ್ಯಾಟಿಂಗ್‌ನಲ್ಲಿ ಅಲೆನ್ ಲಯದಲ್ಲಿರುವುದು ಖುಷಿ ವಿಚಾರ. ರಹಾನೆ, ರಚಿನ್ ರವೀಂದ್ರ, ರೋಮನ್ ಪೋವೆಲ್, ಅಂಗ್ರಿಶ್ ರಘುವಂಶಿ ಸೇರಿದಂತೆ ಪ್ರಮುಖ ಬ್ಯಾಟಿಂಗ್ ಪಡೆಯನ್ನು ಹೊಂದಿದೆ. ಸುನೀಲ್ ನರೈನ್ ತಂಡಕ್ಕೆ ಬಲ ತಂದಿದ್ದಾರೆ. ಇಷ್ಟಾದರೂ ಬೌಲಿಂಗ್‌ನಲ್ಲಿ ಅಲ್ಪ ಹಿನ್ನಡೆ ಅನುಭವಿಸಿದೆ.

ಪಿಚ್ ರಿಪೋರ್ಟ್: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟರ್‌ಗಳಿಗೆ ಹೆಚ್ಚಿನ ಲಾಭ ಸಿಗಲಿದೆ. ನೇರ ಪಿಚ್, ಫ್ಲಾಟ್ ಇರುವುದರಿಂದ ಹೆಚ್ಚಿನ ಲಾಭ. ಸ್ಪಿನ್ ಬೌಲರ್‌ಗಳಾದ ಸ್ಯಾಂಟ್ನರ್, ಸುನೀಲ್ ನರೈನ್ ಅಂಥವರು ವಿಶ್ವಾಸದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಪಂದ್ಯದ ಮಾಹಿತಿ:
ಯಾವಾಗ: ಭಾನುವಾರ, ಎಲ್ಲಿ: ಮುಂಬೈ
ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಮೊಂಟೆ ಕಾರ್ಲೊ ಮಾಸ್ಟರ್ಸ್‌ಗಿಲ್ಲ ಜೋಕೋವಿಚ್

•**ದುಬೈ:** ಎರಡು ಬಾರಿ ಚಾಂಪಿಯನ್ ಆಗಿರುವ ನೊವಾಕ್ ಜೋಕೋವಿಚ್ ಮೊಂಟೆ-ಕಾರ್ಲೊ ಮಾಸ್ಟರ್ಸ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.

38 ವರ್ಷದ ಸರ್ಬಿಯಾ ಆಟಗಾರರು ಬಲ ಭುಜದ ಗಾಯದ ಕಾರಣದಿಂದ ಈಗಾಗಲೇ ಮಿಯಾಮಿ ಓಪನ್‌ನಿಂದ ಹೊರಬಂದಿದ್ದರು. ಅದೇ ಗಾಯದ ಹಿನ್ನೆಲೆ ಅವರು ಕ್ಲೇ ಕೋರ್ಟ್ ಟೂರ್ನಿಯಾದ ಮೊಂಟೆ-ಕಾರ್ಲೊ ಮಾಸ್ಟರ್ಸ್‌ನಿಂದಲೂ ಹಿಂದೆ ಸರಿದಿದ್ದಾರೆ. ಈ ತಿಂಗಳ ಆರಂಭದಲ್ಲಿ ಇಂಡಿಯನ್ ವೆಲ್ಸ್ ಟೂರ್ನಿಯಲ್ಲಿ ಭಾಗವಹಿಸಿದ್ದ ಜೋಕೋವಿಚ್, ರೌಂಡ್ ಆಫ್ 16ನಲ್ಲಿ ಹಾಲಿ ಚಾಂಪಿಯನ್ ಜಾಕ್ ಡ್ರೇಪರ್ ವಿರುದ್ಧ ಸೋತಿದ್ದರು. 24 ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿ ವಿಜೇತರಾದ ಜೋಕೋವಿಚ್, 2013 ಮತ್ತು 2015ರಲ್ಲಿ ಮೊಂಟೆ-ಕಾರ್ಲೊ ಮಾಸ್ಟರ್ಸ್ ಕಿರೀಟ ಗೆದ್ದಿದ್ದರು. ಅಮೆರಿಕದ ವಿಶ್ವ ಏಳನೇ ರ್ಯಾಂಕ್‌ನ ಆಟಗಾರ ಟೇಲರ್ ಫ್ರಿಟ್ಜ್ ಕೂಡ



ಗಾಯದ ಕಾರಣದಿಂದ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

2026ರ ಮೊಂಟೆ-ಕಾರ್ಲೊ ಮಾಸ್ಟರ್ಸ್ ಏಪ್ರಿಲ್ 5ರಿಂದ 12ರವರೆಗೆ ನಡೆಯಲಿದ್ದು, ವಿಶ್ವ ನಂ.1 ಕಾರ್ಲೋಸ್ ಅಲ್ಕರಾಜ್ ತಮ್ಮ ಪ್ರಶಸ್ತಿಯನ್ನು ರಕ್ಷಿಸಲು ಕಣಕ್ಕಿಳಿಯಲಿದ್ದಾರೆ.

ಡಬ್ಲ್ಯು35 ಲೋಗೋ ಅನಾವರಣ


•**ತುಮಕೂರು:** ಕರ್ನಾಟಕವನ್ನು ಅಂತಾರಾಷ್ಟ್ರೀಯ ಟೆನಿಸ್ ನಕ್ಷೆಯಲ್ಲಿ ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿ, ತುಮಕೂರಿನಲ್ಲಿ ನಡೆಯ ಲಿರುವ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಟೂರ್ನಿಯ ಅಧಿಕೃತ ಲೋಗೋವನ್ನು ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ ಅನಾವರಣಗೊಳಿಸಿದರು.

ಮೇ 4ರಿಂದ 10ರವರೆಗೆ ನಡೆಯಲಿರುವ ಈ ಟೂರ್ನಿ ತುಮಕೂರು ವಿಶ್ವವಿದ್ಯಾಲಯ ಆವರಣದ ಜಿಲ್ಲಾ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಎರಡು ದಶಕಗಳ ಬಳಿಕ ತುಮಕೂರಿನಲ್ಲಿ ಅಂತಾ ರಾಷ್ಟ್ರೀಯ ಟೆನಿಸ್ ಮರಳುತ್ತಿದೆ. ಅಂತಾರಾಷ್ಟ್ರೀಯ ಟೆನಿಸ್ ಫೆಡರೇಷನ್ ನಡೆಸುವ ಈ ಟೂರ್ನಿ, ಆಟಗಾರ್ತಿಯರಿಗೆ ವೃತ್ತಿಪರ ರ್ಯಾಂಕಿಂಗ್ ಅಂಕಗಳನ್ನು ಗಳಿಸಲು ಹಾಗೂ ಉನ್ನತ ಮಟ್ಟದ ಸ್ಪರ್ಧೆಗಳತ್ತ ಮುನ್ನಡೆಯಲು ಮಹತ್ವದ ವೇದಿಕೆಯಾಗಲಿದೆ. ಡಬ್ಲ್ಯು35 ವರ್ಗದ ಈ ಸ್ಪರ್ಧೆಯಲ್ಲಿ ಸುಮಾರು 30,000 ಅಮೆರಿಕನ್ ಡಾಲರ್ ಬಹುಮಾನ ಮೊತ್ತದ ಜೊತೆಗೆ 35 ಡಬ್ಲ್ಯುಟಿಎ ರ್ಯಾಂಕಿಂಗ್ ಅಂಕಗಳು ಲಭ್ಯವಿರುತ್ತವೆ. ಸಾಮಾನ್ಯವಾಗಿ 32 ಆಟಗಾರ್ತಿಯರ ಮುಖ್ಯ ಡ್ರಾ, ಅರ್ಹತಾ ಸುತ್ತುಗಳು ಹಾಗೂ ಡಬಲ್ಸ್ ಪಂದ್ಯಗಳನ್ನು ಒಳಗೊಂಡಿರುತ್ತದೆ. ಈ ಸಂದರ್ಭದಲ್ಲಿ ಮಾತನಾಡಿದ ಡಾ. ಪರಮೇಶ್ವರ ಅವರು, ಇದು ಕೇವಲ ಟೂರ್ನಿ ಯಲ್ಲ, ತುಮಕೂರಿನ ಯುವ ಪ್ರತಿಭೆಗಳಿಗೆ ದೊಡ್ಡ ಅವಕಾಶ. ವಿಶೇಷವಾಗಿ ಬಾಲಕಿಯರಿಗೆ ಕ್ರೀಡೆಯಲ್ಲಿ ಮುಂದುವರಿಯಲು ಇದು ಪ್ರೇರಣೆ ನೀಡುತ್ತದೆ ಎಂದರು. ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಅವರು, ತುಮಕೂರನ್ನು ಜಾಗತಿಕ ಕ್ರೀಡಾ ಕೇಂದ್ರವಾಗಿ ತೋರಿಸಲು ಇದು ಉತ್ತಮ ಅವಕಾಶ. ಎಲ್ಲಾ ಸೌಲಭ್ಯಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಒದಗಿಸಲು ನಾವು ಸಿದ್ಧರಾಗಿದ್ದೇವೆ ಎಂದು ತಿಳಿಸಿದರು. ಒಟ್ಟಿನಲ್ಲಿ, ಈ ಟೂರ್ನಿ ತುಮಕೂರಿನ ಕ್ರೀಡಾ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸುವುದರೊಂದಿಗೆ, ಒಂದು ವಾರದ ಕಾಲ ಉನ್ನತ ಮಟ್ಟದ ಮಹಿಳಾ ಟೆನಿಸ್‌ಗೆ ವೇದಿಕೆಯಾಗಲಿದೆ

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ

5937



ಎಡದಿಂದ ಬಲಕ್ಕೆ
3.ಹೀಗೆ ಮಾಡಿದಾಗ ಮಾತ್ರ ಹಕ್ಕಿ ಹಾರುತ್ತದೆ (4)
5.ವಹಿವಾಟನ್ನು ಹೀಗೂ ಹೇಳುತ್ತೇವೆ (4)
6.ಬಳಲಿಕೆಯಿಲ್ಲಿ ತಿರುಗಿ ಮೂಡಿದೆ (3)
7.ನಗುತ್ತಲೇ ಮೇಲಕ್ಕೆ ಹಾರುವಿಕೆ (3)
9.ಜನಕರಾಜನ ಪುತ್ರಿ -ಸೀತೆ (3)
10.ಗರುವದಿಂದ ಹೊರಟ ಗಂಡುಕುರಿ (3)
12.ಇಪ್ಪತ್ತೈದನೆಯ ವಾರ್ಷಿಕೋತ್ಸವದ ಹೆಸರು (3)
14.ಋಷಿ-ಮುನಿಗಳ ಪರ್ಣಶಾಲೆ (3)
16.ದೇವತೆಗೆ ನಿಗದಿಯಾದ ಹವಿಸ್ಸಿನ ಭಾಗ (4)
17.ಮದ್ದುಗುಂಡುಗಳನ್ನಿಡುವ ಸಂಗ್ರಹಾಲಯ (4)

ಮೇಲಿನಿಂದ ಕೆಳಕ್ಕೆ
1.ವೈಭವಯುತವಾದ ನಿವಾಸ (4)
2.ರಸಿಕತನದಿಂದ ಕೂಡಿದ್ದು (3)
3.ಆಧಾರ-ಬೆಂಬಲವಿಲ್ಲಿ ತಲೆಕೆಳಗಾಗಿದೆ (3)
4.ಬದುಕಿಗೆ ಕನಿಷ್ಠ ಸಂಪನ್ಮೂಲ ಇಲ್ಲದಿರುವುದು (4)
8.ಇದು ತಂದೆ-ತಾಯಿಯ ಮನೆ (3)
9.ಸ್ಥಳ ಮೊದಲಿರುವ ನವಿಲಿನ ಕುಣಿತ (3)
11.ಆನೆಯ ಶತ್ರು, ಈ ಸಿಂಹ (4)
13.ಶಾಲಾ ಕಾಲೇಜುಗಳ ವರ್ಗಕೋಣೆ (4)
14.ಒಳ್ಳೆಯ ಮನತನಕ್ಕೆ ಸೇರಿದವಳು (3)
15.ಎಲ್ಲರಿಗೂ ತಿಳಿಯದ ಸಂಗತಿ (3)

5936 ಉತ್ತರ

ಎಡದಿಂದ ಬಲಕ್ಕೆ:
2.ಆತ್ಮಪ್ರಶಂಸೆ
5.ಗಾನಲೋಲ
6.ಶತನಾಮ 7.ಕಾಕ
8.ನೆಗೆ 10.ಆಲ 13.ಗಳ
15.ವಕ್ರಗತಿ 17.ಅಜಗರ
18.ಪರಿಚಾರಕ

ಮೇಲಿನಿಂದ ಕೆಳಕ್ಕೆ:
1.ಮಾಲೆಗಾರ
2.ಆಪ್ತಾಲೋಚನೆ 3.ಸೆಳೆತ
4.ಆಲೆಮನೆ 6.ಶಕಲ
9.ಗೆಳತಿ 11.ಅಮ್ಲಜನಕ
12.ನವರಾತ್ರಿ
14.ನರಳಾಟ 16.ಗಣಪ

ಬೇಡಿದ ವರ ನೀಡುವ ಪಡಗಾನೂರ ಶ್ರೀ ಸೋಮೇಶ್ವರ



▸ ಸಂಗಮೇಶ ಉತ್ನಾಳ

ದೇವರಹಿಪ್ಪರಗಿ: ನಾಡಿನ ಧಾರ್ಮಿಕ ಕ್ಷೇತ್ರಗಳತ್ತ ಕಣ್ಣುಹಾಯಿಸಿದಾಗ ಅಸಂಖ್ಯಾತ ದೇವಾಲಗಳ ದರ್ಶನ ನಮಗೆ ಸಿಗುತ್ತದೆ. ಅನೇಕಾನೇಕ ಹೆಸರಿನ ದೇವಾಲಯಗಳಿರುವುದು ಕೇಳಿದ್ದೇವೆ. ಅವುಗಳಲ್ಲಿ ಸೋಮೇಶ್ವರ ಹೆಸರಿನ ದೇವಾಲಯಗಳಿರುವುದು ಸರ್ವೇ ಸಾಮಾನ್ಯವಾಗಿದೆ. ನಾಡಿನ ಅಂತಹ ದೇವಾಲಯಗಳಲ್ಲಿ ಪಡಗಾನೂರ ಶ್ರೀ ಸೋಮೇಶ್ವರ ದೇವಾಲಯ ಕೂಡಾ ಒಂದಾಗಿದೆ.

ದೇವರಹಿಪ್ಪರಗಿ ತಾಲೂಕಿನ ಪಡಗಾನೂರ ಗ್ರಾಮದ ಈ ಸೋಮೇಶ್ವರ ದೇವಾಲಯ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವುದು ಕಂಡು ಬರುತ್ತಿದೆ. ಗ್ರಾಮದ ಮಧ್ಯದಲ್ಲಿರುವ ಈ ಸೋಮೇಶ್ವರ ದೇವರ ಮೂಲ ಹುಡುಕುತ್ತ ಹೋದಾಗ ಆದಿ ಜಗದ್ಗುರು ರೇಣುಕಾಚಾರ್ಯರು (ರೇವಣಸಿದ್ದರು) ದೇಶ ಸಂಚಾರಗೈಯುತ್ತ ತಮಗಿಷ್ಟವಾದ ಸ್ಥಳದಲ್ಲಿ ಶ್ರೀ ಸೋಮೇಶ್ವರ ಲಿಂಗವನ್ನು ಸ್ಥಾಪಿಸಿದರು ಎನ್ನುವ ಮಾತು 'ಶ್ರೀ ರೇಣುಕ ವಿಜಯ' ಪುರಾಣದಿಂದ ತಿಳಿದುಬಂದಿದೆ. ಅಂತಹ ಲಿಂಗವೇ ಇದು ಕೂಡಾ ಆಗಿರಬಹುದು ಎನ್ನುವ ಪೌರಾಣಿಕ ನಂಬಿಕೆಗೆ ನಾವು ಸಾಕ್ಷಿಯಾಗಿದ್ದೇವೆ.

ಅದೇನೇ ಇರಲಿ ಸೋಮೇಶ್ವರ ಎಂದರೆ ಶಿವ. ಇದು ಶಿವನ ದೇವಾಲಯ ಎನ್ನುವುದಂತೂ ಸತ್ಯ. ಗ್ರಾಮದ ಮಧ್ಯ ಭಾಗದಲ್ಲಿ ಇತ್ತೀಚೆಗೆ ಜೀರ್ಣೋದ್ಧಾರಗೊಂಡ ಸುಂದರದೇವಾಲಯವಿದೆ. ಗ್ರಾಮದಹೊರವಲಯದಲ್ಲಿ ಸ.ನಂ.220ರಲ್ಲಿ ಪ್ರಾಚೀನ ಶಿಲ್ಪಕಲೆಯಲ್ಲಿ ಸುಂದರ ದೇಗುಲ ಇದೆ. ಈ ದೇಗುಲವನ್ನು ಬಾದಾಮಿ ಚಾಲುಕ್ಯರ ಆಡಳಿತದ 'ತರ್ಧವಾಡಿ ನಾಡು' ಆಳುತ್ತಿದ್ದ ಕಪಿಲದೇವ ದಂಡನಾಯಕನು ಕ್ರಿಶ 12ನೇ ಶತಮಾನದಲ್ಲಿ ಕಟ್ಟಿಸಿದನೆಂದು ಸ್ಥಳೀಯ ಶಾಸನದಿಂದ (ಕ್ರಿಶ 1208) ತಿಳಿದುಬರುತ್ತದೆ. ಈ ಶಾಸನದ ಬರವಣಿಗೆಯಲ್ಲಿ ಈ ದೇಗುಲವನ್ನು 'ಅಚಲೇಶ್ವರ ದೇವರು' ಎಂದು ಬರೆಯಲಾಗಿದೆ. ಆದರೆ, ಇಂದು ಜನಮಾನಸದಲ್ಲಿ ಶ್ರೀ ಸೋಮೇಶ್ವರ ದೇಗುಲವೆಂದು ಜನನೀತವಾಗಿದೆ.

ಪಡಗಾನೂರ ಗ್ರಾಮದ ಅನೇಕ ಮನೆತನಗಳಿಗೆ ಕುಲದೇವರಾಗಿ ಹಾಗೂ ನಾಡಿನ ಅಸಂಖ್ಯಾತರ ಮನೆ ದೇವರಾಗಿ ಸೋಮೇಶ್ವರ ವಿರಾಜಮಾನರಾಗಿದ್ದಾರೆ. ಭಕ್ತಕುಲಕೋಟಿಗೆ ಸ್ಫೂರ್ತಿಯ ಸೆಲೆಯಾಗಿ ಆರಾಧ್ಯ ದೈವ ಎನಿಸಿದ್ದಾರೆ. ಭಕ್ತರು ತಮ್ಮ ಮಕ್ಕಳಿಗೆ ಸೋಮೇಶ್ವರರ ಹೆಸರಿಟ್ಟು ಕರೆಯುತ್ತಾರೆ. ಗ್ರಾಮದ ತುಂಬೆಲ್ಲ ಸೋಮನಗೌಡ, ಸೋಮಶೇಖರ, ಸೋಮಪ್ಪ, ಸೋಮವ್ವ ಎಂಬ ಹೆಸರುಗಳು ಮನೆಮಾತಾಗಿವೆ.

ಭಕ್ತಿಯಿಂದ ಮನಪೂರ್ವಕವಾಗಿ ನಡೆದುಕೊಳ್ಳುವ ಭಕ್ತರಿಗೆ ಶ್ರೀ ಸೋಮೇಶ್ವರನು ಬೇಡಿದ ಸಕಲ ಇಷ್ಟಾರ್ಥಗಳನ್ನು ಕೊಟ್ಟಿದ್ದು ಹಿಂದಿನ ಕಾಲದಿಂದ ಇಂದಿನವರೆಗೂ ಕಂಡು ಬಂದಿರುತ್ತದೆ ಎಂದು ಪಡಗಾನೂರ ಗ್ರಾಮದ ಮುಖಂಡರು ಹಿರಿಯರಾದ ಈಶ್ವರ ಕಬ್ಬಿನ, ಸುಭಾಸ ಹೊಸಟ್ಟಿ, ಪರಸುರಾಮ ಸೇರಿಕಾರ, ಲಕ್ಷ್ಮಣ ಕೋಟ್ಯಾಳ, ಲಕ್ಷ್ಮಣ ಹಳ್ಳಿ ಸೇರಿದಂತೆ ಗ್ರಾಮದ ಹಿರಿಯರು ತಮ್ಮ ಅನುಭವವನ್ನು ವಿವರಿಸಿದ್ದಾರೆ.



ವಿವಿಧ ಕಾರ್ಯಕ್ರಮ

ಪ್ರತಿವರ್ಷ ಚೈತ್ರ ಶುದ್ಧ ಏಕಾದಶಿ ತಿಥಿ ದಿವಸ 'ಅಗ್ನಿಸ್ಪರ್ಶ ಮತ್ತು ರಥೋತ್ಸವ' ನಡೆಯುತ್ತದೆ. ಜಾತ್ರೆ ಪ್ರಯುಕ್ತ 11 ದಿನ ಪುರಾಣ, ಪಲ್ಲಕ್ಕಿ ಉತ್ಸವ, ನಂದಿಧ್ವಜ, ಅಗ್ನಿ ಪ್ರವೇಶ, ಸಾಮೂಹಿಕ ವಿವಾಹ, ಕುಂಭಾಭಿಷೇಕ, ಡೊಳ್ಳಿನ ಹಾಡಿಕೆ, ರಸಮಂಜರಿ, ನಾಟಕ, ಕುಸ್ತಿ, ಕಬಡ್ಡಿ, ಉಚಿತ ಆರೋಗ್ಯ ಶಿಬಿರ ಹೀಗೆ ವಿವಿಧ ಕಾರ್ಯಕ್ರಮ ನಡೆಯುತ್ತವೆ. ಸರ್ವ ಗ್ರಾಮಸ್ಥರು ಈ ಜಾತ್ರೆಯ ಪ್ರತಿಯೊಂದು ಕಾರ್ಯಕ್ರಮವನ್ನು ತನು,ಮನ,ಧನ, ಭಕ್ತಿ ಶ್ರದ್ಧೆಯಿಂದ ಜಾತ್ರೆಯನ್ನು ಬೃಹತ್ ಪ್ರಮಾಣದಲ್ಲಿ ಅದ್ದೂರಿಯಾಗಿ ಆಚರಿಸುತ್ತಾ ಬಂದಿರುವುದು ಮಾದರಿಯಾಗಿದೆ.

- ಪ್ರಾಚೀನ ಶಿಲ್ಪಕಲೆಯಲ್ಲಿ ಸುಂದರ ದೇಗುಲ
- ಇತ್ತೀಚೆಗೆ ಜೀರ್ಣೋದ್ಧಾರಗೊಂಡ ಸುಂದರ ದೇವಾಲಯ
- ಭಕ್ತಕುಲಕೋಟಿಗೆ ಸ್ಫೂರ್ತಿಯ ಸೆಲೆಯಾಗಿ ಆರಾಧ್ಯ ದೈವ
- ಬೇಡಿದ ಭಕ್ತರಿಗೆ ಸಕಲ ಇಷ್ಟಾರ್ಥ ಸಿದ್ಧಿ
- ಈ ದೇಗುಲವನ್ನು ಬಾದಾಮಿ ಚಾಲುಕ್ಯರ ಆಡಳಿತದ 'ತರ್ಧವಾಡಿ ನಾಡು' ಆಳುತ್ತಿದ್ದ ಕಪಿಲದೇವ ದಂಡನಾಯಕನು ಕ್ರಿಶ 12ನೇ ಶತಮಾನದಲ್ಲಿ ಕಟ್ಟಿಸಿದ ಶಾಸನ















ಕಿರುಸುದ್ದಿ

ಉಪನ್ಯಾಸ ಇಂದು

ಗದಗ: ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಮಾ.29 ರಂದು ಬೆಳಗ್ಗೆ 10ಕ್ಕೆ ನಡೆಯಲಿರುವ ಬಸವದಳದ 1691ನೇ ಶರಣ ಸಂಗಮದಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ವೀರ ರಾಣಿಯರು ಶರಣೆ ಉಪನ್ಯಾಸ ಕಾರ್ಯಕ್ರಮದಲ್ಲಿ ಕಿತ್ತೂರ ರಾಣಿ ಚನ್ನಮ್ಮ ಹಾಗೂ ಶರಣ ಜೇಡರ ದಾಸಿಮಯ್ಯನವರ ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಬಸವಮಹಾಂತ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಅಧ್ಯಕ್ಷತೆ ಎಂ.ಬಿ.ಲಿಂಗದಾಳ ವಹಿಸುವರು. ಉಪನ್ಯಾಸಕ ಪಿ.ಟಿ.ಅಸುಂಡಿ ಜೇಡರ ದಾಸಿಮಯ್ಯನವರ ಕುರಿತು ಉಪನ್ಯಾಸ ಮಾಡುವರು ಮತ್ತು ಶರಣೆ ಶಾಂತಲಾ ಹಂಚಿನಾಳ ಕಿತ್ತೂರ ರಾಣಿ ಚೆನ್ನಮ್ಮ ಕುರಿತು ಉಪನ್ಯಾಸ ಮಾಡುವರು ಎಂದು ಎಸ್.ಎ. ಮುಗದ ತಿಳಿಸಿದ್ದಾರೆ.

ಉಚಿತ ಆರೋಗ್ಯ ತಪಾಸಣೆ

ಗದಗ: ನಗರದ ಜ.ತೋಂಟದಾರ್ಯ ಜಾತ್ರಾ ಮಹೋತ್ಸವದ ಅಂಗವಾಗಿ ಮಾ.29 ರಂದು ಬೆಳಗ್ಗೆ 10.30ಕ್ಕೆ ನಗರದ ಜ.ತೋಂಟದಾರ್ಯ ಕಲ್ಯಾಣ ಮಂಟಪದಲ್ಲಿ ರಕ್ತದಾನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಡಿಜಿಎಮ್ ಆಯುರ್ವೇದ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಥೋತ್ಸವ ನಾಳೆ

ಗದಗ: ತಾಲೂಕಿನ ಲಕ್ಕುಂಡಿ ಗ್ರಾಮದ ಕೋಟಿ ವೀರಭದ್ರೇಶ್ವರ ರಥೋತ್ಸವವು ಮಾ.30 ರಂದು ವಿವಿಧ ವಾದ್ಯ ಮೇಳಗಳೊಂದಿಗೆ ಅದ್ದೂರಿಯಾಗಿ ಜರುಗಲಿದೆ. ಸಂಜೆ 4ಕ್ಕೆ ಡೋಣಿಯ ನಂದಿವೇರಿಮಠದ ಶಿವಕುಮಾರ ಸ್ವಾಮೀಜಿ, ಹರ್ಲಾಪುರದ ಡಾ.ಕೊಟ್ಟೂರೇಶ್ವರ ಸ್ವಾಮೀಜಿ, ಅಲ್ಲಮಪ್ರಭುದೇವರ ಮಠದ ಸಿದ್ದಲಿಂಗೇಶ್ವರ ಸ್ವಾಮೀಜಿ ರಥೋತ್ಸವಕ್ಕೆ ಚಾಲನೆ ನೀಡುವರು. ಇದಕ್ಕೂ ಪೂರ್ವ ಬೆಳಗ್ಗೆ ವಿವಿಧ ಹೂವುಗಳ ಅಲಂಕಾರದಿಂದ ಸಿಂಗರಿಸಿರುವ ವೀರಭದ್ರೇಶ್ವರ ಮೂರ್ತಿಗೆ ರುದ್ರಾಭಿಷೇಕ ನೆರವೇರಿಸಿ ವಿವಿಧ ಪೂಜಾ ಕೈಂಕರ್ಯಗಳು ನಡೆಯುವವು. ಮಾ.31ರಂದು ಬೆಳಗ್ಗೆ ಗುಗ್ಗಳೋತ್ಸವ ಕಾರ್ಯಕ್ರಮವು ಪ್ಯಾಟಿ ಹನುಮಂತ ದೇವರ ದೇವಸ್ಥಾನದಿಂದ ಆರಂಭವಾಗಿ ಬಜಾರ ರಸ್ತೆಯ ಮೂಲಕ ನೂರಾರು ಪುರವಂತರ ವೇಷ ಭೂಷಣಗಳೊಂದಿಗೆ ವೀರಾವೇಷದ ಒಡಪುಗಳನ್ನು ಹೇಳುತ್ತಾ ವಿಜೃಂಭಿಸುವರು. ನಂತರ ವೀರಭದ್ರೇಶ್ವರ ದೇವಸ್ಥಾನದ ಪತ್ರಿ ಉತ್ಸವ ನಡೆದ ಸ್ಥಳದಲ್ಲಿ ತೆಗೆಯಲಾಗಿರುವ ಕುಂಡದಲ್ಲಿ ಅಗ್ನಿ ಹಾಯುವ ಕಾರ್ಯಕ್ರಮ ನಡೆಯುವುದು. ನಂತರ ಅನ್ನಪ್ರಸಾದ ನೆರವೇರುವುದು. ಸಂಜೆ 5ಕ್ಕೆ ವೀರಭದ್ರೇಶ್ವರ ಪಲ್ಲಕ್ಕಿ ಉತ್ಸವ ಮದಲಾಗಿ ಗ್ರಾಮದ ಪ್ರಮುಖ ಬೀದಿಯಲ್ಲಿ ನಡೆಯಲಿದೆ. ನಂತರ ಮಹಾಂತಯ್ಯ ಬದ್ದಿಮಠ ಶಾಸ್ತ್ರಿಗಳಿಂದ ವೀರಭದ್ರೇಶ್ವರ ದೇವರ ಕುರಿತು ಪ್ರವಚನ ನಡೆಯಲಿದೆ. ನಂತರ ಪ್ರಾಥಮಿಕ, ಪ್ರೌಢಶಾಲೆ, ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಸ್ಪರ್ಧೆ ನಡೆಯಲಿದೆ ಎಂದು ಜಾತ್ರಾ ಕಮಿಟಿ ಪ್ರಕಟಣೆ ತಿಳಿಸಿದೆ.

ಕಟ್ಟಡ ಕಾಮಗಾರಿ ಆರಂಭಿಸಲು ಆಗ್ರಹ

ಗದಗ: ಕೇಂದ್ರ ಸರ್ಕಾರದ ಗ್ರಾಮೀಣ ಮೂಲ ಸೌಕರ್ಯದಡಿ ಮಂಜೂರು ಆಗಿರುವ ಮೇಲ್ದರ್ಜೆಯ ಪಶು ಚಿಕಿತ್ಸಾಲಯದ ಕಟ್ಟಡವನ್ನು ಮಾ.30ರೊಳಗೆ ಆರಂಭಿಸದಿದ್ದರೆ ಗ್ರಾಮ ಪಂಚಾಯತಿ ಮುಂದೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ರೈತ ಸಮುದಾಯವು ಎಚ್ಚರಿಕೆ ನೀಡಿದೆ.

ಈ ಕುರಿತು ತಾಲೂಕಿನ ಲಕ್ಕುಂಡಿ ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಅಭಿವೃದ್ಧಿ ಅಧಿಕಾರಿಗಳಿಗೆ ಪತ್ರ ಬರೆದಿರುವ ರೈತರು, ಈಗಿರುವ ಪಶು ಚಿಕಿತ್ಸಾಲಯವು ಚಿಕ್ಕದಾಗಿದ್ದನ್ನು ಮೇಲ್ದರ್ಜೆಗೆ ಏರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಗ್ರಾಮೀಣ ಮೂಲ ಸೌಕರ್ಯದಡಿ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲು 49.96 ಲಕ್ಷ ರೂ. ಅನುದಾನವನ್ನು ಬಿಡುಗಡೆ ಮಾಡಿ 11 ತಿಂಗಳು ಕಳೆದರೂ ಕಾಮಗಾರಿ ಆರಂಭವಾಗಿಲ್ಲ. ಲಕ್ಕುಂಡಿ ಗ್ರಾಮದ ಜನಸಂಖ್ಯೆ ಹಾಗೂ ಜಾನುವಾರುಗಳು ಸಂಖ್ಯೆಗಳಿಗನುಗುಣವಾಗಿ ಕೇಂದ್ರ ಸರ್ಕಾರವು ಮೇಲ್ದರ್ಜೆಯ ಪಶು ಚಿಕಿತ್ಸಾಯಕ್ಕೆ ಅನುದಾನ ಬಿಡುಗಡೆ ಮಾಡಿದೆ. ಆದ್ದರಿಂದ ಈಗ ಮಂಜೂರಿಯಾಗಿರುವ ಮೇಲ್ದರ್ಜೆಯ ಪಶು ಚಿಕಿತ್ಸಾಲಯದ ಕಟ್ಟಡದ ಕಾಮಗಾರಿ ಮಾ.30 ರಂದು ಆರಂಭಿಸಬೇಕು ತಪ್ಪಿದ್ದಲ್ಲಿ ಮಾ.31 ರಂದು ಸಮಸ್ತ ರೈತಾಪಿ ವರ್ಗ ಗ್ರಾಮ ಪಂಚಾಯತಿಗೆ ಮುತ್ತಿಗೆ ಹಾಕಿ ಧರಣಿ ಸತ್ಯಾಗ್ರಹ ಮಾಡಲಾಗುವುದು ಎಂದು ತಾಪಂ ಮಾಜಿ ಅಧ್ಯಕ್ಷ ಎಂ.ಎನ್.ಉಮಚಗಿ, ಗ್ರಾಪಂ ಮಾಜಿ ಸದಸ್ಯ ಬಿ.ಬಿ.ಮಾಡಲಗೇರಿ, ತಾಪಂ ಮಾಜಿ ಸದಸ್ಯ ಮಹೇಶ ಮುಸ್ಕಿನಭಾವಿ, ಎಸ್.ಬಿ.ಸಜ್ಜನರ ಎಚ್ಚರಿಸಿದ್ದಾರೆ.

ಇಂದು ಮಾಸಿಕ ಸಭೆ

ಗದಗ: ನಗರದ ಪ್ರಾಣಿ ಸಂಗ್ರಹಾಲಯ ಹತ್ತಿರದ ಕುಡುವಕ್ಕಲಿಗರ ಭವನದಲ್ಲಿ ಮಾ.29 ರಂದು ಬೆಳಗ್ಗೆ 11ಕ್ಕೆ ಮಾಸಿಕ ಸಭೆ ಆಯೋಜಿಸಲಾಗಿದೆ. ಸಭೆಯಲ್ಲಿ ಕಟ್ಟಡ ಸಹಾಯಾರ್ಥ ಲಾಟರಿ ಯೋಜನೆ ಬಹುಮಾನ ಫಲಿತಾಂಶ ದಿನಾಂಕ ಮತ್ತು ಆ ಕಾರ್ಯಕ್ರಮದ ರೂಪ ರೇಷೆಯ ಬಗ್ಗೆ ಸಮಸ್ತ ಸಮಾಜ ಬಾಂಧವರ ಸಲಹೆ ಸೂಚನೆ ಅತ್ಯವಶ್ಯವಾಗಿದೆ ಎಂದಿದ್ದಾರೆ.



ಗದಗ: ನಗರದ ಜ.ತೋಂಟದಾರ್ಯ ಜಾತ್ರಾ ಮಹೋತ್ಸವದ ಅಂಗವಾಗಿ ವ್ಯಸನಮುಕ್ತ ಸಮಾಜ ಜಾಗೃತಿಗಾಗಿ ನಗರದ ಒಕ್ಕಲಗೇರಿಯ ರಾಚೋಟೇಶ್ವರ ದೇವಸ್ಥಾನದಿಂದ ಪಾದಯಾತ್ರೆಗೆ ಚಾಲನೆ ನೀಡಲಾಯಿತು. ಜ.ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಜೋಳಿಗೆಯಲ್ಲಿ ಓಣಿಯ ನಾಗರಿಕರು ಮದ್ಯದ ಪೌಚ್‌ಗಳು, ಗುಟ್ಕಾ ಪಾಕೇಟ್‌ಗಳು ಹಾಗೂ ತಂಬಾಕು ಉತ್ಪನ್ನಗಳನ್ನು ಹಾಕಿ ಇನ್ಮುಂದೆ ದುಷ್ಚಟದಿಂದ ದೂರಾಗಿ ಹೊಸ ಬದುಕನ್ನು ಸಾಗಿಸುತ್ತೇವೆ ಎಂದು ಪ್ರಮಾಣ ಮಾಡಿ ಶ್ರೀಗಳಿಂದ ಆಶೀರ್ವಾದ ಪಡೆದರು.

ಜಾನುವಾರು ಸಾಕಾಣಿಕೆಯಿಂದ ಬದುಕು ಸುಸ್ಥಿರ

ಲಕ್ಷ್ಮೇಶ್ವರ: ಜಾನುವಾರುಗಳ ಸಾಕಾಣಿಕೆ, ಹೈನುಗಾರಿಕೆ ಕೃಷಿಕರ ಮತ್ತು ಗ್ರಾಮೀಣ ಭಾಗದ ಜನರ ದೈನಂದಿನ ಬದುಕಿಗೆ ಸ್ಥಿರ ಆದಾಯ ತಂದುಕೊಡುವ ಮೂಲಕ ಜೀವನೋಪಾಯದ ಜತೆಗೆ ಆರ್ಥಿಕ ಸ್ವಾವಲಂಬನೆ ಸಾಧಿಸಲು ಉತ್ತಮ ಮಾರ್ಗವಾಗಿದೆ ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು. ಅವರು ತಾಲೂಕಿನ ಬಟ್ಟೂರ ಗ್ರಾಮದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಜಿಪಂ, ತಾಪಂ, ಗ್ರಾಪಂ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಿಶ್ರ ತಳಿ ಆಕಲು,ಕರುಗಳ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದರು. ಜಾನುವಾರು ಸಾಕಾಣಿಕೆ ಉದ್ಯೋಗದ ಜತೆಗೆ ಹೈನುಗಾರಿಕೆ, ಹೈನೋತ್ಪನ್ನ ಬಳಕೆಯಿಂದ ಉತ್ತಮ ಆರೋಗ್ಯ, ಸಾವಯವ ಗೊಬ್ಬರ, ಕೃಷಿ ಕಾರ್ಯಕ್ಕೆ ಸಹಾಯವಾಗುವ ಜೊತೆಗೆ ಕೃಷಿಕರ ಬದುಕನ್ನು ಹಸನಾಗುತ್ತದೆ ಎಂದರು.

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಡಾ. ನಿಂಗಪ್ಪ ಓಲೇಕಾರ ಮಾತನಾಡಿ, ಕೃಷಿಕರು ಮಿಶ್ರ ತಳಿ ಹಸುಗಳನ್ನು ಸಾಕುವುದರಿಂದ ಆರ್ಥಿಕವಾಗಿ ಸಬಲರಾಗುವ ಜೊತೆಗೆ ಸಾವಲಂಬಿ ಬದುಕನ್ನು ಕಟ್ಟಿಕೊಳ್ಳಲಿಕ್ಕೆ ಸಹಾಯಕಾರಿಯಾಗಲಿದೆ ಎಂದರು.

ಗ್ರಾಪಂ ವ್ಯಾಪ್ತಿಯ ನೂರಾರು ಕೃಷಿಕರು ತಮ್ಮ ಮಿಶ್ರ ತಳಿ ಆಕಳು, ಕರುಗಳನ್ನು ಪ್ರದರ್ಶನಕ್ಕೆ ತಂದಿದ್ದರು. ಈ ವೇಳೆ ಕರುಗಳ ಆರೋಗ್ಯ ತಪಾಸಣೆ, ಕಿಟ್ ವಿತರಣೆ ಮಾಡಲಾಯಿತು. ತಾಪಂ ಇಒ ಕೃಷ್ಣಪ್ಪ ಧರ್ಮರ, ತಾಪಂ ಮಾಜಿ ಅಧ್ಯಕ್ಷ ಪರಶುರಾಮ ಇಮ್ಮಡಿ, ಕಲ್ಲಪ್ಪ ಹಡಪದ, ಪಿಡಿಒ ಹನಮಂತಪ್ಪ ಲಮಾಣಿ, ಗಂಗಮ್ಮ ಸಾವಿರಕುರಿ, ಪರಮೇಶಪ್ಪ ಹತ್ತಾಳ, ಮಂಜು ಕಳಸದ, ಜಗದೀಶಗೌಡ ಪಾಟೀಲ, ನಾಗರಾಜ ಪಾಟೀಲ, ಮಂಜು ಗೌರಿ, ಹನಮಂತಪ್ಪ ಹರಿಜನ, ಫಕ್ಕಿರೇಶ ಲಮಾಣಿ ಸೇರಿ ಅನೇಕರಿದ್ದರು.



ಲಕ್ಷ್ಮೇಶ್ವರ: ತಾಲೂಕಿನ ಬಟ್ಟೂರ ಗ್ರಾಮದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಜಿಪಂ, ತಾಪಂ, ಗ್ರಾಪಂ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಿಶ್ರ ತಳಿ ಆಕಲು,ಕರುಗಳ ಪ್ರದರ್ಶನಕ್ಕೆ ಶಾಸಕ ಡಾ.ಚಂದ್ರು ಲಮಾಣಿ ಚಾಲನೆ ನೀಡಿದರು.

ಏ.1 ರಿಂದ ಪೋರ್ಟಲ್‌ನಲ್ಲಿ ಮಾಹಿತಿ ದಾಖಲೆಗೆ ಅವಕಾಶ | ಡಿಸಿ ಮಾಹಿತಿ

ಜನಗಣತಿ ಮಾಹಿತಿ ಒದಗಿಸಿ

ಗದಗ: 2027ರ ಜನಗಣತಿ ಕಾರ್ಯಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಏ.1 ರಿಂದ 15 ರವರೆಗೆ ಸಾರ್ವಜನಿಕರು ಎಂದರೆ ಸ್ವಯಂ ಎಣಿಕೆದಾರರು ತಮ್ಮ ಮಾಹಿತಿಯನ್ನು ಸ್ವಯಂ ಆಗಿ ಆನ್‌ಲೈನ್ ಪೋರ್ಟಲ್ (se.census.gov.in) ನಲ್ಲಿ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನಗಣತಿ 2027ರ ಕುರಿತು ಜರುಗಿದ ಪತ್ರಿಕಾಗೋಷ್ಟಿಯನ್ನುದ್ದೇಶಿಸಿ ಅವರು ಮಾತನಾಡಿ, ಸಂಪೂರ್ಣ ಡಿಜಿಟಲ್ ಮಾದರಿಯಲ್ಲಿ (ಆ್ಯಪ್ ಮೂಲಕ) ನಡೆಯಲಿರುವ ಈ ಜನಗಣತಿ ಕಾರ್ಯಕ್ಕಾಗಿ ಜಿಲ್ಲೆಯಾದ್ಯಂತ ಅಧಿಕಾರಿಗಳ ತಂಡ ರಚನೆ ಹಾಗೂ ತರಬೇತಿ ಪ್ರಕ್ರಿಯೆಗಳು ಭರದಿಂದ ಸಾಗಿವೆ. ಈ ಬಾರಿಯ ಜನಗಣತಿಯ ವಿಶೇಷತೆಯೆಂದರೆ, ಸಾರ್ವಜನಿಕರು ಖುದ್ದಾಗಿ ಪೋರ್ಟಲ್ ಮೂಲಕ ತಮ್ಮ ಮಾಹಿತಿಯನ್ನು ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಏ.1 ರಿಂದ ಏ.15 ರವರೆಗೆ ಸಾರ್ವಜನಿಕರು ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು ಎಂದರು.

ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಎ.ಎ.ಕಂಬಾಳಿಮಠ, ವಾರ್ತಾಧಿಕಾರಿ ವಸಂತ ಮಡ್ಲೂರ, ಜನಗಣತಿ ಜಿಲ್ಲಾ ನೋಡಲ್ ಅಧಿಕಾರಿ ರಂಜಿತ್ ಜಾಲಾ ಇದ್ದರು.

- ಗದಗ – 658 ಗಣತಿ ಬ್ಲಾಕ್
- ನರಗುಂದ–175 ಗಣತಿ ಬ್ಲಾಕ್
- ಶಿರಹಟ್ಟಿ– 160 ಗಣತಿ ಬ್ಲಾಕ್
- ಮುಂಡರಗಿ–242 ಗಣತಿ ಬ್ಲಾಕ್
- ಗಜೇಂದ್ರಗಡ–228 ಗಣತಿ ಬ್ಲಾಕ್
- ಲಕ್ಷ್ಮೇಶ್ವರ– 196 ಗಣತಿ ಬ್ಲಾಕ್
- ರೋಣ –246 ಗಣತಿ ಬ್ಲಾಕ್
- ಪ್ರತ್ಯೇಕವಾಗಿ 90 ಕೊಳಗೇರಿ ಪ್ರದೇಶ ಗುರುತು

ಏ.16 ರಿಂದ ಮೇ 15 ರ ಒಂದು ತಿಂಗಳ ಅವಧಿಯಲ್ಲಿ ನಿಯೋಜಿಸಿದ ಗಣತಿದಾರರು ಮೊದಲ ಹಂತದಲ್ಲಿ ಮನೆ ಪಟ್ಟಿ ಕಾರ್ಯಾಚರಣೆ ನಡೆಯಲಿದೆ. ಪ್ರತಿ ಮನೆಗೆ ಹಾಜರಾಗಿ ಕುಟುಂಬಸ್ಥರಿಂದ ಗಣತಿದಾರರು ಮಾಹಿತಿ ಸಂಗ್ರಹಿಸಲಿದ್ದು ಗಣತಿದಾರರಿಗೆ ಕುಟುಂಬದ ಮುಖ್ಯಸ್ಥರ ಆಧಾರ್ ಕಾರ್ಡ್‌ಗೆ ಜೊಡಣೆಯಾದ ಮೊಬೈಲ್ ಸಂಖ್ಯೆ ಹಾಗೂ ಆಧಾರ್ ಕಾರ್ಡ್ ಸಂಖ್ಯೆ ನೀಡಬೇಕು.
■ **ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ**



ಜನಗಣತಿ ಕಾರ್ಯದ ಗಣತಿದಾರರು

ಗಣತಿ ಕಾರ್ಯಕ್ಕೆ ಶಿಕ್ಷಣ ಇಲಾಖೆಯ ಶಿಕ್ಷಕರು (ಸರ್ಕಾರಿ ಮತ್ತು ಅನುದಾನಿತ) ಶಿಶು ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು, ಆರೋಗ್ಯ ಇಲಾಖೆಯ ಆಶಾ ಕಾರ್ಯಕರ್ತರು, ಸೇರಿದಂತೆ ಕನಿಷ್ಟ 6 ಜನ ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನಾಗಿ ನಿಯೋಜಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ 298 ಮೇಲ್ವಿಚಾರಕರು, 1480 ಗಣತಿದಾರರು, 1205 ಎಚ್‌ಎಲ್‌ಬಿಗಳು ಕಾರ್ಯನಿರ್ವಹಿಸಲಿದ್ದಾರೆ. ಪಟ್ಟಣ ಪ್ರದೇಶದಲ್ಲಿ 134 ಮೇಲ್ವಿಚಾರಕರು, 744 ಗಣತಿದಾರರು , 701 ಎಚ್ ಎಲ್ ಬಿಗಳು ಕಾರ್ಯನಿರ್ವಹಿಸಲಿದ್ದಾರೆ.

1905 ಗಣತಿ ಬ್ಲಾಕ್ ರಚನೆ

ಜನಗಣತಿ ಕಾರ್ಯವು ಮೊದಲ ಹಂತದಲ್ಲಿ ಮನೆ ಗಣತಿ ಕೈಗೊಳ್ಳಲಾಗುತ್ತಿದ್ದು 150 ರಿಂದ 200 ಕುಟುಂಬಗಳು ಅಥವಾ ಅಂದಾಜು 700 – 800 ಜನಸಂಖ್ಯೆಗೆ ಅನುಗುಣವಾಗಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಒಂದು ಗಣತಿ ಬ್ಲಾಕ್ ರಚಿಸಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮ ಆಡಳಿತಾಧಿಕಾರಿಗಳು, ರಾಜಸ್ವ ನಿರೀಕ್ಷಕರು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು, ಕರ ವಸೂಲಿಗಾರರು, ಜಲಗಾರರು, ನಗರ ಪ್ರದೇಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿ / ಸಿಬ್ಬಂದಿ ಗ್ರಾಮ, ವಾರ್ಡ್, ತಾಲೂಕು ವಿಭಾಗದಂತೆ ಬ್ಲಾಕ್ ರಚನೆಯ ಕಾರ್ಯನಿರ್ವಹಿಸಿರುತ್ತಾರೆ. ಜಿಲ್ಲೆಯಲ್ಲಿ ಎಲ್ಲ ತಾಲೂಕುಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸೇರಿ ಒಟ್ಟು 1905 ಗಣತಿ ಬ್ಲಾಕ್‌ಗಳು ರಚನೆಯಾಗಿವೆ ಎಂದು ಡಿಸಿ ತಿಳಿಸಿದರು.

ರಾಮ ನಾಮದಲ್ಲಿದೆ ಜೀವನ್ಮುಕ್ತಿ ನೀಡುವ ಶಕ್ತಿ

ನರೇಗಲ್ಲ: ರಾಮನಾಮ ಎಂಬುದೊಂದು ಮಹಾಮಂತ್ರ. ಇದರಲ್ಲಿ ಜೀವನ್ಮುಕ್ತಿಯನ್ನು ನೀಡುವ ಶಕ್ತಿ ಅಡಗಿದೆ ಎಂದು ಸಾಹಿತಿ, ನಿವೃತ್ತ ಶಿಕ್ಷಕ ಅರುಣ ಕುಲಕರ್ಣಿ ಹೇಳಿದರು.

ಪಟ್ಟಣದ ಶ್ರೀ ರಾಮದೇವರ ಮಂದಿರದಲ್ಲಿ ಆಚರಿಸಲಾದ ಶ್ರೀ ರಾಮನವಮಿ ಉತ್ಸವದಲ್ಲಿ ಅವರು ಮಾತನಾಡಿ, ಶ್ರೀರಾಮನ ಜನನದೊಂದಿಗೆ ಈ ಭೂಮಿಯ ಮೇಲೆ ಅನೇಕ ಆದರ್ಶ ಗುಣಗಳು, ಮಾನವೀಯ ಮೌಲ್ಯಗಳು ಮೂಡಿಬಂದವು. ಕೊಟ್ಟ ಮಾತಿನಂತೆ ನಡೆಯುವುದು ಹೇಗೆ ಎಂಬುದನ್ನು ಶ್ರೀ ರಾಮ ನಮಗೆ ಕಲಿಸಿಕೊಟ್ಟಿದ್ದಾರೆ ಎಂದರು.

ಶ್ರೀ ರಾಮನ ಗುಣಗಳು ನಮ್ಮೆಲ್ಲರಲ್ಲೂ ಬರಬೇಕಿದ್ದು, ನಮ್ಮ ಮಕ್ಕಳಿಗೆ ಈಗಿನಿಂದನೇ ಶ್ರೀರಾಮನ ಆದರ್ಶ ಗುಣಗಳನ್ನು ಕಲಿಸುವುದು ಅವಶ್ಯಕವಾಗಿದೆ. ಅದಕ್ಕಾಗಿ ಪಠ್ಯಪುಸ್ತಕಗಳಲ್ಲಿ ಶ್ರೀರಾಮನ ಸತ್ಯ ಸಂಧತೆ, ಪ್ರಾಮಾಣಿಕತೆ, ಕಾಯಕ ನಿಷ್ಠೆಗಳನ್ನು ತಿಳಿಸುವ ಅಂಶಗಳನ್ನು ಪ್ರಾಥಮಿಕ ಹಂತದಿಂದಲೆ ಪಠ್ಯವಾಗಿಸಬೇಕೆಂದು ಹೇಳಿದರು.

ಅರ್ಚಕ ಶ್ರೀವಲ್ಲಭಭಟ್ಟ ಸದರಜೋಷಿ ಶ್ರೀರಾಮನ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಸುಮಂಗಲೆಯರು ಶ್ರೀರಾಮನನ್ನು ತೊಟ್ಟಿಲಲ್ಲಿ ಹಾಕಿ ಜೋಗುಳ ಹಾಡಿದರು. ಪ್ರಶಾಂತ ಗ್ರಾಮಪುರೋಹಿತ, ರಾಮಚಂದ್ರ ಕುಲಕರ್ಣಿ, ಹರೀಶ ಕುಲಕರ್ಣಿ, ಪವನ ಕುಲಕರ್ಣಿ, ಎ.ಟಿ. ಮಳ್ಳಳ್ಳಿ, ರಾಮಕೃಷ್ಣ ಸದರಜೋಷಿ, ನಾಗರಾಜ ನಾಡಗೇರ, ನಾಗೇಶಭಟ್ಟ ಗ್ರಾಮಪುರೋಹಿತ, ಅಜಿತ ಕುಲಕರ್ಣಿ, ಪ್ರತೀಕ್ಷಾ ಕುಲಕರ್ಣಿ, ಶೋಭಾ ಕುಲಕರ್ಣಿ, ಶೋಭಾ ಸೂರಭಟ್ಟನವರ, ಸೀಮಾ ಕೊಂಡಿ, ಅರ್ಚನಾ ಕುಲಕರ್ಣಿ, ರಾಜಶ್ರೀ ಕುಲಕರ್ಣಿ, ಅಶ್ವಿನಿ ನವಲಿ, ಭಾರತಿಯಲಿಗಾರ, ಮಂಜುಳಾ ಇಂಗಳಳ್ಳಿ, ಹೇಮಾ ನಿರಂಜನ, ಸುರೇಖಾ ನಿರಂಜನ, ಶ್ರಾವಣಿ ನಾಗಾರ್ಜುನ, ಜಯಶ್ರೀ ಗ್ರಾಮಪುರೋಹಿತ, ಸನ್ಮತಿ ಸದರಜೋಷಿ, ಪ್ರಿಯಾ ಕುಲಕರ್ಣಿ, ವಿಮಲಾಬಾಯಿ ಗ್ರಾಮಪುರೋಹಿತ, ಜ್ಯೋತಿ ನಾಡಗೇರ, ಪರಿಮಳಾ ಗ್ರಾಮಪುರೋಹಿತ, ನಿಖಿತಾ ಗ್ರಾಮಪುರೋಹಿತ ಮತ್ತಿತರರಿದ್ದರು. ಸುಮಂಗಲೆಯರು ಶ್ರೀ ರಾಮ ರಕ್ಷಾ ಸ್ತೋತ್ರ ಮತ್ತು ಹನುಮಾನ ಚಾಲೀಸಾ ಪಠಣಾ ಮಾಡಿದರು.



ಮುಖ್ಯಮಂತ್ರಿಗಳ ಪದಕಕ್ಕೆ ಜಾಫರ್ ಬಚ್ಚೇರಿ ಭಾಜನ

ಮುಂಡರಗಿ: ರಾಜ್ಯ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯನಿಷ್ಠೆ, ಪ್ರಾಮಾಣಿಕತೆ ಮತ್ತು ಜನಸೇವೆಗಾಗಿ ಗುರುತಿಸಲ್ಪಡುವ 2025ನೇ ಸಾಲಿನ ಮುಖ್ಯಮಂತ್ರಿಗಳ ಪದಕಕ್ಕೆ ಮುಂಡರಗಿ ಪೊಲೀಸ್ ಠಾಣೆಯ ಜಾಫರ್ ಬಚ್ಚೇರಿ ಆಯ್ಕೆಯಾಗಿದ್ದಾರೆ.



ಕರ್ನಾಟಕ ಸರ್ಕಾರವು 2025ನೇ ಸಾಲಿನ ಮುಖ್ಯಮಂತ್ರಿಗಳ ಪದಕಕ್ಕೆ ಆಯ್ಕೆಯಾದವರ ಪಟ್ಟಿಯನ್ನು ಪ್ರಕಟಿಸಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಒಟ್ಟು 153 ಸಿಬ್ಬಂದಿಯನ್ನು ಮತ್ತು ಪೊಲೀಸ್ ಅಧಿಕಾರಿಗಳನ್ನು ಈ ಗೌರವಕ್ಕೆ ಆಯ್ಕೆಮಾಡಲಾಗಿದೆ. ಮುಂಡರಗಿ ಪೊಲೀಸ್ ಠಾಣೆಯ ಅಪರಾಧ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಜಾಫರ್ ಬಚ್ಚೇರಿ ಅವರು ತಮ್ಮ ಸೇವಾ ಅವಧಿಯಲ್ಲಿ ಅಪರಾಧ ತಡೆಗಟ್ಟುವಿಕೆ, ಪ್ರಕರಣಗಳ ಪತ್ತೆ ಹಚ್ಚುವಿಕೆ, ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದನೆ ಮತ್ತು ಸಮಾಜಮುಖಿ ಕ್ಷೇತ್ರದಲ್ಲಿ ತೋರಿದ ಶ್ರೇಷ್ಠ ಕಾರ್ಯಕ್ಷಮತೆಗೆ ಸಂದ ಗೌರವ ಇದಾಗಿದೆ. ಪ್ರಶಸ್ತಿ ವಿತರಣೆ ಏಪ್ರಿಲ್ 2ರಂದು ಬೆಂಗಳೂರಿನಲ್ಲಿ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ.ಜಿ.ಪರಮೇಶ್ವರ ಹಾಗೂ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಜಾಫರ್ ಬಚ್ಚೇರಿಯವರು ಪದಕವನ್ನು ಸ್ವೀಕರಿಸಲಿದ್ದಾರೆ. ಬಚ್ಚೇರಿ ಅವರು ಇಲ್ಲಿ ನ ಶ್ರೀ ಜ.ಅ.ವಿದ್ಯಾ ಸಮಿತಿಯ ವಿದ್ಯಾರ್ಥಿಯಾಗಿದ್ದು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಶ್ರೀರಾಮನ ತೊಟ್ಟಿಲೋತ್ಸವ

ಶಿರಹಟ್ಟಿ: ಶ್ರೀರಾಮ ನವಮಿ ನಿಮಿತ್ತ ಪಟ್ಟಣದ ಕೋಟಿ ಓಣಿಯ ಶ್ರೀ ಮಾರುತಿ ಮಂದಿರದಲ್ಲಿ ಶ್ರೀ ಭಜರಂಗ ಭಜನಾ ಮಂಡಳದಿಂದ ಶ್ರೀರಾಮನ ತೊಟ್ಟಿಲೋತ್ಸವ ಕಾರ್ಯಕ್ರಮ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಮಂದಿರದಲ್ಲಿ ಅಖಂಡ ಶ್ರೀರಾಮ ನಾಮ ಸಪ್ತಾಹ ಕಾರ್ಯಕ್ರಮ ಆರಂಭಿಸಿ, ಶ್ರೀರಾಮ ನವಮಿ ನಿಮಿತ್ತ ಶ್ರೀರಾಮನ ತೊಟ್ಟಿಲನ್ನು ಹೂವು, ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ಮಧ್ಯಾಹ್ನ ಅಂಜನಾದ್ರಿ ಮಹಿಳಾ ಮಂಡಳ ಮತ್ತು ಗಾಯತ್ರಿ ಮಹಿಳಾ ಮಂಡಳದ ವತಿಯಿಂದ ಸುಮಂಗಲೆಯರು ಶ್ರೀರಾಮ ನಾಮ ಜಪ, ಭಜನೆ ಮಾಡುತ್ತ ಶ್ರೀರಾಮನ ತೊಟ್ಟಿಲೋತ್ಸವವನ್ನು ಶ್ರದ್ಧಾ-ಭಕ್ತಿಯಿಂದ ನೆರವೇರಿಸಿಕೊಟ್ಟರು. ಅಮೃತ ಭಾತಖಂಡೆ, ನಾಗೇಶ ಕುಲಕರ್ಣಿ, ಸುಧೀರ ಜಮಖಂಡಿ, ಉದಯ ಕುಲಕರ್ಣಿ, ಪ್ರಹ್ಲಾದ ಉಮರ್ಜಿ, ಮಹೇಶ ಕುಲಕರ್ಣಿ, ಶಶಿಕಲಾ ಜಮಖಂಡಿ, ಮೇಘಾ ಕುಲಕರ್ಣಿ, ಕಾಂಚನಾ ನರಗುಂದೆ, ಅಂಜನಾದ್ರಿ ಮಹಿಳಾ ಮಂಡಳದವರು ಇದ್ದರು.

ಶ್ರೀ ಮಾರುತಿ ಮಂದಿರದಲ್ಲಿ ಅಖಂಡ ಶ್ರೀರಾಮ ನಾಮ ಸಪ್ತಾಹವು ಶ್ರೀರಾಮ ನವಮಿಯಿಂದ ಪ್ರಾರಂಭಿಸಿ ಏ.2ರ ವರೆಗೆ ಪ್ರತಿದಿನ ಸಂಜೆ ಶ್ರೀರಾಮ ನಾಮ ಜಪ, ಭಜನೆ ನಡೆಯಲಿದೆ. ಪ್ರತಿದಿನ ಹೊಸ ಹೊಸ ಸಂಗೀತಗಾರರು, ಗಾಯಕರಿಂದ ಭಕ್ತಿಯ ಗಾನಸುಧೆ ಜರುಗುವುದು. ಅಂದು ಬೆಳಗ್ಗೆ 6 ಗಂಟೆಗೆ ಶ್ರೀ ಮಾರುತಿ ಜನ್ಮೋತ್ಸವ ಕಾರ್ಯಕ್ರಮ ಹಾಗೂ ಬೆಳಗ್ಗೆ 9 ಗಂಟೆಗೆ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ರಾತ್ರಿ ಮಂಗಲ ಸಮಾರಂಭ ನಡೆಯಲಿದೆ ಎಂದು ಟ್ರಸ್ಟ್ ಕಮಿಟಿಯವರು ತಿಳಿಸಿದರು.





ಮುಂಡರಗಿ: ಪಟ್ಟಣದ ಶ್ರೀ ಶಿರಡಿ ಸಾಯಿಬಾಬಾ ದೇವಸ್ಥಾನದಲ್ಲಿ ಶ್ರೀರಾಮನವಮಿ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮ ಜರುಗಿದವು. ಸಾಯಿ ಬಾಬಾ ಮೂರ್ತಿಗೆ ಮಂಗಲ ಸ್ನಾನ ಆರತಿ, ಕಾಕಡಾರತಿ, ಅಭಿಷೇಕ, ಮಹಾಭಿಷೇಕ, ಕ್ಷೀರಾಭಿಷೇಕ, ಬಿಲ್ವಾರ್ಚನೆ, ಕುಂಕುಮಾರ್ಚನೆ, ದುಪಾರ್ಚನೆ, ಅಲಂಕಾರ, ನೈವೇದ್ಯ, ಆರತಿ ಮಹಾಮಂಗಳಾರತಿ, ಸೂರ್ಯಾಸ್ತಕ್ಕೆ ದೂಪಾರತಿ, ಸಂಜೆ ಶೇಜಾರತಿ ನೆಡೆಯಿತು. ದೆವಸ್ಥಾನದಲ್ಲಿ ರಾಮನ ಮೂರ್ತಿಯನ್ನು ತೊಟ್ಟಿಲಲ್ಲಿ ಹಾಕಿ ಮಹಿಳೆಯುರು ವಿವಿಧ ದೇವರ ಹೆಸರು ಕೂಗಿ ತೊಟ್ಟಿಲು ತೂಗಿ ಜೋಗುಳ ಪದ ಹಾಡಿದರು. ಚಿಕ್ಕಮಕ್ಕಳು ರಾಮನ ವೇಷಧರಿಸಿ ಮೂಲಕ ಸಂಭ್ರಮಿಸಿದರು.

ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವುದು ಅಗತ್ಯ: ಲಮಾಣಿ

ಲಕ್ಷ್ಮೇಶ್ವರ: ಗ್ರಾಮೀಣ ಭಾಗದ ಮಕ್ಕಳು ಹೆಚ್ಚು ಪ್ರತಿಭಾವಂತರಾಗಿದ್ದಾರೆ. ಅವರಿಗೆ ಗುಣಮಟ್ಟದ ಶಿಕ್ಷಣ ದೊರೆತಲ್ಲಿ ಹೆಚ್ಚಿನ ಸಾಧನೆ ಮಾಡಬಲ್ಲರು ಎಂದು ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು.

ಶನಿವಾರ ಸಮೀಪದ ಕುಂದ್ರಳ್ಳಿ ತಾಂಡಾದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯ ನೂತನ ಕೊಠಡಿಯ ಭೂಮಿಪೂಜೆ ಕಾರ್ಯಕ್ರಮ ನೆರವೇರಿಸಿ ಅವರು ಮಾತನಾಡಿದರು.

ಸರ್ಕಾರದಿಂದ ಹೆಚ್ಚಿನ ಅನುದಾನ ತರುವ ಮೂಲಕ ಗ್ರಾಮೀಣ ಪ್ರದೇಶದ ಶಾಲಾ ಕೊಠಡಿಗಳ ನಿರ್ಮಾಣ ಹಾಗೂ ಮೂಲಸೌಲಭ್ಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವ ಕಾರ್ಯ ಮಾಡುತ್ತೇನೆ. ಗುಣಮಟ್ಟದ ಶಿಕ್ಷಣ ಒತ್ತು ನೀಡುವ ಕಾರ್ಯ ಮಾಡಬೇಕು. ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ಗದಗ ಜಿಲ್ಲೆಯ ಉತ್ತಮ ಫಲಿತಾಂಶ ಪಡೆದು ತಾಲೂಕಿನ ಕೀರ್ತಿ ಹೆಚ್ಚಿಸಲಿ ಎಂದರು.

ಬಿಇಒ ನಾಣಕಿ ನಾಯ್ಕ ಮಾತನಾಡಿ, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವ ನಿಟ್ಟಿನಲ್ಲಿ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದರು. ಮಾಜಿ ಶಾಸಕ ರಾಮಣ್ಣ ಲಮಾಣಿ ಅವರ ಪುತ್ರ ಮಹೇಶ ಲಮಾಣಿ, ಮಂಜುನಾಥ ಗೌರಿ, ಈಶಪ್ಪ ಲಮಾಣಿ, ರಮೇಶ ಲಮಾಣಿ, ಮಾನು ಲಮಾಣಿ, ಮಂಜುನಾಥ ಕಳಸದ, ಎಸ್ಡಿಎಂಸಿ ಅಧ್ಯಕ್ಷ, ಸದಸ್ಯರು. ಮುಖ್ಯೋಪಾಧ್ಯಾಯರು. ಲೋಕೋಪಯೋಗಿ ಇಲಾಖೆಯ ಎಇಇ ಶಿವಪ್ರಸಾದ್, ಕಾಳಗಿ ಹಾಗೂ ಗ್ರಾಮದ ಮುಖಂಡರು ಇದ್ದರು.



ಚಿಕ್ಕವಡ್ಡಟ್ಟಿ ಗ್ರಾಮಕ್ಕೆ, ತಾಲೂಕು ಆಸ್ಪತ್ರೆಗೆ ಡಿಸಿ ಭೇಟಿ

ಮುಂಡರಗಿ: ತಾಲೂಕಿನ ಚಿಕ್ಕವಡ್ಡಟ್ಟಿ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದಲ್ಲಿ ಎಸ್.ಸಿ. ಹಾಗೂ ಎಸ್.ಟಿ. ಜನಾಂಗದ ಮಧ್ಯೆ ಜರುಗಿದ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡು ಮುಂಡರಗಿ ತಾಲೂಕು ಆಸ್ಪತ್ರೆಗೆ ಭೇಟಿ ನೀಡಿ ಘಟನೆಯಲ್ಲಿ ಗಾಯಗೊಂಡು ಮುಂಡರಗಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಎಸ್.ಟಿ. ಜನಾಂಗದ ಗಾಯಾಳುಗಳ ಆರೋಗ್ಯದ ವಿಚಾರಿಸಿದರು.



ಜಿಲ್ಲಾಧಿಕಾರಿ ಶ್ರೀಧರ, ಜಿಲ್ಲಾ ಉಪವಿಭಾಗಾಧಿಕಾರಿ ಎಂ.ಗಂಗಪ್ಪ, ತಹಶೀಲ್ದಾರ್ ಪಿ.ಎಸ್. ಎರ್ರಿಸ್ವಾಮಿ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ವಿಶ್ವನಾಥ ಹೊಸಮನಿ, ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಉದಯಕುಮಾರ ಎಳಿವಾಳ ಚಿಕ್ಕವಡ್ಡಟ್ಟಿ ಗ್ರಾಮಕ್ಕೆ ಭೇಟಿ ನೀಡಿ ಎಸ್.ಸಿ. ಹಾಗೂ ಎಸ್.ಟಿ. ಜನಾಂಗದ ಸಮಾಲೋಚನೆ ನಡೆಸಿದರು. ನಂತರ ಗ್ರಾಮಸ್ಥರೊಂದಿಗೆ ಸಭೆ ನಡೆಸಿ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡರು. ಗ್ರಾಮದಲ್ಲಿ ಇಂತಹ ಘಟನೆ ಮರುಕಳಸದಂತೆ ಹಾಗೂ ಗ್ರಾಮದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವದಕ್ಕೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆನೀಡಿದರು. ನಂತರ ಮುಂಡರಗಿಗೆ ಆಗಮಿಸಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಂತಹ ಎಸ್.ಟಿ. ಜನಾಂಗದ ಗಾಯಾಳುಗಳ ಆರೋಗ್ಯದ ಬಗ್ಗೆ ಜಿಲ್ಲಾಧಿಕಾರಿಗಳು ವಿಚಾರಿಸಿ, ಗಾಯಾಳುಗಳಿಗೆ ಪ್ರತ್ಯೇಕ ವ್ಯವಸ್ಥೆಮಾಡಿ ವ್ಯವಸ್ಥಿತವಾದ ಟ್ರೀಟ್‌ಮೆಂಟ್ ನೀಡಬೇಕೆಂದು ವೈದ್ಯರಿಗೆ ಸಲಹೆ ನೀಡಿದರು. ತಾಲೂಕಿನ ಎಸ್.ಸಿ,ಎಸ್.ಟಿ. ಸಮಾಜದ ಮುಖಂಡರು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿ ಈ ಘಟನೆ ಎಸ್.ಸಿ. ಹಾಗೂ ಎಸ್.ಟಿ. ಜನಾಂಗದ ಮಧ್ಯೆ ಜರುಗಿದೆ. ಆದರೆ ಎರಡು ಸಮುದಾಯ ಒಟ್ಟಾಗಿ ಸಮಾಲೋಚನೆ ಮಾಡಿ ರಾಜೀಸಂದಾನ ಮಾಡಲಾಗುತ್ತದೆ. ಈಗಾಗಲೇ ಎರಡು ಸಮಾಜದ ಮುಖಂಡರ ಜೊತೆ ಮಾತನಾಡಿದ್ದೇವೆ. ರಾಜೀ ಸಂಧಾನಕ್ಕೆ ಅಧಿಕಾರಿಗಳು ಸಹಕಾರ ನೀಡಬೇಕು ಎಂದರು.

ನಾಟಕ ಪ್ರದರ್ಶನ ಇಂದು

ಮುಂಡರಗಿ: ದಾವಣಗೇರಿಯ ಕೆ.ಬಿ.ಆರ್. ಡ್ರಾಮಾ ಕಂಪನಿ ತಂಡದಿಂದ ಮಾ.29 ರಿಂದ ಮುಂಡರಗಿ ಪಟ್ಟಣದ ಹೆಸರೂರು ರಸ್ತೆಯಲ್ಲಿರುವ ಅನ್ನದಾನೀಶ್ವರ ಮಹಾಸ್ವಾಮೀಜಿಯವರ ಜಾಗದಲ್ಲಿ ನಾಟಕ ಪ್ರದರ್ಶನ ಜರುಗಲಿದೆ ಎಂದು ತಂಡದ ಮಾಲೀಕ ಶ್ರೀಕಂಟೇಶ ಚಿಂದೋಡಿ ಹೇಳಿದರು.

ಪಟ್ಟಣದಲ್ಲಿ ಈ ಕುರಿತು ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿ, ದಿವಂಗತ ಪಿ.ಬಿ.ದುತ್ತರಗಿ ರಚಿಸಿರುವ, ಚಿಂದೋಡಿ ವಿಜಯಕುಮಾರ ನಿರ್ದೇಶನ ಮಾಡಿರುವ ಅಕ್ಕ ಪಾಪರ್ ತಂಗಿ ಸೂಪರ್ ಹಾಸ್ಯ ಭರಿತ ಕೌಟುಂಬಿಕ ನಾಟಕ ಮಾ.29 ರಿಂದ ಪ್ರಾರಂಭಗೊಳ್ಳಲಿದೆ. ಜ.ನಾಡೋಜ ಡಾ.ಅನ್ನದಾನೀಶ್ವರ ಸ್ವಾಮೀಜಿ ಈ ನಾಟಕನ್ನು ಉದ್ಘಾಟಿಸಲಿದ್ದಾರೆ. ಪ್ರತಿ ದಿನ ಸಂಜೆ 6 ಗಂಟೆಗೆ ರಾತ್ರಿ 9 ಗಂಟೆಗೆ ಹೀಗೆ ನಿತ್ಯ ಎರಡು ಪ್ರದರ್ಶನಗಳು ಜರುಗಲಿವೆ. ಚಿಂದೋಡಿ ವಿಜಯಕುಮಾರ, ರಾಘವೇಂದ್ರ, ಅಂಜನಪ್ಪ, ರಾಜಮಹ್ಮದ್, ಸಿ.ವಿ.ದೀಪಾ, ನಂದಿನಿ, ಕವಿತಾ ರೈ, ಮಂಜುಳಾ, ಸಿ.ವಿ.ಹೇಮಾ, ವಿರೇಶ, ಶ್ರೀಕಂಟೇಶ ಸೇರಿದಂತೆ ಅನೇಕರು ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹವ್ಯಾಸಿ ರಂಗಭೂಮಿ ಕಲಾವಿದ ವೈ.ಎನ್.ಗೌಡರ್, ಮಂಜುನಾಥ ಇಟಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಒಳ್ಳೆಯ ವಿಚಾರ, ಮೌಲ್ಯ ಎತ್ತಿ ಹಿಡಿಯುವ ರಂಗಭೂಮಿ

ನರಗುಂದ: ರಂಗಭೂಮಿಯು ಸದಾಕಾಲ ಒಳ್ಳೆಯ ವಿಚಾರಗಳನ್ನು, ದೇಶಪ್ರೇಮ, ಜೀವನ ಪ್ರೀತಿ ಗಡಿಮೀರಿದ ಮೌಲ್ಯಗಳನ್ನು ಹೇಳುತ್ತದೆ. ಜೊತೆಗೆ ರಂಗಭೂಮಿಯು ಜೀವನ ಪಾಠಶಾಲೆಯಾಗಿದೆ ಎಂದು ಎಸ್ ವೈಎಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಮಹೇಶಗೌಡ ಪಾಟೀಲ ಹೇಳಿದರು.

ಪಟ್ಟಣದ ಶ್ರೀ ಯಡಿಯೂರ ಸಿದ್ದಲಿಂಗೇಶ್ವರ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ರಂಗಭೂಮಿ ದಿನಾಚರಣೆ ಪ್ರಯುಕ್ತ ಜರುಗಿದ ಲಲಿತಕಲೆ ಮತ್ತು ರಂಗಭೂಮಿ ರಂಗೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಚುಳಕಿ ಗ್ರಾಮದ ರಂಗ ಕಲಾವಿದ ಗುರುನಾಥಗೌಡ ಭರಮಗೌಡ್ರ ಮಾತನಾಡಿ, ಆಧುನಿಕ ವ್ಯವಸ್ಥೆಯು ಅದೇಷ್ಟೇ ಮುಂದುವರಿದರು ಗ್ರಾಮೀಣ ಭಾಗದಲ್ಲಿ ಇಂದಿಗೂ ಪೌರಾಣಿಕ ನಾಟಕಗಳ ಕಲಿಕೆ ಹಾಗೂ ಪ್ರದರ್ಶನ ನಡೆಯುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದರು.

ಕನ್ನಡ ಮತ್ತು ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ ಹಾಗೂ ಉಪನ್ಯಾಸಕ ಎಂ.ಪಿ. ಕ್ಯಾತನಗೌಡ್ರ ಮಾತನಾಡಿ, ರಂಗಭೂಮಿ ಕೇವಲ ಮನರಂಜನೆಯ ಸಾಧನವಲ್ಲ, ಅದು ಮನುಷ್ಯನಿಗೆ ಸಭ್ಯತೆ, ನಾಗರಿಕತೆ ಮತ್ತು ಸಂಸ್ಕಾರವನ್ನು ಕಲಿಸುವ ಶಕ್ತಿಯುಳ್ಳ ಅದ್ಭುತ ಮಾಧ್ಯಮವಾಗಿದೆ. ಸಮಾಜದ ಸುಧಾರಣೆಗೆ ನಾಟಕ ಪ್ರಬಲ ಮಾಧ್ಯಮ ಪ್ರಸ್ತುತ ಸಮಾಜದಲ್ಲಿ ಶಾಂತಿ, ಸಹನೆ, ಪ್ರೀತಿ ಮತ್ತು ಸೌಹಾರ್ದತೆಯಂತಹ ಮೌಲ್ಯಗಳು ಕ್ಷೀಣಿಸುತ್ತಿವೆ. ನಾಟಕವನ್ನು ಉಳಿಸಿ, ಬೆಳೆಸುವ ಕೆಲಸವಾಗಲಿ ಎಂದರು.

ಎಸ್.ವಿ .ಕೋಟಿ, ಎಂ.ಈ. ವಿಶ್ವಕರ್ಮ, ಮಂಜುಳಾ ಹರಳಕಟ್ಟಿ, ಪವಿತ್ರಾ ಬೇಡಗೌಡ್ರ, ಮಳೆಯಪ್ಪ ಮಮಟಗೇರ, ತೇಜಸ್ವಿನಿ ಅಂಕಲಿ, ಮಹೇಶ ಕರಮಡಿ, ಭೀಮವ್ವ ಸೂರ್ಯವಂಶಿ ಸೇರಿದಂತೆ ಇತರರಿದ್ದರು. ಕಾರ್ಯಕ್ರಮದ ಅತಿಥಿಗಳನ್ನು ಬಿಇಡಿ ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಎತ್ತಿನಗಾಡಿಯ ಮೇಲೆ ಕರೆದುಕೊಂಡು ಬರುವ ಮೂಲಕ ರಂಗೋತ್ಸವ ಕಾರ್ಯಕ್ರಮಕ್ಕೆ ಮೆರಗು ತಂದು ಕೊಟ್ಟರು. ಉಪನ್ಯಾಸಕ ಎಸ್.ವಿ. ಕೋಟಿ, ಎಂ.ಈ. ವಿಶ್ವಕರ್ಮ ,ಬಿಇಡಿ ಕಾಲೇಜಿನ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಿಂದ ವಿವಿಧ ಜಾನಪದ ಕಲಾನೃತ್ಯಗಳು, ಕೋಲಾಟ, ಸಾಮಾಜಿಕ ಸಂದೇಶ ಸಾರುವ ನಾಟಕಗಳು, ಫ್ಯಾಶನ್ ಶೋ,ಬೀಸುವ ಕುಟ್ಟುವ ಪದಗಳು ಹೆಳವರ ವೇಷ ಮುಂತಾದ ಕಲೆಗಳನ್ನು ಅದ್ಭುತವಾಗಿ ಪ್ರದರ್ಶನ ನೀಡಿದರು.



ಹಾರ್ದಿಕ ಶುಭಾಶಯಗಳು
ರಾಷ್ಟ್ರಜಾಗೃತಿಯನ್ನೇ ಕಾಯಕವನ್ನಾಗಿಸಿಕೊಂಡು ವಸ್ತು ನಿಷ್ಠ,
ಪಾರದರ್ಶಕ ಸುದ್ದಿ ಸಮಾಚಾರದ ಮೂಲಕ ಮನೆ ಮಾತಾಗಿರುವ
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಹುಬ್ಬಳ್ಳಿ ಆವೃತ್ತಿಯು
15ನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿದ್ದು,
ಪತ್ರಿಕೆಯು ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಳೆಯಲೆಂದು ಹಾರೈಸುತ್ತೇನೆ.
ಶುಭಾಶಯ ಕೋರುವವರು
ಶ್ರೀ ಎಚ್.ಸಿ. ಯಾದವ್
ವಕೀಲರು ಹಾಗೂ ಬಿಜೆಪಿ ಮುಖಂಡರು, ಗಂಗಾವತಿ



ಹಾರ್ದಿಕ ಶುಭಾಶಯಗಳು



ರಾಷ್ಟ್ರಜಾಗೃತಿಯನ್ನೇ ಕಾಯಕವನ್ನಾಗಿಸಿಕೊಂಡು ವಸ್ತು ನಿಷ್ಠ,
ಪಾರದರ್ಶಕ ಸುದ್ದಿ ಸಮಾಚಾರದ ಮೂಲಕ ಮನೆ ಮಾತಾಗಿರುವ
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಹುಬ್ಬಳ್ಳಿ ಆವೃತ್ತಿಯು 15ನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿದ್ದು,
ಪತ್ರಿಕೆಯು ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಳೆಯಲೆಂದು ಹಾರೈಸುತ್ತೇನೆ.
ಶುಭಾಶಯ ಕೋರುವವರು
ಶ್ರೀ ವಿರುಪಾಕ್ಷಪ್ಪ ಸಿಂಗನಾಳ
ಮಾಜಿ ಅಧ್ಯಕ್ಷರು, ಕೊಪ್ಪಳ ಜಿಲ್ಲಾ ಬಿಜೆಪಿ ಘಟಕ



| ನೊಂದವರಿಗೆ ಕಾನೂನು ಚೌಕಟ್ಟಿನಲ್ಲಿ ನ್ಯಾಯ
| ವಿವಿಧ ಕ್ಷೇತ್ರಗಳಲ್ಲಿ ಜವಾಬ್ದಾರಿ ನಿರ್ವಹಣೆ

- ಸಾಮಾಜಿಕ ಕ್ಷೇತ್ರಕ್ಕೆ ಕೊಡುಗೆ ಅಪಾರ
- ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ
- ಹಲವು ಭಾಷೆಗಳಲ್ಲಿ ಪರಿಣಿತಿ

ಡಿ.ಎಂ.ರಾಜೇಶ್ವರಿ ಸೇವೆ ಅನನ್ಯ



ಗಂಗಾವತಿ: ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಅನನ್ಯ ಸೇವೆ ಸಲ್ಲಿಸಿ ''ಜನ ಸೇವೆಯೇ ಜನಾರ್ದನ ಸೇವೆ'' ಎಂಬ ಧ್ಯೇಯ ವಾಕ್ಯವನ್ನು ಮೈಗೂಡಿಸಿಕೊಂಡಿರುವ ಆನೆಗುಂದಿಯ ಶಿಕ್ಷಕಿ, ಉಪನ್ಯಾಸಕಿ ಹಾಗೂ ನ್ಯಾಯವಾದಿಯೂ ಆಗಿರುವ ಶ್ರೀಮತಿ ರಾಜೇಶ್ವರಿ ಡಿ.ಎಂ.ಸುರೇಶ ಅವರ ಸಾಮಾಜಿಕ ಕಾಳಜಿ ಅನನ್ಯ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯೂ ಸಾಧನೆಯ ನಾಗಾಲೋಟಕ್ಕೇರ ಬಹುದು ಎಂಬುದನ್ನು ರುಜುವಾತು ಮಾಡಿಸಿದ ಧೀಮಂತ ನಾಯಕಿ ಎನ್ನುವುದರಲ್ಲಿ ಎರಡು ಮಾತಿಲ್ಲ.

ಪ್ರಶಸ್ತಿಗಳ ಗೌರವ

ಸದಾ ಕ್ರಿಯಾಶೀಲರಾಗಿರುವ ಶ್ರೀಮತಿ ಡಿ.ಎಂ. ರಾಜೇಶ್ವರಿಯವರು, ಸಾಮಾಜಿಕ ಸೇವೆಯಲ್ಲಿ ತೊಡಗಿಕೊಳ್ಳುವುದು ಹವ್ಯಾಸವಾಗಿದೆ. ಅದರಿಂದ ಬರುವ ಲಾಭ ನಷ್ಟದ ಬಗ್ಗೆ ಯೋಚಿಸುವವರಲ್ಲ. ಇವರು ಮಾಡುವ ಕಾರ್ಯಗಳಿಗೆ ಸಮಯದ ಕೊರತೆಯೇ ಹೊರತು, ಇವರಿಗೆ ಆಗಲ್ಲ ಎನ್ನುವ ಪ್ರಮೇಯವೇ ಇಲ್ಲ.ಹಿಂದು ಸೇವಾ ಪ್ರತಿಷ್ಠಾನ ಬೆಂಗಳೂರು ವತಿಯಿಂದ ಕೊಡಗಿನ ವೀರಾಜಪೇಟೆಯಲ್ಲಿ 40 ದಿನಗಳ ಕಾಲ ತರಬೇತಿ ಪಡೆದುಕೊಂಡಿದ್ದಾರೆ. ಪ್ರಸ್ತುತ ಕೊಪ್ಪಳ ಜಿಲ್ಲಾ ವಿಎಚ್‌ಪಿ ಮಾತೃಶಕ್ತಿ ಸಂಯೋಜಕಿಯಾಗಿ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಇವರ ಕಾರ್ಯಕ್ಷಮತೆಯನ್ನು ಕಂಡು ಅನೇಕ ಸಂಘ ಸಂಸ್ಥೆಗಳು ಸ್ವಯಂಪ್ರೇರಿತವಾಗಿ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಿವೆ.



ನೊಂದವರಿಗೆ ನ್ಯಾಯ

ಸಮಾಜ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು, ಎಲ್‌ಬಿಬಿ ಪದವೀಧರೆ. ಟಿಸಿಎಚ್ ಮೂಲಕ ಶಿಕ್ಷಕಿ ವೃತ್ತಿಯನ್ನು ಆರಂಭಿಸಿದ ಇವರು ಸಮಾಜ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಉಪನ್ಯಾಸಕಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇದರೊಟ್ಟಿಗೆ ಎಲ್ ಎಲ್‌ಬಿ ಪದವಿಯನ್ನು ಮುಗಿಸಿ ನೊಂದವರಿಗೆ ಕಾನೂನು ಚೌಕಟ್ಟಿನಲ್ಲಿ ನ್ಯಾಯ ದೊರಕಿಸುವ ಉಸ್ತಾದಲ್ಲಿದ್ದಾರೆ.

ಶಿಕ್ಷಣ ಕೇತ್ರದಲ್ಲಿ ಸೇವಾ ಕಾರ್ಯ: ಪ್ರಾಥಮಿ ಶಾಲಾ ಶಿಕ್ಷಕಿ ಮತ್ತು ಉಪನ್ಯಾಸಕಿಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದ ಶ್ರೀಮತಿ ರಾಜೇಶ್ವರಿ ಅವರು, ಶಾರದಾ ವಿದ್ಯಾ ಸಂಸ್ಥೆಯ ಕಾರ್ಯದರ್ಶಿಯಾಗಿ, ಶಾರದಾ ಪಬ್ಲಿಕ್ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯಾಗಿ, ಶಾರದಾ ಮಠ ಬೆಂಗಳೂರಿನಲ್ಲಿ ಎರಡು ವರ್ಷ ಮುಖ್ಯ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ.

ಅನಾಥ ಸೇವಾಶ್ರಮ ಮಲ್ಲಾಡಹಳ್ಳಿ (ಚಿತ್ರದುರ್ಗಾ) ಇಲ್ಲಿ ಸೇವೆ ಸಲ್ಲಿಸಿದ್ದು, ಹಿಂದೂ ಸೇವಾ ಪ್ರತಿಷ್ಠಾನ ಬೆಂಗಳೂರು ವತಿಯಿಂದ ಕೊಡಗಿನ ವೀರಾಜಪೇಟೆಯಲ್ಲಿ 40 ದಿನಗಳ ಕಾಲ ತರಬೇತಿ ಪಡೆದುಕೊಂಡಿದ್ದಾರೆ. ಅನುದಾನ ರಹಿತ ಶಾಲೆಗಳ (ಕಾಮ್ಸ್ ಒಕ್ಕೂಟ) ದ ಜಿಲ್ಲಾ ಸಂಘಟನಾ ಕಾರ್ಯದರ್ಶಿಯೂ ಆಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ, ಎಸ್.ಡಿ.ಎಂ ಸಂಸ್ಥೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ವಿಕಾಸ ಅಕಾಡೆಮಿ ಕಲಬುರ್ಗಿ ಜಿಲ್ಲಾ ಯೋಜಕಿಯಾಗಿಯೂ ಸೇವೆ ಸಲ್ಲಿಸಿದ್ದು ಇವರ ಹೆಮ್ಮೆ.

ರಾಜಕೀಯ ಕ್ಷೇತ್ರದಲ್ಲಿಯೂ ಛಾಪು : ರಾಜಕೀಯ ಕ್ಷೇತ್ರದಲ್ಲಿಯೂ ತಮ್ಮ ಛಾಪು ಮೂಡಿಸಿದ್ದಾರೆ. 2011–16ರ ವರೆಗೆ ಆನೆಗುಂದಿ ಕ್ಷೇತ್ರದಿಂದ ತಾಲೂಕು ಪಂಚಾಯತ್‌ಗೆ ಸ್ಪರ್ಧಿಸಿ ಗೆಲುವು ಸಾಧಿಸುವ ಮೂಲಕ ರಾಜಕೀಯ ಕ್ಷೇತ್ರ ಪ್ರವೇಶಿಸಿದ ಇವರು, 2011–13ರ ವರೆಗೆ ತಾಲೂಕು ಪಂಚಾಯತಿಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. 2013–14ರಲ್ಲಿ ತಾಲೂಕು ಪಂಚಾಯತ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. 2021–23ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿ ಆಡಳಿತ ಮಂಡಳಿ ಸದಸ್ಯರಾಗಿ ಕಾರ್ಯನಿರ್ವಹಣೆ.

2016 ರಿಂದ ಬಿಜೆಪಿ ಗ್ರಾಮೀಣ ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ಇವರು, ಆನೆಗುಂದಿ ಶಕ್ತಿ ಕೇಂದ್ರದಿಂದ ಪ್ರಮುಖಳಾಗಿ ಕಾರ್ಯ ನಿರ್ವಹಿಸಿದ್ದಾರೆ. ವಿವಿಧ ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡಿರುವ ಇವರು ಆಯಾ ಪಕ್ಷಗಳಲ್ಲಿದ್ದಾಗ ಆ ಪಕ್ಷಗಳ ಸಕ್ರಿಯ ಕಾರ್ಯಕರ್ತರಾಗಿರುವ ಇವರು, ವಿಧಾನಸಭೆ, ಲೋಕಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಅಬ್ಬರ ಪ್ರಚಾರ ನಡೆಸಿ, ಅನೇಕರ ಗೆಲುವಿಗೆ ಕಾರಣೀಕರ್ತರಾಗಿದ್ದಾರೆ.

ಯೋಗಾಭ್ಯಾಸದ ಪಾಠ

ಕನ್ನಡ, ತೆಲುಗು, ಇಂಗ್ಲಿಷ್ ಮತ್ತು ಹಿಂದಿ ಭಾಷಾ ಪರಿಣಿತಿಯನ್ನು ಹೊಂದಿರುವ ಇವರು, ಉಪನ್ಯಾಸ ನೀಡುವುದು, ಆಕರ್ಷಣೆಯ ಭಾಷಣ ಮಾಡುತ್ತಾರೆ. ಇದೆಲ್ಲರದ ಹೊರತಾಗಿ ಯೋಗಾಭ್ಯಾಸವನ್ನು ಮಾಡುತ್ತಿದ್ದಾರೆ. ಇತರರಿಗೂ ಅದನ್ನು ಹೇಳಿ ಕೊಡುತ್ತಾರೆ ಎಂಬುದೇ ವಿಶೇಷ.

| ಸೇವಾ ಮನೋಭಾವ ಯುವಕರಿಗೆ ಮಾದರಿ
| ರಾಜಕೀಯದಲ್ಲೂ ಮುಂಚೂಣಿ
| ಪ್ರತಿಫಲ ನಿರೀಕ್ಷಿಸದೆ ನಿಸ್ವಾರ್ಥ ಸೇವೆ

ಸರಳ ವ್ಯಕ್ತಿತ್ವದ ಅಪರೂಪದ ವ್ಯಕ್ತಿ

ವಕೀಲ ಸೋಮನಾಥ ಪಟ್ಟಣಶೆಟ್ಟಿ



ಗಂಗಾವತಿ: ಪ್ರತಿಫಲ ನಿರೀಕ್ಷಿಸದೆ ನಿಸ್ವಾರ್ಥದಿಂದ ಮಾಡುವ ಕೆಲಸ ಕಾರ್ಯಗಳನ್ನು ಸಮಾಜ ಸೇವೆ ಎಂದು ಹೇಳಲಾಗುತ್ತದೆ. ಸಮಾಜ ಸೇವೆ ಮಾಡಲು ಶ್ರದ್ಧೆ, ಆಸಕ್ತಿ, ಕಾಳಜಿ, ಆಲೋಚನಾ ಶಕ್ತಿ, ಮಾಡುವ ಕೆಲಸ ಕಾರ್ಯಗಳ ಬಗ್ಗೆ ಗೌರವ, ಸದೃಢ ಮನಸ್ಸು ಎಲ್ಲವೂ ಬೇಕಾಗುತ್ತದೆ. ವಕೀಲರಾಗಿದ್ದುಕೊಂಡು ವೃತ್ತಿಯ ಜೊತೆಗೆ ಸಮಾಜ ಸೇವೆ ಮಾಡುತ್ತಿರುವ ಸರಳ ವ್ಯಕ್ತಿತ್ವದ ಅಪರೂಪದ ವ್ಯಕ್ತಿ ಸೋಮನಾಥ ಪಟ್ಟಣಶೆಟ್ಟಿ.

ನೋಡಲು ಮುಗ್ಧನಂತೆ ಕಾಣುವ, ಆಡಂಬರವಿಲ್ಲದ, ವಕೀಲ ವೃತ್ತಿಯಲ್ಲಿ ಚುರುಕುತನದಿಂದ ಓಡಾಡುವ, ಕೊಟ್ಟ ಮಾತಿಗೆ ತಪ್ಪದ, ಹಿಡಿದ ಕೆಲಸವನ್ನು ಸಮರ್ಥವಾಗಿ ನಿಭಾಯಿಸುವ, ಅರಳು ಹುರಿದಂತೆ ಚತುರತೆಯಿಂದ ಮಾತನಾಡುವ ಗಂಗಾವತಿಯ ಹಿರಿಯ ವಕೀಲರು, ಮುತ್ಸದ್ದಿಗಳು, ಅಭಿವೃದ್ಧಿಯ ಚಿಂತಕರಾದ ಸೋಮನಾಥ ಪಟ್ಟಣಶೆಟ್ಟಿಯರಾಗಿದ್ದಾರೆ.

ಪಕ್ಷ ಸಂಘಟನೆಗೆ ಆದ್ಯತೆ

ಕಾಂಗ್ರೆಸ್ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಅಳಿಲು ಸೇವೆ ಸಲ್ಲಿಸುತ್ತಿರುವ ಇವರು ಪಕ್ಷ ಸಂಘಟನೆಯಲ್ಲಿ ಹೆಚ್ಚು ಗಮನ ಹರಿಸಿದ್ದಾರೆ. ಇವರ ಕ್ರಿಯಾಶೀಲತೆಗೆ ಪಕ್ಷವು ಹಲವು ಪದಾಧಿಕಾರಿಗಳ ಹುದ್ದೆಗಳನ್ನು ನಿರ್ವಹಿಸಿದರು. ಅಲ್ಲದೆ ಅನೇಕ ಬಾರಿ ಪಕ್ಷದ ಯುವ ಕಾರ್ಯಕರ್ತರಿಗೆ ಬಿಟ್ಟುಕೊಟ್ಟ ಹೆಗ್ಗಳಿಕೆ ಇವರದ್ದು. ನೋಟರಿ ಪಬ್ಲಿಕ್ ಆಗಿರುವ ಇವರು ಕಾಂಗ್ರೆಸ್‌ನಲ್ಲಿ ಸ್ಥಳೀಯ ಮಟ್ಟದಿಂದ ರಾಜ್ಯಮಟ್ಟ ವರೆಗೆ ನಾಯಕರು, ಮುಖಂಡರು, ಗಣ್ಯರ ಜೊತೆಗೆ ಸಂಪರ್ಕ ಮತ್ತು ಉತ್ತಮ ಬಾಂಧವ್ಯ ಇಟ್ಟುಕೊಂಡಿರುವ ಇವರು ಲೆಕ್ಕಾಚಾರದ ಗುಣವಂತ ವ್ಯಕ್ತಿ.

ಗಂಗಾವತಿ ಕ್ಷೇತ್ರದ ಬಗ್ಗೆ ವಿಶೇಷ ಕಾಳಜಿ

ಇಷ್ಟು ವರ್ಷ ರಾಜಕೀಯದಲ್ಲಿದ್ದರೂ ಕಾಂಗ್ರೆಸ್ ಸರ್ಕಾರ ಯಾವುದೇ ನಿಗಮ, ಮಂಡಳಿಗಳಿಗೆ ಅಧ್ಯಕ್ಷ ಇಲ್ಲವೇ ಸದಸ್ಯರನ್ನಾಗಿ ನೇಮಕ ಮಾಡದಿರುವುದು ವಿಪರ್ಯಾಸವೇ ಸರಿ. ಅರ್ಹತೆ ಮತ್ತು ಯೋಗ್ಯತೆ ಇರುವಂತ ಹಾಗೂ ಸದ್ಗುಣ ಹೊಂದಿದ ಪಟ್ಟಣಶೆಟ್ಟಿ ಅವರಂತಹ ವ್ಯಕ್ತಿ ಸಮಾಜದಲ್ಲಿ ವಿರಳ. ಇವರು ಕೆಲಸ ಕಾರ್ಯಗಳು ಆದರ್ಶ. ಗಂಗಾವತಿ ಕ್ಷೇತ್ರದ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಇವರಿಗೆ ರಾಜಕೀಯದಲ್ಲಿ ವಿಶೇಷ ಸ್ಥಾನಮಾನ ಲಭಿಸಲಿ. ಕ್ಷೇತ್ರ ಅಭಿವೃದ್ಧಿ ಮಾಡುವ ಅವಕಾಶಗಳು ಭಗವಂತ ಕರುಣಿಸಲಿ.



ಎಲ್ಲರ ಮೆಚ್ಚುಗೆಗೆ ಪಾತ್ರ

ಸಿದ್ದಲಿಂಗಪ್ಪ ಪಟ್ಟಣಶೆಟ್ಟಿ ಅವರ ಮಗನಾಗಿ 1957ರಲ್ಲಿ ಜೂನ್ 19ರಂದು ಜನಿಸಿದ ಇವರು ಬಿಕಾಂ, ಎಎಲ್ ಎಲ್‌ಬಿ (ಸ್ಪೆಷಲ್) ವಿದ್ಯಾಭ್ಯಾಸ ಪೂರ್ಣಗೊಳಿಸಿ ವಕೀಲ ವೃತ್ತಿ ಆರಂಭಿಸಿದವರು. ವಕೀಲರಾಗಿ ಪ್ರಾಮಾಣಿಕತೆಯಿಂದ ಕಕ್ಷಿದಾರರಿಗೆ ನ್ಯಾಯ ಒದಗಿಸಿ ಕೊಡುತ್ತಿದ್ದಾರೆ. ಅಲ್ಲದೇ ವಕೀಲರ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ.

- ವಕೀಲ ವೃತ್ತಿಯ ಜೊತೆಗೆ ಸಮಾಜ ಸೇವೆ
- ಹೈದರಾಬಾದ್ ಕರ್ನಾಟಕಕ್ಕೆ 371ಕಲಂ ಜಾರಿಗೆ ಹೋರಾಟ
- ಸಾರ್ವಜನಿಕರಿಗೆ ಕಾನೂನು ಅರಿವು
- ಸಿಎಂ ಸಿದ್ದರಾಮಯ್ಯ ಜೊತೆ ಉತ್ತಮ ಸಂಪರ್ಕ



ಗಂಗಾವತಿ ತಾಲೂಕಿನ ಪ್ರತಿಷ್ಠಿತ ಕೆನರಾ ಬ್ಯಾಂಕಿನ ಮೂರು ಶಾಖೆಗಳ ಅಧಿಕಾರಿಗಳು ವಕೀಲ ಸೋಮನಾಥ ಪಟ್ಟಣಶೆಟ್ಟಿ ಅವರಿಗೆ ಕಾನೂನು ಹಾಗೂ ಸಮಾಜ ಸೇವೆಯ ಪ್ರಶಸ್ತಿಯು ದೊರಕಿದ್ದಕ್ಕೆ 2025 ನ.21ರಂದು ಸನ್ಮಾನ ಮಾಡಿದ ಕ್ಷಣ.



ಗಂಗಾವತಿಯಲ್ಲಿ ವಕೀಲರ ದಿನಾಚರಣೆ ಅಂಗವಾಗಿ ಮಾನ್ಯ ನ್ಯಾಯಾಧೀಶರುಗಳು ಹಾಗೂ ಆತ್ಮೀಯ ಬಾಂಧವರು 2025 ಡಿ. 1ರಂದು ವಕೀಲ ಸೋಮನಾಥ ಪಟ್ಟಣಶೆಟ್ಟಿ ಅವರನ್ನು ಸನ್ಮಾನಿಸಿ ಗೌರವಿಸಿದರು.

ಸಾಮಾಜಿಕ ಕಳಕಳಿ

ಸೋಮನಾಥ ಪಟ್ಟಣಶೆಟ್ಟಿ ಅವರು ಎಲ್ಲಿದ್ದರೂ ವಿಶಿಷ್ಟವಾಗಿ ಕಾಣಿಸಿಕೊಳ್ಳುವಂತವರು. ರಾಜಕೀಯದಲ್ಲಿ ಸಾಮಾಜಿಕ ಕಳಕಳಿಯಿರಬೇಕು. ನಿಸ್ವಾರ್ಥ ಸಾಮಾಜಿಕ ರಂಗವನ್ನು ಮನಸಾರೆ ಒಪ್ಪಿಕೊಂಡು ಸಮಾಜವಾದಿ ಸಿದ್ಧಾಂತಕ್ಕೆ ಒಗ್ಗಿಕೊಂಡವರಾಗಿದ್ದಾರೆ. ಜನತಾ ಪರಿವಾರದಿಂದ ರಾಜಕೀಯ ಜೀವನವನ್ನು ಆರಂಭಿಸಿದ್ದರೂ, ಅಧಿಕಾರಕ್ಕಿಂತ ಜನರ ಸೇವೆ ಅತಿ ಮುಖ್ಯ ಎನ್ನುವ ಸಿದ್ಧಾಂತಕ್ಕೆ ಕಟ್ಟು ಬಿದ್ದವರು.

ಹಲವು ಸಂಸ್ಥೆಗಳಲ್ಲಿ ಸೇವೆ

ವಕೀಲರಾಗಿ ಕಾನೂನು ಅರಿವು ನೆರವು ಸಮಿತಿಯಿಂದ ಗ್ರಾಮೀಣ ಭಾಗದ ಜನತೆಗೆ ಹಾಗೂ ನಗರ, ಪಟ್ಟಣ ಪ್ರದೇಶದ ಸಾರ್ವಜನಿಕರಿಗೆ ಕಾನೂನು ಅರಿವು ಮೂಡಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇಷ್ಟೇ ಅಲ್ಲದೇ, ಅನೇಕ ಸಾಮಾಜಿಕ ಸೇವಾ ಸಂಸ್ಥೆಗಳಲ್ಲಿ ಸದಸ್ಯರಾಗಿ ಕಣ್ಣಿನ ಉಚಿತ ತಪಾಸಣೆ, ಆರೋಗ್ಯ ತಪಾಸಣೆ ಸೇರಿದಂತೆ ವಿವಿಧ ಕಾಯಿಲೆಗಳ ತಪಾಸಣೆ ಶಿಬಿರಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನರ ಆರೋಗ್ಯ ಕಾಪಾಡಲು ಅವಿರತ ಶ್ರಮಿಸುತ್ತಿದ್ದಾರೆ. ಹಾಗೆಯೇ ಉಚಿತವಾಗಿ ಔಷಧಿಗಳನ್ನು ವಿತರಿಸುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸಿಗುವ ಸೌಲಭ್ಯಗಳು ಹಾಗೂ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸುವುದು. ಅಲ್ಲದೇ ಅವುಗಳ ಪ್ರಯೋಜನ ಹೇಗೆ ಪಡೆಯುವುದು ಎಂಬುದನ್ನು ಹೇಳುವುದು ಇವರ ದೈನಂದಿನ ಬದುಕಿನಲ್ಲಿ ಮಾಡುವ ಮಹತ್ವದ ಕಾರ್ಯ. ಈ ಕಾರಣಕ್ಕೆ ಪಟ್ಟಣಶೆಟ್ಟಿ ಅವರು ಜನರಿಗೆ ಪ್ರಿಯವಾದ ವ್ಯಕ್ತಿ.

ಕಾನೂನು ಸಲಹೆಗಾರರಾಗಿ ಸೇವೆ

ಇವರು, ಖಾಸಗಿ ಗ್ರಾಮೀಣ ಅಭಿವೃದ್ಧಿ ಚಿಂತನ ಸಂಸ್ಥೆಯ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಲ್ಯಾಣ (ಹೈದರಾಬಾದ್) ಕರ್ನಾಟಕಕ್ಕೆ 371ಕಲಂ ಜಾರಿಗೆ ತರುವ ನಿಟ್ಟಿನಲ್ಲಿ ಹೋರಾಟ ಮಾಡಿದ್ದಾರೆ. ಗಂಗಾವತಿಯ ಕೊಲ್ಲಿ ನಾಗೇಶ್ವರ ರಾವ್ ಗಂಗಯ್ಯ ಪ್ರಥಮ ದರ್ಜೆ ಕಾಲೇಜಿನ ಆಡಳಿತ ಮಂಡಳಿ ಸದಸ್ಯರಾಗಿ ಕಾಲೇಜು ಅಭಿವೃದ್ಧಿಗೆ ಯತ್ನಿಸಿದ್ದಾರೆ. ವಿಜಯ, ಬರೋಡಾ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ, ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗಳ ಗಂಗಾವತಿ ಶಾಖೆಗಳು ಹಾಗೂ ನಾಲ್ಕು ವಿಮೆ ಕಂಪನಿಗಳ ಶಾಖೆಗಳಿಗೂ ಕಾನೂನು ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸ್ಥಾನಮಾನಗಳಿಗೆ ಆಸೆ ಪಡದ ವ್ಯಕ್ತಿ

ಇನ್ನು ರಾಜಕೀಯವಾಗಿಯೂ ಗುರುತಿಸಿಕೊಂಡಿದ್ದು 40 ವರ್ಷಗಳಿಂದ ತಮ್ಮಿಂದಾದ ಸೇವೆ ಸಲ್ಲಿಸುತ್ತಿದ್ದಾರೆಯೇ ಹೊರತು ಸ್ಥಾನಮಾನಗಳಿಗೆ ಎಂದೂ ಆಸೆ ಪಟ್ಟವರಲ್ಲ. ಈಗಿನ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಉತ್ತಮ ಬಾಂಧವ್ಯ ಇಟ್ಟುಕೊಂಡಿದ್ದು ಒಡನಾಡಿ ಆಗಿದ್ದಾರೆ. ಸಿದ್ದರಾಮಯ್ಯ ಅವರು ಈ ಹಿಂದೆ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದಾಗ ಅವರ ಪರ ನಿಷ್ಠೆಯಿಂದ ಪ್ರಚಾರ ನಡೆಸಿದ್ದರು. ರಾಜ್ಯದ ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರು ಕೂಡ ಕೊಪ್ಪಳ ಲೋಕಸಭೆಗೆ ಕಣಕ್ಕಿಳಿದಾಗಲೂ ಇವರು ಅವರು ಪರವಾಗಿ ಪ್ರಚಾರ ಗೆಲುವಿಗೆ ಶ್ರಮಿಸಿದ್ದರು. ಅಲ್ಲದೇ ರಾಜಶೇಖರ ಹಿಟ್ನಾಳ ಅವರ ಗೆಲುವಿಗೂ ಇವರು ಶ್ರಮಿಸಿ ರಾಜಕೀಯದಲ್ಲಿ ತಾವು ಏನೆಂದು ತೋರಿಸಿದ್ದಾರೆ.

ಸ್ಪರ್ಧಾಕಾಂಕ್ಷಿ ಸುಧೀಂದ್ರ ದೇಶಪಾಂಡೆ ಹೇಳಿಕೆ

ಪಶ್ಚಿಮ ಪದವೀಧರ ಕ್ಷೇತ್ರಕ್ಕೆ ಸ್ಪರ್ಧೆ ಖಚಿತ

ಧಾರವಾಡ: ಬರುವ ಕರ್ನಾಟಕ ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಬಿಜೆಪಿಯ ಶಿಕ್ಷಣ ಪ್ರಕೋಷ್ಠ ರಾಜ್ಯ ಸಮಿತಿ ಸದಸ್ಯ ಸುಧೀಂದ್ರ ದೇಶಪಾಂಡೆ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕಳೆದ ಪಶ್ಚಿಮ ಶಿಕ್ಷಕ ಕ್ಷೇತ್ರದ ಚುನಾವಣೆಗೆ ಬಿಜೆಪಿ ಟಿಕೆಟ್ ಸಿಗುವ ನಿರೀಕ್ಷೆ ಇತ್ತು. ಆದರೆ, ಬಸವರಾಜ ಹೊರಟ್ಟಿ ಆಗಮನದಿಂದ



ಕೈತಪ್ಪಿತು.ಅಂದಿನಿಂದ ನಿರಂತರ ನಾಲ್ಕು ವರ್ಷದಿಂದ ಪಶ್ಚಿಮ ಪದವೀಧರ ಚುನಾವಣೆಗೆ ಸಿದ್ಧತೆ ನಡೆಸಿದ್ದೇನೆ. ಈಗ ಬಿಜೆಪಿ ಟಿಕೆಟ್ ಕೈತಪ್ಪಿರುವುದು ಸಹಜವಾಗಿ ನೋವು ಉಂಟು ಮಾಡಿದ್ದಾಗಿಯೂ ಹೇಳಿದರು.

ಕಳೆದ 35 ವರ್ಷಗಳಿಂದ ಪಕ್ಷದ ವಿವಿಧ ಸಂಘಟನೆಗಳಲ್ಲಿ ಕೆಲಸ ಮಾಡಿದ್ದೇನೆ. ಈ ಬಾರಿ ಸಂಕನೂರ ಅವರಿಗೆ ಟಿಕೆಟ್ ಬೇಡ ಎಂಬ ಮಾತು ಕೇಳಿ ಬಂದಿದ್ದರೂ, ಅವರಿಗೆ ಟಿಕೆಟ್ ನೀಡಲಾಗಿದೆ. ಕೇವಲ ನನಗೆ ಮಾತ್ರವಲ್ಲ, ನನ್ನಂತೆ ಬಹುತೇಕ ಟಿಕೆಟ್ ಆಕಾಂಕ್ಷಿಗಳಿಗೆ ನಿರಾಸೆ ಉಂಟು ಮಾಡಿದೆ. ಟಿಕೆಟ್ ವಂಚಿತರು, ಹಿತೈಷಿಗಳು, ಬೆಂಬಲಿಗರ ಒತ್ತಾಯದ ಮೇರೆಗೆ ಸ್ಪರ್ಧಿಸುತ್ತಿರುವುದಾಗಿ ತಿಳಿಸಿದರು. ಪಶ್ಚಿಮ ಪದವೀಧರ ಕ್ಷೇತ್ರದ ಧಾರವಾಡ, ಗದಗ, ಹಾವೇರಿ ಹಾಗೂ ಕಾರವಾರ ಜಿಲ್ಲೆಗಳಲ್ಲಿ ಹೆಚ್ಚು ಮತದಾರರ ನೋಂದಣಿ ಮಾಡಿಸಿದ್ದೇನೆ. ಪಕ್ಷದ ನಾಯಕರು ಪರೋಕ್ಷವಾಗಿ ಬೆಂಬಲಿಸಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನರಸಿಂಹರಾವ್ ಸೋಮಲಾಪುರ, ಬಸವರಾಜ ಶಿರಸಂಗಿ ಇದ್ದರು.

ನಾನು ಹೊಣೆ ಅಲ್ಲ!

ಬಿಜೆಪಿ ಬಂಡಾಯ ಅಭ್ಯರ್ಥಿ ಅಲ್ಲ, ಕಾಂಗ್ರೆಸ್ ಸೋಲಿಸುವುದು ನನ್ನ ಧ್ಯೇಯ. ನನ್ನ ಗೆಲುವು ನಿಶ್ಚಿತ ಮತ್ತು ಅದಕ್ಕೆ ಬೇಕಾದ ತಯಾರಿಯೂ ಮಾಡಿಕೊಂಡಿರುವೆ. ಈ ಗೆಲುವಿನ ನಾಗಲೋಟದಲ್ಲಿ ಬಿಜೆಪಿಗೆ ಹಿನ್ನಡೆಯಾದರೆ ನಾನು ಹೊಣೆಯಲ್ಲ ಎಂದು ಸುರೇಂದ್ರ ದೇಶಪಾಂಡೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.

ಟಿಪ್ಪರ್ ಹರಿದು ಪೌರಕಾರ್ಮಿಕ ಮಹಿಳೆ ಸಾವು

ಬೆಳಗಾವಿ: ಬೆಳ್ಳಂಬೆಳಗ್ಗೆ ನಗರವನ್ನು ಶುಚಿಗೊಳಿಸುತ್ತಿದ್ದ ಮಹಾನಗರ ಪಾಲಿಕೆಯ ಪೌರಕಾರ್ಮಿಕ ಮಹಿಳೆ ಮೇಲೆ ಟಿಪ್ಪರ್ ಹರಿದು ಸ್ಥಳದಲ್ಲೇ ಮೃತಪಟ್ಟ ಘಟನೆ ಬೆಳಗಾವಿ–ಖಾನಾಪುರ ರಸ್ತೆಯಲ್ಲಿ ನಡೆದಿದೆ.

ಅವಕ್ಕಾ ಕೋಲ್ಕಾರ್ (50) ಮೃತ ಪೌರಕಾರ್ಮಿಕ ಮಹಿಳೆ ಎನ್ನಲಾಗಿದೆ. ಎಂದಿನಂತೆ ಕೆಲಸಕ್ಕೆ ತೆರಳುತ್ತಿದ್ದ ವೇಳೆ ಶುಚಿಗೊಳಿಸುವ ವೇಳೆ ಬೆಳಗಾವಿ ನಗರದಿಂದ ವೇಗವಾಗಿ ಬಂದ ಟಿಪ್ಪರ್ ವಾಹನ ಅವಕ್ಕಾನ ಮೇಲೆ ಹರಿದಿರುವ ಪರಿಣಾಮ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಈ ಘಟನೆಯ ಕುರಿತು ಮಾತನಾಡಿದ ಮಾಜಿ ಉಪಮೇಯರ್ ವಾಣಿ ಜೋಶಿ, ಬೆಳಗಾವಿ ಪಾಲಿಕೆಯ ಪೌರಕಾರ್ಮಿಕೆ ಅವಕ್ಕಾಗಿ ಟಿಪ್ಪರ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಅಪಘಾತ ಮಾಡಿ ಪರಾರಿಯಾದ ವಾಹನ ಚಾಲಕನನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಹೇಳಿದರು.

ಪಾಲಿಕೆ ಪರಿಸರ ಅಭಿಯಂತ ಹಣಮಂತ ಕಲಾದಗಿ ಮಾತನಾಡಿ, ಪೌರಕಾರ್ಮಿಕ ಮಹಿಳೆ ಅವಕ್ಕ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಸರ್ಕಾರದಿಂದ ಸಿಗುವ ಎಲ್ಲ ಸೌಲಭ್ಯ ಅವರಿಗೆ ಕೊಡಲಾಗುವುದು. ಅಲ್ಲದೆ ಅವರ ಅಂತ್ಯಸಂಸ್ಕಾರಕ್ಕೆ ಪಾಲಿಕೆಯಿಂದ ಆರ್ಥಿಕ ಸಹಾಯ ಮಾಡಲಾಗುವುದು. ರಸ್ತೆ ಅಪಘಾತದಲ್ಲಿ ಇದು ಎರಡನೇ ಪೌರಕಾರ್ಮಿಕರು ಬಲಿಯಾಗಿದ್ದಾರೆಂದು ಆಕ್ರೋಶ ಹೊರಹಾಕಿದರು. ಘಟನಾ ಸ್ಥಳಕ್ಕೆ ಬೆಳಗಾವಿ ದಕ್ಷಿಣ ಸಂಚಾರ ಪೊಲೀಸರು ಆಗಮಿಸಿ ಘಟನೆಯ ಕುರಿತು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಳ್ಳೂರಗಿ ಕೊಲೆ ಪ್ರಕರಣ

ಮೂವರಿಗೆ ನ್ಯಾಯಾಂಗ ಬಂಧನ

ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲೂಕಿನ ಬಳ್ಳೂರಗಿ ಸಮೀಪ ನಡೆದ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ನಿಯನ್ನು ಕೊಲೆ ಮಾಡಿದ ಆರೋಪದಲ್ಲಿ ಪತಿ ಅಕ್ಷಯ್ ಜಾಧವ್ ಸೇರಿದಂತೆ ಮೂವರನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಜಿಲ್ಲಾ ಪೊಲೀಸ್ ಅಧೀಕ್ಷಕ ಅಡ್ಡೂರು ಶ್ರೀನಿವಾಸಲು ಪ್ರಕರಣದ ಕುರಿತು ಮಾಹಿತಿ ನೀಡಿದ್ದು, 2022ರಲ್ಲಿ ಪ್ರೀತಿಸಿ ವಿವಾಹವಾಗಿದ್ದ ಅಕ್ಷಯ್ ಜಾಧವ್ ಮತ್ತು ಸಯಾಲಿ ಜಾಧವ್ ದಂಪತಿಗಳ ನಡುವೆ ಮದುವೆಯ ಬಳಿಕ ವರದಕ್ಷಿಣೆ ವಿಚಾರವಾಗಿ ನಿರಂತರ ಜಗಳಗಳು ನಡೆಯುತ್ತಿದ್ದವು ಎಂದು ತಿಳಿಸಿದರು. ಪತ್ನಿಯಿಂದ ವರದಕ್ಷಿಣೆ ತರಿಸುವಂತೆ ಒತ್ತಡ ಹಾಕುತ್ತಿದ್ದ ಅಕ್ಷಯ್, ಅದಕ್ಕೆ ವಿರೋಧ ವ್ಯಕ್ತವಾಗುತ್ತಿದ್ದಂತೆ ಆಕೆಯನ್ನು ಕೊಲೆ ಮಾಡುವ ಸಂಚು ರೂಪಿಸಿದ್ದಾನೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಗಾಣಗಾಪುರದ ದತ್ತಾತ್ರೇಯ ದೇವರ ದರ್ಶನಕ್ಕೆ ಕರೆದುಕೊಂಡು ಹೋಗುವ ನೆಪದಲ್ಲಿ ಪತ್ನಿಯನ್ನು ಕಾರಿನಲ್ಲಿ ಕರೆದೊಯ್ಯುತ್ತಿದ್ದ ವೇಳೆ ದಂಪತಿಗಳ ನಡುವೆ ಮತ್ತೊಮ್ಮೆ ಜಗಳ ಉಂಟಾಗಿದೆ.ಜಗಳ ತೀವ್ರಗೊಂಡು ವಿಕೋಪಕ್ಕೆ ತಿರುಗಿದ ಪರಿಣಾಮ ಅಕ್ಷಯ್ ಪತ್ನಿ ಸಯಾಲಿಯನ್ನು ಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತಳ ಕುಟುಂಬದವರು ನೀಡಿದ ದೂರಿನ ಆಧಾರದ ಮೇಲೆ ವರದಕ್ಷಿಣೆ ಕಿರುಕುಳವೇ ಕೊಲೆಗೆ ಕಾರಣವೆಂದು ಪ್ರಕರಣ ದಾಖಲಿಸಲಾಗಿದೆ. ಅಫಜಲಪುರ ಪೊಲೀಸ್ ಠಾಣೆಯಲ್ಲಿ ಈ ಕುರಿತು ಎಫ್‌ಐಆರ್ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಸಾಲಬಾಧೆ: ರೈತ ಆತ್ಮಹತ್ಯೆ

ಹಾವೇರಿ: ಸಾಲಬಾಧೆ ತಾಳಲಾರದೆ ರೈತರೊಬ್ಬರು ಜಮೀನಿನಲ್ಲಿ ನೇಣಿಗೆ ಶರಣಾದ ಘಟನೆ ತಾಲೂಕಿನ ದೇವಿಹೊಸೂರು ಗ್ರಾಮದಲ್ಲಿ ನಡೆದಿದೆ.

ದೇವಿಹೊಸೂರಿನ ರಮೇಶ ಶಂಕ್ರಪ್ಪ ತೋಟಗೇರ (38) ಮೃತ ದುರ್ದೈವಿ. ಈತ 1 ಎಕರೆ 14 ಗುಂಟೆ ಜಮೀನು ಹೊಂದಿದ್ದು, ಕೃಷಿ ಕೆಲಸಕ್ಕೆಂದು ಗ್ರಾಮದ ಕೆವಿಜಿ ಬ್ಯಾಂಕಿನಲ್ಲಿ 95 ಸಾವಿರ ರೂ.ಬೆಳೆ ಸಾಲ ಹಾಗೂ ವಿವಿಧೆಡೆ ಕೈಗಡವಾಗಿ ಸಾಲವನ್ನು ಮಾಡಿಕೊಂಡಿದ್ದರು. ಕಳೆದ ಕೆಲವು ವರ್ಷಗಳಿಂದ ಜಮೀನಿಗೆ ಹಾಕಿದ ಬೆಳೆಗಳು ಸರಿಯಾಗಿ ಬಾರದ ಹಿನ್ನೆಲೆ ಮಾಡಿದ ಸಾಲವನ್ನು ತೀರಿಸುವುದು ಹೇಗೆ ಎಂದು ಚಿಂತೆಗೀಡಾಗಿದ್ದ.

ಇದೇ ಬೇಜಾರಿನಲ್ಲಿ ತನ್ನ ಜಮೀನಿನಲ್ಲಿರುವ ಜಾಲಿ ಗಿಡಕ್ಕೆ ತನ್ನಷ್ಟಕ್ಕೆ ತಾನೇ ನೇಣು ಹಾಕಿಕೊಂಡು ಮೃತಪಟ್ಟಿದ್ದಾನೆಂದು ಮೃತನ ಪತ್ನಿ ಸುಮಿತ್ರಾ ತೋಟಗೇರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿಯ ಬರ್ಬರ ಹತ್ಯೆ

ಬಾಗಲಕೋಟೆ: ವ್ಯಕ್ತಿಯೊಬ್ಬನನ್ನು ಕೊಡಲಿಯಿಂದ ಹೊಡೆದು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಗದ್ದನಕೇರಿ ಕ್ರಾಸ್‌ದಲ್ಲಿ ಗುರುವಾರ ರಾತ್ರಿ ಸಂಭವಿಸಿದೆ.



ಗದ್ದಕೇರಿ ಕ್ರಾಸ್ ನಿವಾಸಿ ಯಾಗಿರುವ ಹೊಟೇಲ್ ಉದ್ಯಮಿ ಸಂಗಪ್ಪ ನಾಲತವಾಡ ಕೊಲೆಯಾದ ದುರ್ದೈವಿ ಎಂದು ಗುರುತಿಸಲಾಗಿದೆ.

ಹೋಟೆಲ್‌ದಲ್ಲಿ ಗುರುವಾರ ರಾತ್ರಿ 9.50ಕ್ಕೆ ಮನೆಗೆ ಊಟ ಮಾಡಲು ತಮ್ಮ ಬೈಕ್‌ನಲ್ಲಿ ಬರುವಾಗ ಮನೆಯ ಸಮೀಪ ಕಾರಿನಿಂದ ಬಂದ ದುಷ್ಕರ್ಮಿಗಳು ಕೊಲೆ ಮಾಡಿ ಹೋಗಿದ್ದಾರೆ ಎಂದು ಹೇಳಲಾಗಿದೆ.

ಸಂಗಪ್ಪ ನಾಲತವಾಡ ಕಾಂಗ್ರೆಸ್ ಮುಖಂಡನಾಗಿದ್ದು, ಯಡಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಎಲ್ಲರೊಂದಿಗೆ ಒಳ್ಳೆಯ ಸ್ನೇಹವನ್ನು ಹೊಂದಿದ್ದರು. ಆಸ್ತಿ ವಿವಾದ ಹಿನ್ನೆಲೆಯಲ್ಲಿ ಕೊಲೆ ಮಾಡಿಸಿದ್ದಾರೆಂದು ಜನರು ಮಾತನಾಡಿಕೊಳ್ಳುತ್ತಿದ್ದರು.

ಕೊಲೆಯಾಗಿರುವ ಸಂಗಪ್ಪನ ಮುಖಕ್ಕೆ ಕೊಡಲಿಯಿಂದ ಬಲವಾದ ಏಟು ಹಾಕಿದ್ದರಿಂದ ಮುಖ ಕೂಡ ಪರಿಚಯವಾಗದ ರೀತಿ ಹೊಡೆದು ಕೊಲೆ ಮಾಡಿದ್ದಾರೆ.

ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಶಾಸಕ ಜೆ.ಟಿ.ಪಾಟೀಲ, ಮಾಜಿ ಸಚಿವ ಎಸ್.ಆರ್.ಪಾಟೀಲ ಸೇರಿದಂತೆ ಅನೇಕರು ಆಗಮಿಸಿದ್ದರು. ಇನ್ನೂ ಕೊಲೆಯಾದ ಸಂಗಪ್ಪನನ್ನು ನೋಡಿ ಸಾರ್ವಜನಿಕರು ಹಾಗೂ ಮನೆಯ ಸಂಬಂಧಿಕರು ಕಣ್ಣೀರು ಇಡುತ್ತಿರುವ ದೃಶ್ಯ ಕಂಡುಬಂದಿತು.

ಕಲಾದಗಿ ಪೊಲೀಸ್ ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ತನಿಖೆಯನ್ನು ಕೈಗೊಂಡಿದ್ದಾರೆ.

ಜಿ & ಡಬ್ಲು ನಂ : 08/2026
ಮಾನ್ಯ ಹಿರಿಯ ದಿವಾಣಿ ನ್ಯಾಯಾದಿಶರ ನ್ಯಾಯಾಲಯ ಕುಂದಗೋಳ ಇವರಲ್ಲಿ
ಅರ್ಜಿದಾರರು : 1] ಶ್ರೀಮತಿ ನಿಂಗವ್ವ ಕೋಂ ಬಸಪ್ಪ ಗಿರಿಯಪ್ಪನವರ ಹಾಗೂ ಇತರರು
ವಿರುದ್ಧ
ಎದುರುಗಾರರು : ಯಾರು ಇಲ್ಲ.
ಸಾರ್ವಜನಿಕ ನೋಟೀಸು
ಧಾರವಾಡ ಜಿಲ್ಲಾ ಕುಂದಗೋಳ ತಾಲೂಕಾ ರೊಟ್ಟಿಗವಾಡ ಗ್ರಾಮದ ಮನೆ ಹಾಗೂ ಖುಲ್ಲಾ ಜಾಗಾ ಅದರ ಸ್ವತ್ತಿನ ಸಂಖ್ಯೆಯ ನಂ: 151300401100100819 ಹಾಗೂ ಗ್ರಾಮ ಪಂಚಾಯಿತಯಲ್ಲಿ ಸ್ವತ್ತಿನ ಸಂಖ್ಯೆ 325/ಜಿ1 ಒಟ್ಟು ವಿಸ್ತೀರ್ಣ 100.34 ಕಟ್ಟಡ 55.74 ಈ ಆಸ್ತಿಯನ್ನ ಅಲ್ಪವಯಿಗಳ ಪರವಾಗಿ ಮಾರಾಟ ಮಾಡಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಸದರಿ ಅನುಮತಿಗೆ ಯಾವದೇ ವ್ಯಕ್ತಿಯ ತಕರಾರು ಇದ್ದಲ್ಲಿ ಮೇಲ್ಕಂಡ ಪ್ರಕರಣವು ದಿನಾಂಕ:21–4–2026 ರಂದು ಮುಂಜಾನೆ 10.30 ಗಂಟೆಗೆ ಸದರಿ ಪ್ರಕರಣದ ವಿಚಾರಣೆಗಾಗಿ ಮಾನ್ಯ ದಿವಾಣಿ ನ್ಯಾಯಾಧಿಶರ ನ್ಯಾಯಾಲಯ ಕುಂದಗೋಳ ಇವರಲ್ಲಿ ಸಾ। ತಾ। ಕುಂದಗೋಳ ನಿಯಮಿಸಿದ್ದು ಇರುತ್ತದೆ ತಮ್ಮದೇನಾದರೂ ತಕರಾರುಗಳು ಇದ್ದರೆ ಅವುಗಳನ್ನು ಸಲ್ಲಿಸಬೇಕು. ತಪ್ಪಿದಲ್ಲಿ ಸೂಕ್ತ ಆದೇಶ ಹೊರಡಿಸಲಾಗುವದು.
ಈ ಹೊತ್ತು ದಿ: 25–3–2026 ರಂದು ನಮ್ಮ ಸಹಿ ಮಾಡಿ ಕೋರ್ಟಿನ ಮೋಹರು ಹಾಕಿ ಕೊಡಲ್ಪಟ್ಟಿತು.
ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/ಶಿರಸ್ತೆದಾರ
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ
ಸಹಿ/– ಜಿ. ಆರ್. ನಾಗಣ್ಣವರ್
ಅರ್ಜಿದಾರರ ಪರ ವಕೀಲರು

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ: 134/2020
ಅರ್ಜಿದಾರರು: 1.ಶ್ರೀ ರಂಜಾನಸಾಬ ಉರ್ಫ ರಂಜಾನ ಸಾಬ್ ತಂದೆ ಅಮೀನಸಾಬ್ ವಯಸ್ಸು 38ವರ್ಷ, ಉದ್ಯೋಗ ಒಕ್ಕಲುತನ,
2. ಶೌಕತ ಅಲಿ ತಂದೆ ರಂಜಾನಸಾಬ್ ವಯಸ್ಸು 15ವರ್ಷ, ಉದ್ಯೋಗ: ವಿದ್ಯಾರ್ಥಿ,
3. ಕು ರಾಜಾಬಕ್ಷಿ ನವಾಜ್ ತಂದೆ ರಂಜಾನಸಾಬ್ ವಯಸ್ಸು 14ವರ್ಷ, ಉದ್ಯೋಗ: ವಿದ್ಯಾರ್ಥಿ, ಅನುಕ್ರಮ ಸಂಖ್ಯೆ: 2 ಮತ್ತು 3 ಅರ್ಜಿದಾರರು ಅಲ್ಪವಯ ವಯಸ್ಕರು ಅವರ ನೈಸರ್ಗಿಕ ಸಂರಕ್ಷಣೆದಾರರಾದ ಖಾಸ ತಂದೆ ಶ್ರೀ ರಂಜಾನಸಾಬ್ ಉರ್ಫ ರಂಜಾನಸಾಬ್ ತಂದೆ ಅಮೀನಸಾಬ್, ವಯಸ್ಸು: 38 ವರ್ಷ, ಉದ್ಯೋಗ ಒಕ್ಕಲುತನ. ಎಲ್ಲರೂ ಸಾ ಡಗ್ಗಿಕ್ಯಾಂಪ್, ಹೊಸ್ಕೇರಾ ತಾ: ಗಂಗಾವತಿ, ಜಿ ಕೊಪ್ಪಳ.
ವಿರುದ್ಧ
ಎದುರುದಾರರು: ಜನನ ಮರಣ ನೋಂದಣಾಧಿಕಾರಿಗಳು, ತಹಶೀಲ್ದಾರರು. ತಹಶೀಲ್ ಕಾರ್ಯಾಲಯ. ಗಂಗಾವತಿ ಮತ್ತು ಸಂಬಂಧಪಟ್ಟವರು
ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ 1969 ಕಲಂ 13(3) ನಿಯಮ 9(3) ಮತ್ತು ಕೆ.ಆರ್.ಬಿ & ಡಿ. ನಿಯಮಗಳು 1999ರ ಅಡಿಯಲ್ಲಿ ಅರ್ಜಿದಾರರು ಮೃತರಾದ ದಿ॥ ಶ್ರೀಮತಿ ರೇಷ್ಮಾ ಗಂಡ ರಂಜಾನ್ ಸಾಬ್ ಇವರ ಮರಣ ನೋಂದಣೆಗಾಗಿ ಕೋರಿ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರು ನಂ.01 ರವರು ಮೃತರಿಗೆ ಗಂಡನಾಗಿದ್ದು, ಅರ್ಜಿದಾರರು ನಂ.02 ಮತ್ತು 03 ರವರು ಮೃತರಿಗೆ ಅಲ್ಪವಯ ಮಕ್ಕಳಾಗಿದ್ದು, ಅರ್ಜಿದಾರರ ನಂ.01 ರವರ ಹೆಂಡತಿಯಾದ ದಿ॥ ಶ್ರೀಮತಿ ರೇಷ್ಮಾ ಗಂಡ ರಂಜಾನ್ ಸಾಬ್ ಇವರ ಮರಣ ದಿನಾಂಕ: 25/04/2016 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಹೊಸ್ಕೇರಾ ಡಗ್ಗಿಕ್ಯಾಂಪಿನ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿದ್ದು, ಸದರಿ ಅವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ನಂ.01 ರಿಂದ03 ಇವರು ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ: 06–04 2026 ರಂದು ಮಾನ್ಯ ಗೌರವಾನ್ವಿತ ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿಯಲ್ಲಿ ಬೆಳಿಗ್ಗೆ 11–00ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೆ ಈ ಮೇಲೆ ತಿಳಿಸಿದ ಮುದ್ದತ್ತಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕ ಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು,
ಸ್ಥಳ : ಗಂಗಾವತಿ
22/03/2026
ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಆಡಳಿತಾಧಿಕಾರಿ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಗಂಗಾವತಿ.
ಮುಖಾಂತರ : (ಶ್ರೀಮತಿ ನಾಗರತ್ನಮ್ಮ)
ಅರ್ಜಿದಾರರ ಪರ ವಕೀಲರು, ಗಂಗಾವತಿ

PAPER PUBLICATION
IN THE COURT OF HON'BLE 1 ADDL CIVIL JUDGE AND JMFC AT GANGAVATHI
CRIMINAL MISC. No: 534/2026
BETWEEN: Sri. Devappa and others ....Petitioner's
V/S
The Birth & Death Rigistrar, Tahasildar Office Kanakagiri....**Respondent**
TO WHOMESOEVER IT MAY CONCERN NOTICE
WHEREAS above named petitioner herein have instituted above petition under section 13(2) of Birth and Deaths Act 1969 against the respondents for the purpose of seeking Death certificate of Death of the Petitioners No: 01 to 04 are Father's Brother (Chikkappa) by the name Late Ayyappa S/o Veerabhadrappa he was died on 08/09/2010 at Adapura Village, Tq:Kanakagiri Di: Koppal
Any person interested are hereby summoned to appear before this court in person or by pleader duly instructed aired able to answer all material questions ralatind to the petition on Dated 10-04-2026 at 11-00 a.m. before this court
In default of your appearance on the date/day of above petition will be heard and determined as Ex-Parte
Place: Gangavathi
Date: 23/03/2026
By order of the court
Sd/-Sirasthedhar,
JMFC Court Gangavathi.
Advocate for the Petitioner
KRS Advocate-Gangavathi

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿ
ಅಪರಾಧಿಕ ಸಂಕೀರ್ಣ ಸಂಖ್ಯೆ: 556/2026
ಅರ್ಜಿದಾರ :ಶೇರ್‌ಖಾನ್ ತಂದೆ ರೋಶನ್ ಖಾನ್ ವ: 53 ವರ್ಷ, ಉದ್ಯೋಗ: ಒಕ್ಕಲುತನ ಸಾ: ಹುಲಿಗಿ ರೋಡ್, ಸಾಣಾಪುರ, ತಾ: ಗಂಗಾವತಿ, ಜಿ: ಕೊಪ್ಪಳ
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು, ಜನನ ಮರಣ ನೋಂದಣಾಧಿಕಾರಿಗಳು ತಹಶೀಲ ಕಾರ್ಯಾಲಯ, ಗಂಗಾವತಿ
ಈ ಪ್ರಕರಣದಲ್ಲಿ ಅರ್ಜಿದಾರ ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯಿದೆ 1969 ಅಧಿನಿಯಮ ಕಲಂ 13(3)ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರ ಸಹೋದರನಾದ ದಿ॥ ಅಬ್ದುಲ್ ತಂದೆ ರೋಶನ್‌ಖಾನ್ ಇವರು ದಿನಾಂಕ: 26–09–1995 ರಂದು ಅರ್ಜಿದಾರರ ಮನೆಯಾದ ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಸಾಣಾಪೂರ ಗ್ರಾಮದಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೋಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡುವಂತೆ ಕೋರಿ ಎದುರುದಾರ ಕಛೇರಿ ಅಧಿಕಾರಿಯ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರನ ಅರ್ಜಿ ಕುರಿತಂತೆ ಯಾರಾದರೂ ತಕರಾರು/ ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ: 25/4/26ರ ಬೆಳಿಗ್ಗೆ 11.00 ಗಂಟೆ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದೊಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲಿ, ಯಾವುದೇ ತಕರಾರು/ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷೀಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ: ರಂದು ಸಹಿ ಮಾಡಿ ಈ ನ್ಯಾಯಾಲಯದ ಶೀಲು/ ಮುದ್ರೆಯೊಂದಿಗೆ ಕೊಡಲಾಗಿದೆ.
ಸ್ಥಳ: ಗಂಗಾವತಿ
27–3–2026
ನ್ಯಾಯಾಲಯದ ಆದೇಶ ಅನುಸಾರ
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಕೋರ್ಟ, ಗಂಗಾವತಿ
ಅರ್ಜಿದಾರರ ಪರ ವಕೀಲರು

ಕ್ರಿ ಮಿ ನಂ– 187/2026
ಮಾನ್ಯ ದಿವಾಣಿ ನ್ಯಾಯಾದೀಶರ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಹಾವೇರಿ ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು: ಶ್ರೀಮತಿ ಬೀಮವ್ವ ಕೋಂ ಹನುಮಂತಪ್ಪ ಪೂಜಾರ ವಯಾ:– 25 ವರ್ಷ ಉದ್ಯೋಗ– ಮನೆಕೆಲಸ ಸಾ: ಮಾಕನೂರ ತಾ: ರಾಣೇಬೆನ್ನೂರ ಜಿ: ಹಾವೇರಿ.
ವಿರುದ್ಧ
ಎದುರುಗಾರರು: 1) ಮಾನ್ಯ ತಹಶೀಲ್ದಾರರು ಹಾವೇರಿ ಜನನ ವ ಮರಣ ನೊಂದಣಿ ಅಧಿಕಾರಿಗಳು ಹಾವೇರಿ , ತಾ॥ ವ ಜಿ॥ ಹಾವೇರಿ ಹಾಗೂ ಇತರರು.
ಆಸ್ತಿಯಾರ ನಾಮೆ
ಈ ಮೇಲ್ಕಾಣಿಸಿದ ಅರ್ಜಿದಾರಳ ತಂದೆ–ಯಾದ ಯಲ್ಲಪ್ಪ ತಂದೆ ದೇವಪ್ಪ ದಿಡಗೂರ ಇವರು ದಿನಾಂಕ–13–07–1998 ರಂದು ಹಾವೇರಿ ತಾಲೂಕ, ಹಂದಿಗನೂರ ಗ್ರಾಮದಲ್ಲಿ ತಮ್ಮ ಸ್ವಂತ ಮನೆಯಲ್ಲಿ ಮರಣ ಹೊಂದಿದ್ದು ಇರುತ್ತದೆ ಅಂತಾ ಆದೇಶ ಪಡೆಯುವ ಕುರಿತು ಎದುರುಗಾರರ ಮೇಲೆ ಮಾನ್ಯ ಹಾವೇರಿ ಸಿವ್ಹಿಲ್ ಜಡ್ಜ ಮತ್ತು ಜೆ.ಎಮ್. ಎಫ್.ಸಿ. ಇವರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸಲೇನೀಯಸ್ ನಂಬರ– 187/2026 ನೇದ್ದನ್ನು ದಾಖಲ್ ಪಡಿಸಿದ್ದು ಇರುತ್ತದೆ. ಕಾರಣ ಈ ಮೇಲ್ಕಂಡ ವಿಷಯದ ಬಗ್ಗೆ ಯಾರಾದರೂ ಹಿತಾಸಕ್ತಿಯುಳ್ಳವರು ಇದ್ದಲ್ಲಿ ತಮ್ಮ ತಕರಾರು ಏನಾದರೂ ಇದ್ದಲ್ಲಿ ದಿನಾಂಕ :28–4–2026 ರಂದು ಮುಂಜಾನೆ 11.00 ಘಂಟೆಗೆ ನೀವಾಗಲೀ ಇಲ್ಲವೇ ನಿಮ್ಮಿಂದ ಅಧಿಕಾರ ಪಡೆದ ನ್ಯಾಯವಾದಿಗಳಾಗಲೀ ಮಾನ್ಯ ನ್ಯಾಯಾಲಯಕ್ಕೆ ಹಾಜರ ಆಗಿ ತಕರಾರು ಸಲ್ಲಿಸಬೇಕು. ತಪ್ಪಿದಲ್ಲಿ ಸದರ ಕೇಸಿನಲ್ಲಿ ಮುಂದಿನ ಆದೇಶ ಮಾಡಲಾಗುವುದು.
ಈ ದಿವಸ ದಿನಾಂಕ 27/03/2026 ರಂದು ನನ್ನ ಸಹಿ ಹಾಗೂ ಕೋರ್ಟಿನ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶ್ರೀ. ಡಿ. ಎಮ್. ರೋಣ
ಶಿರಸ್ತೆದಾರರು
ಸಿವ್ಹಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ.
ನ್ಯಾಯಾಲಯ ಹಾವೇರಿ
ಅರ್ಜಿದಾರನ ಪರ ನ್ಯಾಯವಾದಿಗಳು
ಸಹಿ/–(ಶ್ರೀಎಸ್.ಎಂ.ಕಾರದ) ನ್ಯಾಯವಾದಿಗಳು
ಹಾವೇರಿ

PAPER PUBLICATION
IN THE COURT OF HON'BLE CIVIL JUDGE AND JMFC AT ITINARERY COURT KARATAGI
CRIMINAL MISCL. No: 267/2026
BETWEEN: Ayyappa & others .....Petitioner's
V/S
The Rigistrar, Birth & Death Tahasildar Office Karatagi ....**Respondent**
TO WHOMESOEVER IT MAY CONCERN NOTICE
WHEREAS above named petitioner herein have instituted above petition under section 13(2) of Birth and Deaths Act 1969 against the respondents for the purpose of seeking Death certificate of Death of the Petitioner No: 01 is Wife and Petitioners No: 02 & 03 are Mother, by the name Late Nagaratna W/o Ayyappa she was died on 08/05/2021 at Petitioner's House Halasamudra Village, Karatagi Taluk Koppal district
Any person interested are hereby summoned to appear before this court in person or by pleader duly instructed aired able to answer all material questions ralatind to the petition on Dated 21-04-2026 at 11-00 a.m. before this court
In default of your appearance on the date/day of above petition will be heard and determined as Ex-Parte
Places Gangavathi/Karatagi
Date: 23/03/2026
By order of the court
Sd/ Sirasthedhar
Itarary Court At Karatagi **Gangavathi**
Advocate for the Petitioner
K.RS Advocate Gangavathi

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಹೆಚ್ಚುವರಿ ದಿವಾಣಿ ನ್ಯಾಯಾದೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿ
ಅಪರಾಧಿಕ ಸಂಕೀರ್ಣ ಸಂಖ್ಯೆ 443/2026
ಅರ್ಜಿದಾರರು: ಶ್ರೀಮತಿ ಸಾವಿತ್ರಿ ಗಂಡ ದಿ। ನಾಗರಾಜ, ವಯಸ್ಸು: 37ವರ್ಷ, ಉದ್ಯೋಗ: ಒಕ್ಕಲುತನ, ಸಾಕೀನ: 2ನೇ ವಾರ್ಡ್, ಗೌಡರ್ ಸ್ಟ್ರೀಟ್, ಕನಕಗಿರಿ, ತಾಲೂಕ: ಕನಕಗಿರಿ, ಜಿಲ್ಲಾ: ಕೊಪ್ಪಳ
ಎದುರುದಾರರು:ಮಾನ್ಯ ಜನನ–ಮರಣ ನೋಂದಣಾಧಿಕಾರಿಗಳು /ತಹಶೀಲ್ದಾರರು, ತಹಶೀಲ್ ಕಾರ್ಯಾಲಯ ಕನಕಗಿರಿ
ಸಂಬಂಧಪಟ್ಟವರು :
ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ–ಮರಣ ನೋಂದಣಿ ಕಾಯ್ದೆ 1969 ರ ಕಲಂ 13(3) ಅಡಿಯಲ್ಲಿ ಅರ್ಜಿ ಸಲ್ಲಿಸಿ 'ನಾಗನಗೌಡ ತಂದೆ ವೀರನಗೌಡ' ಇವರು ದಿನಾಂಕ: 15/05/2015 ರಂದು ಕನಕಗಿರಿಯ 2ನೇ ವಾರ್ಡ್ ಗೌಡರ್ ಸ್ಟ್ರೀಟ್‌ದಲ್ಲಿರುವ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು, ಸದರಿಯವರ ಮರಣ ನೋಂದಣಿ ಮಾಡಲು ಮತ್ತು ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರ ಕಾರ್ಯಾಲಯಕ್ಕೆ ಆದೇಶ ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿ: 18/04/2026 ರಂದು ಮಾನ್ಯ ಸದರಿ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಬೆಳಿಗ್ಗೆ 11–00 ಗಂಟೆಗೆ ವಿಚಾರಣೆಗೆ ಇದ್ದ ಪ್ರಯುಕ್ತ, ಯಾರಾದರೂ ತಕರಾರುಗಳನ್ನು ಸಲ್ಲಿಸುವದಿದ್ದರೆ ಈ ಮೇಲೆ ತಿಳಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರರನ್ನು ಸಲ್ಲಿಸತಕ್ಕದ್ದು. ಒಂದುವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಸದರಿ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು.
ಸ್ಥಳ : ಗಂಗಾವತಿ
ದಿ : 25/3/–2026
//ನ್ಯಾಯಾಲಯದ ಆದೇಶ ಮೇರೆಗೆ//
ಮುಖ್ಯ ಲಿಪಿಕ ಅಧಿಕಾರಿ
ಮಾನ್ಯ ಹೆಚ್ಚುವರಿ ದಿವಾಣಿ & ಪ್ರ.ದ.ನ್ಯಾ.ದಂ. ನ್ಯಾಯಾಲಯ ಗಂಗಾವತಿ
ಮುಖಾಂತರ :ಬಸವರಾಜ ಬಿ.ಅರಾಪೂರ
ಅರ್ಜಿದಾರರ ಪರ ವಕೀಲರು ಗಂಗಾವತಿ

CITATION
IN THE COURT OF HON'BLE PRL CIVIL JUDGE AND J.M.F.C.AT GANGAVATHI
Cr. Misc. No. 1311/2025
PETITIONER: Basappa Nayak S/o Late Guddekal Ayyappa Nayak Age: 53 years, Occ: Agri, R/o Ward No. 02, Valmiki circle, Gangavathi Dist: Koppal.
Versus
RESONDENT: The Registrar Birth and death City Municipal Council Gangavathi, Dist: Koppal.
To : All concerned
That, the petitioner is filed a petition u/s 13(3) of Karnataka Registration of birth and death act 1969 of Grand Father of the petitioner by name Basappa @ Basanna Guddekal S/o Late Ramanna has died on dated: 26-12-1971 at petitioner house ward No. 02, Valmiki circle, Gangavathi. As such who have any objections, claims regarding the issuance of death certificate are hereby directed to appear in this Hon'ble court notice to person or by Pleader duly instructed and able to answer all material questions on the 30th day of 2026 at Gangavathi at 11-00 AM to answer the claim and you are directed to produce on that day all the documents upon which you intended to relay in support of your defense.
Take notice that in default of your appearance on the day before mentioned case will be heard and determination in your absence.
Given under my hand and the seal of the court on this & day of March 2026 a Gangavathi.
BY ORDER OF THE COURT
Chief Ministerial Officer Prl. Civil judge and J.M.F.C. Court at Gangavathi
Trough:
H.S. Alavandi Advocate, Gangavathi

CITATION
IN THE COURT OF HON'BLE PRL CIVIL JUDGE AND J.M.F.C.AT GANGAVATHI
Cr. Misc. No. 1310/2025
PETITIONER: Basappa Nayak S/o Late Guddekal Ayyappa Nayak Age: 53 years, Occ: Agri, R/o Ward No. 02, Valmiki circle, Gangavathi Dist: Koppal.
Versus
RESONDENT: The Registrar Birth and death City Municipal Council Gangavathi, Dist: Koppal.
To : All concerned
That, the petitioner is filed a petition u/s 13(3) of Karnataka Registration of birth and death act 1969, Petitioner's Grandmother by name Late Huligemma W/o Late Basanna has died on dated: 12-08-1983 at petitioner house ward No. 02, Valmiki circle, Gangavathi. As such who have any objections, claims regarding the issuance of death certificate are hereby directed to appear in this Hon'ble court notice to person or by Pleader duly instructed and able to answer all material questions on the 30th day of April 2026 at Gangavathi at 11-00 AM to answer the claim and you are directed to produce on that day all the documents upon which you intended to relay in support of your defense.
Take notice that in default of your appearance on the day before * mentioned case will be heard and determination in your absence.
Given under my hand and the seal of the court on this 28 day of march 2026 at Gangavathi.
BY ORDER OF THE COURT
Chief Ministerial Officer Prl. Civil judge and J.M.F.C. Court at Gangavathi
Trough:
H.S.Alavandi Advocate, Gangavathi

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 445/2026
ಅರ್ಜಿದಾರರು: ಶ್ರೀ ಸಿದ್ದಪ್ಪ ತಬ್ಬಣ್ಣನವರ ತಂದೆ ದೇವೇಂದ್ರಪ್ಪ ವಯಸ್ಸು 78 ವರ್ಷ, ಸಾ। ಡೊಂಬರಹಳ್ಳಿ ಗ್ರಾಮ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇತರೊಬ್ಬರು. ಹೂವಿನಹಡಗಲಿ.
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಹೆಂಡತಿಯ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.
ಅರ್ಜಿದಾರರ ಹೆಂಡತಿಯಾದ ಬಸವಣ್ಣೆವ್ವ ಗಂಡ ಸಿದ್ದಪ್ಪ ತಬ್ಬಣ್ಣನವರ ಇವರು ದಿನಾಂಕ: 22–01–2019 ರಂದು ಡೊಂಬರಹಳ್ಳಿ ಗ್ರಾಮದ ತಮ್ಮ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ:10/06/2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.
ದಿನಾಂಕ: 23/03/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ಸಹಿ/–ಶಿರಸ್ತೆದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಸಹಿ/–ಶ್ರೀ. ಜ್ಯೋತಿ ಮಲ್ಲಣ್ಣ
ಅರ್ಜಿದಾರರ ಪರ ವಕೀಲರು. ಹೂವಿನಹಡಗಲಿ.

ಹಾರ್ದಿಕ ಶುಭಾಶಯಗಳು

ರಾಷ್ಟ್ರಜಾಗೃತಿಯನ್ನೇ ಕಾಯಕವನ್ನಾಗಿಸಿಕೊಂಡು ವಸ್ತು ನಿಷ್ಠ, ಪಾರದರ್ಶಕ ಸುದ್ದಿ ಸಮಾಚಾರದ ಮೂಲಕ ಮನೆ ಮಾತಾಗಿರುವ

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಹುಬ್ಬಳ್ಳಿ ಆವೃತ್ತಿಯು 15ನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿದ್ದು, ಪತ್ರಿಕೆಯು ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಳೆಯಲೆಂದು ಹಾರೈಸುತ್ತೇನೆ.

ಶುಭಾಶಯ ಕೋರುವವರು
ಶ್ರೀ ಅಶೋಕಸ್ವಾಮಿ ಹೇರೂರು
ಕೊಪ್ಪಳ ಜಿಲ್ಲಾ ವಾಣಿಜ್ಯೋದ್ಯಮ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರು




ಹುಬ್ಬಳ್ಳಿ-ಧಾರವಾಡ ಬಂಟರ ಸಂಘ (ರಿ), ಹುಬ್ಬಳ್ಳಿ

ಶ್ರೀ ಆರ್. ಎನ್. ಶೆಟ್ಟಿ ಕಲ್ಯಾಣ ಮಂಟಪ, ಗ್ಲಾಸ್ ಹೌಸ್ ಹತ್ತಿರ, ಹುಬ್ಬಳ್ಳಿ-580029. ಫೋನ್ : 80500 28666. | ಇ-ಮೇಲ್: sanghabunt@gmail.com

ದಿನಾಂಕ : 29 ನೇ ಮಾರ್ಚ, 2026 ರವಿವಾರ | ಸಮಯ : ಬೆಳಿಗ್ಗೆ 9-30 ಕ್ಕೆ | ಸ್ಥಳ : ಹೊಟೇಲ್ ನವೀನ, ಉಣಕಲ್, ಹುಬ್ಬಳ್ಳಿ

50 ಸಂಭ್ರಮಾಚರಣೆ



ಉದ್ಘಾಟನಾ ಸಮಾರಂಭ

ಘನ ಉಪಸ್ಥಿತಿ : **ಶ್ರೀ ಬಸವರಾಜ ಹೊರಟ್ಟಿ**
ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್, ಬೆಂಗಳೂರು

ಮುಖ್ಯ ಅತಿಥಿಗಳು : **ಶ್ರೀ ಸಂತೋಷ ಲಾಡ್**
ಮಾನ್ಯ ಕಾರ್ಮಿಕ ಸಚಿವರು ಹಾಗೂ ಧಾರವಾಡ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ

ಗೌರವ ಉಪಸ್ಥಿತಿ : **ಶ್ರೀ ಅರವಿಂದ ಬೆಲ್ಲದ**
ಮಾನ್ಯ ಶಾಸಕರು, ಹುಬ್ಬಳ್ಳಿ-ಧಾರವಾಡ ಪಶ್ಚಿಮ ವಿಧಾನಸಭಾ ಕ್ಷೇತ್ರ
ಶ್ರೀ ಪ್ರಸಾದ ಅಬ್ಬಯ್ಯ
ಮಾನ್ಯ ಶಾಸಕರು, ಹುಬ್ಬಳ್ಳಿ-ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರ
ಶ್ರೀ ಮಹೇಶ ಟೆಂಗಿನಕಾಯಿ
ಮಾನ್ಯ ಶಾಸಕರು, ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರ
ಶ್ರೀ ಪ್ರದೀಪ ಶೆಟ್ಟರ
ಮಾನ್ಯ ಶಾಸಕರು, ವಿಧಾನ ಪರಿಷತ್
ಶ್ರೀ ಪ್ರಸನ್ನ ಶಂಕರ ಶೆಟ್ಟಿ
ಉದ್ಯಮಿ, ಶೆಟ್ಟಿ ಕನ್ಸ್ಟ್ರಕ್ಷನ್, ಹುಬ್ಬಳ್ಳಿ

ಸಭಾಧ್ಯಕ್ಷರು : **ಶ್ರೀ ವಿಜಯಾನಂದ ಶೆಟ್ಟಿ**
ಅಧ್ಯಕ್ಷರು, ಹುಬ್ಬಳ್ಳಿ-ಧಾರವಾಡ ಬಂಟರ ಸಂಘ

ಸಮಾರೋಪ ಸಮಾರಂಭ

ಮುಖ್ಯ ಅತಿಥಿಗಳು : **ಶ್ರೀ ಪ್ರಲ್ಹಾದ ಜೋಶಿ**
ಮಾನ್ಯ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ನವೀಕರಿಸಬಹುದಾದ ಇಂಧನ ಇಲಾಖೆ ಕೇಂದ್ರ ಸಚಿವರು, ಭಾರತ ಸರಕಾರ

ಗೌರವ ಉಪಸ್ಥಿತಿ : **ಕ್ಯಾಪ್ಟನ್ ಬ್ರಿಜೇಶ್ ಚೌಟ**
ಸಂಸದರು, ಮಂಗಳೂರು ಲೋಕಸಭಾ ಕ್ಷೇತ್ರ
ಡಾ। ಎಂ. ಮೋಹನ್ ಆಳ್ವ
ಅಧ್ಯಕ್ಷರು, ಆಳ್ವಾಸ್ ಫೌಂಡೇಶನ್ ಮೂಡಬಿದ್ರಿ
ಡಾ. ಕೆ. ಪ್ರಕಾಶ್ ಶೆಟ್ಟಿ
ಚೇರಮನ್, ಎಮ್‌ಆರ್‌ಜಿ ಗ್ರೂಪ್
ಶ್ರೀ ಯು. ಬಿ. ಶೆಟ್ಟಿ
ಉದ್ಯಮಿಗಳು, ಬೆಂಗಳೂರು
ಶ್ರೀ ಸತೀಶ್ ಆರ್.ಎನ್. ಶೆಟ್ಟಿ
ಅಧ್ಯಕ್ಷರು, ಆರ್.ಎನ್.ಎಸ್. ಸಮೂಹ ಸಂಸ್ಥೆಗಳು
ಶ್ರೀ ರಾಜೇಶ್ ನಾಯ್ಕ
ಮಾನ್ಯ ಶಾಸಕರು, ಬಂಟ್ವಾಳ
ಡಾ। ಭರತ್ ಶೆಟ್ಟಿ. ವೈ
ಮಾನ್ಯ ಶಾಸಕರು, ಮಂಗಳೂರು ನಗರ ಉತ್ತರ
ಶ್ರೀ ಹರೀಶ್ ಪೂಂಜ
ಮಾನ್ಯ ಶಾಸಕರು, ಬೆಳ್ತಂಗಡಿ
ಶ್ರೀ ಸುರೇಶ್ ಶೆಟ್ಟಿ ಗುರ್ಮೆ
ಮಾನ್ಯ ಶಾಸಕರು, ಕಾಪು
ಶ್ರೀ ಗುರುರಾಜ್ ಗಂಟಿಹೊಳೆ
ಮಾನ್ಯ ಶಾಸಕರು, ಬೈಂದೂರು
ಶ್ರೀಮತಿ ಭಾರತಿ ಶೆಟ್ಟಿ, ಮಾನ್ಯ ಶಾಸಕರು, ವಿಧಾನ ಪರಿಷತ್, ಬೆಂಗಳೂರು

ಸಭಾಧ್ಯಕ್ಷರು : **ಶ್ರೀ ವಿಜಯಾನಂದ ಶೆಟ್ಟಿ**
ಅಧ್ಯಕ್ಷರು, ಹುಬ್ಬಳ್ಳಿ-ಧಾರವಾಡ ಬಂಟರ ಸಂಘ

ಸ್ಥಾಪಕ ಸದಸ್ಯರಿಗೆ ಸನ್ಮಾನ | ಕೀರ್ತಿಶೇಷ ಕಟ್ಟಿರೆ ಶಂಕರ ಶೆಟ್ಟಿ ಸ್ಮರಣಾರ್ಥ ವಿದ್ಯಾರ್ಥಿ ವೇತನ ವಿತರಣೆ | ಡಾ. ಆರ್. ಎನ್. ಶೆಟ್ಟಿ ಸ್ಮಾರಕ ಪ್ರಶಸ್ತಿ ಪುರಸ್ಕೃತರು: ಡಾ। ಎಂ. ಮೋಹನ್ ಆಳ್ವ, ಡಾ. ಕೆ. ಪ್ರಕಾಶ ಶೆಟ್ಟಿ, ಶ್ರೀ ಯು. ಸೀತಾರಾಮ ಶೆಟ್ಟಿ

ತಮಗೆಲ್ಲರಿಗೂ ಆದರದ ಸ್ವಾಗತ

ಶ್ರೀ ವಿಜಯಾನಂದ ಶೆಟ್ಟಿ	ಶ್ರೀ ಕೆ. ಸುರೇಶ ಶೆಟ್ಟಿ	ಶ್ರೀ ರಾಜೇಂದ್ರ ವಿ. ಶೆಟ್ಟಿ	ಶ್ರೀ ಪ್ರದೀಪ ಬಿ. ಪಕ್ಕಳ	ಶ್ರೀ ಹರ್ಷಕುಮಾರ ಶೆಟ್ಟಿ	ಶ್ರೀ ರತ್ನಾಕರ ಎಂ. ಶೆಟ್ಟಿ
ಅಧ್ಯಕ್ಷರು	ಉಪಾಧ್ಯಕ್ಷರು	ಉಪಾಧ್ಯಕ್ಷರು	ಕಾರ್ಯದರ್ಶಿ	ಖಜಾಂಚಿ	ಸಹ ಕಾರ್ಯದರ್ಶಿ

ಮಾಜಿ ಅಧ್ಯಕ್ಷರುಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಸರ್ವ ಸದಸ್ಯರು ಹುಬ್ಬಳ್ಳಿ-ಧಾರವಾಡ ಬಂಟರ ಸಂಘ (ರಿ), ಮಾತೃಭೂಮಿ ಚಾರಿಟೇಬಲ್ ಟ್ರಸ್ಟ್ (ರಿ)

ರಾಜ್ಯ ಸರ್ಕಾರದಿಂದ ಜನರ ಮೇಲೆ ಆರ್ಥಿಕ ಹೊರೆ: ಬೊಮ್ಮಾಯಿ



ಬಾಗಲಕೋಟೆ: ರಾಜ್ಯದ ಜನರು ಸರ್ಕಾರದ ಮೇಲೆ ಇಟ್ಟ ಭರವಸೆ ಹುಸಿಯಾಗಿದೆ. ರಾಜ್ಯದ ಆರ್ಥಿಕ ವ್ಯವಸ್ಥೆ ಹದಗೆಟ್ಟಿದೆ. ಕೋವಿಡ್ ಸಂದರ್ಭದಲ್ಲಿ ಕೂಡ ಬಿಜೆಪಿ ಸರ್ಕಾರ ಆರ್ಥಿಕ ವ್ಯವಸ್ಥೆಯನ್ನು ಸರಿಯಾಗಿಟ್ಟುಕೊಂಡಿತ್ತು. ಆದರೆ, ಕಾಂಗ್ರೆಸ್ ಸರ್ಕಾರದ ಅವಧಿ ಮುಗಿಯುತ್ತಿದ್ದಂತೆ 6ರಿಂದ 7 ಲಕ್ಷ ಕೋಟಿ ರೂ. ಸಾಲವನ್ನು ರಾಜ್ಯದ ಜನರ ಮೇಲೆ ಹೊರೆಸಲಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನವನವಗರದ ಬಿಜೆಪಿ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ನೀಡುತ್ತಿಲ್ಲ ಎನ್ನುವ ಸಿದ್ದರಾಮಯ್ಯನವರು ಯುಪಿಎ ಸರ್ಕಾರವಿದ್ದಾಗ 700 ಕೋಟಿ ರೂ. ರೈಲ್ವೆ ಇಲಾಖೆಗೆ ನೀಡುತ್ತಿತ್ತು. ಈಗಿನ ನರೇಂದ್ರ ಮೋದಿ ಸರ್ಕಾರ ರಾಜ್ಯಕ್ಕೆ 7 ಸಾವಿರ ಕೋಟಿ ರೂ. ಅನುದಾನ ರೈಲ್ವೆ ಯೋಜನೆಗೆ ನೀಡುತ್ತಿದೆ ಎಂದು ಹೇಳಿದರು.

ದೇಶಕ್ಕೆ ದೊಡ್ಡ ಸಮಸ್ಯೆ ಎದುರಾದಾಗ ಪ್ರಧಾನಿ ನರೇಂದ್ರ ಮೋದಿಯವರು ರಾಜ್ಯದ ಎಲ್ಲ ಮುಖ್ಯಮಂತ್ರಿಗಳ ಸಭೆ ನಡೆಸಿದರೆ ರಾಜ್ಯದ ಸಿಎಂ ಮಾತ್ರ ಗೈರು ಉಳಿಯುತ್ತಾರೆ. ನೀತಿ ಆಯೋಗದ ಸಭೆಗೂ ಹೋಗುವುದಿಲ್ಲ, ಕರ್ತವ್ಯ ಲೋಪವನ್ನು ರಾಜ್ಯದ ಸಿಎಂ ಎಸಗುವ ಮೂಲಕ ಉದ್ಧಟತನ ಪ್ರದರ್ಶನ ಮಾಡುತ್ತಾರೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿವರ್ಷ 18 ಸಾವಿರ ಕೋಟಿ ರೂ.ಯುಕೆಪಿ ಯೋಜನೆಗೆ ಮೀಸಲಿಟ್ಟು ಯೋಜನೆಯನ್ನು ಮುಗಿಸುತ್ತೇವೆ ಎಂದು ಭರವಸೆ ನೀಡಿದವರು ಇತ್ತೀಚೆಗೆ ಬಜೆಟ್ ಮಂಡಿಸಿದಾಗ ಕೇವಲ 3 ಸಾವಿರ ಕೋಟಿ ಮೀಸಲಿಟ್ಟಿದ್ದಾರೆ. ಜನರ ಕಣ್ಣಿಗೆ ಮಣ್ಣು ಎರಚುವ ಕೆಲಸವನ್ನು ಕಾಂಗ್ರೆಸ್ ಮಾಡಿದೆ. ಕ್ಷಮೆಗೆ ಅರ್ಹವಿಲ್ಲದ ಅಪರಾಧವನ್ನು ಈ ಸರ್ಕಾರ ಮಾಡಿದೆ ಎಂದು ದೂರಿದರು.

ಬಾಗಲಕೋಟೆ ಕ್ಷೇತ್ರದಲ್ಲಿ ಅಭಿವೃದ್ಧಿಯಾಗಿದ್ದು ವೀರಣ್ಣ ಚರಂತಿಮಠವರು ಶಾಸಕರಾಗಿದ್ದ ಅವಧಿಯಲ್ಲಿ. ಈಗ ಉಪಚುನಾವಣೆ ಬರುತ್ತಿದೆ ಎಂದು ಗೊತ್ತಾಗುತ್ತಿದ್ದಂತೆ ತರಾತುರಿಯಲ್ಲಿ ಮೆಡಿಕಲ್ ಕಾಲೇಜ್‌ಗೆ ಅಡಿಗಲ್ಲನ್ನು ಸಿಎಂ ಹಾಕಿದ್ದಾರೆ. ಇದಕ್ಕೂ ಕೂಡ ವಿವಿ ಹಣ ಕೊಡಲಿದೆ ರಾಜ್ಯ ಸರ್ಕಾರ ಅನುದಾನ ಇಲ್ಲ, ನಮ್ಮ ಸರ್ಕಾರವಿದ್ದಾಗ ರಾಜ್ಯದಲ್ಲಿ ನಾಲ್ಕು ಮೆಡಿಕಲ್ ಕಾಲೇಜ್ ಮಾಡಿದರೂ ನಮ್ಮ ಸರ್ಕಾರದಿಂದಲೇ ಅನುದಾನ ನೀಡಿದ್ದೇವು ಎಂದರು.

ಬಾಗಲಕೋಟೆ ಮತಕ್ಷೇತ್ರದಲ್ಲಿ ವೀರಣ್ಣ ಚರಂತಿಮಠರ ಗೆಲುವು ನಿಶ್ಚಿತವಾಗಿದ್ದು ಸರ್ಕಾರ ಹಣದ ಬಲದ ಮೇಲೆ ಚುನಾವಣೆಯನ್ನು ಎದುರಿಸಲು ಮುಂದಾಗಿದೆ. ಜನರು ಈ ಚುನಾವಣೆಯಲ್ಲಿ ತಕ್ಕ ಪಾಠವನ್ನು ಕಲಿಸಲಿದ್ದಾರೆ ಎಂದರು. ಸಂಸದ ಗೋವಿಂದ ಕಾರಜೋಳ, ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಶಾಂತಗೌಡ ಪಾಟೀಲ, ಬಸವರಾಜ ಯಂಕಂಚಿ, ಸತ್ಯನಾರಾಯಣ ಹೇಮಾದ್ರಿ ಪತ್ರಿಕಾಗೋಷ್ಠಿಯಲ್ಲಿದ್ದರು.

ಜೈನ ಮುನಿಗಳಿಂದ ಗುಹಾಂತರ ದೇವಾಲಯ ವೀಕ್ಷಣೆ

ಬಾದಾಮಿ: ಆಚಾರ್ಯ ಅಭಯ್ ಶೇಖರ್ ಸೂರಿ, ಧರ್ಮ ಶೇಖರ್ ಸೂರಿ ಜೈನ ಹಾಗೂ 11 ಜನ ಮುನಿಗಳು ನಗರದ ಗುಹಾಂತರ ದೇವಾಲಯಗಳನ್ನು ವೀಕ್ಷಣೆ ಮಾಡಿದರು.

ಬೆಂಗಳೂರು ದಿಂದ ಮಹಾರಾಷ್ಟ್ರ ಈಶ್ವಪುರ ಪಾದಯಾತ್ರೆ ಹೊರಟಾಗ ಬಾದಾಮಿಯಲ್ಲಿ ಬಾಗಲಕೋಟ, ಪುಣೆ, ಬೆಳಗಾವಿ ಸಾಂಗ್ಲಿ ಸೇರಿದಂತೆ ಸುಮಾರು 70 ಜನ ಭಕ್ತರು ಬಾದಾಮಿಯಲ್ಲಿ ಎಲ್ಲರೂ ಸೇರಿ ಬೆಳಗ್ಗೆ 7 ಗಂಟೆಗೆ ಮೇಣಬಸದಿ 4ನೇ ಬಸದಿಯಲ್ಲಿ ಜೈನ ಮಹಾವಿರ ಮೂರ್ತಿ ದರ್ಶನ ಮಾಡಿ ಪ್ರಾರ್ಥನೆ ಸಲ್ಲಿಸಿದರು.

ಎಲ್ಲ ಗುಹಾಂತರ ದೇವಾಲಯ ವೀಕ್ಷಣೆ ಮಾಹಿತಿ ಪಡೆದರು. ಮತ್ತು 1 2 3ನೇ ಬಸದಿಯ ವಿಷ್ಣು ಶಿವ ಮೂರ್ತಿ ವೀಕ್ಷಿಸಿದರು. ಈ ಸಂದರ್ಭದಲ್ಲಿ ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಮ್ .ಡಿ.ಎಲಿಗಾರ ಉಪಸ್ಥಿತರಿದ್ದರು.







ಪತ್ರಿಕೆಗಾಗಿ ಸಂಪರ್ಕಿಸಿ
7022002526

















Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ



ಗೋಕರ್ಣ: ಪುರಾಣ ಪ್ರಸಿದ್ಧ ಕ್ಷೇತ್ರದಲ್ಲಿ ರಾಮ ನವಮಿಯನ್ನು ಆಚರಿಸಲಾಯಿತು. ಇಲ್ಲಿನ ಮುಖ್ಯ ಕಡಲತೀರದ ಬಳಿಯಿರುವ ಪೌರಾಣಿಕ ಹಿನ್ನೆಲೆಯ ಸೀತಾರಾಮ ಲಕ್ಷ್ಮಣ ಮಂದಿರದಲ್ಲಿ ಪವಮಾನ ಪಂಚಸೂಕ್ತಕ ಪಾರಾಯಣ ನಡೆಯಿತು.

ಇಂದು ಬೆಳ್ಳಿ ಹಬ್ಬ

ಗೋಕರ್ಣ: ಇಲ್ಲಿನ ದಂಡೆಭಾಗದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಬೆಳ್ಳಿ ಹಬ್ಬ ಮಾ. 29ರಂದು ಸಂಜೆ 5 ಗಂಟೆಗೆ ನಡೆಯಲಿದೆ. ಶಾಸಕ ದಿನಕರ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ (ಆಡಳಿತ) ಲತಾ ನಾಯಕ ಹಸ್ತಪ್ರತಿ ಬಿಡುಗಡೆ ಮಾಡಲಿದ್ದಾರೆ. ಕುಮಟಾ ಡಯಟ್ ಪ್ರಾ. ಹಾಗೂ ಉಪನಿರ್ದೇಶಕರು)ಎನ್.ಆರ್.ಹೆಗಡೆ ಬಹುಮಾನ ವಿತರಣೆ ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಹಲವು ಗಣ್ಯರು ಪಾಲ್ಗೊಳ್ಳಲಿದ್ದು, ಎಸ್.ಡಿ.ಎಮ್ ಸಿ.ಅಧ್ಯಕ್ಷೆ ನೇತ್ರಾವತಿ ಅಂಬಿಗ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಮುಖ್ಯಾಧ್ಯಾಪಕ ಜಿ.ಆರ್. ನಾಯ್ಕ, ಸಹಶಿಕ್ಷಕಿ ಪಾರ್ವತಿ ಎಸ್. ಗೌಡ, ಬೆಳ್ಳಿ ಹಬ್ಬ ಸಮಿತಿ ಅಧ್ಯಕ್ಷ ಮಹೇಶ ಅಂಬಿಗ, ಉಪಾಧ್ಯಕ್ಷ ಕುಮಾರ ದೀವಟಗಿ, ಗೌರವಾಧ್ಯಕ್ಷ ಸತೀಶ ದೇಶಭಂಡಾರಿ ಹಾಗೂ ಪದಾಧಿಕಾರಿಗಳು ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳೆಹಾನಿ: ಅಧಿಕಾರಿಗಳ ಭೇಟಿ



ಮುಂಡಗೋಡ: ಅಕಾಲಿಕ ಮಳೆಯಿಂದ ಗೋವಿನ ಜೋಳ ಬೆಳೆ ಹಾನಿಯಾದ ಗದ್ದೆಗೆ ಕೃಷಿ ಅಧಿಕಾರ ನೇತೃತ್ವದ ತಂಡ ಸನವಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ತಾಲೂಕಿನಲ್ಲಿ ಮಂಗಳವಾರ ಸುರಿದ ಭಾರಿ ಗಾಳಿ, ಆಲಿಕಲ್ಲು ಮಳೆಗೆ ಬೇಸಿಗೆ ಬೆಳೆಯಾದ ಗೋವಿನ ಜೋಳ ಬೆಳೆಯೂ ಸಾಲಗಾಂವ, ಬಾಚಣಕಿ, ಕಾತೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಾಗೂ ಇನ್ನಿತರ ಭಾಗಗಳಲ್ಲಿ ಮಳೆ, ಆಲಿಕಲ್ಲು ಗೋವಿನ ಜೋಳ ಗಿಡಗಳ ಮೇಲೆ ಬಿದ್ದ ಹೊಡೆತಕ್ಕೆ ಗೋವಿನ ಜೋಳದ ಗಿಡಗಳು ನೆಲಕಚ್ಚಿತ್ತು. ಈ ಬಗ್ಗೆ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಿತ್ತು. ವರದಿಗೆ ಎಚ್ಚೆತ್ತು ಅಧಿಕಾರುಗಳು ಭೇಟಿ ನೀಡಿದ್ದಾರೆ.ಶನಿವಾರ ಸಹಾಯಕ ಕೃಷಿ ನಿರ್ದೇಶಕ ಕೆ.ಎನ್.ಮಹಾರಡ್ಡಿ ನೇತೃತ್ವದ ತಂಡ ರಾಜು ಗುಬ್ಬಕ್ಕನವರ, ಫಕ್ಕೀರಸ್ವಾಮಿ, ರಾಮಚಂದ್ರ ಆರೆಗೊಪ್ಪ, ಶಿವಾನಂದ ಕೆರಿಹೊಲದವರ, ಅಜ್ಜಯ್ಯ ಹಿರೇಮಠ, ಗಿರೀಶ ಕೆರಿಹೊಲದವರ, ಶಿವರಾಮ ಅರಿಶಿಣಗೇರಿ ಮತ್ತು ಪರಶಪ್ಪ ಬೋಕಿಯವರ ರೈತರ ಗದ್ದೆಗೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ರೈತರು ಅಧಿಕಾರಗಳ ಮುಂದೆ ತಮ್ಮ ಅಳಲನ್ನು ತೋಡಿಕೊಂಡರು.

ನಿಧನ ಸುದ್ದಿ

ನಿಂಗವ್ವ ಆಸ್ತಕಟ್ಟಿ



ಮುಂಡಗೋಡ: ಕಾಂಗ್ರೆಸ್ ಪಕ್ಷದ ಧುರೀಣ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ ಸಮಿತಿಯ ಸದಸ್ಯ ತಾಲೂಕಿನ ಹುನಗುಂದ ಗ್ರಾಮದ ಬಸವರಾಜ ಆಸ್ತಕಟ್ಟಿ ಅವರ ತಾಯಿ ನಿಂಗವ್ವ ಆಸ್ತಕಟ್ಟಿ(76) ನಿಧನರಾದರು. ಮೃತರು ನಾಲ್ವರು ಪುತ್ರರು, ಮೂವರುಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಶಾಸಕ ಶಿವರಾಮ ಹೆಬ್ಬಾರ, ಆರ್.ವಿ.ದೇಶಪಾಂಡೆ, ಭೀಮಣ್ಣ ನಾಯ್ಕ, ಎಸ್.ಎಲ್.ಘೋಟ್ನೇಕರ, ಎಚ್.ಎಮ್.ನಾಯ್ಕ ಮತ್ತು ತಾಲೂಕು ಬ್ಲಾಕ್ ಕಾಂಗ್ರೆಸ್ ಸಮಿತಿಯಯವರು ಮೃತರ ಆತ್ಮಕ್ಕೆ ಶಾಂತಿ ಕೋರಿದ್ದಾರೆ.



ಹೊನ್ನಾವರ: ರಾಮನವಮಿ ನಿಮಿತ್ತ ಸ್ವರ್ಣಪುರಸ್ಥ ಬೇಟೆ ವೀರ ವೆಂಕಟರಮಣ ದೇವರ ಮಹಾರಥೋತ್ಸವ ಸಹಸ್ರಾರು ಭಕ್ತಸಾಗರದ ನಡುವೆ ಸಡಗರದಿಂದ ಜರುಗಿತು.ಭಕ್ತರು ದೇವರಿಗೆ ಹಣ್ಣು-ಕಾಯಿ ಸೇವೆ, ಅಭಿಷೇಕ, ಅರ್ಚನೆ ಇನ್ನಿತರ ಸೇವೆಗಳನ್ನು ಸಲ್ಲಿಸಿದರು. ನಾಡಿನ ವಿವಿಧ ಭಾಗಗಳಿಂದ ಸಾವಿರಾರು ಸಂಖ್ಯೆಯ ಭಕ್ತರು ದೇವಾಲಯಕ್ಕೆ ಭೇಟಿ ನೀಡಿ ಜಾತ್ರಾ ಮಹೋತ್ಸವವನ್ನು ಕಣ್ತುಂಬಿಕೊಂಡರು.

ಜಿಲ್ಲಾ ರಂಗೋತ್ಸವಕ್ಕೆ ದುಂಡಿ ಮಂಚಿಕೇರಿ ಚಾಲನೆ

ಸಿದ್ದಾಪುರ: ಭಾರತ ದೇಶಕ್ಕೆ ತನ್ನದೇ ಆದ ಪೌರಾಣಿಕ, ಐತಿಹಾಸಿಕ ಹಿನ್ನೆಲೆಯಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿಯ ವಿವಿಧ ಆಂದೋಲನಗಳ ಅದ್ಭುತವಾದ ನೆನಪಿನ ಸರಪಳಿಯಿದೆ. ಈ ಎಲ್ಲ ಕಾರಣಗಳಿಂದ ಭಾರತ ಜಗತ್ತಿಗೆ ಶಾಂತಿ ನೀಡಲು ಸಾಧ್ಯವಾಗಿದೆ. ನಮ್ಮ ಗ್ರಾಮೀಣ ಭಾಗದ ರಂಗತಂಡಗಳು ಪೌರಾಣಿಕ, ಐತಿಹಾಸಿಕ ಸಂದರ್ಭಗಳ ನೆನಪುಗಳ ಮರುಸ್ಥಾಪನೆಯ ಮಹತ್ತರ ಕಾರ್ಯವನ್ನು ಮಾಡುತ್ತಿರುವದು ಭರವಸೆಯ ಸಂಗತಿ ಎಂದು ಹಿರಿಯ ರಂಗಕರ್ಮಿ, ರಂಗನಿರ್ದೇಶಕ, ಸಂಘಟಕ ರಾಮಕೃಷ್ಣ ಭಟ್ಟ ದುಂಡಿ ಮಂಚಿಕೇರಿ ಹೇಳಿದರು.ಅವರು ರಂಗಸೌಗಂಧ ಸಂಸ್ಥೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದಲ್ಲಿ ತಾಲೂಕಿನ ವಾಜಗದ್ದೆಯ ದುರ್ಗಾ ವಿನಾಯಕ ಸಭಾಭವನದಲ್ಲಿ ಹುಲಿಮನೆ ಸೀತಾರಾಮಶಾಸ್ತ್ರಿ ಸ್ಮರಣೆಯಲ್ಲಿ ಹಮ್ಮಿಕೊಂಡ ಮೂರು ದಿನಗಳ ಜಿಲ್ಲಾ ರಂಗೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.ಅತಿಥಿಗಳಾಗಿ ಪಾಲ್ಗೊಂಡಿದ್ದ ಟಿಎಸ್ ಎಸ್‌ನಿರ್ದೇಶಕ ರವೀಂದ್ರ ಹೆಗಡೆ ಹಿರೇಕೈ, ದುರ್ಗಾ ವಿನಾಯಕ ದೇವಸ್ಥಾನದ ಮೊಕ್ತೇಸರ ಶ್ರೀಧರ ಎಂ.ಹೆಗಡೆ ಅಧ್ಯಕ್ಷತೆವಹಿಸಿ ಮಾತನಾಡಿದರು. ಹಿರಿಯ ರಂಗಸಂಘಟಕ ಆರ್.ಎಲ್ .ಭಟ್ಟ ಕುಂಬಾರಕುಳಿ ಮಂಚಿಕೇರಿ ಉಪಸ್ಥಿತರಿದ್ದರು.ರಂಗ ಸೌಗಂಧದ ಮುಖ್ಯಸ್ಥ ಗಣಪತಿ ಹೆಗಡೆ ಹುಲಿಮನೆ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಗಣಪತಿ ಹೆಗಡೆ ಗುಂಜಗೋಡ ನಿರೂಪಿಸಿದರು. ರಾಜಾರಾಮ ಭಟ್ಟ ಹೆಗ್ಗಾರಳ್ಳಿ ವಂದಿಸಿದರು. ನಂತರ ಮಗೇಗಾರಿನ ಮಹಾಗಣಪತಿ ನಾಟ್ಯ ಕಲಾ ಸಂಘದವರಿಂದ ಪೌರಾಣಿಕ ಸಂಗೀತ ನಾಟಕ ಹರಣ ಪ್ರದರ್ಶನಗೊಂಡಿತು.



ಸಿದ್ದಾಪುರ: ರಂಗಸೌಗಂಧ ಸಂಸ್ಥೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದಲ್ಲಿ ತಾಲೂಕಿನ ವಾಜಗದ್ದೆಯ ದುರ್ಗಾ ವಿನಾಯಕ ಸಭಾಭವನದಲ್ಲಿ ಹುಲಿಮನೆ ಸೀತಾರಾಮಶಾಸ್ತ್ರಿ ಸ್ಮರಣೆಯಲ್ಲಿ ಹಮ್ಮಿಕೊಂಡ ಮೂರು ದಿನಗಳ ಜಿಲ್ಲಾ ರಂಗೋತ್ಸವಕ್ಕೆ ಹಿರಿಯ ರಂಗಕರ್ಮಿ, ರಂಗನಿರ್ದೇಶಕ, ಸಂಘಟಕ ರಾಮಕೃಷ್ಣ ಭಟ್ಟ ದುಂಡಿ ಮಂಚಿಕೇರಿ ಚಾಲನೆ ನೀಡಿದರು.

ಅಪ್ಸರಕೊಂಡ ಕಡಲ ತೀರದ ಸಮಸ್ಯೆ

ಪರಿಸರ-ವಾಣಿಜ್ಯದ ಮಧ್ಯ ಸಂಘರ್ಷ!

ಹೊನ್ನಾವರ: ತಾಲೂಕಿನ ಅಪ್ಸರಕೊಂಡ ಕಡಲತೀರವು ಇಂದು ಕೇವಲ ಪ್ರವಾಸಿ ತಾಣವಾಗಿ ಉಳಿದಿಲ್ಲ, ಅದು ಪರಿಸರ ಮತ್ತು ವಾಣಿಜ್ಯದ ನಡುವಿನ ಸಂಘರ್ಷದ ಕಣವಾಗಿ ಬದಲಾಗಿದೆ. ಇತ್ತೀಚೆಗೆ ಈ ಕಡಲತೀರದಲ್ಲಿ ನಡೆದ ಕಡಲಾಮೆಯ ಸಾವು, ಆಡಳಿತಶಾಹಿ ಮತ್ತು ಪ್ರವಾಸೋದ್ಯಮದ ಅಂಧಾಭಿಮಾನಕ್ಕೆ ಬಿದ್ದಿರುವ ಮತ್ತೊಂದು ಕಪ್ಪು ಚುಕ್ಕೆ.

ಪ್ರೀ-ವೆಡ್ಡಿಂಗ್ ಶೂಟಿಂಗ್ ಮತ್ತು ಫೈರ್ ಕ್ಯಾಂಪ್‌ಗಳಂತಹ ಐಷಾರಾಮಿ ಚಟುವಟಿಕೆಗಳಿಗೆ ಪ್ರವಾಸೋದ್ಯಮ ಇಲಾಖೆಯು ಒಂದು ವರ್ಷದ ಅವಧಿಗೆ ಅನುಮತಿ ನೀಡಿದೆ. ಈ ಅನುಮತಿ ಪತ್ರದಲ್ಲಿ ಪರಿಸರ ಸೂಕ್ಷ್ಮ ವಲಯಕ್ಕೆ ಅಡಚಣೆಯಾಗದಂತೆ ನೋಡಿಕೊಳ್ಳಬೇಕು ಎಂಬ ಸ್ಪಷ್ಟ ಷರತ್ತು ವಿಧಿಸಲಾಗಿದೆ. ಆದರೆ, ಅನುಮತಿ ನೀಡುವ ಮುನ್ನ ಈ ಪ್ರದೇಶವು ಅಪರೂಪದ ಕಡಲಾಮೆಗಳ ಸಂತಾನೋತ್ಪತ್ತಿ ತಾಣ ಎಂಬ ಸತ್ಯವನ್ನು ಆಡಳಿತ ಮರೆತಂತಿದೆ. ಇಂದು ಸಂಭವಿಸಿರುವ ಕಡಲಾಮೆಯ ಸಾವು ಈ ನಿರ್ಲಕ್ಷ್ಯದ ನೇರ ಫಲಿತಾಂಶವಾಗಿದೆ.

ಜಿಲ್ಲಾಡಳಿತ ಮತ್ತು ಪ್ರವಾಸೋದ್ಯಮ ಇಲಾಖೆಗೆ ಸಾರ್ವಜನಿಕರು ಈ ಮೊದಲೇ ಮನವಿ ಕೊಟ್ಟಿದ್ದರೂ ಸಹ, ಆ ಮನವಿಯನ್ನು ಬದಿಗಿಟ್ಟು ಇಲಾಖೆಯವರು ರಾತ್ರಿ 9ಗಂಟೆಯ ತನಕ ಫೈರ್ ಕ್ಯಾಂಪ್ ಹಾಕಲು ಅನುಮತಿ ನೀಡಿದ್ದಾರೆ. ಇದು ಕಡಲಾಮೆಗೆ ರಕ್ಷಣೆ ಕೊಟ್ಟಂತಾಯಿತೇ ಅಥವಾ ವಾಣಿಜ್ಯ ಚಟುವಟಿಕೆ ನಡೆಸಲು ಕುಮ್ಮಕ್ಕು ಕೊಟ್ಟಂತಾಯಿತೇ? ಕಡಲಾಮೆಗೆ ತೊಂದರೆಯಾಗುತ್ತಿದೆ ಎಂಬ ಎಚ್ಚರಿಕೆಯ ನಡುವೆಯೂ ವಾಣಿಜ್ಯ ಚಟುವಟಿಕೆಗೆ ಪರ್ಮಿಶನ್ ಕೊಡಲು ಕಾರಣವೇನು ಎಂಬುದು ಸ್ಥಳಿಯರಲ್ಲಿ ಮೀನುಗಾರರಿಗೆ, ಪರಿಸರ ಪ್ರೇಮಿಗಳಿಗೆ ಪ್ರಶ್ನೆ ಮೂಡಿದೆ.



ಕಡಲಾಮೆ ಮೃತ ದೇಹ ಪತ್ತೆ

ಕಡಲತೀರದಲ್ಲಿ ಮೃತ ಕಡಲಾಮೆಯ ದೇಹ ಪತ್ತೆಯಾಗಿದ್ದು, ಇದನ್ನು ಗಮನಿಸಿದ ಸ್ಥಳೀಯ ಮೀನುಗಾರರು ತಕ್ಷಣವೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆಯ ಸಿಬ್ಬಂದಿ ಮತ್ತು ತಜ್ಞರು ಪರಿಶೀಲನೆ ನಡೆಸಿದರು. ಸಾವಿಗೆ ನಿಖರ ಕಾರಣ ತಿಳಿಯಲು ನಿಯಮಾನುಸಾರ ಸ್ಥಳದಲ್ಲೇ ಮರಣೋತ್ತರ ಪರೀಕ್ಷೆ ನಡೆಸಿ, ಬಳಿಕ ಮೃತದೇಹವನ್ನು ಮರಳಿನಲ್ಲಿ ಹೂಳಲಾಯಿತು.

ಇಲಾಖೆಯ ಆದೇಶದಂತೆ ಚಟುವಟಿಕೆಗಳು ರಾತ್ರಿ, 9 ಗಂಟೆಯವರೆಗೆ ಮಾತ್ರ ನಡೆಯಬೇಕು. ಆದರೆ, ರಾತ್ರಿ ವೇಳೆಯ ತೀವ್ರತರದ ಬೆಳಕು ಮತ್ತು ಬೆಂಕಿಯ ಅಬ್ಬರವು ಕಡಲಾಮೆಗಳ ನೈಸರ್ಗಿಕ ಹಾದಿಯನ್ನು ತಪ್ಪಿಸುತ್ತಿವೆ. ಯಾವುದೇ ಸಂದರ್ಭದಲ್ಲಿ ಆಗುವ ತೊಂದರೆ ಅಥವಾ ಅನಾಹುತಗಳಿಗೆ ಸಮಿತಿ ಹೊಣೆಗಾರರಾಗುವುದಿಲ್ಲ ಎಂಬ ಷರತ್ತು ಅಧಿಕಾರಿಗಳಿಗೆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಇರುವ ದಾರಿಯಂತಿದೆ. ಪರಿಸರ ನಾಶವಾದಾಗ ಹೊಣೆ ಹೊರದ ವ್ಯವಸ್ಥೆ ಯಾಕಿರಬೇಕು?

ಅನುಮತಿ ಪತ್ರದ 15ನೇ ನಿಯಮದ ಪ್ರಕಾರ, ಚಟುವಟಿಕೆಯಿಂದ ಸಾರ್ವಜನಿಕ ದೂರು, ಆಕ್ಷೇಪಣೆ ಬಂದಲ್ಲಿ ಜಿಲ್ಲಾಧಿಕಾರಿಗಳಿಗೆ ಅಥವಾ ಉಪ ನಿರ್ದೇಶಕರಿಗೆ ಈ ಅನುಮತಿಯನ್ನು ರದ್ದುಗೊಳಿಸುವ ಸಂಪೂರ್ಣ ಅಧಿಕಾರವಿದೆ. ಇಂದಿನ ಘಟನೆಯು ಕೇವಲ ದೂರು ಮಾತ್ರವಲ್ಲ, ಅದು ಪ್ರಕೃತಿಯೇ ನೀಡುತ್ತಿರುವ ಎಚ್ಚರಿಕೆ. ಜಿಲ್ಲಾಡಳಿತವು ಕೇವಲ ವರಮಾನವನ್ನೇ ಗುರಿಯಾಗಿಸಿಕೊಳ್ಳದೆ, ಪರಿಸರ ಸಮತೋಲನವನ್ನು ಕಾಪಾಡಬೇಕಿದೆ. ಇಲ್ಲವಾದಲ್ಲಿ, 'ಒಂದು ರಾಜ್ಯ ಹಲವು ಲೋಕ' ಎಂಬ ಘೋಷವಾಕ್ಯದ ಪ್ರವಾಸೋದ್ಯಮವು ಅಳಿವಿನಂಚಿನಲ್ಲಿರುವ ಜೀವಿಗಳ ಪಾಲಿಗೆ ಮಸಣವಾಗಿ ಬದಲಾಗುವುದರಲ್ಲಿ ಸಂಶಯವಿಲ್ಲ.

ಗೋಪಾಲಕೃಷ್ಣ ನಾಯಕ ಡಿಸ್ಚಾರ್ಜ್ | ಮಾರ್ಮಿಕ ನುಡಿ

ನೀರಿಗೆ ಪಾಚಿ, ಜಾತಿಗೆ ಜಾತಿಯೇ ವೈರಿ!

ಅಂಕೋಲಾ: ನೀರಿಗೆ ಪಾಚಿಯೇ ವೈರಿ, ಜಾತಿಗೆ ಜಾತಿಯೇ ವೈರಿ ಎಂದು ಇತ್ತೀಚೆಗೆ ಹತ್ಯಾ ಯತ್ನಕ್ಕೆ ಒಳಗಾಗಿದ್ದ ಕೆಪಿಸಿಸಿ ಮಾಜಿ ಕಾರ್ಯದರ್ಶಿ ಗೋಪಾಲಕೃಷ್ಣನಾಯಕಮಾರ್ಮಿಕವಾಗಿ ಪ್ರತಿಕ್ರಿಯಿಸಿದ್ದಾರೆ.

ಶನಿವಾರ ಮಣಿಪಾಲ ಆಸ್ಪತ್ರೆಯಿಂದ ಬಿಡುಗಡೆಗೊಂಡು ಅಂಕೋಲಾ ಬಂದ ಅವರು ಕಣಕಣೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ಮಾಧ್ಯಮ ಪ್ರತಿನಿಧಿಗಳು, ನಿಮಗೆ ಯಾರ ಮೇಲಾದರೂ ಸಂಶಯ ಇದೆಯೇ... ಎಂಬ ಪ್ರಶ್ನೆಗೆ ಈ ರೀತಿ ಮಾರ್ಮಿಕ ಉತ್ತರ ನೀಡಿದರು.

ಕೊಲ್ಲಲು ನೂರು ಜನ ಇದ್ದಾಗ ಮೇಲೊಬ್ಬ ಕಾಯುವವನೂ ಇರುತ್ತಾನೆ. ದೇವರ ಮತ್ತು ಜನರ ಆಶೀರ್ವಾದದಿಂದ ಬದುಕಿ ಬಂದಿದ್ದೇನೆ ಎಂದು ಭಾವುಕವಾಗಿ ನುಡಿದರು.ಪೊಲೀಸ್ ತನಿಖೆಯ ಮೇಲೆ ನೂರಕ್ಕೆ ನೂರು ವಿಶ್ವಾಸ ಇದೆ. ತನಿಖೆ ಸರಿಯಾಗಿ ಸಾಗಿದ್ದು ಶೀಘ್ರ ಸತ್ಯ ಹೊರ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತನಿಖೆ ಚುರುಕು: ಗೋಪಾಲಕೃಷ್ಣ ನಾಯಕ ಹತ್ಯೆಗೆ ಯತ್ನಿಸಿರುವ ಘಟನೆಗೆ ಸಂಬಂಧಿಸಿದಂತೆ ಉತ್ತರ ಕನ್ನಡ ಜಿಲ್ಲಾ ಪೊಲೀಸರಿಗೆ ಮಹತ್ವಪೂರ್ಣ ಮಾಹಿತಿ ಲಭ್ಯವಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನಿಬ್ಬರು ಆರೋಪಿಗಳನ್ನು ಪೊಲೀಸರ ವಿಶೇಷ ತಂಡ ಬಂಧಿಸಿ ಕರೆ ತಂದು ವಿಚಾರಣೆ ನಡೆಸುತ್ತಿರುವ ಮಾಹಿತಿ ಇದೆ. ಈ ಪ್ರಕರಣದ ಪ್ರಮುಖ ಆರೋಪಿ ಇಮಾಮ್ ಸೇರಿದಂತೆ ಇನ್ನಷ್ಟು ಜನರ ಬಂಧನದತ್ತ ಎಲ್ಲರ ದೃಷ್ಟಿ ನೆಟ್ಟಿದೆ.ಗೋಪಾಲಕೃಷ್ಣ ಅವರ ಹತ್ಯೆಗೆ ಸಾಕಷ್ಟು ಪೂರ್ವಯೋಜನೆ ರೂಪಿಸಲಾಗಿತ್ತೆ? ಎನ್ನುವ ಕುರಿತಂತೆ ತೀವ್ರ ತನಿಖೆ ಸಾಗಿದ್ದು ಬೇರೆ ಬೇರೆ ಆಯಾಮಗಳಿಂದ ಬಂಧಿತರ ವಿಚಾರಣೆ ನಡೆಸಲಾಗುತ್ತಿದೆ.ದುಷ್ಕರ್ಮಿಗಳು ತಮ್ಮ ಕೃತ್ಯದಲ್ಲಿ ವಿಫಲರಾಗಿ ವೆಂಕಟರಮಣ ದೇವಾಲಯದ ಎದುರಿನ ಕಾಲುದಾರಿಯಲ್ಲಿ ತಾವು ತಂಗಿದ್ದ ಹೋಟೆಲ್ ಕಡೆ ತೆರಳುತ್ತಿದ್ದ ಸಂದರ್ಭದಲ್ಲಿ ಬಿಳಿ ಶರ್ಟ್ ಧರಿಸಿದ ವ್ಯಕ್ತಿಯೋರ್ವ ಅವರನ್ನು ತರಾಟೆಗೆ ತೆಗೆದುಕೊಂಡ ದೃಶ್ಯಗಳು ಸಿಸಿ ಟಿವಿಯಲ್ಲಿ ಸೆರೆಯಾಗಿದ್ದು, ಆರೋಪಿತರು ತಂಗಿದ್ದ ಹೋಟೆಲ್ ಎದುರು ಅದೇ ವ್ಯಕ್ತಿ ಆರೋಪಿತರಿಗೆ ಏನನ್ನೋ ನೀಡುತ್ತಿರುವಂತೆ ದೃಶ್ಯಾವಳಿಗಳೂ ಲಭಿಸಿವೆ. ಬಿಳಿ ಶರ್ಟ್ ಗಡ್ಡದಾರಿ ವ್ಯಕ್ತಿಯ ಸೂಚನೆಯಂತೆ ದುಷ್ಕರ್ಮಿಗಳು ಕೆಲಸ ಮಾಡುತ್ತಿದ್ದರೇ? ಆತನೇ ಸುಪಾರಿ ಪಡೆದ ವ್ಯಕ್ತಿಯೇ ಅಥವಾ ಯಾವುದೋ ಗ್ಯಾಂಗಿನ ಪರವಾಗಿ ಕೆಲಸ ಮಾಡುತ್ತಿದ್ದನೇ ಎನ್ನುವುದು ತನಿಖೆಯಿಂದ ತಿಳಿದು ಬರಬೇಕಿದೆ.ಇನ್ನೂ ಈ ಪ್ರಕರಣದ ಪ್ರಮುಖ ಆರೋಪಿ ಇಮಾಮ್ ಎಂಬಾತ ಇದುವರೆಗೆ ಸಿಗದಿರುವುದು ಆತನ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.



ಗೋಪಾಲಕೃಷ್ಣ ನಾಯಕ ಹತ್ಯೆಗೆ ಯತ್ನ: ಪ್ರಕರಣಕ್ಕೆ ಜಿಲ್ಲಾ ಕಾಂಗ್ರೆಸ್ ಖಂಡನೆ

ಅಂಕೋಲಾ: ಕಾಂಗ್ರೆಸ್ ಮುಖಂಡ ಗೋಪಾಲಕೃಷ್ಣ ನಾಯಕ ಅವರ ಮೇಲೆ ನಡೆದ ಹತ್ಯೆಗೆ ಯತ್ನ ಪ್ರಕರಣವನ್ನು ಜಿಲ್ಲಾ ಕಾಂಗ್ರೆಸ್ ತೀವ್ರವಾಗಿ ಖಂಡಿಸಿದೆ.



ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಾಯಿ ಗಾಂವಕರ ಅವರು ಮಾಧ್ಯಮದ ಎದುರು ಮಾತನಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಬಂಧಿಸಿರುವ ಆರೋಪಿಗಳ ಜೊತೆ ತಲೆಮರೆಸಿಕೊಂಡಿರುವ ಇತರ ದುಷ್ಕರ್ಮಿಗಳನ್ನು ಕೂಡ ಶೀಘ್ರವೇ ಪತ್ತೆಹಚ್ಚಿ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಪೊಲೀಸ್ ಇಲಾಖೆಗೆ ಆಗ್ರಹಿಸಿದರು.

ಇಂತಹ ದಾಳಿಗಳು ಸಮಾಜದಲ್ಲಿ ಭೀತಿ ಉಂಟುಮಾಡುವುದಲ್ಲದೆ, ಕಾನೂನು ಸುವ್ಯವಸ್ಥೆಗೆ ಸವಾಲು ಎತ್ತುತ್ತವೆ ಎಂದು ಅವರು ಹೇಳಿದರು. ರಾಜಕೀಯ ನಾಯಕರ ಮೇಲೆ ನಡೆಯುವ ದೌರ್ಜನ್ಯಗಳು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆ ತರುತ್ತವೆ ಎಂಬುದನ್ನೂ ಅವರು ಉಲ್ಲೇಖಿಸಿದರು.

ಪ್ರಕರಣದ ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಯಬೇಕು ಮತ್ತು ಯಾರೇ ಭಾಗಿಯಾಗಿದ್ದರೂ ಕಾನೂನು ಕ್ರಮಕ್ಕೆ ಒಳಪಡಿಸಬೇಕು ಎಂದು ಒತ್ತಾಯಿಸಿದರು. ಇದೇ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಹಾಗೂ ಹಿರಿಯ ರಾಜಕಾರಣಿ, ಶಾಸಕ ಆರ್.ವಿ.ದೇಶಪಾಂಡೆ ಅವರು ಕೂಡ ಘಟನೆಯನ್ನು ಖಂಡಿಸಿರುವುದಾಗಿ ಸಾಯಿ ಗಾಂವಕರ ತಿಳಿಸಿದರು. ಆರೋಪಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂಬುದು ಅವರ ಆಗ್ರಹವಾಗಿದೆ. ಘಟನೆ ಹಿನ್ನೆಲೆ ಅಂಕೋಲಾ ಪ್ರದೇಶದಲ್ಲಿ ಆತಂಕದ ವಾತಾವರಣ ಮುಂದುವರೆದಿದ್ದು, ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ನವೀನ ನಾಯ್ಕಗೆ ಮುಖ್ಯಮಂತ್ರಿ ಪದಕ



ಭಟ್ಕಳ: ಇಲ್ಲಿನ ನಗರ ಠಾಣೆಯ ಪಿಎಸ್ಐ ನವೀನ್ ಎಸ್.ನಾಯ್ಕಅವರನ್ನು ರಾಜ್ಯ ಸರ್ಕಾರದಿಂದ 2025ನೇ ಸಾಲಿನ ಮುಖ್ಯ ಮಂತ್ರಿ ಬಂಗಾರದ ಪದಕ್ಕೆ ಆಯ್ಕೆ ಮಾಡಲಾಗಿದೆ. ಮಾದಕದ್ರವ್ಯ ಪ್ರಕರಣಗಳನ್ನು ಒಳಗೊಂಡಂತೆ ಹಲವು ಗಂಭೀರ ಅಪರಾಧ ಪ್ರಕರಣಗಳನ್ನು ಯಶಸ್ವಿಯಾಗಿ ಭೇದಿಸಿ ಸೇವಾ ದಕ್ಷತೆ ತೋರಿದ ಹಿನ್ನೆಲೆಯಲ್ಲಿ ಈ ಗೌರವ ಅವರಿಗೆ ಲಭಿಸಿದೆ. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಅವರ ಮುತುವರ್ಜಿ ಹಾಗೂ ಸುದೀರ್ಘ ಕಾಲದ ಈ ಸೇವೆಯನ್ನು ಗುರುತಿಸಿ ಸರ್ಕಾರ ಈ ಪ್ರಶಸ್ತಿಗೆ ಆಯ್ಕೆ ಮಾಡಿದೆ

ಸಾಹಿತ್ಯದ ಅಭಿರುಚಿ ಬೆಳೆಸಿಕೊಳ್ಳಿ: ಶ್ರೀಗಳು

ಹೊನ್ನಾವರ: ಸಾಹಿತ್ಯ ಕಾರ್ಯಕ್ರಮಗಳು ವೇದಿಕೆಗೆ ಸೀಮಿತವಾಗದೆ ಪ್ರತಿಯೊಬ್ಬರ ಜೀವನದಲ್ಲಿ ಆಧ್ಯಾತ್ಮಿಕ, ಸಾಮಾಜಿಕ, ವೈಯಕ್ತಿಕ ಜೀವನದಲ್ಲಿ ಜವಾಬ್ದಾರಿಯನ್ನು ಹೆಚ್ಚುಸುವ ಕಾರ್ಯಕ್ರಮವಾಗಿ ಮಾರ್ಪಡಬೇಕು ಎಂದು ಬೆಂಗಳೂರು ಓಂಕಾರ ಆಶ್ರಮ ಮಹಾ ಸಂಸ್ಥಾನದ ಶ್ರೀ ಸ್ವಾಮಿ ಡಾ. ಮಧುಸೂದನಂದಪುರಿ ಅವರು ಸಲಹೆ ನೀಡಿದರು.

ಅವರು ತಾಲೂಕಿನ ಗೇರುಸೊಪ್ಪ ಕ್ಷೇತ್ರ ಬಂಗಾರಮಕ್ಕಿ ವೀರಾಂಜನೇಯ ದೇವಸ್ಥಾನದಿಂದ ನಡೆಯುತ್ತಿರುವ ಸಂಸ್ಕೃತಿ ಕುಂಭ - ಮಲೆನಾಡ ಉತ್ಸವ- 2026 ಇದರ ಎರಡನೇ ದಿನವಾದ ಶನಿವಾರ ಬೆಳಗ್ಗೆ ನಡೆದ ಸಾಹಿತ್ಯೋತ್ಸವ ಸಮಾರಂಭದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದರು. ಪುಸ್ತಕಗಿಂತ ಉತ್ತಮವಾದ ಸ್ನೇಹಿತ ಬೇರೊಂದಿಲ್ಲ, ಸಾಹಿತ್ಯದೊಂದಿಗೆ ನಾವು ಬೆರೆತಾಗ ಸಜ್ಜನ ವ್ಯಕ್ತಿತ್ವ ರೂಪಿಸುವುದರ ಜೊತೆಗೆ ಸಮಾಜದಲ್ಲಿ ಗೌರವವನ್ನು ಪಡೆದುಕೊಳ್ಳವುದು. ಜೊತೆಗೆ ಸಾಹಿತ್ಯ ಅಭಿರುಚಿಯನ್ನು ಬೆಳೆಸುವುದರ ಮೂಲಕ ನಾಡು ನುಡಿಯನ್ನು ಉಳಿಸಿ ಬೆಳೆಸುವ ಕೆಲಸವೂ ನಡೆಯುತ್ತದೆ ಎಂದರು. ಶಿವಮೊಗ್ಗ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ವಿನಯಾನಂದ ಸರಸ್ವತಿ ಅವರು ಮಾತನಾಡಿ, ಸಾಹಿತ್ಯ ಜನರ ಮಧ್ಯೆ ಸತ್ಯ ಮತ್ತು ಜಾಗೃತಿಯನ್ನು ಮೂಡಿಸಬೇಕು. ಸಾಹಿತ್ಯ ಮತ್ತು ಆಧ್ಯಾತ್ಮಿಕತೆ ಒಂದೇ ಆಗಿವೆ. ಸಾಹಿತ್ಯ, ಸಂಗೀತ, ಕಲೆ ಮಾನವರ ಹಿತಕ್ಕಾಗಿ ಇದ್ದು, ಅವು ಮಾನವರಿಗೆ ಒಳಿತನ್ನು ಬಯಸುತ್ತದೆ ಎಂದರು. ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ ಛಲವಾದಿ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಮಾಸ್ಕೇರಿ ಎಂ.ಕೆ.ನಾಯಕ್ ದಾಂಡೇಲಿ, ಡಾ. ಜಿ.ಜಿ.ಹೆಗಡೆ ಬಾಳಗೋಡ ಸುಮುಖಾನಂದ ಜಲವಳ್ಳಿ, ಯಕ್ಷಗಾನ ಕಲಾವಿದ ಶಿವಾನಂದ ಹೆಗಡೆ ಕೆರೆಮನೆ, ಡಾ. ಆರ್.ಜಿ.ಗುಂದಿ ಅಂಕೋಲ, ಕೆ.ಟಿ. ಶ್ರೀಮತಿ ಮೈಸೂರು, ಪ್ರೊ.ಫಾಲ್ಗುಣ ಗೌಡ ಅಂಕೋಲ, ನಿವೃತ್ತ ಉಪನ್ಯಾಸಕ ಸುರೇಶ್ ಕಡೆಮನೆ ಮಾತನಾಡಿದರು. ವೀರಾಂಜನೇಯ ಶತಕ, ಹಾಡಿನ ಪಟ್ಟಿ, ಅಕ್ಷರೋಪಾಯನ, ಭಾರತ ರತ್ನಗಳು ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು. ಕ್ಷೇತ್ರ ಬಂಗಾರಮಕ್ಕಿಯಿಂದ ಪ್ರತೀ ವರ್ಷ ಸಾಧಕರಿಗೆ ನೀಡುವ ಜಾನಪದ ಪ್ರಶಸ್ತಿಯನ್ನು ಪ್ರೊ.ಫಾಲ್ಗುಣ ಗೌಡ ಅಂಕೋಲ ಅವರಿಗೆ ನೀಡಿ ಗೌರವಿಸಲಾಯಿತು. ಅನುಸೂಯಾ ಜಹಗೀರದಾರ ಕೊಪ್ಪಳ, ನಾಗರತ್ನ ಲೋಕೇಶ, ಚಿತ್ರನಟ ಪ್ರೇಮಾನಂದ ಗವಾಸ ಉಪಸ್ಥಿತರಿದ್ದರು. ನಿವೃತ್ತ ಪ್ರಾಂಶುಪಾಲ ಗಣಪತಿ ಹೆಗಡೆ ಸ್ವಾಗತಿಸಿದರು. ಭರತ್ ಶಂಖನಾದ ಗೈದರು. ಶೈಲೇಶ್, ಭಾರತಿ, ಸೌಮ್ಯ ಅವರು ಕಾರ್ಯಕ್ರಮ ನಿರೂಪಿಸಿದರು.



ರಕ್ತದಾನ ಶ್ರೇಷ್ಠದಾನ: ಡಾ.ಆರ್.ಡಿ.ಜನಾರ್ದನ್

ಯಲ್ಲಾಪುರ: ಪ್ರತಿಯೊಬ್ಬ ವ್ಯಕ್ತಿಯು ರಕ್ತದಾನ ಮಾಡುವ ಮೂಲಕ ಮತ್ತೊಂದು ಜೀವ ಉಳಿಸುವ ಪುಣ್ಯದ ಕೆಲಸದಲ್ಲಿ ಭಾಗಿಯಾಗಬೇಕು. ಯುವಜನತೆ ಇಂತಹ ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಾಗ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಆರ್.ಡಿ.ಜನಾರ್ದನ್ ಹೇಳಿದರು.

ಅವರು ಶನಿವಾರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಯೂತ್ ರೆಡ್ ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಕ್ರಿಯೇಟಿವ್ ಕಂಪ್ಯೂಟರ್ ಇನ್‌ಸ್ಟಿಟ್ಯೂಟ್ ಇವರ ಸಹಯೋಗದಲ್ಲಿ, ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ ಇವರ ತಾಂತ್ರಿಕ ಸಹಕಾರದೊಂದಿಗೆ ಹಮ್ಮಿಕೊಳ್ಳಲಾಗಿದ್ದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು .

ಕ್ರಿಯೇಟಿವ್ ಕಂಪ್ಯೂಟರ್ಸ್‌ನ ನಿರ್ದೇಶಕ ಶ್ರೀನಿವಾಸ್ ಮುರ್ಡೇಶ್ವರ ಮಾತನಾಡಿ, ಶಿಕ್ಷಣದ ಜೊತೆಗೆ ಸಮಾಜಮುಖಿ ಕಾರ್ಯಗಳನ್ನು ಮಾಡುವುದು ನಮ್ಮ ಉದ್ದೇಶವಾಗಿದೆ. ಇಂದಿನ ದಿನಗಳಲ್ಲಿ ಅಪಘಾತಗಳು ಹಾಗೂ ತುರ್ತು ಚಿಕಿತ್ಸೆಗಳ ಸಂದರ್ಭದಲ್ಲಿ ರಕ್ತದ ಕೊರತೆಯಿಂದ ಎಷ್ಟೋ ಜೀವಗಳು ಅಪಾಯಕ್ಕೆ ಸಿಲುಕುತ್ತಿವೆ. ಅಂತಹ ಸಂದರ್ಭಗಳಲ್ಲಿ ಈ ಶಿಬಿರದ ಮೂಲಕ ಸಂಗ್ರಹವಾಗುವ ರಕ್ತವು ಆಸರೆಯಾಗಲಿದೆ ಎಂದರು.

ಕಿಮ್ಸ್‌ನ ವೈದ್ಯಕೀಯ ಅಧಿಕಾರಿ ಡಾ.ಮಾಲಿನಿ ಅವರು ರಕ್ತದಾನದ ಕುರಿತಾದ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ, ರಕ್ತದಾನ ಮಾಡುವುದರಿಂದ ಆರೋಗ್ಯದ ಮೇಲಾಗುವ ಧನಾತ್ಮಕ ಪರಿಣಾಮಗಳ ಕುರಿತು ಮಾಹಿತಿ ನೀಡಿದರು. ಸಂಚಾಲಕ ಡಾ.ಓಂ ಪ್ರಕಾಶ್ ನಾಯಕ್ ಮಾತನಾಡಿದರು. ಯೂತ್ ರೆಡ್ ಕ್ರಾಸ್ ಸಂಚಾಲಕ ಡಾ.ರವಿ ಶೇಷಗಿರಿ ಸ್ವಾಗತಿಸಿ, ವಂದಿಸಿದರು. ಕಿಮ್ಸ್ ಆಸ್ಪತ್ರೆಯ ನುರಿತ ತಜ್ಞರ ತಂಡವು ಮೇಲ್ವಿಚಾರಣೆಯಲ್ಲಿ ರಕ್ತ ಸಂಗ್ರಹಣೆ ಮಾಡಿದರು. ರಕ್ತದಾನ ಮಾಡಿದ ಪ್ರತಿಯೊಬ್ಬರಿಗೂ ಪ್ರಶಂಸಾ ಪತ್ರ ವಿತರಿಸಲಾಯಿತು.



ಮಾ.30, ಏ.2ಕ್ಕೆ ಕಾಳಮ್ಮ ದೇವಿ ಪ್ರತಿಷ್ಠಾನ ಮಹೋತ್ಸವ

ಅಂಕೋಲಾ: ವಿಶ್ವಕರ್ಮ ಸಮಾಜದ ಆರಾಧ್ಯ ದೇವಿ ತಾಲೂಕಿನ ಶೇಡಗೇರಿ ಲಕ್ಷ್ಮೇಶ್ವರದ ಶ್ರೀಮಹಾಕಾಳಿ ಕಾಳಮ್ಮ ದೇವಿಯ ದೇವಾಲಯದ ನೂತನ ಕಟ್ಟಡ ಗರ್ಭಗುಡಿಯ ದೈವಾರ್ಪಣೆ ದೇವಿಯ ಶಿಲಾವಿಗ್ರಹದ ಅಷ್ಟಬಂಧ ಬ್ರಹ್ಮಕಲಶ ಪೂರ್ವಕ ಪ್ರತಿಷ್ಠಾಪನಾ ಮಹೋತ್ಸವ ಏ. 2ರಂದು ಬೆಳಗ್ಗೆ 11 ಗಂಟೆಯಿಂದ ಮಿಥುನ ಲಗ್ನ ಮುಹೂರ್ತದಲ್ಲಿ ಜಗದ್ಗುರು ಆನೆಗುಂದಿ ಮಹಾಸಂಸ್ಥಾನದ ಪೀಠಾಧೀಶ ಕಾಳಹಸ್ತೇಂದ್ರ ಸರಸ್ವತಿ ಶ್ರೀಗಳ ದಿವ್ಯ ಉಪಸ್ಥಿತಿಯಲ್ಲಿ ನಡೆಯಲಿದೆ.

ದೇವಿಯ ಪ್ರತಿಷ್ಠಾನ ಮಹೋತ್ಸವದ ಅಂಗವಾಗಿ ಧಾರ್ಮಿಕ ಕಾರ್ಯಕ್ರಮಗಳು ಮಾ.30ರಿಂದ ಏ. 3ರವರೆಗೆ ಐದು ದಿನಗಳ ಕಾಲ ಆನೆಗುಂದಿ ಮಹಾಸಂಸ್ಥಾನದ ಪುರೋಹಿತ ವೇದಮೂರ್ತಿ ಅಕ್ಷಯ ಶರ್ಮ ಅವರ ಪ್ರಧಾನ ಆಚಾರ್ಯತ್ವದಲ್ಲಿ ದೇವಾಲಯದ ಪ್ರಧಾನ ಅರ್ಚಕ ಶ್ರೀಹರ್ಷ ಮತ್ತು ಆನೆಗುಂದಿ ಮಹಾಸಂಸ್ಥಾನದ ವೈದಿಕರ ಉಪಸ್ಥಿತಿಯಲ್ಲಿ ನಡೆಯಲಿದ್ದು, ಮಾ. 30ರಂದು ಸಂಜೆ ಶಿಲ್ಪಿಪೂಜೆ, ವಿಶ್ವಕರ್ಮ ಪೂಜೆ, ತೋರಣ ಮುಹೂರ್ತ, ಗುರುಗಣಪತಿ ಪೂಜೆ ಪುಣ್ಯಾಹ ವಾಚನ, ಅಘೋರ ಹೋಮ, ಸುದರ್ಶನ ಹೋಮ ಮೊದಲಾದ ಧಾರ್ಮಿಕ ಕಾರ್ಯಕ್ರಮ ನೆರವೇರಲಿವೆ.



ಮಾ. 31ರಂದು ದ್ವಾದಶ ನಾರಿಕೇಳ ಗಣಯಾಗ, ರುದ್ರಹೋಮ, ವಿಶ್ವಕರ್ಮ ಯಾಗ ನಡೆಯಲಿದ್ದು, ಏ. 1ರಂದು ನವಗ್ರಹ ಹೋಮ, ಮಹಾ ಮೃತ್ಯುಂಜಯ ಹೋಮ, ಕಲಶಾರಾಧನೆ, ಅಧಿವಾಸ ಹೋಮ ನಡೆಯಲಿದ್ದು, ಏ. 2ರಂದು ಆನೆಗುಂದಿ ಶ್ರೀಗಳು ಆಗಮಿಸಿ ದೇವಾಲಯದ ನೂತನ ಗರ್ಭಗುಡಿಯಲ್ಲಿ ಮಹಾಕಾಳಿ ದೇವಿಯ ಮೂರ್ತಿ ಪ್ರತಿಷ್ಠಾಪನೆ ಅಷ್ಟಬಂಧ ಕಾರ್ಯಕ್ರಮ ನೆರವೇರಿಸಲಿದ್ದಾರೆ.ಅಂದು ಮಧ್ಯಾಹ್ನ ಮಹಾ ಪೂಜೆಯ ನಂತರ 1 ಗಂಟೆಯಿಂದ ಅನ್ನ ಸಂತರ್ಪಣೆ ನಡೆಯಲಿದೆ.ಏ. 3ರಂದು ಬೆಳಗ್ಗೆ ವೃಷಭ ಲಗ್ನ ಮುಹೂರ್ತದಲ್ಲಿ ಬ್ರಹ್ಮ ಕುಂಭಾಬಿಷೇಕ ನಡೆಯಲಿದ್ದು, ನಂತರ ನವಚಂಡಿ ಹೋಮ, ಪೂರ್ಣಾಹುತಿ, ದೇವಿಯ ಮಹಾಪೂಜೆ ಮತ್ತು ಅನ್ನ ಸಂತರ್ಪಣೆ, ಸಂಜೆ 5.30 ಗಂಟೆಗೆ ರಂಗಪೂಜೆ, ಪಲ್ಲಕಿ ಉತ್ಸವ, ಅಷ್ಟಾವಧಾನ ಸೇವೆ, ಪ್ರಸಾದ ವಿತರಣೆ, ಫಲಾವಳಿಗಳ ಸವಾಲು ನಡೆಯಲಿವೆ.

ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಹಕಾರ ನೀಡುವಂತೆ ಸಂಘಟಕರು ಕೋರಿದ್ದಾರೆ.

ಏ. 2ರಂದು ಸಂಜೆ ಆನೆಗುಂದಿ ಮಹಾಸಂಸ್ಥಾನದ ಪೀಠಾಧೀಶ ಕಾಳಹಸ್ತೇಂದ್ರ ಸರಸ್ವತಿ ಸ್ವಾಮಿಗಳ ಉಪಸ್ಥಿತಿಯಲ್ಲಿ ಧಾರ್ಮಿಕ ಸಭೆ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಹಾಕಾಳಿ ದೇವಾಲಯದ ಮೊಕ್ತೇಸರ ದತ್ತಾ ಆಚಾರಿ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಕೇರಳದ ಅಷ್ಟಮಂಗಲ ಜ್ಯೋತಿಷಿ ವಿಷ್ಣುಪ್ರಸಾದ ಹೆಬ್ಬಾರ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರುಗಳಾದ ಸತೀಶ ಸೈಲ್, ದಿನಕರ ಶೆಟ್ಟಿ, ಶಿವರಾಮ ಹೆಬ್ಬಾರ, ಭೀಮಣ್ಣ ನಾಯ್ಕ, ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನಮೂರ್ತಿ, ಮಾಜಿ ಶಾಸಕಿ ರೂಪಾಲಿ ನಾಯ್ಕ, ವಿಧಾನ ಪರಿಷತ್ತಿನ ಮಾಜಿ ಸದಸ್ಯ ರಘು ಆಚಾರ್, ಸ್ಪಂದನ ಫೌಂಡೇಶನ್ ಅಧ್ಯಕ್ಷ ಗೋಪಾಲಕೃಷ್ಣ ನಾಯಕ ಪಾಲ್ಗೊಳ್ಳಲಿದ್ದು ವಿಶ್ವಕರ್ಮ ಸಮಾಜದ ಪ್ರಮುಖ ಮಿಲಿಂದ ಆಚಾರ್ಯ ಹಾರವಾಡ, ಪತ್ರಕರ್ತ ವಿಠ್ಠಲದಾಸ ಕಾಮತ, ಸಂತೋಷ ಆಚಾರ್ಯ ಯಲ್ಲಾಪುರ, ವಿ.ಶ್ರೀಧರ ಆಚಾರ್ಯ ಕಟಪಾಡಿ, ಪ್ರದೀಪ ಆಚಾರ್ಯ ಸಿದ್ದಾಪುರ, ನಾಗರಾಜ ಆಚಾರ್ಯ ವನಳ್ಳಿ ಅವರ ಉಪಸ್ಥಿತಿ ಇರಲಿದೆ.

ಮನರಂಜನಾ ಕಾರ್ಯಕ್ರಮಗಳು

ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮಗಳು ನಡೆಯಲಿದ್ದು, ಏ.1ರಂದು ರಾತ್ರಿ ಸಾಮಾಜಿಕ ನಾಟಕ ಪ್ರದರ್ಶನ, ಏ. 2ರಂದು ಸಂತೋಷ ಆಚಾರಿ ಶಿರಸಿ ತಂಡದಿಂದ ರಸಮಂಜರಿ, ಏ. 3ರಂದು ಸುಪ್ರಸಿದ್ಧ ಕಲಾವಿದರ ಕೂಡುವಿಕೆಯಲ್ಲಿ ಮಹಿಷ ಮರ್ದಿನಿ ಯಕ್ಷಗಾನ ಪ್ರದರ್ಶನ ನಡೆಯಲಿದೆ.

ಪ್ರವಾಸಿಗರಿಗೆ ಸೇವೆ ನೀಡಲು ಸಜ್ಜಾದ ಎಸೆನ್ಷಿಯಾ ಗ್ರೂಪ್

ಶಿರಸಿ: ಪ್ರವಾಸೋದ್ಯಮ ದೃಷ್ಟಿಯಿಂದ ಉಕ ಅತ್ಯುತ್ತಮವಾಗಿದ್ದು, ಇಲ್ಲಿನ ಪ್ರವಾಸಿ ತಾಣಗಳನ್ನು ವೈಭವೀಕರಿಸುವುದರೊಂದಿಗೆ ಉಕ ಸಂಸ್ಕೃತಿ, ಸಾಂಪ್ರದಾಯಿಕವನ್ನು ಉಳಿಸಿಕೊಂಡು ಪ್ರವಾಸಿಗರಿಗೆ ಅನುಕೂಲವಾಗುವಂತೆ ಶಿರಸಿಯಲ್ಲಿ ತನ್ನ ನೂತನ 'ಎಸೆನ್ಷಿಯಾ ರೆಸಾರ್ಟ್ ಮತ್ತು ಸ್ಪಾ' ಮೂಲಕ ಸೇವೆ ನೀಡಲು ಸಜ್ಜಾಗಿದೆ ಎಂದು ಎಸೆನ್ಷಿಯಾ ಗ್ರೂಪ್ ಆಫ್ ಹೋಟೆಲ್ಸ್ ಮತ್ತು ರೆಸಾರ್ಟ್ಸ್‌ನ ಸಿಇಒ ಮೊಹಮ್ಮದ್ ಪರ್ವೇಜ್ ಮಾಹಿತಿ ನೀಡಿದರು.

ತಾಲೂಕಿನ ಎಕ್ಕಂಬಿ ಬಳಿಯ ಎಸೆನ್ಷಿಯಾ ರೆಸಾರ್ಟ್ ಅಂಡ್ ಸ್ಪಾದಲ್ಲಿ ಆಯೋಜಿಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಕೃತಿಯ ಶಾಂತತೆ ಮತ್ತು ಉದ್ಭುತವಿನ್ಯಾಸದದಲ್ಲಿ ನಿರ್ಮಾಣವಾದ ಈ ರೆಸಾರ್ಟ್, ಪ್ರವಾಸಿಗರಿಗೆ ಒಂದು ವಿಶಿಷ್ಟ ಅನುಭವವನ್ನು ನೀಡಲು ಸಜ್ಜಾಗಿದೆ.

ಮಲೆನಾಡಿದ ಸಾಂಪ್ರದಾಯಿಕ ಆತಿಥ್ಯದೊಂದಿಗೆ ಸೇವೆ ನೀಡಲಿದೆ. ಉಕ ಹಸಿರು ಸಿರಿಯ ನಡುವೆ ನೆಲೆಸಿರುವ ಈ ತಾಣವು ಆರಾಮದಾಯಕ ಮತ್ತು ಸೊಗಸಾದ ವಾಸ್ತವ್ಯಕ್ಕೆ ಹೇಳಿ ಮಾಡಿಸಿದಂತಿದೆ. ಪ್ರಕೃತಿಯ ಮಡಿಲಲ್ಲಿ ವಿಶ್ರಾಂತಿ ಬಯಸುವವರಿಗಾಗಿ ಇಲ್ಲಿ ಆಧುನಿಕ ಸೌಲಭ್ಯ ಹೊಂದಿರುವ 40 ಐಷಾರಾಮಿ ಕೊಠಡಿಗಳು ಮತ್ತು ಸೂಟ್‌ಗಳಿವೆ. ಎಸೆನ್ಷಿಯಾ ಸಮೂಹದ ವಿಶಿಷ್ಟ ಶೈಲಿಯಲ್ಲಿ ವಿನ್ಯಾಸಗೊಳಿಸಲಾದ ಪ್ರತಿಯೊಂದು ಜಾಗವೂ ಅತಿಥಿಗಳಿಗೆ ಆಪ್ತತೆಯ ಅನುಭವ ನೀಡುತ್ತದೆ ಎಂದರು.



ನಗರಗಳ ಮೇಲೆ ಹೆಚ್ಚಿನ ಗಮನ ಹರಿಸುತ್ತಿರುವ ಎಸೆನ್ಷಿಯಾ, ಪ್ರವಾಸೋದ್ಯಮದ ಅಗಾಧ ಸಾಧ್ಯತೆಗಳಿರುವ ಪ್ರದೇಶಗಳಲ್ಲಿ ತನ್ನ ಅಭಿವೃದ್ಧಿ ಯೋಜನೆಗಳನ್ನು ಮುಂದುವರಿಸುತ್ತಿದೆ. ಪ್ರಾದೇಶಿಕ ಪ್ರವಾಸೋದ್ಯಮವನ್ನು ಉತ್ತೇಜಿಸುವ ಮತ್ತು ಮೆಟ್ರೋ ನಗರಗಳ ಆಚೆಗೂ ಬ್ರ್ಯಾಂಡ್ ಅನ್ನು ಬಲಪಡಿಸುವ ಉದ್ದೇಶದಿಂದ ಶಿರಸಿ, ನಾಗ್ಪುರ ಮತ್ತು ಸಕಲೇಶಪುರಗಳಲ್ಲಿ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದು ರಾಷ್ಟ್ರೀಯ ಮಟ್ಟದಲ್ಲಿ ಬ್ರ್ಯಾಂಡ್‌ನ ಸ್ಥಾನಮಾನವನ್ನು ಗಟ್ಟಿಗೊಳಿಸುವ ಗುರಿಯನ್ನು ಹೊಂದಿದೆ ಎಂದರು.ಓಂಕಾರ್ ಜಂಗಲ್ ರೆಸಾರ್ಟ್ ಮಾಲೀಕ ರವಿ ಪೂಜಾರಿ, ಎಸೆನ್ಷಿಯಾ ಗ್ರೂಪ್‌ನ ಕಾರ್ತಿಕೇಯನ್, ಜನರಲ್ ಮ್ಯಾನೇಜರ್ ಪ್ರತಾಪ್ ಮತ್ತಿತರರು ಇದ್ದರು.

ಕಿರುಸುದ್ದಿ

ಎಸ್ಸೆಸ್ಸೆಲ್ಸಿ ತೃತೀಯ ಭಾಷೆ ಪರೀಕ್ಷೆ ಮಾ.31ಕ್ಕೆ ಮುಂದೂಡಿಕೆ

ಹಾವೇರಿ: ಭಗವಾನ್ ಮಹಾವೀರ ಜಯಂತಿ ಪ್ರಯುಕ್ತ ಘೋಷಿಸಲಾಗಿರುವ ಸಾರ್ವತ್ರಿಕ ರಜಾ ದಿನವನ್ನು ಮಾ.31ರ ಬದಲಾಗಿ ಮಾ.30ರಂದು ಮಾರ್ಪಡಿಸಿ ಆದೇಶಿಸಲಾಗಿದ್ದು, ಮಾ.30ರ ಎಸ್ಸೆಸ್ಸೆಲ್ಸಿ ತೃತೀಯ ಭಾಷೆ ಪರೀಕ್ಷೆ ಮಾ.31ರಂದು ನಡೆಯಲಿದೆ. ಉಳಿದ ವಿಷಯಗಳ ಪರೀಕ್ಷೆಗಳು ವೇಳಾಪಟ್ಟಿಯಂತೆ ನಡೆಯಲಿವೆ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ.

ಬೆಂಬಲ ಬೆಲೆಯಡಿ ಜೋಳ ಖರೀದಿ ಆರಂಭ

ಹಾವೇರಿ: ಪ್ರಸಕ್ತ 2025-26ನೇ ಸಾಲಿನ ಹಿಂಗಾರು ಹಂಗಾಮಿನ ಅವಧಿಯಲ್ಲಿ ರೈತರು ಬೆಳೆದ ಮಾಲ್ದಂಡಿ, ಹೈಬ್ರೀಡ್ ಜೋಳದ ಹುಟ್ಟುವಳಿ ಖರೀದಿಸಲು ಜಿಲ್ಲೆಯಲ್ಲಿ ನಾಲ್ಕು ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷರಾದ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ.

ಖರೀದಿ ಕೇಂದ್ರಗಳು : ಹಾವೇರಿ, ರಾಣೇಬೆನ್ನೂರು, ಶಿಗ್ಗಾಂವ ಹಾಗೂ ಸವಣೂರ ಎಪಿಎಂಸಿ ಯಾರ್ಡ್‌ಗಳಲ್ಲಿ ಖರೀದಿ ಕೇಂದ್ರ ಆರಂಭಿಸಲಾಗಿದೆ. ಪ್ರತಿ ರೈತರಿಂದ ಎಕರೆ 15 ಕ್ವಿಂಟಾಲ್‌ನಂತೆ ಗರಿಷ್ಠ 150 ಕ್ವಿಂಟಾಲ್ ಜೋಳವನ್ನು ಬೆಂಬಲಬೆಲೆ ಯೋಜನೆಯಡಿ ಖರೀದಿಸಲಾಗುತ್ತಿದೆ. ರೈತರು ಮಾ.31ರೊಳಗಾಗಿ ನೋಂದಣಿ ಮಾಡಿಕೊಳ್ಳಬೇಕು. ವಿಳಂಬವಾದರೆ ನೋಂದಣಿ ಮಾಡಿಕೊಳ್ಳಲಾಗುವುದಿಲ್ಲ, ಜಿಲ್ಲೆಯ ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಪ್ರಕಟಣೆಯಲ್ಲಿ ಎಂದು ತಿಳಿಸಿದ್ದಾರೆ.

ಇಂದು ರಕ್ತದಾನ, ಉಚಿತ ಆರೋಗ್ಯ ತಪಾಸಣಾ ಶಿಬಿರ

ಹಾವೇರಿ: ಸಹಮತ ಸಂಸ್ಥೆ ವಾರ್ಷಿಕೋತ್ಸವದ ಅಂಗವಾಗಿ, ಹಾವೇರಿ ಜಿಲ್ಲಾ ಆಸ್ಪತ್ರೆಯ ರಕ್ತನಿಧಿ ಕೇಂದ್ರ, ಅಮ್ಮಾ ಸಂಸ್ಥೆ ದೇವಿಹೊಸೂರು, ಗ್ರಾಮ ಪಂಚಾಯತಿ ದೇವಿಹೊಸೂರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಹಯೋಗದಲ್ಲಿ ಮಾ.29ರಂದು ಬೆಳಗ್ಗೆ 11 ಗಂಟೆಗೆ, ದೇವಿಹೊಸೂರು ಗ್ರಾಮದ ಸಂತಶ್ರೇಷ್ಠ ಆವರಣದಲ್ಲಿರುವ ಗ್ರಂಥಾಲಯದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಸಹಮತ ಸಂಸ್ಥೆ ಅಧ್ಯಕ್ಷ ಬಸವರಾಜ ಪೂಜಾರ ತಿಳಿಸಿದ್ದಾರೆ.

ಈ ಕುರಿತು 'ಪತ್ರಿಕಾ ಹೇಳಿಕೆ ನೀಡಿರುವ ಅವರು, ಒಂದು ಯೂನಿಟ್ ರಕ್ತದಿಂದ ಮೂರು ಜೀವಗಳನ್ನು ಉಳಿಸಲು ಸಾಧ್ಯವಿದೆ. ರಕ್ತದಾನವು ಜೀವದಾನ ಮಾಡುವ ಮಹತ್ವದ ಕಾರ್ಯವಾಗಿದ್ದು ದಾನಗಳಲ್ಲಿಯೇ ಮಹಾದಾನವಾಗಿದೆ. 18ರಿಂದ 60ವರ್ಷದ ಒಳಗಿರುವ, ಕನಿಷ್ಠ 50ಕೆ.ಜಿ ಅಥವಾ ಅದಕ್ಕಿಂತ ಹೆಚ್ಚು ಇರುವ ಹಾಗೂ ಕಾಮಾಲೆ, ಮಲೇರಿಯಾ, ಟೈಫಾಯ್ಡ್‌ನಂತಹ ಯಾವುದೇ ಗಂಭೀರ ಕಾಯಿಲೆಗಳಿರದ ಆಸಕ್ತರು ಈ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ರಕ್ತದಾನ ಮಾಡಬೇಕು ಎಂದು ಮನವಿ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9916356025 ಇಲ್ಲಿ ಸಂಪರ್ಕಿಸಬೇಕು ಎಂದು ಪ್ರಕಣೆಯ ಮೂಲಕ ವಿನಂತಿಸಿದ್ದಾರೆ.

ಮಹಿಳೆ ಕಣ್ಮರೆ : ದೂರು ದಾಖಲು

ಹಾವೇರಿ: ಆಸ್ಪತ್ರೆಗೆ ಹೋಗಿ ಬರುವುದಾಗಿ ಹೇಳಿದ್ದ ಮಹಿಳೆಯೊಬ್ಬಳು ವಾಪಾಸ್ ಮನೆಗೆ ಬಾರದೆ ಕಾಣೆಯಾಗಿರುವ ಘಟನೆ ತಾಲೂಕಿನ ಹಂದಿಗನೂರು ಗ್ರಾಮದಲ್ಲಿ ನಡೆದಿದೆ. ಹಂದಿಗನೂರು ಗ್ರಾಮದ ಲಕ್ಷ್ಮೀ ಕೋಂ.ಮುತ್ತಣ್ಣ ಭಜಂತ್ರಿ (37) ಕಾಣೆಯಾದ ಮಹಿಳೆ. ಈಕೆ ಹೊಸರಿತ್ತಿಯ ಆಸ್ಪತ್ರೆಗೆ ಹೋಗಿ ಬರುತ್ತೇನೆಂದು ಹೇಳಿ ಹೋದವಳು ವಾಪಸ್ ಮನೆಗೆ ಬಾರದೆ ಕಾಣೆಯಾಗಿದ್ದಾಳೆ. ಕಾಣೆಯಾದವಳು 4.2 ಅಡಿ ಎತ್ತರ, ಬಿಳಿ ಮೈಬಣ್ಣ, ದುಂಡು ಮುಖ, ಚೂಪಾದ ಮೂಗು, ಸಾಧಾರಣ ಮೈಕಟ್ಟು ಕನ್ನಡ ಭಾಷೆಯನ್ನು ಮಾತನಾಡುತ್ತಾಳೆ. ಆಸ್ಪತ್ರೆಗೆ ಹೋಗುವಾಗ ಚಾಕಲೇಟ್ ಬಣ್ಣದ ಸೀರೆ, ಕಪ್ಪು ಬಣ್ಣದ ರವಿಕೆ ತೊಟ್ಟಿದ್ದಾಳೆಂದು ಆಕೆಯ ಪತಿ ಮುತ್ತಣ್ಣ ಭಜಂತ್ರಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ: ತಾಲೂಕಿನ ಟಾಟಾ ಮಣ್ಣೂರ ಗ್ರಾಮದಲ್ಲಿ ಚರಂಡಿ ನೀರು ಮನೆಗಳ ಎದುರು ನಿಂತಿರುವುದು.

ಕರ್ತವ್ಯಕ್ಕೆ ಅಡ್ಡಿ, ಜಾತಿ ನಿಂದನೆ ಮಾಡಿದವರಿಗೆ ಶಿಕ್ಷೆ

ಹಾವೇರಿ: ರಟ್ಟಿಹಳ್ಳಿ ತಹಶೀಲ್ದಾರ್ ಕಚೇರಿಯ ಎಸ್.ಡಿ.ಎ ಲಿಂಗರಾಜ ಶಂಕರನಾಯ್ಕ ಲಮಾಣಿ ಅವರಿಗೆ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಜಾತಿ ನಿಂದನೆ ಮಾಡಿದ ಆರೋಪಿತರಾದ ರಟ್ಟಿಹಳ್ಳಿಯ ಶಂಕರಗೌಡ ಮಹೇಶಗೌಡ ಚನ್ನಗೌಡ್ರ, ಪ್ರಕಾಶ ಶಿವಪ್ಪ ಹರಳಹಳ್ಳಿ ಹಾಗೂ ಹಿರೇಮಾದಾಪುರದ ಬಸವರಾಜ ಮಹೇಶಪ್ಪ ಗ್ಯೂರ್ಲ ಅವರಿಗೆ ಎರಡು ವರ್ಷ ಜೈಲು ಶಿಕ್ಷೆ ಹಾಗೂ ರೂ.18ಸಾವಿರ ದಂಡ ವಿಧಿಸಿ ಒಂದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಸ್.ಎಂ. ರಮೇಶ ತೀರ್ಪು ನೀಡಿದ್ದಾರೆ. ಶಂಕರಗೌಡ ಮಹೇಶಗೌಡ ಚನ್ನಗೌಡ್ರ ರಟ್ಟಿಹಳ್ಳಿ ತಹಶೀಲ್ದಾರ್ ಕಚೇರಿಯಲ್ಲಿ 2025ರ ಏ.15ರಂದು ವಂಶ ವೃಕ್ಷ ಅರ್ಜಿ ಸಲ್ಲಿಸಿ ಅಂದೇ ಅನುಮೋದನೆ ನೀಡಲು ಕೋರಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿ, ಜಾತಿ ನಿಂದನೆ ಮಾಡಿದ್ದಲ್ಲದೆ ಪ್ರಕಾಶ ಶಿವಪ್ಪ ಹರಳಹಳ್ಳಿ ಹಾಗೂ ಹಿರೇಮಾದಾಪುರದ ಬಸವರಾಜ ಮಹೇಶಪ್ಪ ಗ್ಯೂರ್ಲ ಅವರ ಅವಾಚ್ಯ ಶಬ್ದಗಳಿಂದ ಬೈದಾಡಿ ಕೈಯಿಂದ ಹಲ್ಲೆಮಾಡಿದ ಹಿನ್ನೆಲೆಯಲ್ಲಿ ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು. ಪ್ರಕರಣದ ಕುರಿತು ಡಿಎಸ್‌ಪಿ ಲೋಕೇಶ ಜೆ. ಮತ್ತು ಗಿರೀಶ ಭೋಜಣ್ಣನವರ ಅವರು ತನಿಖೆ ಕೈಗೊಂಡು ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ವಿಚಾರಣೆಯಲ್ಲಿ ಆರೋಪಿಗಳ ಮೇಲೆ ವಿವಿಧ ಕಾಯ್ದೆಗಳ ಅಪಾದನೆಗಳನ್ನು ಅಭಿಯೋಜನೆಯು ರುಜುವಾತು ಪಡಿಸಿದ ಹಿನ್ನಲೆಯಲ್ಲಿ ನ್ಯಾಯಾಧೀಶರು ಮೇಲಿನಂತೆ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದ್ದಾಗಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಒಂದನೇ ಅಧಿಕ ಸರ್ಕಾರಿ ಅಭಿಯೋಜಕರಾದ ಸರೋಜಾ ಕೂಡಲಗಿಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಶಿಗ್ಗಾವಿ: ಪಟ್ಟಣದ ಫಿನಿಕ್ಸ್ ಶಿಕ್ಷಣ ಸಂಸ್ಥೆ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ವಿಶ್ವ ಕ್ಷಯರೋಗ ದಿನಾಚರಣೆ ಆಚರಿಸಲಾಯಿತು. ತಾಲೂಕು ಆರೋಗ್ಯಾಧಿಕಾರಿ ಡಾ.ಸತೀಶ್ ಎ.ಆರ್., ಡಾ.ರಾಣಿ ಕಿರ್ಲಾಪುರ, ನಾಗನಗೌಡ ಪಾಟೀಲ, ಫಿನಿಕ್ಸ್ ಸಂಸ್ಥೆಯ ಅಧ್ಯಕ್ಷ ಡಾ. ಮೃತ್ಯುಂಜಯ ಕಿರ್ಲಾಪುರ, ಉಪಾಧ್ಯಕ್ಷ ನರಹರಿ ಕಟ್ಟಿ, ಪ್ಯಾರಾ ಮೆಡಿಕಲ್ ಕಾಲೇಜಿನ ಪ್ರಾ.ಭೀಮನಗೌಡ, ಡಾ. ಸ್ವಂದನಾ ಬ್ರಹ್ಮಾವರ, ಡಾ.ಅಶೋಕಕುಮಾರ್ ಕೆ.ಎನ್., ಸರೋಜಾ ಎಂ. ಹರಿಜನ ಇದ್ದರು.

ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ ಹೇಳಿಕೆ

ಮಹಿಳೆಯರು ಅಭಿವೃದ್ಧಿ ಹೊಂದಲಿ

ಹಾವೇರಿ: ಹೆಣ್ಣು ಸಂಸಾರದ ಕಣ್ಣು, ತಾಯಿಯಾಗಿ, ಅಕ್ಕ- ತಂಗಿಯಾಗಿ, ಹೆಂಡತಿಯಾಗಿ ಸಂಸಾರದ ಎಲ್ಲ ಜವಾಬ್ದಾರಿಗಳನ್ನು ನಿಭಾಯಿಸುತ್ತಾಳೆ. ಹೆಣ್ಣಿನ ಸಾಮರ್ಥ್ಯ ಕೇವಲ ಸಂಸಾರಕ್ಕೆ ಮಾತ್ರ ಸೀಮಿತವಾಗಿಲ್ಲ. ತೊಟ್ಟಿಲು ತೂಗುವ ಕೈ ಇಂದು ಸಮಾಜದ ತೊಟ್ಟಿಲು ತೂಗುತ್ತಿದೆ. ಅಡುಗೆ ಮನೆಯಿಂದ ಹಿಡಿದು ಆಕಾಶದಗಲ ಕೆಲಸ ಮಾಡುವ ಸಾಮರ್ಥ್ಯವನ್ನು ಮಹಿಳೆ ಹೊಂದಿದ್ದಾಳೆ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಹೇಳಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಘಟಕ ಹಾವೇರಿ ವತಿಯಿಂದ ಶನಿವಾರ ನಗರದ ಜಿಲ್ಲಾ ಗುರುಭವನದಲ್ಲಿ ಹಮ್ಮಿಕೊಂಡಿದ್ದ 115ನೇ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಹೆಣ್ಣು ಮಮತೆಯ ಮಡಿಲಾಗಿ, ಮಾನವೀಯತೆಯ ಶಕ್ತಿಯಾಗಿ ಎಲ್ಲರ ಅಗತ್ಯತೆಗಳನ್ನು ಪೂರೈಸುತ್ತಾಳೆ. ವಿಜ್ಞಾನ, ತಂತ್ರಜ್ಞಾನ ವ್ಯವಸ್ಥೆಯಲ್ಲಿ ಮಹಿಳೆಯರು ಕೈಚಳಕ ತೋರಿಸುತ್ತಿದ್ದಾರೆ. 70 ಕೋಟಿ ಮಹಿಳೆಯರು ಇರುವ ಭಾರತ ದೇಶದಲ್ಲಿ ಮಹಿಳೆಯರನ್ನು ಹೊರಗಿಟ್ಟು ಅಭಿವೃದ್ಧಿ ಅಸಾಧ್ಯ. 2047ಕ್ಕೆ ವಿಕಸಿತ ಭಾರತದ ಕನಸು ನನಸಾಗಲು ಮಹಿಳೆಯರು ಅಭಿವೃದ್ಧಿ ಹೊಂದಬೇಕು ಎಂದರು.

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರನ್ನು ನೋಡುವ ದೃಷ್ಟಿಕೋನ ಬದಲಾಗಬೇಕು. ಮಹಿಳೆ ಪುರುಷರಷ್ಟೇ ಅವಕಾಶಗಳನ್ನು ಕೊಡಬೇಕು. ಸ್ಥಳೀಯ ಸಂಸ್ಥೆಗಳಲ್ಲಿ ಶೇ.40-50ರಷ್ಟು ಮಹಿಳೆಯರು ಆಡಳಿತ ಮಾಡುತ್ತಿದ್ದು, ರಾಜಕಾರಣದಲ್ಲಿ ಶೇ.33ರಷ್ಟು ಮೀಸಲು ಮಹಿಳಾ ವಲಯಕ್ಕೆ ಆದ್ಯತೆ ನೀಡುವ ಚಿಂತನೆ ನಡೆದಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮುಖ್ಯ ಆಯುಕ್ತ ಡಾ. ಪಿ.ಜಿ.ಆರ್ ಸಿಂಧ್ಯ ಮಾತನಾಡಿ, 1907ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕರ್ನಾಟಕದಲ್ಲಿ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ್ನು ಪ್ರಾರಂಭಿಸಿದರು. 1950ರಿಂದ ಇಲ್ಲಿಯವರೆಗೆ ಸೇವೆಗೆ ಸ್ಕೌಟ್ಸ್ ಗೈಡ್ಸ್ ಎಂದು ತೋರಿಸಿ ಕೊಟ್ಟಿದ್ದೇವೆ. ಕೇಂದ್ರ ಸರ್ಕಾರ ಯುವ ಆಪತ್ ಮಿತ್ರ ಎಂಬ ಯೋಜನೆ ಘೋಷಣೆ ಮಾಡಿದೆ. ಆಪತ್ತಿನ ಸಂದರ್ಭದಲ್ಲಿ ಕೆಲಸ ಮಾಡುವ ಯುವ ಪಡೆ ನಿರ್ಮಿಸಲು ಯೋಜನೆ ಬದ್ಧವಾಗಿದೆ.



> **ಮಕ್ಕಳಲ್ಲಿ ನಾಯಕತ್ವ ಗುಣಗಳನ್ನು ಬೆಳೆಸುವುದು, ಸ್ವಾವಲಂಬಿಯಾಗಿ ಬದುಕು ಕಲಿಸುವ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕಾರ್ಯ ದೇಶದ ಪ್ರಗತಿಗೆ ಪೂರಕವಾಗಿದೆ. ಸೀಮಿತ ಶಾಲೆಗಳಲ್ಲಿ ಮಾತ್ರ ಸ್ಕೌಟ್ಸ್ ಮತ್ತು ಗೈಡ್ಸ್ ಇದ್ದು, ಜಿಲ್ಲೆಯ ಎಲ್ಲಾ ಶಾಲೆಗಳಿಗೂ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ವ್ಯಾಪಿಸಬೇಕು. ಜಿಲ್ಲಾಡಳಿತ ವತಿಯಿಂದ ಅಗತ್ಯ ಸಹಾಯ ಸಹಕಾರ ಕೊಡುತ್ತೇವೆ.**
>
> ■ ಡಾ.ವಿಜಯಮಹಾಂತೇಶ ದಾನಮ್ಮನವರ, ಡಿಸಿ

ಈ ಪಡೆಗೆ ಆಯ್ಕೆಯಾಗುವ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಮೂರು ವರ್ಷಗಳ ಇನ್ಸೂರೆನ್ಸ್, ಒಳ್ಳೆಯ ಆಹಾರ ಸೇರಿದಂತೆ ಮೂಲಭೂತ ಸೌಕರ್ಯ ಕೊಡುತ್ತಿರುವುದು ಶ್ಲಾಘನೀಯ. ವಿಶೇಷವಾಗಿ ಈ ಯೋಜನೆಯಡಿ ಕರ್ನಾಟಕ ಮುಂಚೂಣಿಯಲ್ಲಿದೆ. ಜಿಲ್ಲೆಯಲ್ಲಿ ಕೂಡ ಹೆಚ್ಚು ತರಬೇತಿ ಕೇಂದ್ರಗಳನ್ನು ತೆರೆದು, ಅನೇಕ ಚಟುವಟಿಕೆಗಳನ್ನು ನಡೆಸಬೇಕು. ಜಿಲ್ಲಾಡಳಿತ ಕೂಡ ಸಹಕಾರ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಗೈಡ್ಸ್‌ನ ಸಹಾಯಕ ರಾಜ್ಯ ಆಯುಕ್ತೆ ರಾಧಾ ವೆಂಕಟೇಶ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಿಡಿಪಿಐ ಹಾಗೂ ಜಿಲ್ಲಾ ಮುಖ್ಯ ಆಯುಕ್ತ ಮೋಹನ್ ದಂಡಿನ, ಬಿಇಒ ಎಂ.ಎಚ್. ಪಾಟೀಲ, ರಾಜ್ಯ ಆಯುಕ್ತೆ ಗೀತಾ ನಟರಾಜ, ಡಾ.ನವೀನ್ ರಾಯ್ಕರ್, ಡಾ.ಮಾಧುರಿ ದೇವಧರ, ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲೇಶ ಕರಿಗಾರ, ಮಲ್ಲಿಕಾರ್ಜುನ ಶಾಂತಗಿರಿ, ಬಸವರಾಜ ಆರಳಿ, ಎಂ.ಆರ್. ಪಾಟೀಲ, ಬಿ.ಪಿ. ಶಿಡೆನೂರ, ಜಿ.ವಿ. ಹಿರೇಗೌಡರ, ಪರಮೇಶ ಚಿಕ್ಕಳ್ಳಿ, ನಂದಿನಿ ವಿರೂಪಣ್ಣ, ಧನರಾಜರಾಣಿ ಬಳ್ಳಾರಿ, ಮಹಾದೇವಿ ಗೌಡ, ಎಸ್.ಎ. ವಜ್ರಕುಮಾರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ಗೀತಾ ಜಂಬಗಿ ಸ್ವಾಗತಿಸಿದರು.

ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಒತ್ತಾಯ

ಬ್ಯಾಡಗಿ: ಮೋಟೆಬೆನ್ನೂರು ಗ್ರಾಮದಿಂದ ಕೋಡಿಹಳ್ಳಿ ಗ್ರಾಮಕ್ಕೆ ತೆರಳುವ ಮಾರ್ಗ ಮಧ್ಯದಲ್ಲಿ ಇರುವ ರೈಲ್ವೆ ಹಳಿ ಪಕ್ಕದಲ್ಲಿ ಪೂರ್ಣ ಪ್ರಮಾಣದ ಕಾಂಕ್ರೀಟ್ ರಸ್ತೆ ನಿರ್ಮಾಣವ ಶೀಘ್ರವೇ ಮಾಡಿಕೊಡಿ ಇಲ್ಲದಿದ್ದರೆ ಏ.6ರಂದು ರೈಲ್ವೆ ಹಳಿ ತಡೆದು ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯ ಎದುರಿಗೆ ರೈತರೊಂದಿಗೆ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ಮೋಟೆಬೆನ್ನೂರು ಗ್ರಾಮದಲ್ಲಿ ರೈಲ್ವೆ ಹಳಿಯ ಎಡಭಾಗದ ಸರ್ವೆ ನಂಬರ್ 42 ರಿಂದ 133 ವರೆಗೆ ಹಾಗೂ ಬಲಭಾಗದ ಸರ್ವೆ ನಂಬರ್ 45 ರಿಂದ 210 ವರೆಗೆ ಒಂದೇ ದಾರಿ ಇದೆ ಇದೇ ದಾರಿಯನ್ನು ಬಳಸಿಕೊಂಡು ರೈತರು ಬರುತ್ತಿದ್ದಾರೆ ಆದರೆ ಇತ್ತೀಚೆಗೆ ರೈಲ್ವೆ ಇಲಾಖೆಯಿಂದ ಡಬಲ್ ಹಳಿ ನಿರ್ಮಾಣದ ಹಿನ್ನೆಲೆಯಲ್ಲಿ ರೈತರಿಗೆ ಚಕ್ಕಡಿಗಾಡಿ ಸಂಚಾರಕ್ಕೆ ಸಮಸ್ಯೆ ಉಂಟಾಗಿದೆ. ಇದರಿಂದ ರೈತರು ತಮ್ಮ ಕೃಷಿ ಚಟುವಟಿಗಳನ್ನು ನಡೆಸಲು ಸಮಸ್ಯೆ ಉಂಟಾಗುತ್ತಿದೆ ಕೂಡಲೇ ರಸ್ತೆ ನಿರ್ಮಾಣ ಮಾಡಿಕೊಡುವಂತೆ ಆಗ್ರಹಿಸಿದರು.

> **ಸಂಸದ ಬಸವರಾಜ ಬೊಮ್ಮಾಯಿ ಅವರು ಗ್ರಾಮಕ್ಕೆ ಭೇಟಿ ನೀಡಿದಾಗ ನಾವು ಹಲವು ಬಾರಿ ರಸ್ತೆ ನಿರ್ಮಾಣ ಮಾಡಿಕೊಡುವಂತೆ ಮನವಿ ಮಾಡಿದ್ದೆವೆ ಆದರೆ ಅವರು ರಸ್ತೆ ಮಾಡಿಕೊಡುತ್ತೇನೆಂದು ಭರವಸೆ ನೀಡಿದ್ದರು ಆದರೆ ಅದು ಕೇವಲ ಭರವಸೆಯಾಗಿ ಉಳಿದಿದೆ ಯಾವುದೇ ಪ್ರಯೋಜನವಾಗಿಲ್ಲ. ಸಂಸದರ ಭರವಸೆಯು ಭರವಸೆಯಾಗಿ ಉಳಿದಿದೆ.**
>
> ■ ಮಲ್ಲಿಕಾರ್ಜುನ ಬಳ್ಳಾರಿ, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ

ಈ ವೇಳೆ ಪ್ರತಿಭಟನೆಯಲ್ಲಿ ಇಂದೂಧರ್ ರುದ್ರದೇವರ ಮಠ, ಮಾಲತೇಶ್ ಮೈಲಾರ, ನಿಂಗಪ್ಪ ಅಂಗರಗಟ್ಟಿ, ಸುರೇಶ್ ಹಿತ್ತಲಮನಿ, ದಾನಪ್ಪ ಬಳ್ಳಾರಿ, ರಮೇಶ್ ಹೊಳಲ, ಮುತ್ತಪ್ಪ ಅನ್ವೇರಿ, ಬಸವರಾಜ್ ಚಂದ್ರಪ್ಪನವರ, ಪ್ರದೀಪ್ ಮಲ್ಲು ಹಾಗೂ ಮತ್ತಿತರರು ಉಪಸ್ಥಿತರಿದ್ದರು.



ಅಂಬೇಡ್ಕರ್ ಜಯಂತಿ ಅರ್ಥಪೂರ್ಣವಾಗಿರಲಿ: ಡಿಸಿ ವಿಜಯಮಹಾಂತೇಶ ದಾನಮ್ಮನವರ

ಹಾವೇರಿ: ಜಿಲ್ಲಾ ಮಟ್ಟದಲ್ಲಿ ಡಾ.ಬಾಬು ಜಗಜೀವನರಾಂರವರ 119ನೇ ಜನ್ಮದಿನಾಚರಣೆ ಹಾಗೂ ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರವರ 135 ನೇ ಜನ್ಮ ದಿನಾಚರಣೆ ವಿಜೃಂಭಣೆ ಹಾಗೂ ಅರ್ಥಪೂರ್ಣ ಆಚರಣೆಗೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡಾ.ಬಾಬು ಜಗಜೀವನರಾಂರವರ ಹಾಗೂ ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರವರ ಅವರ ಜನ್ಮ ದಿನಾಚರಣೆ ಕಾರ್ಯಕ್ರಮದ ಪೂರ್ವ ಸಿದ್ಧತೆ ಸಭೆ ಅಧ್ಯಕ್ಷತೆ ವಹಿಸಿ ಸಮಾಜ ಮುಖಂಡರೊಂದಿಗೆ ಚರ್ಚಿಸಿ ಮಾತನಾಡಿದ ಅವರು, ಏ.5ರಂದು ಡಾ.ಬಾಬು ಜಗಜೀವನರಾಂ ಅವರ ಜಯಂತಿಯನ್ನು ಸಾಂಕೇತಿಕವಾಗಿ ಆಚರಿಸಲಾಗುವುದು. ಏ.14ರಂದು ಉಭಯ ನಾಯಕರ ಜಯಂತಿಯನ್ನು ಸಡಗರ ಹಾಗೂ ಸಂಭ್ರಮದಿಂದ ಆಚರಣೆ ಮಾಡಲಾಗುವುದು ಎಂದರು.

ಏ. 14ರಂದು ಬೆಳಗ್ಗೆ 9 ಗಂಟೆಗೆ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಸಾರೋಟಿನಲ್ಲಿ ಉಭಯ ನಾಯಕರ ಭಾವಚಿತ್ರ ಮೆರವಣಿಗೆ ಹೊರಟು, ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಡಾ.ಬಿ.ಆರ್. ಅಂಬೇಡ್ಕರ ಭವನ ಸೇರಲಿದೆ. ಬೆಳಗ್ಗೆ 11 ಗಂಟೆಗೆ ವೇದಿಕೆ ಕಾರ್ಯಕ್ರಮ ಜರುಗಲಿದೆ. ಸಮಾಜದ ಮುಖಂಡರು ಯಶಸ್ವಿ ಕಾರ್ಯಕ್ರಮ ಆಯೋಜನೆಗೆ ಸಹಕಾರ ನೀಡಬೇಕು ಎಂದರು.

ಮೆರವಣಿಗೆಗೆ ಕಲಾ ತಂಡ, ವೇದಿಕೆ ಅಲಂಕಾರ, ಸ್ವಚ್ಛತೆ, ಆಸನ, ಆಮಂತ್ರಣ ಪತ್ರಿಕೆ, ಉಪನ್ಯಾಸಕ ಆಯ್ಕೆ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆಗಳನ್ನು ಯಾವುದೇ ಲೋಪವಾಗದಂತೆ ಅಚ್ಚುಕಟ್ಟಾಗಿ ಮಾಡಬೇಕು ಎಂದು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಹಾಗೂ ಪೌರಕಾರ್ಮಿಕರನ್ನು ಸನ್ಮಾನಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು. ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ, ಜಿಪಂ ಉಪ ಕಾರ್ಯದರ್ಶಿ ಡಾ.ಪುನಿತ್, ಸಮಾಜ ಕಲ್ಯಾಣ ಇಲಾಖೆ ಜಂಟಿನಿರ್ದೇಶಕ ಪ್ರಶಾಂತ ವರಗಪ್ಪನವರ, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.



ಸಮಾನತೆ ಸಂದೇಶ ಸಾರಿದ ಸಂತರು: ಪಠಾಣ್

ಶಿಗ್ಗಾವಿ: ಪಟ್ಟಣದಲ್ಲಿ ತಾಯಿ ಭುವನೇಶ್ವರಿ ಸರ್ಕಲ್ ಮಾಡಲು ಮುಂದಿನ ದಿನಗಳಲ್ಲಿ ಕ್ರಮ ಜರುಗಿಸಲಾಗುವುದು ಎಂದು ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣ್ ಹೇಳಿದರು.

ಪಟ್ಟಣದ ಡಾ. ಬಿ.ಆರ್ ಅಂಬೇಡ್ಕರ್ ಆಡಳಿತ ಭವನದ ಸಂಕೀರ್ಣದಲ್ಲಿ ರಾಜ್ಯ ಕನ್ನಡ ಜಾಗೃತಿ ಹಿತರಕ್ಷಣಾ ವೇದಿಕೆ ತಾಲೂಕಾ ಘಟಕದ ವತಿಯಿಂದ ಹಮ್ಮಿಕೊಂಡ ಕನ್ನಡ ಜಾಗೃತಿ ಸಮಾವೇಶ ಮತ್ತು ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡ ಸಾಹಿತ್ಯಕ್ಕೆ ಬಸವಣ್ಣನವರ ಕೊಡುಗೆ ಬಹಳಷ್ಟು ಇದೆ, ಸಮಾನತೆಯ ಸಂದೇಶವನ್ನ ನಮ್ಮ ಸಂತರು, ಶರಣರು ನೀಡಿದ್ದಾರೆ. ಸಮಾಜಕ್ಕೆ ಒಳ್ಳೆಯ ಹೆಸರು ಬರಬೇಕೆಂದರೆ ಮಹಿಳೆಯರಿಗೆ ಗೌರವ ನೀಡಬೇಕು ಎಂದರು.

ತಾಲೂಕಾ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಸರಸ್ವತಿ ಗಜಕೋಶ ವಿಶೇಷ ಉಪನ್ಯಾಸ ನೀಡಿದರು.

ರಾಜ್ಯ ಕನ್ನಡ ಜಾಗೃತಿ ಹಿತರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಮಂಜುನಾಥ ದುಗ್ಗತ್ತಿ, ಸಾಹಿತಿ ಶಿವಾನಂದ ಮ್ಯಾಗೇರಿ, ಮಹಿಳಾ ಜಿಲ್ಲಾಧ್ಯಕ್ಷೆ ಗಂಗಮ್ಮ ಕೋರಿ, ರಾಜ್ಯ ಸಹ ಕಾರ್ಯದರ್ಶಿ ಮಲ್ಲಿಕಾರ್ಜುನ ಹಡಪದ, ತಾಲೂಕಾಧ್ಯಕ್ಷ ಮಂಜುನಾಥ ಕ್ಷೌರದ ಮಾತನಾಡಿದರು.



ಕಾರ್ಯಕ್ರಮದಲ್ಲಿ ಹಳೆ ಬಸ್ ನಿಲ್ದಾಣಕ್ಕೆ ತಾಯಿ ಭುವನೇಶ್ವರಿ ಹೆಸರು ನಾಮಕರಣ ಮಾಡುವಂತೆ ಮನವಿ ಅರ್ಪಿಸಲಾಯಿತು. ರಾಜ್ಯ ಮಹಿಳಾ ಅಧ್ಯಕ್ಷೆ ಮಧು ಬಿಸೆಟ್ಟಿ, ಮಹಿಳಾ ಜಿಲ್ಲಾಧ್ಯಕ್ಷೆ ಗಂಗಮ್ಮ ಕೋರಿ, ಶಿವಾನಂದ ಮ್ಯಾಗೇರಿ, ಎಸ್ ಎಫ್ ಮಣಕಟ್ಟಿ, ಮಂಜುನಾಥ ಕಾರಡಗಿ, ಹನುಮಂತ ಚಳಗೇರಿ, ಅಶೋಕ ಕಾಳೆ, ಬಸವರಾಜ ಜೇಕಿನಕಟ್ಟಿ, ಮಲ್ಲಮ್ಮ ಸೋಮನಕಟ್ಟಿ, ಫಯಾಜ್ ಸವಣೂರ, ನಿರ್ಮಲಾ ಯಡಪ್ಪನವರ, ನೀಲವ್ವ ವನಹಳ್ಳಿ, ಲಕ್ಷ್ಮಿ.ವಿ.ಎಚ್, ಶಂಬು ಮಡಿವಾಳರ, ವಿವಿಧ ಮುಖಂಡರು ಮತ್ತಿತರರಿದ್ದರು.

ಸಿಹಿನೀರು, ನೈರ್ಮಲ್ಯ ಸವಾಲುಗಳ ಅರಿವಿರಲಿ

ಹಾವೇರಿ: ಇಂದು ಫ್ಲೋರೈಡಯುಕ್ತ ನೀರು ಸೇವಿಸಿ ಅನೇಕ ಜನರು ಖಾಯಿಲೆಗೆ ತುತ್ತಾಗುತ್ತಿದ್ದು, ಸಿಹಿ ನೀರು ಮತ್ತು ನೈರ್ಮಲ್ಯ ಸವಾಲುಗಳ ಬಗ್ಗೆ ಜಾಗೃತಿ ಮೂಡಿಸುವುದು ಅವಶ್ಯಕವಾಗಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಜಾ ಎಚ್.ವಿ. ಅವರು ಹೇಳಿದರು.

ಕಳ್ಳಿಹಾಳ ಗ್ರಾಮದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಸತಿಯುತ ಸರ್ಕಾರಿ ಪ್ರಥಮ ದರ್ಜೆ ವಿದ್ಯಾಲಯದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಸತಿಯುತ ಸರ್ಕಾರಿ ಪ್ರಥಮ ದರ್ಜೆ ವಿದ್ಯಾಲಯ ಸಹಯೋಗದಲ್ಲಿ ವಿಶ್ವ ಜಲ ದಿನಾಚರಣೆ ಅಂಗವಾಗಿ ಪ್ರಾಣಿ, ಪಕ್ಷಿಗಳಿಗೆ ನೀರಿನ ಮಹತ್ವದ ನೀರು ನೀಡಿ ಜೀವ ಉಳಿಸಿ ಅಭಿಯಾನದಲ್ಲಿ ತೊಡಗಿಸಿಕೊಳ್ಳಲು ಕುರಿತು, ಬಾಲ್ಯ ವಿವಾಹ ನಿಷೇಧ, ಪೋಕ್ಸೋ ಕಾಯ್ದೆ, ವರದಕ್ಷಿಣೆ ನಿಷೇಧ, ಮಾದಕ ವಸ್ತುಗಳ ಅಕ್ರಮ ಸಾಗಣೆ ಹಾಗೂ ಘರ ಘರ ಮೇ ನ್ಯಾಯಕೀ ಜಾಗೃತಿ ಕುರಿತ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಾಲ್ಯ ವಿವಾಹ, ಪೋಕ್ಸೋ ಪ್ರಕರಣಗಳು ಕಂಡುಬಂದಲ್ಲಿ ಅಥವಾ ಮಕ್ಕಳಿಗೆ ತೊಂದರೆಯಾದಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಕರೆಮಾಡಬೇಕು. ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು ಜಾಗೂ ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಕಾಳಜಿವಹಿಸಬೇಕು ಎಂದು ಸಲಹೆ ನೀಡಿದರು.

ಬೇಸಿಗೆಯ ತೀವ್ರ ಬಿಸಿಲಿನ ಹಿನ್ನೆಲೆಯಲ್ಲಿ ಪ್ರಾಣಿ-ಪಕ್ಷಿಗಳಿಗೆ ಮನೆಯ ತಾರಸಿ ಅಥವಾ ಮರದ ನೆರಳಿನಲ್ಲಿ ನೀರು ಹಾಗೂ ಕಾಳುಗಳನ್ನು ಇಡಬೇಕು ಎಂದು ಹೇಳಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಾಯಕ ಕಾನೂನು ನೆರವು ಅಭಿರಕ್ಷಕ ಎನ್.ಎನ್.ಡಿಳ್ಳೆಪ್ಪನವರ ಉಪನ್ಯಾಸ ನೀಡಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಸತಿಯುತ ಸರ್ಕಾರಿ ಪ್ರಥಮ ದರ್ಜೆ ವಿದ್ಯಾಲಯದ ಉಪನ್ಯಾಸಕ ಡಾ.ಡಿ.ಟಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಚರಂಡಿ ಅವ್ಯವಸ್ಥೆ: ಟಾಟಾ ಮಣ್ಣೂರ ಗ್ರಾಮಸ್ಥರ ನರಕಯಾತನೆ

ಹಾವೇರಿ: ತಾಲೂಕಿನ ಟಾಟಾ ಮಣ್ಣೂರ ಗ್ರಾಮದಲ್ಲಿ ಚರಂಡಿಗಳ ಅವ್ಯವಸ್ಥೆಯಿಂದ ಗ್ರಾಮಸ್ಥರು ನಿತ್ಯ ನರಕಯಾತನೆ ಅನುಭವಿಸುವಂತಾಗಿದ್ದು, ಗ್ರಾಮದಲ್ಲಿ ಸಾಂಕ್ರಾಮಿಕ ರೋಗದ ಭೀತಿ ಎದುರಾಗಿದೆ.

ತಾಲೂಕಿನ ಕೋಣತಂಬಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಟಾಟಾ ಮಣ್ಣೂರ ಗ್ರಾಮದಲ್ಲಿ ಚರಂಡಿಗಳು ತುಂಬಿ ತುಳುಕುತ್ತಿದ್ದರೂ ಸಂಬಂಧಪಟ್ಟ ಗ್ರಾಪಂ ಸಿಬ್ಬಂದಿ ಚರಂಡಿಗಳನ್ನು ಸ್ವಚ್ಛಗೊಳಿಸದ ಹಿನ್ನಲೆ ಗ್ರಾಮದಲ್ಲಿ ದುರ್ವಾಸನೆ ಹೆಚ್ಚಾಗಿದ್ದು, ಗ್ರಾಮಸ್ಥರು ಮೂಗು ಮುಚ್ಚಿಕೊಂಡು ಸಂಚರಿಸುವಂತಾಗಿದೆ.

ವರದಾನದಿತೀರದಲ್ಲಿದ್ದ ಈ ಗ್ರಾಮವು ಪ್ರತಿ ವರ್ಷ ಪ್ರವಾಹಕ್ಕೆ ತುತ್ತಾಗುತ್ತಿತ್ತು. ಈ ಹಿನ್ನೆಲೆಯಲ್ಲಿ 2009ರಲ್ಲಿ ಈ ಗ್ರಾಮವನ್ನು ಸ್ಥಳಾಂತರಿಸಿ ರಸ್ತೆ, ಚರಂಡಿ ಸೇರಿದಂತೆ ಮೂಲಭೂತ ಸೌಲಭ್ಯ ಕಲ್ಪಿಸಲಾಗಿತ್ತು. ಆದರೆ ಈಗ ಗ್ರಾಮದಲ್ಲಿ ಚರಂಡಿ ವ್ಯವಸ್ಥೆ ಹಾಳಾಗಿದ್ದು, ಕೊಳಚೆ ನೀರು ಸರಾಗವಾಗಿ ಹರಿದು ಹೋಗದೇ ಗ್ರಾಮದ ರಸ್ತೆಗಳ ಮೇಲೆ ಹರಿಯುತ್ತಿದೆ.



ಇನ್ನು ಕೆಲವು ಕಡೆ ಮನೆಗಳ ಎದುರು ನಿಲ್ಲುತ್ತಿದೆ. ಹೀಗಾಗಿ ಗ್ರಾಮದಲ್ಲಿ ಸ್ವಚ್ಛತೆ ಮರೀಚಿಕೆಯಾಗಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯನ್ನು ಗ್ರಾಮಸ್ಥರು ಎದುರಿಸುತ್ತಿದ್ದಾರೆ.

ಗ್ರಾಮದಲ್ಲಿ ನಿರ್ಮಿಸಿರುವ ಚರಂಡಿಗಳ ಗಾತ್ರ ಸಣ್ಣದಾಗಿದ್ದು, ಅವುಗಳು ಕೂಡ ಹಾಳಾಗಿವೆ. ಹೀಗಾಗಿ ಗ್ರಾಮದಲ್ಲಿ ಸಮರ್ಪಕವಾಗಿ ಚರಂಡಿ ವ್ಯವಸ್ಥೆಯೇ ಇಲ್ಲದಂತಾಗಿದೆ. ಅಲ್ಲದೇ ಸಂಬಂಧಪಟ್ಟ ಗ್ರಾಪಂ ಅವರು ಕಾಲಕಾಲಕ್ಕೆ ಚರಂಡಿ ಸ್ವಚ್ಛಗೊಳಿಸದ ಹಿನ್ನಲೆ ತ್ಯಾಜ್ಯಗಳಿಂದ ತುಂಬಿ ತುಳುಕುತ್ತಿವೆ. ಈ ಬಗ್ಗೆ ಗ್ರಾಪಂಗೆ ಮಾಹಿತಿ ನೀಡಿದರೂ ಅದನ್ನು ಸ್ವಚ್ಛಗೊಳಿಸದೇ ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮದಲ್ಲಿ 150ಕ್ಕೂ ಹೆಚ್ಚು ಮನೆಗಳಿದ್ದು, 700ಕ್ಕೂ ಹೆಚ್ಚು ಜನಸಂಖ್ಯೆ ಇದೆ. ಚರಂಡಿ ವ್ಯವಸ್ಥೆ ಕಲ್ಪಿಸುವಂತೆ ಸರಿಪಡಿಸುವಂತೆ ಗ್ರಾಮಸ್ಥರು ಒತ್ತಾಯಿಸಿದರೂ ಈವರೆಗೂ ಕ್ರಮ ಕೈಗೊಂಡಿಲ್ಲ, ಕೊಳಚೆ ನೀರು ಮನೆಗಳ ಎದುರೆ ನಿಲ್ಲುತ್ತಿದ್ದರಿಂದ ಗ್ರಾಮದಲ್ಲಿ ಸೊಳ್ಳೆಗಳ ಸಂಖ್ಯೆ ಹೆಚ್ಚಾಗಿದ್ದು, ಸಾಂಕ್ರಾಮಿಕ ರೋಗ ಹರಡುವ ಭೀತಿಯನ್ನು ಗ್ರಾಮಸ್ಥರು ಎದುರಿಸುತ್ತಿದ್ದಾರೆ.

ಡಿಸಿ, ಸಿಇಒ ಭೇಟಿ ನೀಡಲಿ

ಮಣ್ಣೂರ ಗ್ರಾಮವನ್ನು 2009ರಲ್ಲಿ ಸ್ಥಳಾಂತರ ಮಾಡುವ ವೇಳೆ ಚರಂಡಿ, ರಸ್ತೆಗಳನ್ನು ನಿರ್ಮಿಸಲಾಗಿತ್ತು. ಗ್ರಾಮದಲ್ಲಿ ಸದ್ಯ ಚರಂಡಿ, ರಸ್ತೆಗಳು ಹಾಳಾಗಿದ್ದು ಗ್ರಾಮದಲ್ಲಿ ಮೂಲಭೂತ ಸೌಲಭ್ಯಗಳು ಇಲ್ಲದಂತಾಗಿದೆ. ಕೂಡಲೇ ಗ್ರಾಮಕ್ಕೆ ಜಿಲ್ಲಾಧಿಕಾರಿಗಳು, ಜಿಪಂ ಸಿಇಒ ಅವರು ಭೇಟಿ ನೀಡಿ ಗ್ರಾಮಸ್ಥರ ಸಮಸ್ಯೆ ಆಲಿಸಬೇಕು ಎಂದು ಗ್ರಾಮದ ಮುಖಂಡರಾದ ಶೇಖಪ್ಪ ಕಮತರ, ಈರಣ್ಣ ಹೊಸಮನಿ, ವೀರಣ್ಣ ಮಡ್ಲೂರ, ಚಂದ್ರಯ್ಯ ಹಿರೇಮಠ, ಪುಟ್ಟಪ್ಪ ಕಮತರ ಸೇರಿದಂತೆ ಗ್ರಾಮಸ್ಥರದು ಆಗ್ರಹಿಸಿದ್ದಾರೆ.

> **ಮಣ್ಣೂರ ಗ್ರಾಮದಲ್ಲಿ ಚರಂಡಿಗಳು ತುಂಬಿ ಕೊಳಚೆ ನೀರು ರಸ್ತೆ, ಮನೆಗಳ ಎದುರು ನಿಲ್ಲುತ್ತಿರುವುದು ಗಮನಕ್ಕೆ ಬಂದಿದೆ. ಗ್ರಾಮದಲ್ಲಿ ನಿರ್ಮಿಸಿರುವ ಚರಂಡಿಗಳ ಗಾತ್ರ ಸಣ್ಣದಾಗಿದ್ದರಿಂದ ಈ ಸಮಸ್ಯೆ ಎದುರಾಗಿದೆ. ಈ ಕೂಡಲೇ ಜೆಸಿಬಿ ಕಳುಹಿಸಿ ಗ್ರಾಮದ ಚರಂಡಿಗಳನ್ನು ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಲಾಗುವುದು.**
>
> ■ ಕೆ.ಎಫ್.ಚೂರಿ ಕೋಣನತಂಬಗಿ, ಗ್ರಾಪಂ ಪಿಡಿಒ

ಗಿಡಮರ ತೆರವು: ಸಾರ್ವಜನಿಕರ ಆಕ್ರೋಶ

ಹಾವೇರಿ: ಸ್ಥಳೀಯರಿಗೆ ಮಾಹಿತಿ ನೀಡದೇ, ಈಗಾಗಲೇ ಸ್ಥಳೀಯರೇ ಶ್ರಮಪಟ್ಟು ಉದ್ಯಾನವನಕ್ಕೆಂದು ಮೀಸಲಿಟ್ಟ ಜಾಗದಲ್ಲಿ ಗಿಡಮರ ನೆಟ್ಟು ಬೆಳೆಸಿ ಪೋಷಿಸಿದ್ದನ್ನು ಏಕಾಏಕಿ ತೆರವುಗೊಳಿಸಿ, ಅಲ್ಲಿ ಬೃಹತ್ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಮುಂದಾದ ನಗರ ನೀರು ಸರಬರಾಜು ಜಲಮಂಡಳಿಯ ಸಿಬ್ಬಂದಿಗಳ ನಡೆಗೆ ಸ್ಥಳೀಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಕಾಮಗಾರಿ ತಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಸ್ಥಳೀಯ ಬಸವೇಶ್ವರನಗರ ಎ ಬ್ಲಾಕ್ 18ನೇ ಕ್ರಾಸ್‌ನ ಅಲ್ಲಮಪ್ರಭು ಸಾರ್ವಜನಿಕ ಉದ್ಯಾನವನದಲ್ಲಿ ನಗರ ನೀರು ಸರಬರಾಜು ಜಲಮಂಡಳಿ ವತಿಯಿಂದ ಬೃಹತ್ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಮುಂದಾಗಿದ್ದು, ಇದು ಸ್ಥಳೀಯರು ಹಾಗೂ ಜಲ ಮಂಡಳಿಯವರ ನಡುವಿನ ಸಂಘರ್ಷಕ್ಕೆ ಕಾರಣವಾಯಿತು. ಅಮೃತ 2.0 ಕುಡಿಯುವ ನೀರು ಯೋಜನೆಯಡಿ ಬಸವೇಶ್ವರ ನಗರಕ್ಕೆ ಕುಡಿಯುವ ನೀರು ಪೂರೈಕೆಗೆ 10ಲಕ್ಷ ಲೀ.ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಮುಂದಾಗಿದೆ. ಆದರೆ ಈ ಉದ್ಯಾನವನದಲ್ಲಿ ಹತ್ತಾರು ಜಾತಿಯ ನೂರಾರು ಗಿಡಗಳಿದ್ದು, ಜನರಿಗೆ ನೆರಳು ನೀಡುತ್ತಿವೆ. ಪಕ್ಕದಲ್ಲೇ ಸರ್.ಎಂ ವಿಶ್ವೇಶ್ವರಯ್ಯ ಶಾಲೆ, ಜೆ.ಪಿ. ರೋಟರಿ ಶಾಲೆ, ಲಯನ್ಸ್ ಇಂಗ್ಲೀಷ ಮೀಡಿಯಂ ಶಾಲೆ ಇದ್ದು, ಆಗಾಗ್ಗೆ ವಿವಿಧ ಪರೀಕ್ಷೆಗಳು ಇಲ್ಲಿ ನಡೆಯುತ್ತಿರುತ್ತವೆ. ಪರೀಕ್ಷೆಗೆಂದು ಬರುವ ಮಕ್ಕಳು ಮತ್ತು ಸ್ಪರ್ಧಾರ್ಥಿಗಳು ಅವರ ಪೋಷಕರು ವಿಶ್ರಾಂತಿಗೆ ಈ ಉದ್ಯಾನವನ್ನೇ ಆಶ್ರಯಿಸಿದ್ದಾರೆ. ಇದನ್ನು ಹೊರತುಪಡಿಸಿದರೆ ಇಡೀ ನಗರದಲ್ಲಿ ಯಾವುದೇ ಉದ್ಯಾನವನಗಳು ಅಭಿವೃದ್ಧಿಗೊಂಡಿಲ್ಲ, ಆದರೆ ಜಲಮಂಡಳಿಯವರು ಟ್ಯಾಂಕ್ ನಿರ್ಮಾಣದ ನೆಪದಲ್ಲಿ ಇದ್ದೊಂದ ಉದ್ಯಾನದ ಗಿಡಗಳನ್ನು ನಾಶ ಮಾಡುತ್ತಿದ್ದಾರೆಂಬುದು ಸ್ಥಳೀಯರ ಆರೋಪಿಸಿದರು.



ಸ್ಥಳೀಯ ನಿವಾಸಿಗಳಾದ ಶಿವರುದ್ರಯ್ಯ ಹಿರೇಮಠ, ಪ್ರಕಾಶ ಪೋತರ, ಮಂಜು ಸುಣಗಾರ, ನಗರಸಭೆ ಮಾಜಿ ಅಧ್ಯಕ್ಷ ಜಗದೀಶ ಮಲಗೋಡ, ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ಎಇಇ ಆರ್.ಕೆ. ಉಮೇಶ ಮಾತನಾಡಿದರು.

ಬಳಿಕ ಸ್ಥಳಕ್ಕಾಗಮಿಸಿದ ನಗರಸಭೆ ಮಾಜಿ ಅಧ್ಯಕ್ಷ ಹಾಗೂ ವಾರ್ಡ್ ಸದಸ್ಯ ಸಂಜೀವಕುಮಾರ ನೀರಲಗಿ ಮಾತನಾಡಿ, ನಾವು ಪರಿಸರ ವಿರೋಧಿಗಳೂ ಅಲ್ಲ, ಅಭಿವೃದ್ಧಿ ಕಾರ್ಯಕ್ಕೆ ವಿರುದ್ಧವೂ ಇಲ್ಲ, ಇಲ್ಲಿಯ ನಿವಾಸಿಗಳು ಗಿಡಮರಗಳ ಜತೆಗೆ ಭಾವನಾತ್ಮಕ ನಂಟು ಹೊಂದಿದ್ದು, ಜನರ ಬೇಡಿಕೆಗೆ ಸ್ಪಂದಿಸುವುದು ನಮ್ಮ ಕೆಲಸ. ಮಂಗಳವಾರದ ತನಕ ಸಮಯ ತೆಗೆದುಕೊಳ್ಳಿ, ಬೇರೆಡೆ ಕಾಮಗಾರಿ ನಡೆಸುವಕುರಿತಯ ಪರ್ಯಾಯವಾಗಿ ಆಲೋಚಿಸಿ. ಈ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಪ್ರಾಧಿಕಾರದ ಅಧ್ಯಕ್ಷರ ಜತೆಗೆ ಮಾತನಾಡಿ ಬೇರೆ ಸ್ಥಳ ನೋಡುವಂತೆ ಮಾತನಾಡುತ್ತೇನೆ ಎಂದು ತಿಳಿಸಿ, ಕಾಮಗಾರಿ ಸ್ಥಗಿತಗೊಳಿಸುವ ಮೂಲಕ ಪರಿಸ್ಥಿತಿ ತಿಳಿಗೊಳಿಸಿದರು.

ಕಿರುಸುದ್ದಿ

ಎ.1ರಿಂದ ಶ್ರೀ ವೀರಭದ್ರ ದೇವರ ಜಾತ್ರೆ

ಚನ್ನಮ್ಮನ ಕಿತ್ತೂರ: ಸಮೀಪದ ಚಿಕ್ಕಹಟ್ಟಿಹೊಳಿ ಗ್ರಾಮದ ಬಿಲ್ವಕ್ಷೇತ್ರದಲ್ಲಿರುವ ಶ್ರೀ ವೀರಭದ್ರ ದೇವರ ಜಾತ್ರಾಮಹೋತ್ಸವ ಎ.1ರಿಂದ 5 ರ ವರೆಗೆ ಜುರುಗಲಿದೆ. ಎ.1 ರಂದು ಬೆಳಿಗ್ಗೆ ರುದ್ರಾಭಿಷೇಕ ಸಂಜೆ 5 ಗಂಟೆಗೆ ಕಳಸಾರೋಹಣ, ಎ.2 ರಂದು ಸಂಜೆ 5 ಗಂಟೆಗೆ ಲಘು ರಥೋತ್ಸವ, ಎ.3ರಂದು ಸಂಜೆ 4 ಗಂಟೆಗೆ ಮಹಾರಥೋತ್ಸವ ನಡೆಯಲಿದೆ. ಎ. 4 ಮತ್ತು 5 ರಂದು ಬೆಳಗ್ಗೆ 8 ಗಂಟೆಗೆ ರುದ್ರಾಭಿಷೇಕ, ಮಧ್ಯಾಹ್ನ ಅಂಬಲಿ ಬಂಡಿ ನಂತರ ಬಯಲು ಕಣ ಕುಸ್ತಿಗಳು ಜರುಗಲಿವೆ ಎಂದು ಶ್ರೀ ವೀರಭದ್ರೇಶ್ವರ ದೇವಸ್ಥಾನದ ಟ್ರಸ್ಟ್ ಕಮೀಟಿ ಪ್ರಕಟಣೆಯಲ್ಲಿ ತಿಳಿಸಿದೆ.

ಅಭಿನಂದನೆ ಇಂದು

ಚನ್ನಮ್ಮನ ಕಿತ್ತೂರು: ಕಿತ್ತೂರು ತಾಲೂಕಿನ ವಿವಿಧ ಸಹಕಾರಿ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರ ಮತ್ತು ಸಿಬ್ಬಂದಿಗಳ ಅಭಿನಂಧನಾ ಸಮಾರಂಭ ಮಾ. 29 ರಂದು 12 ಗಂಟೆಗೆ ಪಟ್ಟಣದ ರಾಣಿ ಚನ್ನಮ್ಮಾ ಸ್ಮಾರಕ ಭವನದಲ್ಲಿ ಜರುಗಲಿದೆ. ಶಾಸಕ ಬಾಬಾಸಾಹೇಬ ಪಾಟೀಲ ಅಧ್ಯಕ್ಷತೆ ವಹಿಸುವರು. ಬೆಳಗಾವಿ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಉದ್ಘಾಟಿಸುವರು. ಅರಭಾಂವಿ ಶಾಸಕ ಬಾಲಚಂದ್ರ ಜಾರಕಿಹೊಳಿ, ಉಪಾಧ್ಯಕ್ಷ ರಾಜು ಕಾಗೆ, ನಿರ್ದೇಶಕ ಚನ್ನರಾಜ ಹಟ್ಟಿಹೊಳಿ, ಕೆ.ಎಂ.ಎಫ್ ನಿರ್ದೇಶಕ ಡಾ.ಬಸವರಾಜ ಪರವಣ್ಣವರ ಸೇರಿದಂತೆ ಮುಖಂಡರು ಭಾಗವಹಿಸಲಿದ್ದಾರೆ.

ಉಚಿತ ಕಣ್ಣಿನ ತಪಾಸಣಾ ಶಿಬಿರ ಇಂದು

ಯರಗಟ್ಟಿ: ಸಮೀಪದ ತಲ್ಲೂರ ಗ್ರಾಮದಲ್ಲಿ ಕರ್ನಾಟಕ ಪತ್ರಕರ್ತರ ಸಂಘ ತಾಲೂಕು ಘಟಕ ಯರಗಟ್ಟಿ ಮತ್ತು ಗ್ರಾಮ ಪಂಚಾಯತಿ ತಲ್ಲೂರ ಹಾಗೂ ಜನಪ್ರಿಯ ಕಣ್ಣಿನ ಆಸ್ಪತ್ರೆ ಹುಬ್ಬಳ್ಳಿ ಸಂಯುಕ್ತ ಆಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಾಗೂ ಶಸ್ತ್ರಚಿಕಿತ್ಸೆಯನ್ನು ಮಾ.29ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ಗಂಟೆಗೆಯವರೆಗೆ ಹಮ್ಮಿಕೊಳ್ಳಲಾಗಿದೆ. ತಲ್ಲೂರ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಮಸ್ತ ಜನತೆಯ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪತ್ರಕರ್ತ ಸಂಘದ ತಾಲೂಕಾಧ್ಯಕ್ಷ ಈರಣ್ಣಾ ಹೂಲ್ಲೂರ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಕಂಚಿನ ಪದಕ ಪಡೆದ ಕೆಎಲ್‌ಇ ವಿದ್ಯಾರ್ಥಿ

ಬೆಳಗಾವಿ: ನಗರದ ಕೆಎಲ್‌ಇ ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ (ಸ್ವಾಯತ್ತ) ಮಹಾವಿದ್ಯಾಲಯದ ಬಿಸಿಎ 6ನೇ ಸೆಮೆಸ್ಟರ್ ವಿದ್ಯಾರ್ಥಿ ಕರನಸೇನ ದೇಸಾಯಿ ಪಂಜಾಬನ ಜಲಂದರನಲ್ಲಿ ಮಾ.16ರಂದು ನಡೆದ ಅಂತರ ವಿಶ್ವವಿದ್ಯಾಲಯ ಟೆಕ್ವೊಂಡೊ ಸ್ಪರ್ಧೆಯ 63ಕೆಜಿ ಪುರುಷರ ವಿಭಾಗದಲ್ಲಿ ಕಂಚಿನ ಪದಕವನ್ನು ಪಡೆದು ಮಹಾವಿದ್ಯಾಲಯದ ಕೀರ್ತಿಯನ್ನು ಇಮ್ಮಡಿಗೊಳಿಸಿದ್ದಾನೆ. ಈ ವಿದ್ಯಾರ್ಥಿಯ ಸಾಧನೆಗೆ ಕೆಎಲ್‌ಎ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷರಾದ ಪದ್ಮಶ್ರೀ ಪುರಸ್ಕೃತ ಡಾ. ಪ್ರಭಾಕರ ಕೋರೆ ಅವರು ಸನ್ಮಾನಿಸಿ ಪ್ರಶಂಸಿಸಿದರು. ಪ್ರಾಚಾರ್ಯರಾದ ಡಾ. ಜ್ಯೋತಿ ಎಸ್. ಕವಳೇಕರ, ಬಿಸಿಎ ಸಂಯೋಜಕರಾದ ರೋಹಿತ ದೇಶಪಾಂಡೆ, ಜಿಮಖಾನಾ ಉಪಾಧ್ಯಕ್ಷರಾದ ವಿ. ಕೆ. ಗಾಣಿಗೇರ, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಶಿವಾನಂದ ಬುಲಬುಲಿ ಹಾಗೂ ಎಲ್ಲ ವಿಭಾಗಗಳ ಮುಖ್ಯಸ್ಥರು ಹಾಗೂ ಆಡಳಿತ ಮಂಡಳಿಯ ಸದಸ್ಯರು, ಅಭಿನಂದಿಸಿದರು. ಈ ವೇಳೆ ಕೆಎಲ್ ಇ ಸಂಸ್ಥೆಯ ಕಾಲೇಜು ಆಡಳಿತ ಮಂಡಳಿ ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಹಲವರು ಇದ್ದರು.

ನಿಯಂತ್ರಣ ತಪ್ಪಿದ ಬೈಕ್: ಸವಾರ ಸಾವು

ಬೈಲಹೊಂಗಲ: ವೇಗವಾಗಿ ಚಲಿಸುತ್ತಿದ್ದ ಬೈಕ್ ನಿಯಂತ್ರಣ ತಪ್ಪಿ ರಸ್ತೆ ಬದಿ ಇರುವ ಗೂಟ ಕಲ್ಲಿಗೆ ಡಿಕ್ಕಿ ಹೊಡೆದ ಪರಿಣಾಮ ಓರ್ವ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದು, ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡ ಘಟನೆ ತಾಲೂಕಿನ ಮಾಟೊಳ್ಳಿ ಕ್ರಾಸ್ ಬಳಿ ಶನಿವಾರ ಮಧ್ಯಾಹ್ನ ನಡೆದಿದೆ. ಮೃತನನ್ನು ಕಾರ್ಲಕಟ್ಟಿ ತಾಂಡಾ ನಿವಾಸಿ ಶಿವಾನಂದ ಹಾಲಪ್ಪ ಲಮಾಣಿ (28) ಎಂದು ಗುರುತಿಸಲಾಗಿದೆ. ಗಂಭೀರವಾಗಿ ಗಾಯಗೊಂಡಿರುವ ವಿನಾಯಕ ಚನ್ನಪ್ಪ ಲಮಾಣಿ (19) ಅವರನ್ನು ಬೆಳಗಾವಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಕಾರ್ಲಕಟ್ಟಿ ತಾಂಡಾದಿಂದ ಬೈಲಹೊಂಗಲ ಮಾರ್ಗವಾಗಿ ಬೆಳಗಾವಿ ಕಡೆ ತೆರಳುತ್ತಿದ್ದ ವೇಳೆ ಮಾಟೊಳ್ಳಿ ಕ್ರಾಸ್ ಬಳಿ ಬೈಕ್ ನಿಯಂತ್ರಣ ತಪ್ಪಿ ಈ ದುರ್ಘಟನೆ ಸಂಭವಿಸಿದೆ ಎಂದು ತಿಳಿದುಬಂದಿದೆ. ಸ್ಥಳಕ್ಕೆ ಸಿಪಿಐ ವೀರೇಶ ಮಠಪತಿ ಹಾಗೂ ಪೊಲೀಸ್ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿದಿದೆ.



ಹಿರೇವಾಗೇವಾಡಿ: ಹಿರೇವಾಗೇವಾಡಿಯಲ್ಲಿ ಶ್ರೀ ಪಡಿಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಏರ್ಪಡಿಸಲಾದ ವಾಲಿಬಾಲ್ ಫೈನಲ್ ಪಂದ್ಯದಲ್ಲಿ ಗೆದ್ದ ತಂಡದವರಿಗೆ ಶ್ರೀ ಪಡಿಬಸವೇಶ್ವರ ಟ್ರೋಫಿ ಮತ್ತು ನಗದು ಬಹುಮಾನವನ್ನು ಗಣ್ಯರಿಂದ ವಿತರಿಸಲಾಯಿತು. ಉದ್ಯಮಿ ಈರಣ್ಣ ರೊಟ್ಟಿ, ಮಂಜುನಾಥ ಧರಣ್ಣವರ, ಸಿದ್ದಪ್ಪ ಹುಕ್ಕೇರಿ, ಸುರೇಶ ಗುರುವನ್ನವರ, ಅಶೋಕ ಜಪ್ತಿ, ಮಹೇಶ ಖನಗಾವಿ ಇತರರು ಇದ್ದರು.

ವಾತ್ಸಲ್ಯ ಯೋಜನೆಯಡಿ ಮನೆ ಹಸ್ತಾಂತರ

ರಾಯಬಾಗ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಅಥಣಿ ಜಿಲ್ಲೆ ವ್ಯಾಪ್ತಿಯ ರಾಯಬಾಗ ಯೋಜನಾ ಕಚೇರಿಯ ಬಿರಡಿ ವಲಯ ಜಾಲಾಲಪುರ ಗ್ರಾಮದ 76 ವರ್ಷದ ಕಲ್ಲವ್ವಾ ಬನಾಜೆ ಅವರಿಗೆ ವಾತ್ಸಲ್ಯ ಯೋಜನೆಯಡಿ ಮನೆ ನಿರ್ಮಿಸಿ ಮನೆ ಹಸ್ತಾಂತರ ಮಾಡಲಾಯಿತು.

ಜೋಪಡಿಯಲ್ಲಿ ವಾಸಿಸುತ್ತಿದ್ದ ಕಲ್ಲವ್ವಾ ಬನಾಜೆಗೆ ಧರ್ಮಸ್ಥಳ ಯೋಜನೆಯಿಂದ ನೆರವು ಒದಗಿಸಲಾಗಿದೆ. ಕಳೆದ 5 ವರ್ಷಗಳಿಂದ 1000 ರೂ. ಮಾಸಾಶನ ಪಡೆದು ಜೀವನ ಸಾಗಿಸುತ್ತಿದ್ದಾರೆ.

ಯೋಜನೆಯ ಧಾರವಾಡ ಪ್ರಾದೇಶಿಕ ನಿರ್ದೇಶಕರಾದ ದಯಾಶೀಲ, ಜಿಲ್ಲಾ ನಿರ್ದೇಶಕ ನಾಗರತ್ನಾ ಹೆಗ್ಗಡೆ, ಅಖಿಲ ಕರ್ನಾಟಕ ಜಿಲ್ಲಾ ಜನ ಜಾಗೃತಿ ವೇದಿಕೆಯ ಉಪಾಧ್ಯಕ್ಷ ಜಿನೇಂದ್ರ ಖೇಮಲಾಪುರೆ, ಜನಜಾಗೃತಿ ವೇದಿಕೆ ಸದಸ್ಯ ಗಿರೀಶಗೌಡ ಪಾಟೀಲ, ದೀಪಕ್ ಪಾಟೀಲ್ ಕಾರ್ಯಕ್ರಮ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಾದೇಶಿಕ ವಿಭಾಗದ ಜ್ಞಾನ ವಿಕಾಸ ಯೋಜನಾಧಿಕಾರಿ ಸುಧಾ ನಾಯಿಕ, ರಾಯಬಾಗ ತಾಲೂಕಿನ ಯೋಜನಾಧಿಕಾರಿ ಮಹೇಶ್ವರಪ್ಪ , ವಲಯದ ಮೇಲ್ವಿಚಾರಕರಾದ ಮಂಜುನಾಥ ಜಾಬಣ್ಣವರ ಸ್ವಾಗತಿಸಿದರು. ಜಾನವಿಕಾಸ ಸಮನ್ವಯ ಅಧಿಕಾರಿ ಸುರೇಖಾ ಹೆಬ್ಬಳ್ಳಿ, ಸೇವಾ ಪ್ರತಿನಿಧಿ ದೀಪಾ ಚೌಗಲಾ, ಐಶ್ವರ್ಯ ಚೌಗಲಾ, ಸುನಿಲ್, ರಾಮು, ಗುಂಡು, ಮಹಾವೀರ್ ಸಂತೋಷ, ಬೀರಪ್ಪ, ಶೋಭಾ, ಸುಲ್ತಾನ ಉಪಸ್ಥಿತರಿದ್ದರು.



ರಾಯಬಾಗ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಅಥಣಿ ಜಿಲ್ಲೆ ವ್ಯಾಪ್ತಿಯ ರಾಯಬಾಗ ಯೋಜನಾ ಕಚೇರಿಯ ಬಿರಡಿ ವಲಯ ಜಾಲಾಲಪುರ ಗ್ರಾಮದ 76 ವರ್ಷದ ಕಲ್ಲವ್ವಾ ಬನಾಜೆ ಅವರಿಗೆ ವಾತ್ಸಲ್ಯ ಯೋಜನೆಯಡಿ ಮನೆ ನಿರ್ಮಿಸಿ ಮನೆ ಹಸ್ತಾಂತರ ಮಾಡಲಾಯಿತು.

ಪ್ರಶಿಕ್ಷಣ ಮಹಾಭಿಯಾನ | ಶಾಸಕ ಬಾಲಚಂದ್ರ ಜಾರಕಿಹೊಳಿ ಭರವಸೆ

2028ರಲ್ಲಿ ಬಿಜೆಪಿಗೆ ಅಧಿಕಾರ

ಗೋಕಾಕ: 2028 ರಲ್ಲಿ ರಾಜ್ಯದಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ ಎಂದು ಅರಭಾವಿ ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ವಿಶ್ವಾಸ ವ್ಯಕ್ತಪಡಿಸಿದರು.

ಶುಕ್ರವಾರ ಸಂಜೆ ಇಲ್ಲಿನ ಹೊರ ವಲಯದ ಗೋಕಾಕ ಸಪ್ಲಾಯರ್ಸ್ ಸಭಾ ಭವನದಲ್ಲಿ ಅರಭಾವಿ ಬಿಜೆಪಿ ಮಂಡಲವು ಹಮ್ಮಿಕೊಂಡ ಪಂ. ದೀನ ದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನದ ಎರಡನೇ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಜನರ ಆಶೀರ್ವಾದದೊಂದಿಗೆ ಬಿಜೆಪಿ ಅಧಿಕಾರಕ್ಕೆ ಬಂದು ಸರ್ಕಾರ ರಚಿಸಲಿದೆ ಎಂದು ಹೇಳಿದರು.

ಶ್ಯಾಮ್ ಪ್ರಸಾದ ಮುಖರ್ಜಿ ಮತ್ತು ದೀನ ದಯಾಳ ಉಪಾಧ್ಯಾಯ ಅವರು ಹುಟ್ಟು ಹಾಕಿದ್ದ ಜನಸಂಘವು ಮುಂದೆ ಭಾರತೀಯ ಜನತಾ ಪಾರ್ಟಿಯಾಗಿ ಬದಲಾಯಿತು. ಭಾರತರತ್ನ ಅಟಲ್ ಬಿಹಾರಿ ವಾಜಪೇಯಿ, ಲಾಲ್ ಕೃಷ್ಣ ಅಡ್ವಾಣಿ, ಡಾ. ಮುರಳಿ ಮನೋಹರ ಜೋಷಿ ಅವರು 80 ರ ದಶಕದಲ್ಲಿ ಪಕ್ಷವನ್ನು ಮುನ್ನಡೆಸಿದರು.

ಆರಂಭದಲ್ಲಿ ಕೇವಲ ಇಬ್ಬರು ಸಂಸತ್ ಸದಸ್ಯರನ್ನು ಹೊಂದಿದ್ದ ಪಕ್ಷವು ಹೊರಡಿಸಿದ್ದ ಚುನಾವಣಾ ಪ್ರಣಾಳಿಕೆ ಬಗ್ಗೆ ವಿರೋಧಿಗಳು ವ್ಯಂಗ್ಯಭರಿತ ಮಾತುಗಳನ್ನಾಡುತ್ತಿದ್ದರು. ಆದರೆ, ಕಾಲ ಕ್ರಮೇಣ ಇಡೀ ದೇಶದ ಮೂಲೆ- ಮೂಲೆಗಳಲ್ಲಿ ಅಧಿಕಾರಕ್ಕೆ ಬಂದಿದೆ. ಬಿಜೆಪಿ ರಾಷ್ಟ್ರವ್ಯಾಪಿ ಬಲವರ್ಧನೆಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಷಾ ಅವರ ಕೊಡುಗೆ ಅಪಾರವಿದೆ.

2014 ರಲ್ಲಿ ಭಾರತದ ಪ್ರಧಾನ ಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿರುವ ನರೇಂದ್ರ ಮೋದಿಯವರು ಮೂರನೇ ಅವಧಿಗೆ ದೇಶವನ್ನು ಮುನ್ನಡೆಸುವ ಅವಕಾಶ ಪ್ರಾಪ್ತಿಯಾಯಿತು. ದೇಶದ ಕೋಟ್ಯಂತರ ಕಾರ್ಯಕರ್ತರ ತ್ಯಾಗ, ಶ್ರಮದ ಫಲವಾಗಿ ಅಧಿಕಾರಕ್ಕೆ ಬಂದಿರುವ ನಮ್ಮ ಪಕ್ಷವು 'ಸಬ್ ಕಾ ಸಾಥ್, ಸಬ್ ಕಾ ವಿಕಾಸ' ಎಂಬ ಧ್ಯೇಯದೊಂದಿಗೆ ಎಲ್ಲ ವರ್ಗಗಳ ಹಿತಕ್ಕಾಗಿ ಕೆಲಸ ಮಾಡುತ್ತಿದೆ. ಪ್ರಧಾನಿಯವರ ದೂರದೃಷ್ಟಿಯಿಂದ ನಮ್ಮ ಭಾರತವನ್ನು ಜಾಗತಿಕ ಮಟ್ಟದಲ್ಲಿ ಕೊಂಡ್ಯೊಯ್ಯುವ ಕೆಲಸವನ್ನು ಪ್ರಧಾನಿಗಳು ಅತ್ಯಂತ ಪ್ರಾಮಾಣಿಕತೆಯಿಂದ ಮಾಡುತ್ತಿದ್ದಾರೆ. ದೇಶದ ಮೂಲೆ- ಮೂಲೆಗಳಲ್ಲೂ ಕಮಲದ ಬಾವುಟ ಹಾರಾಡುತ್ತಿದೆ. ಮೋದಿಯವರ ಸೇವೆಯು ನಮ್ಮ ದೇಶಕ್ಕೆ ಇನ್ನೂ ಬೇಕಾಗಿದೆ ಎಂದು ಅವರು ತಿಳಿಸಿದರು.

ಅಧ್ಯಕ್ಷತೆಯನ್ನು ಅರಭಾವಿ ಮಂಡಲ ಬಿಜೆಪಿ ಅಧ್ಯಕ್ಷ ಮಹಾದೇವ ಶೆಕ್ಕಿ ವಹಿಸಿದ್ದರು.

ಬೆಳಗಾವಿ ವಿಭಾಗೀಯ ಪ್ರಭಾರಿ, ಮಾಜಿ ಶಾಸಕ ಸಂಜಯ ಪಾಟೀಲ, ಜಿಲ್ಲಾ ಗ್ರಾಮೀಣ ಅಧ್ಯಕ್ಷ ಸುಭಾಸ ಬಿ' ಪಾಟೀಲ, ರಾಷ್ಟ್ರೀಯ ಓಬಿಸಿ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಲಕ್ಷ್ಮಣ ತಪಸಿ, ಅರಭಾವಿ ಬಿಎಲ್‌ಎ-1 ಪ್ರಭಾರಿ ಗೋವಿಂದ ಕೊಪ್ಪದ, ನಿತೀನ ಚೌಗುಲೆ, ವೀರಭದ್ರಯ್ಯ ಪೂಜೇರಿ, ಪರಸಪ್ಪ ಬಬಲಿ, ಪ್ರಮೋದ. ನುಗ್ಗಾನಟ್ಟಿ ಅವರು ವೇದಿಕೆಯಲ್ಲಿದ್ದರು.



ಗ್ರಾಪಂ, ತಾಪಂ, ಜಿಪಂ ಚುನಾವಣೆಗೆ ಸಜ್ಜಾಗಿ

ಕೇಂದ್ರ ಸರ್ಕಾರದ ಅವಧಿಯಲ್ಲಿ ನಡೆದಿರುವ ಅನೇಕ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಿಳಿಸುವ ಕೆಲಸ ಕಾರ್ಯಕರ್ತರದ್ದಾಗಿದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕಿದ್ದ ಸಂದರ್ಭದಲ್ಲಿ ಜಾರಿಗೊಂಡ ಹಲವು ಮಹತ್ತರ ಜನೋಪಯೋಗಿ ಕಾರ್ಯಕ್ರಮಗಳ ಬಗ್ಗೆ ಜನರಿಗೆ ತಿಳಿ ಹೇಳುವ ಕೆಲಸವಾಗಬೇಕಿದೆ. ಮುಂಬರುವ ಗ್ರಾಪಂ, ತಾಪಂ, ಜಿಪಂ ಚುನಾವಣೆಗಳಲ್ಲಿ ಬಿಜೆಪಿ (ಬೆಂಬಲಿತ) ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಕಳಿಸಲು ಕಾರ್ಯಕರ್ತರು ಶ್ರಮಿಸಬೇಕು ಎಂದು ಕೋರಿದರು. ಬಿಜೆಪಿ ಜತೆ ಜೆಡಿಎಸ್ ಪಕ್ಷವು ಮೈತ್ರಿಗೊಂಡಿದ್ದರಿಂದ ನಮ್ಮ ಪಕ್ಷಕ್ಕೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅನುಕೂಲವಾಗಲಿದೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿಯವರು ತಿಳಿಸಿದರು.

ಪರಿಹಾರಕ್ಕಾಗಿ ರೈತರ ಒತ್ತಾಯ

ತೆಲಸಂಗ: ಅಕಾಲಿಕ ಮಳೆಯಿಂದಾಗಿ ನಮಗೆ ಚೇತರಿಸಿಕೊಳ್ಳಲಾಗದಷ್ಟು ನಷ್ಟವಾಗಿದೆ. ಸರ್ಕಾರ ಮತ್ತು ತೋಟಗಾರಿಕೆ ಇಲಾಖೆ ಕೂಡಲೇ ಎಚ್ಚೆತ್ತುಕೊಂಡು ಸಮಿತಿ ರಚನೆ ಮಾಡಬೇಕು. ಸ್ಥಳಕ್ಕೆ ಭೇಟಿ ನೀಡಿ ನಷ್ಟದ ವರದಿ ತಯಾರಿಸಿ, ತಕ್ಷಣವೇ ಸೂಕ್ತ ಪರಿಹಾರ ಘೋಷಿಸಬೇಕು. ರೈತರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಕನ್ನಾಳ ಹಾಗೂ ಮತ್ತು ತೆಲಸಂಗ ಗ್ರಾಮದ ರೈತರು ಆಗ್ರಹಿಸಿದ್ದಾರೆ.

ಮುಖಂಡ ಯಂಕಣ್ಣ ಅಸ್ಕಿ ಮಾತನಾಡಿ, ಶುಕ್ರವಾರ ರಾತ್ರಿ ಬೀಸಿದ ಭೀಕರ ಗಾಳಿ ಮತ್ತು ಅಕಾಲಿಕ ಮಳೆಗೆ ಈ ಭಾಗದ ದ್ರಾಕ್ಷಿ ಬೆಳೆಗಾರರು ಅಕ್ಷರಶಃ ಬೀದಿಗೆ ಬಿದ್ದಿದ್ದಾರೆ. ಜೋರಾದ ಗಾಳಿಗೆ ಒಣ ದ್ರಾಕ್ಷಿ ತಯಾರಿಕಾ ಶೆಡ್‌ಗಳ ಮೇಲಿನ ಮೇಲ್ಹಾವಣಿ ಹಾರಿ ಹೋಗಿದ್ದರಿಂದ, ಲಕ್ಷಾಂತರ ರೂಪಾಯಿ ಮೌಲ್ಯದ ದ್ರಾಕ್ಷಿ ಮಳೆಗೆ ಸಿಲುಕಿ ಹಾಳಾಗಿದೆ. ಒಣಗಲು ಹಾಕಿದ್ದ ದ್ರಾಕ್ಷಿ ಸಂಪೂರ್ಣವಾಗಿ ನೆನೆದಿದೆ. ಇದರಿಂದ ದ್ರಾಕ್ಷಿ ಕಪ್ಪು ಬಣ್ಣಕ್ಕೆ ತಿರುಗಿದ್ದು, ಗುಣಮಟ್ಟ ಕಳೆದುಕೊಂಡಿದೆ. ಮಾರುಕಟ್ಟೆಯಲ್ಲಿ ಇದಕ್ಕೆ ಬೆಲೆ ಸಿಗದಂತಾಗಿದ್ದು, ರೈತರು ಹಾಕಿದ ಬಂಡವಾಳವೂ ವಾಪಸ್ ಬರದ ಸ್ಥಿತಿ ನಿರ್ಮಾಣವಾಗಿದೆ. ಕನ್ನಾಳ ಗ್ರಾಮದ ರೈತರಾದ ತಾನಾಜಿ ಭೋಸ್ಲೆ, ಗಣಪ ಭೋಸ್ಲೆ ಹಾಗೂ ಮೀನಾಕ್ಷಿ ಭೋಸ್ಲೆ ಅವರಿಗೆ ಸೇರಿದ ಒಣ ದ್ರಾಕ್ಷಿ ಶೆಡ್‌ಗಳು ಮೇಲ್ಹಾವಣಿ ಹಾರಿ ಹೋಗಿದ್ದರಿಂದ, ದ್ರಾಕ್ಷಿಯನ್ನು ಹದ ಮಾಡಿ ಒಣಗಿಸುವ ಹಂತದಲ್ಲಿದ್ದಾಗ ಈ ಅವಾಂತರ ಸಂಭವಿಸಿದ್ದು, ಪ್ರಸ್ತುತ ಮಾರುಕಟ್ಟೆ ಬೆಲೆಯ ಅಂದಾಜಿನಂತೆ ಸುಮಾರು 50 ಲಕ್ಷ ರೂಪಾಯಿಗಳಿಗೂ ಅಧಿಕ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ವರ್ಷವಿಡೀ ಕಷ್ಟಪಟ್ಟು ಬೆಳೆದ ಬೆಳೆ ಇನ್ನೇನು ಕೈ ಸೇರಬೇಕೆನ್ನುವಷ್ಟರಲ್ಲಿ ಮಳೆಯ ಪಾಲಾಗಿರುವುದು ರೈತ ಕುಟುಂಬವನ್ನು ಕಂಗಾಲಾಗಿಸಿದ್ದು, ಸರಕಾರ ಪರಿಹಾರ ಒದಗಿಸಿ ರೈತರ ಕೈ ಹಿಡಿಯಬೇಕು ಎಂದು ಆಗ್ರಹಿಸಿದರು.

ಸಚೀನ ಪಾಟೀಲ, ತಾನಾಜಿ ಭೋಸ್ಲೆ, ಗಣಪ ಭೋಸ್ಲೆ, ಮೀನಾಕ್ಷಿ ಭೋಸ್ಲೆ ಸೇರಿದಂತೆ ರೈತರು ಉಪಸ್ಥಿತರಿದ್ದರು.



ಎ.1ರಂದು ಹನುಮ ತೊಟ್ಟಿಲೋತ್ಸವ

ಕಕಮರಿ: ಶ್ರೀ ಹನುಮ ಜನ್ಮೋತ್ಸವ ಅಂಗವಾಗಿ ಎ.1ರಂದು ಬೆಳಿಗ್ಗೆ 8ಗಂಟೆಗೆ ಹನುಮಾನ ದೇವಸ್ಥಾನದಲ್ಲಿ ಹನುಮ ತೊಟ್ಟಿಲೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಮಧ್ಯಾಹ್ನ 3.30ಕ್ಕೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹನುಮಾನ ಪೋಟೋ ಮೆರವಣಿಗೆ ಅದ್ದೂರಿಯಾಗಿ ನಡೆಯಲಿದ್ದು, ಸಂಜೆ 6ಗಂಟೆಗೆ ಸಾರ್ವಜನಿಕ ಕಾರ್ಯಕ್ರಮ ಜರುಗಲಿದೆ. ಯಕ್ಕಂಚಿ ಗುರುದೇವ ತಪೋವನ ಪ.ಪೂ.ಗುರುಪಾದ ಸ್ವಾಮೀಜಿ, ಮೈಗೂರ ಶಿವಾನಂದ ಮಠ, ಪ.ಪೂ.ಗುರುಪ್ರಸಾದ ಸ್ವಾಮೀಜಿ, ಹಾಗೂ ಕಕಮರಿ ಗುರುದೇವ ಯೋಗಾಶ್ರಮದ ಪ.ಪೂ.ಆತ್ಮಾರಾಮ್ ಸ್ವಾಮೀಜಿ ಸಾನ್ನಿಧ್ಯ ವಹಿಸಿಕೊಳ್ಳಲಿದ್ದಾರೆ.



ಧರ್ಮಜಾಗೃತಿ ಕುರಿತು ಬೆಂಗಳೂರ ವಿಶೇಷ ಉಪನ್ಯಾಸವನ್ನು ಹಾರಿಕಾ ಮಂಜುನಾಥ ನೀಡಲಿದ್ದಾರೆ. ಜಾತಿ ಭೇದಗಳನ್ನು ಮರೆತು ದೇಶ ಹಾಗೂ ಧರ್ಮರಕ್ಷಣೆಯ ಸಂಕಲ್ಪದೊಂದಿಗೆ ನಡೆಯುವ ಈ ಕಾರ್ಯಕ್ರಮಕ್ಕೆ ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಶ್ರೀ ಹನುಮ ಜನ್ಮೋತ್ಸವ ಸಮಿತಿ ಹಾಗೂ ಹನುಮಾನ ದೇವಸ್ಥಾನ ಕಮೀಟಿಯವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಆಧ್ಯಾತ್ಮದಿಂದ ಮನುಷ್ಯನಿಗೆ ನೆಮ್ಮದಿ: ದಿಂಗಾಲೇಶ್ವರ ಶ್ರೀ

ಯರಗಟ್ಟಿ: ಇಂದು ಮನುಷ್ಯ ಶಾಂತಿ ನೆಮ್ಮದಿ ಕಳೆದುಕೊಳ್ಳುತ್ತಿದ್ದು, ಆಧ್ಯಾತ್ಮಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ತೊಡಗುವ ಮೂಲಕ ಶಾಂತಿ, ನೆಮ್ಮದಿ ಕಂಡುಕೊಳ್ಳಬೇಕು ಎಂದು ಶಿರಹಟ್ಟಿ ಜಗದ್ಗುರು ಫಕ್ಕೀರೇಶ್ವರ ಸಂಸ್ಥಾನ ಮಠದ ಫಕ್ಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ಸಮೀಪದ ಆಲದಕಟ್ಟಿ ಕೆ.ಎಮ್ ಗ್ರಾಮದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಶ್ರೀ ಶಿವಯೋಗೀಶ್ವರ ಜಾತ್ರಾ ಮಹೋತ್ಸವ, ನೂತನವಾಗಿ ನಿರ್ಮಾಣಗೊಂಡ, ರಥದ ಲೋಕಾರ್ಪಣೆ, ಆಧ್ಯಾತ್ಮಿಕ ಪ್ರವಚನ, ಸುಮಂಗಲೆಯರಿಗೆ ಉಡಿ ತುಂಬುವಿಕೆ ಹಾಗೂ ಸಾಮೂಹಿಕ ವಿವಾಹ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಆಧ್ಯಾತ್ಮದ ರುಚಿ ಅಮೃತಕ್ಕೆ ಸಮಾನ. ಯಾರು ಆಧ್ಯಾತ್ಮದ ದಾರಿಯಲ್ಲಿ ನಡೆಯುತ್ತಾರೊ ಅವರು ಸದ್ಗುರುವಿನ ಆಶೀರ್ವಾದ ಪಡೆದುಕೊಳ್ಳುತ್ತಾರೆ ಎಂದರು.



ಮುರಗೋಡ ಮಹಾಂತ ದುರದುಂಡೇಶ್ವರಮಠದ ನೀಲಕಂಠ ಸ್ವಾಮೀಜಿ ಮಾತನಾಡಿದರು.

ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ, ಬೈಲಹೊಂಗಲ ಮೂರುಸಾವಿರ ಮಠದ ಪ್ರಭುನೀಲಕಂಠ ಸ್ವಾಮೀಜಿ ಆಶೀರ್ವಚನ ನೀಡಿದರು. ಶ್ರೀಗಳನ್ನು ಹಾಗೂ ಗಣ್ಯರನ್ನು ಸನ್ಮಾನಿಸಿದರು.

ವೇದ.ಮೂರ್ತಿ ಸದಾನಂದ ಶಾಸ್ತ್ರಿ ನಿಂಗಯ್ಯ ಸ್ವಾಮೀಜಿ, ಚಂದ್ರಯ್ಯ ಹಿರೆಮಠ, ಬಸಲಿಂಗಯ್ಯ ಹಿರೇಮಠ, ವಿಶಾಲ ಹಿರೆಮಠ, ಸಿದ್ದೇಶಕುಮಾರ ಹೊಳಲ, ಮಾಜಿ ಕೆಎಂಎಫ್ ಅಧ್ಯಕ್ಷ ಎಸ್.ಎಸ್.ಮುಗಳಿ, ಮುಖಂಡ ಸಂಗ್ರಾಮ ಗೌಡರ, ನಾಗಪ್ಪ ಚವಡಪ್ಪನವರ, ಸಿದ್ದು ಕಡಕೋಳ, ಸೋಮಲಿಂಗಪ್ಪ ಚವಡಪ್ಪನವರ, ಬಸವಣೆಪ್ಪ ವಂಟಮೂರಿ, ಬಸವರಾಜ ಯರಗಟ್ಟಿ, ರಾಯಪ್ಪ ರಾಯಣ್ಣವರ, ಗೌಡಪ್ಪ ಕಡಕೋಳ, ಅರ್ಜುನ ಸವದತ್ತಿ, ರಾಜು ಅಂದಾನಿ ಮತ್ತಿತರಿದ್ದರು.

ದೇವಸ್ಥಾನಕ್ಕೆ ಬೀಗ: ಹೊರಗಡೆ ಹರಕೆ ತೀರಿಸಿದ ಭಕ್ತ ಸಮೂಹ


ಯಮಕನಮರಡಿ: ಪ್ರತಿವರ್ಷದ ಪದ್ಧತಿಯಂತೆ ಸ್ಥಳೀಯ ಜೋಡಲಕ್ಷ್ಮೀ ದೇವಿಯರ ಹೆಡಿಗೆ ಜಾತ್ರೆಯನ್ನು ಮಾ.27ರಂದು ಆಯೋಜಿಸಲಾಗಿತ್ತು.ಆದರೆ, ಕೆಲವರು ಸದರಿ ದೇವಸ್ಥಾನಕ್ಕೆ ಬೀಗ ಹಾಕಿ ಪ್ರವೇಶಕ್ಕೆ ತೊಂದರೆ ಮಾಡಿದ್ದಾರೆ. ಈ ಕುರಿತು ಸಮಾಜದ ಮುಖಂಡರಾದ ರಾಣಪ್ಪಾ ತಬರಿ, ಲಗಮಣ್ಣಾ ಖೋತ, ವೀರಭದ್ರ ಜಿನರಾಳಿ, ದೇವಪ್ಪಾ ಜಿನರಾಳಿ, ಶಂಕರ ತೇಗುರಿ, ಸತೀಶ ತೇಗುರಿ, ದೇವಪ್ಪಾ ಹೂನ್ನೂರಿ ಗ್ರಾಮದ ನಾಯಿಕ ಸಮುದಾಯದ ಹಿರಿಯರು ಶುಕ್ರವಾರ ದಿನ ದೇವಿಯರ ಹರಿಕೆಯನ್ನು ಮುಟ್ಟಿಸಲು ದೇವಸ್ಥಾನಕ್ಕೆ ಹೊದಾಗ ಕೆಲ ವ್ಯಕ್ತಿಗಳು ದೇವಸ್ಥಾನಕ್ಕೆ ಬೀಗ ಹಾಕಿ ದೇವಸ್ಥಾನಕ್ಕೆ ಪ್ರವೇಶ ಮಾಡದಂತೆ ತಡೆದರು. ಈ ಕುರಿತು ಹೆಡಿಗೆ ಜಾತ್ರೆ ಮಾಡುವ ಸುಮಂಗಳಿಯರು ಹಾಗೂ ಮುಖ್ಯಸ್ಥರು ದೇವಸ್ಥಾನದ ಹೊರಗಡೆ ದೇವಿಯ ಹರಕೆಯನ್ನು ಮುಟ್ಟಿಸಿದ್ದಾರೆ.



ಗೋಸಾವಿ ಮಠದಿಂದ ಕುಲಪತಿ ಡಾ.ಪಾಟೀಲ್‌ರಿಗೆ ಸನ್ಮಾನ

ಯಮಕನಮರಡಿ: ಶ್ರೀಹರಿಕಾಕ ಗೋಸಾವಿ ಭಗವತ್ ಮಠವು ಆಧ್ಯಾತ್ಮಿಕತೆ, ಶಿಕ್ಷಣ ಹಾಗೂ ಸಾಮಾಜಿಕ ಸೇವೆಗಳ ಕ್ಷೇತ್ರಗಳಲ್ಲಿ ಮಹತ್ವದ ಕಾರ್ಯಗಳನ್ನು ನಿರಂತರವಾಗಿ ಕೈಗೊಳ್ಳುತ್ತಿದೆ ಎಂದು ಪುಣೆಯ ವಿದ್ಯಾಪೀಠದ ಕುಲಪತಿ ಡಾ. ಡಿ.ವೈ. ಪಾಟೀಲ ಹಾಗೂ ಉಪಕುಲಪತಿ ಡಾ. ಪಿ.ಡಿ. ಪಾಟೀಲ ಬಾಳೆಗಿಡ ಅಭಿಪ್ರಾಯಪಟ್ಟರು.

ಹತ್ತರಗಿ-ಯಮಕನಮರಡಿ ಪ್ರದೇಶದಲ್ಲಿರುವ ಪ್ರಾಚೀನ ಶ್ರೀ ಹರಿಕಾಕ ಗೋಸಾವಿ ಭಗವತ್ ಮಠಕ್ಕೆ ಭೇಟಿ ನೀಡಿದ ಅವರು, ಮಠದ ವತಿಯಿಂದ ನಡೆಯುತ್ತಿರುವ ವಿವಿಧ ಉಪಕ್ರಮಗಳನ್ನು ಅವಲೋಕಿಸಿದರು. ಮಠದ ಪ್ರಸ್ತುತ ಪೀಠಾಧೀಶರಾದ ಡಾ. ಆನಂದ ಮಹಾರಾಜ್ ಗೋಸಾವಿಯವರು ಶ್ರೀ ಹರಿಕಂಚ ಆಧ್ಯಾತ್ಮಿಕ ಪರಂಪರೆಯನ್ನು ಸಮರ್ಪಕವಾಗಿ ಮುಂದುವರಿಸುತ್ತಿದ್ದಾರೆ ಎಂದು ಹೇಳಿದರು.



ಈ ಸಂದರ್ಭದಲ್ಲಿ ಪೀಠಾಧೀಶರಾದ ಡಾ. ಆನಂದ ಮಹಾರಾಜ್ ಗೋಸಾವಿಯವರು ಆಶೀರ್ವಚನ ನೀಡಿದರು. ಮಠದ ವತಿಯಿಂದ ಕೈಗೊಳ್ಳಲಾಗುತ್ತಿರುವ ಕಾರ್ಯಕ್ರಮಗಳ ಬಗ್ಗೆ ವಿವರವಾದ ಮಾಹಿತಿ ನೀಡಲಾಯಿತು.

ಸಾಂಗ್ಲಿ ಜಿಲ್ಲಾ ಪರಿಷತ್ತಿನ ನಿವೃತ್ತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್. ಪಾಟೀಲ, ವಿಶ್ವಸ್ಥ ರಾಜಭಾವು ಕುಲಕರ್ಣಿ, ಡಾ. ಸುನೀಲ ದೇಸಾಯಿ, ದಿಲೀಪ ಮುತಾಲಿಕ್ ದೇಸಾಯಿ, ನಂದಕುಮಾರ ಮಾಳಿ, ಉಮೇಶ ಕುಲಕರ್ಣಿ, ಮಹೇಶ ದಾಂಡಗೆ, ಶೀತಲ್ ಗಬಾಳೆ, ಪ್ರಸಾದ ಕುಲಕರ್ಣಿ, ಉದಯ ಕುಲಕರ್ಣಿ, ರಾಜುಪಟ್ನೇಕರ, ಗೋಪಾಲಚಾಪನೆ, ಓಂಕಾರ ಪಾಟೀಲ ಉಪಸ್ಥಿತರಿದ್ದರು.

ಸರ್ಕಾರಿ ಶಾಲೆ ಮುಚ್ಚಲು ಬಿಡುವುದಿಲ್ಲ



ಬೆಳಗಾವಿ: ಹಾಲಬಾವಿ - ಮಲ್ಲಹೊಳಿ ಗ್ರಾಮದ ಸರ್ಕಾರಿ ಶಾಲೆಗಳನ್ನು ಮುಚ್ಚಿ ಇಲ್ಲಿನ ವಿದ್ಯಾರ್ಥಿಗಳನ್ನು ಹೊಸ ವಂಟಮೂರಿ ಕೆಪಿಎಸ್ ಶಾಲೆಗೆ ಕಳಿಸುತ್ತಿರುವುದನ್ನು ವಿರೋಧಿಸಿ ಉಭಯ ಗ್ರಾಮಗಳ ಪೋಷಕರು ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಎಐಡಿಎಸ್‌ಓ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಗ್ರಾಮಸ್ಥರ ಪ್ರತಿಭಟನೆ

ರಾಜ್ಯ ಸರ್ಕಾರ ವ್ಯವಸ್ಥೆಯನ್ನು ಖಂಡಿಸಿ ಪ್ರತಿಭಟನೆಯನ್ನು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಬೆಳಗಾವಿ ಜಿಲ್ಲಾ ಅಧ್ಯಕ್ಷ ರಾಮು ಹನಗಂಡಿ ನೇತೃತ್ವದಲ್ಲಿ ನಡೆಯಿತು.

ಎಐಡಿಎಸ್‌ಓ ಜಿಲ್ಲಾ ಸಂಚಾಲಕರಾದ ಮಹಾಂತೇಶ ಬಿಳೂರ್ ಮಾತನಾಡಿದರು.

ಈ ವೇಳೆ ಹಣಮಂತ, ರವಿ, ಹಾಲಪ್ಪ ನಾಯಕ, ಸಿದ್ದಪ್ಪ, ಗ್ರಾಮಸ್ಥರು, ಹಿರಿಯರು, ಪೋಷಕರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ ನೂರಾರು ಜನ ಪಾಲ್ಗೊಂಡಿದ್ದರು.

ನಂದ್ದೇಮ್ಮದೇವಿ ಜಾತ್ರೆ: ಕಿಚ್ಚು ಹಾಯ್ದ ಭಕ್ತರು

ಬೈಲಹೊಂಗಲ: ಪಟ್ಟಣದ ನಂದ್ದೇಮ್ಮದೇವಿ ನಗರದಲ್ಲಿರುವ ಶ್ರೀ ನಂದ್ದೇಮ್ಮ ದೇವಿಯ ಜಾತ್ರಾ ಮಹೋತ್ಸವವು ಶನಿವಾರ ಅಪಾರ ಭಕ್ತಿ, ಶ್ರದ್ಧೆ ಮತ್ತು ಸಂಭ್ರಮದ ವಾತಾವರಣದಲ್ಲಿ ಅದ್ದೂರಿಯಾಗಿ ನೆರವೇರಿತು. ಜಾತ್ರಾ ಮಹೋತ್ಸವ ಅಂಗವಾಗಿ ಭಕ್ತರು ಬೆಂಕಿ ಕಿಚ್ಚು ಹಾಯ್ದು ಭಕ್ತಿ ಭಾವ ತೋರಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯ ಅರ್ಜುನ ಕಲಕುಟಕರ, ಕುಸಲಪ್ಪ ಬಂಡಿವಡ್ಡರ, ಅರ್ಜುನ ಬಂಡಿವಡ್ಡರ, ಶಾಬು ಬಂಡಿವಡ್ಡರ, ಮಹಾಂತೇಶ ಬಡ್ಲಿ, ಹನುಮಂತ ಬಂಡಿವಡ್ಡರ, ರಾಮು ಬಂಡಿವಡ್ಡರ, ವಿನಾಯಕ ಒಡೆಯರ, ಲಕ್ಷ್ಮಣ ಬಂಡಿವಡ್ಡರ, ಮಾನಿಂಗ ಬಂಡಿವಡ್ಡರ, ರುದ್ರಪ್ಪ ತುರಮರಿ, ಬಸವರಾಜ ಹೊಸಮನಿ, ಮಂಜುನಾಥ ಹಿರೇಕೊಪ್ಪ, ಬಾಳು ಬಂಡಿವಡ್ಡರ ಸೇರಿದಂತೆ ಸಮಾಜದ ಮುಖಂಡರು ಹಾಗೂ ಭಕ್ತರು ಉಪಸ್ಥಿತರಿದ್ದರು.



ಮೂಲ ಸೌಕರ್ಯ ಕಲ್ಪಿಸಲು ಶ್ರಮ



ರಾಮದುರ್ಗ: ರಾಜ್ಯದ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಯಶಸ್ವಿ ಅನುಷ್ಠಾನದ ಜೊತೆಗೆ ಜನರಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಶ್ರಮಿಸುತ್ತಿರುವ ಪರಿಣಾಮ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ ಎಂದು ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಹೇಳಿದರು.

ಶುಕ್ರವಾರ ತಾಲೂಕಿನ ಬಿಜಗುಪಿ ಗ್ರಾಮದಲ್ಲಿ ರೂ. 30 ಲಕ್ಷ ವೆಚ್ಚದಲ್ಲಿ ಹೊಸಕೋಟಿ ಗ್ರಾಮಕ್ಕೆ ಹೋಗುವ ರಸ್ತೆ ಹಾಗೂ ರೂ. 30 ಲಕ್ಷ ವೆಚ್ಚದಲ್ಲಿ ಹೊಸೂರು ಗ್ರಾಮಕ್ಕೆ ತೆರಳುವ ರಸೆ, ಕುಳ್ಳೂರಲ್ಲಿ ಹೊಸಕಘಟಿಗೆ ಹೋಗುವ ಗುಡ್ಡದ ರಸ್ತೆ ಮತ್ತು ತುರನೂರ ಗ್ರಾಮದಲ್ಲಿ ಸಿದ್ಧಲಿಂಗೇಶ್ವರ ನಗರಕ್ಕೆ ತೆರಳುವ ರಸ್ತೆ ಸುಧಾರಣಾ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ರಾಮದುರ್ಗ ತಾಲೂಕಿನಲ್ಲಿರುವ ಜಿಲ್ಲಾ ಮುಖ್ಯರಸ್ತೆ, ಗ್ರಾಮೀಣ ಮತ್ತು ರೈತರ ಜಮೀನುಗಳಿಗೆ ಸಂಪರ್ಕ ಕಲ್ಪಿಸಲು ಸಾಕಷ್ಟು ಅನುದಾನ ನೀಡಿದ್ದು ಗುಣ ಮಟ್ಟದ ಕಾಮಗಾರಿ ನಿರ್ವಹಣೆ ಮಾಡುವ ಮುಖಾಂತರ ಸರ್ಕಾರದ ಅನುದಾನ ಸದ್ಬಳಕೆ ಮಾಡಿ ಜನಪ್ರತಿನಿಧಿಗಳ ಶ್ರಮ ಸಾರ್ಥಕ ಮಾಡಬೇಕೆಂದ ತಿಳಿಸಿದರು.

ಈ ಸಂದರ್ಭದಲ್ಲಿ ಜಿಪಂ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಮಹ್ಮದಇಜಾನ್, ಇಂದಿರಾ ಕ್ಯಾಂಟಿನ್ ಸದಸ್ಯ ಫೀರು ತಳವಾರ, ನ್ಯಾಯವಾದಿ ರಾಜು ಮರಲಿಂಗನವರ, ಪುಂಡಲೀಕ ದಾಸರ, ತಾಪಂ ಮಾಜಿ ಸದಸ್ಯ ಸದಾಶಿವ ತಳವಾರ ಸೇರಿದಂತೆ ಹಲವರಿದ್ದರು.

ಕಂಬಿ ಮಲ್ಲಯ್ಯನ ಐದೇಶಿ ಸಂಪನ್ನ

ಹಾರೂಗೇರಿ: ಸ್ಥಳೀಯ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀಶೈಲ ಮಲ್ಲಿಕಾರ್ಜುನನ ಪಾದಯಾತ್ರಿಕರ ಹಾಗೂ ದರ್ಶನ ಮಾಡಿಕೊಂಡ ಬಂದ ಭಕ್ತಾಧಿಗಳು ಪ್ರತಿ ವರ್ಷದಂತೆ ಈ ವರ್ಷವೂ ಹಮ್ಮಿಕೊಂಡಿದ್ದ ಕಂಬಿ ಮಲ್ಲಯ್ಯನ ಐದೇಶಿ ಕಾರ್ಯಕ್ರಮವು ಯಶಸ್ವಿಯಾಗಿ ಸಂಪನ್ನವಾಯಿತು.

ಈ ಸಂದರ್ಭದಲ್ಲಿ ಮಹಾಮಂಗಳಾರತಿ,ಕಂಬಿ ಮಲ್ಲಯ್ಯನ ಹೊಗಳಿಕೆಗಳು, ದಾನ ಕಾರ್ಯಗಳು ಹಾಗೂ ಉಪಹಾರ ವ್ಯವಸ್ಥೆ ನೆರವೇರಿತು. ಹಿರಿಯರಾದ ಪಾಟೀಲ ಕುಟುಂಬದವರು,ಹಿರೇಮಠ,ಮಠಪತಿ, ಕುಲಕರ್ಣಿ,ಗಾಳಿ,ಉಮರಾಣಿ, ಲುಡಬುಡೆ, ಸದಲಗಿ, ಬಾಗೇವಾಡಿ, ಕಬ್ಬೂರ, ಚಿಂಚಲಿ, ಬಾಡಗಿ , ಕುರಿ ಮನೆತನದವರು ಹಾಗೂ ಲಿಂಗಾಯತ ಕಾಯಕ ಸಮಿತಿ ಯುವಕರು,ಅನೇಕ ತಾಯಂದಿರು,ಮಕ್ಕಳು ಉಪಸ್ಥಿತರಿದ್ದರು.



ಕಿರುಸುದ್ದಿ

ಸರ್ಕಾರಿ ಕಾಲೇಜಿನಲ್ಲಿ ಉದ್ಯೋಗ ಮೇಳ

ತೆಲಸಂಗ: ವಿದ್ಯಾರ್ಥಿಗಳು ಇಂತಹ ಮೇಳಗಳ ಸದುಪಯೋಗ ಪಡೆದುಕೊಂಡು ತಮ್ಮ ವೃತ್ತಿ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ಪ್ರಾಂಶುಪಾಲರಾದ ಶಿವಕುಮಾರ ಕೆ. ಹೇಳಿದರು. ಶನಿವಾರ ಗ್ರಾಮದ ಎಸ್‌ಎಂವೈಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ನಮ್ಮ ಭಾಗದ ಯುವಜನತೆಗೆ ಉದ್ಯೋಗದ ಹೊಸ ಬಾಗಿಲುಗಳನ್ನು ತೆರೆಯುವ ಉದ್ದೇಶದಿಂದ ಇವತ್ತು ಈ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಪದವಿ ಮುಗಿಸಿದ ನಂತರ ಮುಂದೇನು ಎನ್ನುವ ಆತಂಕದಲ್ಲಿರುವ ಗ್ರಾಮೀಣ ಭಾಗದ ಪ್ರತಿಭೆಗಳಿಗೆ, ಪ್ರತಿಷ್ಠಿತ ಕಂಪನಿಗಳು ಇಲ್ಲಿಯೇ ಬಂದು ಉದ್ಯೋಗ ನೀಡುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಇವತ್ತಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಪದವಿ ಅಂಕಪಟ್ಟಿ ಸಾಲದು, ಅದರೊಂದಿಗೆ ಸಂವಹನ ಕೌಶಲ ಮತ್ತು ಆತ್ಮವಿಶ್ವಾಸ ಅತಿ ಮುಖ್ಯ. ಉದ್ಯೋಗ ಮೇಳವೆಂದರೆ ಕೇವಲ ಕೆಲಸ ಪಡೆಯುವ ವೇದಿಕೆಯಲ್ಲ, ಬದಲಾಗಿ ಉದ್ಯಮ ಕ್ಷೇತ್ರಕ್ಕೆ ಬೇಕಾದ ಸಿದ್ಧತೆಗಳನ್ನು ಅರಿಯುವ ಉತ್ತಮ ಅವಕಾಶ ಎಂದರು. ಎಮಿನೆಂಟ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ರಾಕೇಶ್ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ ಆಧಾರಿತ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದೆ. ಗ್ರಾಮೀಣ ಭಾಗದ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಿಕೊಡುವುದು ನಮ್ಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಬಂದಿರುವ ಎಲ್ಲಾ ಅಭ್ಯರ್ಥಿಗಳಿಗೆ ನನ್ನದೊಂದು ವಿನಂತಿ: ಆಯ್ಕೆಯಾಗಲಿ ಅಥವಾ ಬಿಡಲಿ, ಪ್ರತಿಯೊಬ್ಬ ಸಂದರ್ಶನವನ್ನೂ ಒಂದು ಪಾಠವಾಗಿ ಸ್ವೀಕರಿಸಿ. ನಿಮ್ಮಲ್ಲಿರುವ ಪ್ರತಿಭೆಯನ್ನು ಆತ್ಮವಿಶ್ವಾಸದಿಂದ ಪ್ರದರ್ಶಿಸಿ. ಈ ಮೇಳವು ನಿಮ್ಮ ವೃತ್ತಿ ಬದುಕಿನ ಹೊಸ ಆರಂಭಕ್ಕೆ ನಾಂದಿಯಾಗಲಿ ಎಂದು ಆಶಿಸುತ್ತೇನೆ ಎಂದರು. ಕಾರ್ಯಕ್ರಮದ ಸಂಯೋಜಕರಾದ ಡಾ. ಬಿ.ಆಯ್. ಪಠಪತಿ ಹಾಗೂ ಪ್ಲೇಸ್‌ಮೆಂಟ್ ಘಟಕದ ಸಂಯೋಜಕರಾದ ರಮ್ಯಾ ಜೆ. ಅವರು ಉಪಸ್ಥಿತರಿದ್ದರು.

ವಿದ್ಯುತ್ ನಿಲುಗಡೆ ಇಂದು

ಬೆಳಗಾವಿ : ಕವಿಪ್ರನಿನಿ ವತಿಯಿಂದ ನಾಲ್ಕನೇಯ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಮಾ.29 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ 110 ಕೆ.ವ್ಹಿ. ಖಾನಾಪೂರ ಉಪಕೇಂದ್ರದಿಂದ ಸರಬರಾಜು ಆಗುವ ಲೈಲಾ ಶುಗರ ಕಾರ್ಖಾನೆ, ದೇವಲತ್ತಿ, ಬಿದರಭಾವಿ, ಭಂಡಾರಗಾಳಿ, ಗರ್ಲಗುಂಜಿ, ತೋಪಿನಕಟ್ಟಿ, ಬೋರಗಾಂವ, ನಿಡಗಲ, ದೊಡ್ಡಹೊಸೂರ, ಸಣ್ಣಹೊಸೂರ, ಕರಂಬಳ, ಜಳಗಾ, ಕುಪ್ಪಟಗಿರಿ, ಲೋಕೋಳ್ಳಿ, ಲಕ್ಕೇಬೈಲ, ಯಡೋಗಾ, ಬಳೋಗಾ, ಜೈನಕೊಪ್ಪ, ಗಾಂಧಿನಗರ, ಹಲಕರ್ಣಿ, ಕೋರ್ಟ ಪ್ರದೇಶ, ಕೈಗಾರಿಕಾ ಪ್ರದೇಶ, ಬಾಚೋಳ್ಳಿ, ಕೌಂದಲ, ಝುಂಡನಾವಗಾ, ಲಾಲವಾಡಿ, ಹೆಬ್ಬಾಳ, ನಂದಗಡ, ಕಸಬಾ ನಂದಗಡ, ಕಾರಲಗಾ, ಶಿವೊಳ್ಳಿ ಹಾಗೂ ಚಾಪಗಾಂವ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್ಟಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ, ಎಂದು ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ.ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಮಾ.31ರಂದು ಶ್ರೀ ಭಗವಾನ ಮಹಾವೀರ ಜನ್ಮ ಕಲ್ಯಾಣಕ ಮಹೋತ್ಸವ

ಬೆಳಗಾವಿ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ, ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ, ಮಾ.31ರಂದು ಬೆಳಿಗ್ಗೆ 10.30 ಗಂಟೆಗೆ ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಶ್ರೀ ಭಗವಾನ ಮಹಾವೀರ ಜನ್ಮ ಕಲ್ಯಾಣಕ ಮಹೋತ್ಸವ ಕಾರ್ಯಕ್ರಮ ಜರುಗಲಿದೆ. ಈ ಕಾರ್ಯಕ್ರಮವನ್ನು ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸಲಿದ್ದು, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶಾಸಕ ಆಸೀಫ್ ಸೇಠ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದು, ರತನಚಂದ ನೇಮಿನಾಥ ಕೋಟಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸರ್ಕಾರಿ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ 2 ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷರಾದ ಭರಮಗೌಡ ಕಾಗೆ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ ಅವರುಗಳು ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ.
ರಾಜ್ಯ ಸಭೆ ಸಂಸದರಾದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕ ಸಭಾ ಸಂಸದರಾದ ಪ್ರಿಯಾಂಕಾ ಜಾರಕಿಹೊಳಿ, ಜಿಲ್ಲಾ ಲೋಕ ಸಭಾ ಸಂಸದರಾದ ಜಗದೀಶ್ ಶೆಟ್ಟರ, ಉತ್ತರ ಕನ್ನಡ ಲೋಕ ಸಭಾ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ.



ತೆಲಸಂಗ ಗ್ರಾಮದ ಎಸ್‌ಎಂವೈಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳಕ್ಕೆ ಚಾಲನೆ ನೀಡಿದಗಣ್ಯರು. ಪ್ರಾಂಶುಪಾಲರಾದ ಶಿವಕುಮಾರ ಕೆ., ವ್ಯವಸ್ಥಾಪಕ ರಾಕೇಶ್, ಡಾ. ಬಿ.ಆಯ್. ಪಠಪತಿ, ರಮ್ಯಾ ಜೆ ಉಪಸ್ಥಿತರಿದ್ದರು.

ಪಾಟೀಲರು ಸಹಕಾರ ಕ್ಷೇತ್ರದ ಬೆಳ್ಳಿಚುಕ್ಕಿ

ಹಾರೂಗೇರಿ : ಸ್ಥಳೀಯ ಜನತಾ ಸಹಕಾರ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಲಿಂ.ಬಿ ಆರ್ ಪಾಟೀಲರ 36 ನೇ ವರ್ಷದ ಪುಣ್ಯ ಸ್ಮರಣೆ ನೆರವೇರಿಸಲಾಯಿತು. ಬ್ಯಾಂಕಿನ ವ್ಯವಸ್ಥಾಪನ ಸಮಿತಿ ಸದಸ್ಯರಾದ, ನಿವೃತ್ತ ಪ್ರಾಚಾರ್ಯ ಡಾ.ಚಂದ್ರಶೇಖರ ಗುಡಿಸಿ ಮಾತನಾಡಿ, ಲಿಂ. ಬಿ ಆರ್ ಪಾಟೀಲರು ಬೆಳಗಾವಿ ಜಿಲ್ಲೆಯ ಸಹಕಾರ ತತ್ವವನ್ನು ಎತ್ತಿ ಹಿಡಿದವರಲ್ಲದೆ,ಬಡ ಜನರ ಬದುಕಿಗೆ ಪ್ರೇರಕ ಶಕ್ತಿಯಾಗಿ, ಆರ್ಥಿಕ ಸ್ವಾವಲಂಬನೆಯ ಮಾರ್ಗ ನೀಡಿದವರು. ಅಭಿವೃದ್ಧಿಯ ಕನಸುಗಾರರಾಗಿ,ಸಹಕಾರ ರಂಗದ ಬೆಳ್ಳಿಚುಕ್ಕಿಯಾಗಿ ಮಿನುಗಿ,ಪ್ರಗತಿಯ ಚಿಂತಕರಾಗಿದ್ದವರು ಎಂದು ಅಭಿಮತ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ವ್ಯವಸ್ಥಾಪಕರಾದ ಎಸ್ ಎಸ್ ಅಮರಶೆಟ್ಟಿ ಮಾತನಾಡಿ, ಲಿಂ. ಬಿ ಆರ್ ಪಾಟೀಲರು ಹಾಕಿಕೊಟ್ಟ ಮಾರ್ಗದಲ್ಲಿ ನಮ್ಮ ಸಿಬ್ಬಂದಿಯವರು ಗ್ರಾಹಕರೊಂದಿಗೆ ಸೌಜನ್ಯದೊಂದಿಗೆ ನಡೆದುಕೊಳ್ಳುವುದಲ್ಲದೆ,ಪ್ರತಿ ಹಂತದಲ್ಲೂ ಸಹಕಾರದ ಹೆಜ್ಜೆ ಹಾಕುವಂತೆ ಮಾಡಿದ್ದಾರೆಂದು ಹೇಳಿ,ವಂದನೆ ಸಲ್ಲಿಸಿದರು. ಇದೇ ವೇಳೆ ಹಾರೂಗೇರಿ ಶಾಖೆಯ ಸಿಬ್ಬಂದಿ ವರ್ಗದವರು ಹಾಗೂ ರಾಯಬಾಗ, ಉಗಾರ, ಅಥಣಿ ಶಾಖೆಗಳ ಸಿಬ್ಬಂದಿ ಪಟ್ಟಣಗಳ ಸರ್ಕಾರಿ ಆಸ್ಪತ್ರೆಯಲ್ಲಿನ ರೋಗಿಗಳಿಗೆ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗೆ ಹಾಲು ,ಹಣ್ಣು, ಹಂಪಲು, ಬಿಸ್ಕೆಟ್ ವಿತರಿಸಿದರು.ಇದೇ ಸಂದರ್ಭದಲ್ಲಿ ಆಸ್ಪತ್ರೆಯ ಸಿಬ್ಬಂದಿ ವರ್ಗದವರು,ಬ್ಯಾಂಕಿನ ಸಿಬ್ಬಂದಿ ಉಪಸ್ಥಿತರಿದ್ದರು.



ಹಾರೂಗೇರಿ : ಸ್ಥಳೀಯ ಜನತಾ ಸಹಕಾರ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಲಿಂ.ಬಿ ಆರ್ ಪಾಟೀಲರ 36 ನೇ ವರ್ಷದ ಪುಣ್ಯ ಸ್ಮರಣೆ ನೆರವೇರಿಸಲಾಯಿತು. ಬ್ಯಾಂಕಿನ ವ್ಯವಸ್ಥಾಪನ ಸಮಿತಿ ಸದಸ್ಯರಾದ, ನಿವೃತ್ತ ಪ್ರಾಚಾರ್ಯ ಡಾ.ಚಂದ್ರಶೇಖರ ಗುಡಿಸಿ ಮಾತನಾಡಿದರು.

ಎಸ್‌ಐಆರ್ ತಂಡ ತರಬೇತಿ ಕಾರ್ಯಾಗಾರ | ಸಂತೋಷ ಹೇಳಿಕೆ

ಮುಂಬರುವ ಚುನಾವಣೆಗೆ ಸಜ್ಜಾಗಿ

ಸವದತ್ತಿ: ಬರುವ ಚುನಾವಣೆಗಳನ್ನು ನಾವೆಲ್ಲರೂ ಅತ್ಯಂತ ಎಚ್ಚರದಿಂದ ಹಾಗೂ ಕಾಳಜಿಯಿಂದ ಎದುರಿಸಿ ಬಿಜೆಪಿ ಗೆಲುವಿಗೆ ಶ್ರಮಿಸಬೇಕು ಎಂದು ವಿಷಯ ಪ್ರಮುಖರಾದ ಸಂತೋಷ ಹಡಪದ ಹೇಳಿದರು.

ಅವರು ಸ್ಥಳ ಮಾಮನಿ ಕಲ್ಯಾಣ ಮಂಟಪದಲ್ಲಿ ಭಾರತೀಯ ಜನತಾ ಪಾರ್ಟಿ ಬೆಳಗಾವಿ ಗ್ರಾಮಾಂತರ, ಸವದತ್ತಿ ಮಂಡಲದ ವತಿಯಿಂದ ಆಯೋಜಿಸಿದ್ದ ಎಸ್‌ಐಆರ್ ತಂಡ ಹಾಗೂ ಬಿಎಲ್‌ಎ ಟು ಸದಸ್ಯರ ತರಬೇತಿ ಕಾರ್ಯಾಗರದಲ್ಲಿ ಮಾತನಾಡಿದ ಅವರು,

ಚುನಾವಣೆಯ ಪೂರ್ವದ ಮುಖ್ಯ ಕೆಲಸವಾದ ಎಸ್‌ಐಆರ್ ಹಾಗೂ ಬಿಎಲ್‌ಎ ತರಬೇತಿ ಪಡೆದವರು ಬಹಳ ನಯ ವಿನಯದಿಂದ ಕಾರ್ಯನಿರ್ವಹಿಸಿ ತಮ್ಮ ಬೂತ್ ಗಳಲ್ಲಿರುವ ಎಲ್ಲ ಮತದಾರರ ಮನ ಗೆಲ್ಲುವ ಕಾರ್ಯವನ್ನು ಮಾಡಬೇಕು ಎಂದರು.

ಕಾರ್ಯಕರ್ತರು ನಿಷ್ಕಾಳಜಿ ವಹಿಸದೆ ಈಗಿನಿಂದಲೇ ತಮ್ಮ ಕಾರ್ಯವನ್ನು ಬೂತ್ ಮಟ್ಟಗಳಲ್ಲಿಅತ್ಯಂತಯಶಸ್ವಿಯಾಗಿನಡೆಸಬೇಕು.ಮೊದಲು ತಾವು ತಮ್ಮ ಬೂತಗಳನ್ನು ಗೆಲ್ಲಿಸವುದೇ ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡು ಕಾರ್ಯನಿರ್ವಹಿಸಿದರೆ ಮುಂದಿನಚುನಾವಣೆಗಳನ್ನು ಅತ್ಯಂತಸರಳತೆಯಿಂದ ಎದುರಿಸಬಹುದು ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸೇವಾ ಪ್ರಮುಖ ಡಾ. ನರಸಿಂಹ ಕುಲಕರ್ಣಿ ಮಾತನಾಡಿದರು.

ಸವದತ್ತಿ ಮಂಡಳದ ಅಧ್ಯಕ್ಷ ವಿರುಪಾಕ್ಷಪ್ಪ ಕ ಮಾಮನಿ ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು.

ರತ್ನಕ್ಕ ಮಾಮನಿ, ಸಚಿನ ಕಡಿ, ಸವದತ್ತಿ ಮಂಡಳದ ಉಪಾಧ್ಯಕ್ಷಸಂಜೀವ ಕುಮಾರ ನವಲಗುಂದ, ಈರಣ್ಣ ಚಂದರಗಿ, ಮಲ್ಲೇಶ ಸುಳೇಬಾವಿ ಉಪಸ್ಥಿತರಿದ್ದರು.

ಸುಭಾಸ ಗಿದಿಗೌಡರ ಕಾರ್ಯಕ್ರಮ ನಿರೂಪಿಸಿದರು. ಈರಣ್ಣ ಚಂದರಗಿ ಪ್ರಾಸ್ತವಿಕವಾಗಿ ಮಾತನಾಡಿದರು.



ದುರ್ಗಾಪರಮೇಶ್ವರಿ ಜಾತ್ರಾ ಮಹೋತ್ಸವ

ಬೈಲಹೊಂಗಲ: ದುರ್ಗಾಪರಮೇಶ್ವರಿ ಅಮ್ಮನವರ ಜಾತ್ರಾ ಮಹೋತ್ಸವದ ನಾಲ್ಕನೇ ದಿನ ಭಕ್ತಿಭಾವ, ಸಾಂಸ್ಕೃತಿಕ ವೈಭವ ಹಾಗೂ ಧಾರ್ಮಿಕ ಉತ್ಸಾಹದ ನಡುವೆ ವಿಜೃಂಭಣೆಯಿಂದ ನಡೆಯಿತು.

ಈ ಸಂದರ್ಭದಲ್ಲಿ ಶಾಸಕ ಮಹಾಂತೇಶ ಕೌಜಲಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಜಾತ್ರಾ ಮಹೋತ್ಸವದಮೂಲಕಈಭಾಗದಲ್ಲಿ ಸಂಸ್ಕೃತಿ, ಸಂಪ್ರದಾಯ ಮತ್ತು ಸಾಮಾಜಿಕ ಮೌಲ್ಯಗಳನ್ನು ಉಳಿಸಿ ಬೆಳೆಸುತ್ತಿರುವ ಕಾರ್ಯ ಶ್ಲಾಘನೀಯವಾಗಿದೆ.ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳ ಮೂಲಕ ಜನರಲ್ಲಿ ಸಂಸ್ಕಾರದ ಅರಿವು ಮೂಡಿಸುತ್ತಿರುವ ಮಹಾಂತೇಶ ಸ್ವಾಮೀಜಿಗಳ ಸೇವೆ ಗಮನಾರ್ಹವಾಗಿದ್ದು, ಸರ್ಕಾರವು ಅವರಿಗೆ ನೀಡಿದ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ಅವರು ಅಭಿಪ್ರಾಯಪಟ್ಟರು.

ಧರ್ಮಸಭೆಯ ಸಾನಿಧ್ಯ ವಹಿಸಿದ್ದ ಕಾಶಿ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸಮಾಜದಲ್ಲಿ ಧಾರ್ಮಿಕ ಮೌಲ್ಯಗಳ ಜೊತೆಗೆ ಶಿಕ್ಷಣ ಮತ್ತು ಸೇವಾ ಚಟುವಟಿಕೆಗಳು ಬೆಳೆಸಬೇಕಾದ ಅಗತ್ಯವಿದೆ ಎಂದು ಹೇಳಿದರು. ವಿಶೇ?ವಾಗಿ ಬಡ ಮಕ್ಕಳ ಶಿಕ್ಷಣಕ್ಕಾಗಿ ಗುರುಕುಲ ವ್ಯವಸ್ಥೆ ಆರಂಭಿಸಿರುವುದು ಶ್ಲಾಘನೀಯ ಕಾರ್ಯವಾಗಿದ್ದು, ಇಂತಹ ಪ್ರಯತ್ನಗಳು ಸಮಾಜದ ಪ್ರಗತಿಗೆ ದಾರಿ ಮಾಡಿಕೊಡುತ್ತವೆ ಎಂದು ಅಭಿಪ್ರಾಯಪಟ್ಟರು.ಇದೆ ವೇಳೆ ಪ್ರಗತಿ ಪರ ರೈತರನ್ನು ದೇವಸ್ಥಾನ ವತಿಯಿಂದ ಸತ್ಕರಿಸಲಾಯಿತು.

ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ, ಶಂಕರ ಮಾಡಲಗಿ, ಚುನಪ್ಪ ಪೂಜೇರಿ, ಸೋಮನಾಥ ಸೊಪ್ಪಿಮಠ, ಶ್ರೀಶೈಲ ಯಡಳ್ಳಿ, ಶಿವಾನಂದ ಬಡ್ಡಿಮನಿ ಅನೇಕ ಗಣ್ಯರು ಇದ್ದರು.ಶ್ರೀ ದುರ್ಗಾ ಮಾತಾ ಪರಮೇಶ್ವರಿ ಮಹಾರಥೋತ್ಸವಕ್ಕೆ ಡಾ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಪೂಜೆ ಸಲ್ಲಿಸಿ ಚಾಲನೆ ನೀಡಿದರು.ನೂರಾರು ಮಹಿಳೆಯರು ಭಾಗವಹಿಸಿ ರಥವನ್ನೂ ಎಳೆಯುವ ಮೂಲಕ ಭಕ್ತಿ ಭಾವ ವ್ಯಕ್ತಪಡಿಸಿದರು. ದುರ್ಗಾ ಮಾತಾ ಕಿ ಜೈ ಘೋಷಣೆಗಳೊಂದಿಗೆ ನಡೆದ ರಥೋತ್ಸವವು ಭಕ್ತರ ಮನಸೆಳೆಯಿತು.ವಿವಿಧ ಕಲಾತಂಡಗಳು ರಥೋತ್ಸವದಲ್ಲಿ ಭಾಗವಹಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮೆರುಗು ತಂದವು.



ಐಪಿಎಲ್ : ಆಕ್ರೋಶ

ಮೂಡಲಗಿ : ರಾಜಕಾರಣಿಗಳು ಮನರಂಜನೆ ಅನುಭವಿಸುವುದು ತಪ್ಪಲ್ಲ, ಆದರೆ, ಪ್ರಜಾಪ್ರತಿನಿಧಿಗಳಿಗೆ ಸವಲತ್ತುಗಳು ಜನರ ಸೇವೆ ಮಾಡಲು ಅನುಕೂಲವಾಗುವ ಸಲುವಾಗಿ ಇರುತ್ತವೆಯೇ ಹೊರತು ವೈಯಕ್ತಿಕ ಉಪಯೋಗಗಳಿಗೆ ಅಲ್ಲ, ಜನರು ತಮ್ಮನ್ನು ಗೆಲ್ಲಿಸಿದ್ದು , ಆಸ್ಪತ್ರೆ ಮತ್ತು ಶಿಕ್ಷಣದ ವ್ಯಾಪಾರೀಕರಣ ತಡೆಯೋಕೆ, ನೀರಾವರಿ ಮತ್ತು ವಸತಿ ಸೌಲಭ್ಯಗಳನ್ನು ನಿರ್ವಹಿಸಲು, ಆಡಳಿತ ಮತ್ತು ಜನರ ಮಧ್ಯೆ ಸಂಪರ್ಕ ಸಾಧಿಸುವುದಕ್ಕೆ ಹೊರತು ಮನರಂಜನೆ ಮಾಡುವುದಕ್ಕಲ್ಲ ಎಂದು ಜೆ.ಡಿ.ಎಸ್ ತಾಲೂಕಾಧ್ಯಕ್ಷ ಪ್ರಕಾಶ ಕಾಳಶೆಟ್ಟಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಮೊದಲು ಜನರ ಮೂಲ ಸಮಸ್ಯೆಗಳ ಬಗ್ಗೆ ಮಾತನಾಡಿ.ಜನರು ಕೇಳುತ್ತಿರುವ ಪ್ರಶ್ನೆ, ಐಪಿಎಲ್ ಟಿಕೆಟ್ ಬಗ್ಗೆ ಇರುವ ಕಾಳಜಿ, ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲದೆ ಸಾಯುತ್ತಿರುವ ಬಡವರ ಮೇಲೆ ಮತ್ತು ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳ ಹಾವಳಿಯಿಂದ ತತ್ತರಿಸುತ್ತಿರುವ ಜನರ ಮೇಲೇಕಿಲ್ಲ? ಮನರಂಜನೆಗಿಂತ ಜನರ ಆರೋಗ್ಯ ಮುಖ್ಯವಲ್ಲವೇ? ಸರ್ಕಾರ ಒಂದೇ ದಿನದಲ್ಲಿ ಶಾಸಕರು ಕೇಳಿದ ಐಪಿಎಲ್ ನ 2 ಟಿಕೆಟ್ ಕೊಡಿಸಲು ಸಾಧ್ಯವಾಗುವುದಾದರೆ ಯುವಕರು ಕೇಳುವ ನೇಮಕಾತಿಗೇಕೆ ಇಷ್ಟು ತಡ? ಕ್ರಿಕೆಟ್ ಪಂದ್ಯಗಳನ್ನು ನೋಡಿಕೊಳ್ಳಲು ಆದರದೆಯಾದ ಜಿಲ್ಲಾ, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಂಡಳಿಗಳಿವೆ. ತಾವು ಬಡವರ ಜೀವನ ಮಟ್ಟ ಸುಧಾರಣೆಯ ಕ್ರಮಗಳ ಬಗ್ಗೆ ವಿಧಾನಸಭೆಯಲ್ಲಿ ಧ್ವನಿ ಎತ್ತಿದರೆ ಅಷ್ಟೇ ಸಾಕು ಎಂದು ತಿಳಿಸಿದ್ದಾರೆ.

ವಾಣಿಜ್ಯ ಬಳಕೆಯ ಸಿಲಿಂಡರ್ ಸಮರ್ಪಕವಾಗಿ ಒದಗಿಸಿ

ಚನ್ನಮ್ಮನ ಕಿತ್ತೂರು: ವಾಣಿಜ್ಯ ಬಳಕೆಯ ಸಿಲಿಂಡರ್‌ಗಳು ನಿಗದಿತ ದರ ಹಾಗೂ ಸಮರ್ಪಕವಾಗಿ ದೊರೆಯುತ್ತಿಲ್ಲವೆಂದು ಆಗ್ರಹಿಸಿ ಖಾಲಿ ಸಿಲಿಂಡರ್ ಮೂಲಕ ಹೋಟೆಲ್ ಮಾಲಿಕರ ಸಂಘಟನೆ ಹಾಗೂ ಕರ್ನಾಟಕ ಯುವ ರಕ್ಷಣಾ ವೇದಿಕೆಯವರು ತಹಶೀಲ್ದಾರ ಕಚೇರಿಗೆ ಆಗಮಿಸಿ ಗ್ರೇಡ್ 2 ತಹಶೀಲ್ದಾರ ಪಿ. ವೈ ಕೋರಿಯವರಿಗೆ ಶುಕ್ರವಾರ ಮನವಿ ಸಲ್ಲಿಸಿದರು.

ಕರ್ನಾಟಕ ಯುವ ರಕ್ಷಣಾವೇದಿಕೆಯ ಅಧ್ಯಕ್ಷ ಕಿರಣ ವಾಳದ ಮಾತನಾಡಿ, ವಾಣಿಜ್ಯ ಬಳಕೆಯ ಸಿಲಿಂಡರ್‌ಗಳು ಸಣ್ಣ ಸಣ್ಣ ಹೊಟೇಲ್‌ಗಳಿಗೆ ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ ಮತ್ತು ಕೃತಕ ಅಭಾವ ಸೃಷ್ಟಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಕಂಡು ಬಂದಿದೆ. ಇದರಿಂದ ಚಿಕ್ಕ ಚಿಕ್ಕ ಹೊಟೇಲ್ ಉದ್ಯಮ ಮಾಡಿಕೊಂಡು ಜೀವನ ನಡೆಸುತ್ತಿರುವವರಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ನಿಗದಿತ ದರಕ್ಕೆ ಮತ್ತು ಸಮರ್ಪಕವಾಗಿ ಎಲ್ಲರಿಗೂ ವಾಣಿಜ್ಯ ಸಿಲೆಂಡರ್ ದೊರೆಯುವಂತೆ ನೋಡಿಕೊಳ್ಳಬೇಕೆಂದು ಆಗ್ರಹ ಪಡಿಸಿದರು.

ಕೆಲವರಿಗೆ ಮಾತ್ರ ಒಂದೇ ಬಾರಿ 10 ಸಿಲಿಂಡರ ನೀಡುತ್ತಾರೆ. ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ ಸಿಲೇಂಡರ ನೀಡುತ್ತಿಲ್ಲ. ಗ್ಯಾಸ್ ವಿತರಕರ ತಾರತಮ್ಯ ಧೋರಣೆ ಮಾಡುತ್ತಿದ್ದಾರೆ ಎಂದು ತಮ್ಮ ಅಸಮಾದಾನ ಹೊರ ಹಾಕಿದರು.

ಮನವಿ ಸ್ವಿಕರಿಸಿ ಗ್ರೇಡ್ 2 ತಹಶೀಲ್ದಾರ್ ಪಿ.ವೈ ಕೋರಿ ಮಾತನಾಡಿ, ನಮ್ಮಲ್ಲಿ ಸಿಲಿಂಡರ್ ಕೊರತೆ ಇಲ್ಲ. ಈಗಾಗಲೇ ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದ್ದು , ಎಲ್ಲರಿಗೂ ಸಮರ್ಪವಾಗಿ ಸಿಲಿಂಡರ್ ಒದಗಿಸುವಂತೆ ಎಜೆನ್ಸಿಯವರಿಗೆ ಮೇಲಾಧಿಕಾರಿಗಳು ಸೂಚನೆ ನೀಡುತ್ತಾರೆ ಎಂದು ಹೇಳಿದರು.

ಕರ್ನಾಟಕ ಯುವ ರಕ್ಷಣಾ ವೇದಿಕೆಯ ಬಸವರಾಜ ಸಂಪಗಾವಿ, ಶಂಕರ ಗಂಗಪ್ಪನವರ, ಉಮೇಶ ಹುಂಬಿ, ಪೈ ಹೊಟೇಲ್, ಗಣೇಶ ಪ್ರಸಾದ, ದುರ್ಗಾಂಬಾ, ಮಂದಾರ್ತಿ, ಮಹಾಲಕ್ಷ್ಮೀ, ದರ್ಶಿಣಿ, ಗಜರಾಜ ಕ್ಯಾಂಟೀನ್, ಸಾಯಿಫಾಸ್ಟಫುಡ್, ವಿಜೇತಾ ಮುಂತಾದ ಹೊಟೇಲ್‌ಗಳ ಮಾಲಿಕರುಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.



ವಿವಿಧ ರಸ್ತೆ ಸುಧಾರಣಾ ಕಾಮಗಾರಿಗಳಿಗೆ ಚಾಲನೆ

ಚಿಕ್ಕೋಡಿ: ತಾಲೂಕಿನ ಮಲಿಕವಾಡ ಗ್ರಾಮದಲ್ಲಿ ಶಾಸಕ ಗಣೇಶ ಹುಕ್ಕೇರಿ ಹಾಗೂ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ ಮಂಜೂರಾದ 75 ಲಕ್ಷ ರೂ. ಅನುದಾನದಲ್ಲಿ ಶುಕ್ರವಾರ ವಿವಿಧ ಕಾಮಗಾರಿಗಳಿಗೆ ಚಾಲನೆ ದೊರೆಯಿತು.

ಜಿಲ್ಲಾ ಪಂಚಾಯಿತಿ ಇಲಾಖೆಯಿಂದ ಮಂಜೂರಾದ 50 ಲಕ್ಷ ರೂ. ಹಾಗೂ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾದ 25 ಲಕ್ಷ ರೂ. ಅನುದಾನದಲ್ಲಿಯಕ್ಸಂಬಾ-ಸದಲಗಾ ಮುಖ್ಯರಸ್ತೆಯಿಂದ ನವಗ್ರಾಮದವರೆಗೆ 3 ಕಿರು ರಸ್ತೆಗಳು ಹಾಗೂ ಸರ್ಕಾರಿ ಪ್ರೌಢಶಾಲೆಯ ಹಿಂಬದಿಯ 3 ಕಿರುರಸ್ತೆಗಳ ಸುಧಾರಣಾ ಕಾಮಗಾರಿಗೆ ಮಾಜಿ ಗ್ರಾಮ ಪಂಚಾಯತಿ ಉಪಾಧ್ಯಕ್ಷ ಸಂಭಾಜಿ ಪಾಟೀಲ ಭೂಮಿಪೂಜೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬಾಳಾಸಾಹೇಬ ಪಾಟೀಲ, ಪುಂಡಲೀಕ ಖೋತ, ಅಣ್ಣಾಸಾಹೇಬ ಇಂಗಳೆ, ಮನೋಹರ ಕುಡಚೆ, ರಾವಸಾಹೇಬ ಕುಂಬಾರ, ಸಂಜಯ ಉಗಾರೆ, ಸುಜೀತ ನಡುವಿನಮನಿ, ಅಪ್ಪಾಸಾಹೇಬ ಗುಡೆ, ಸುರೇಶ ಮಾನೆ, ಅಜೀತ ಠೋಂಬರೆ, ರಾಜೇಂದ್ರ ಕುಂಬಾರ, ತುಕಾರಾಮ ವಂಜಿರೆ, ಸಂಜಯ ಶಿಖರೆ, ಬಾಬಾಸಾಬ ಮುಲ್ಲಾ, ಗುತ್ತಿಗೆದಾರ ರಾಮಗೌಡ ಪಾಟೀಲ, ಮಹೇಶ ಕಾಗವಾಡೆ ಇತರರು ಇದ್ದರು.



ಸೇವಾ ಮನೋಭಾವದಿಂದ ವ್ಯಕ್ತಿತ್ವ ವೃದ್ಧಿ: ವಿಭೂತಿ

ಮೂಡಲಗಿ: ರಾಷ್ಟ್ರೀಯ ಸೇವಾ ಯೋಜನೆ ಶಿಬಿರಗಳಲ್ಲಿ ಭಾಗವಹಿಸಿ ಸೇವಾ ಮನೋಭಾವ ಬೆಳೆಸಿಕೊಂಡರೆ ನಿಮ್ಮ ವ್ಯಕ್ತಿತ್ವ ಬೆಳವಣಿಗೆ ಯಾಗುತ್ತದೆ ಎಂದು ಮೂಡಲಗಿ ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ ಎಂ.ಜಿ. ವಿಭೂತಿ ಎನ್ ಎಸ್ ಎಸ್ ಶಿಬಿರಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಹಾಗೂ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ರಾಷ್ಟ್ರೀಯಸೇವಾಯೋಜನೆ ಘಟಕಗಳ ಸಂಯುಕ್ತ ಆಶ್ರಯದಲ್ಲಿ ಇಲ್ಲಿಗೆ ಸಮೀಪದ ದತ್ತು ಗ್ರಾಮ ಪಟಗುಂದಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಏರ್ಪಡಿಸಿದ್ದ 2025-26ನೇಸಾಲಿನ ವಿಶೇಷ ವಾರ್ಷಿಕ ಶಿಬಿರದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಸ್ಥಾನದಿಂದ ಮಾತನಾಡಿದರು.

ಶಿಕ್ಷಣ ಸಂಸ್ಥೆಯ ಚೇರಮನ್ನ ವೆಂಕಟೇಶ ಸೋನವಾಲ್ಕರ ಅಧ್ಯಕ್ಷತೆವಹಿಸಿ ಮಾತನಾಡಿದರು.ಆಡಳಿತಾಧಿಕಾರಿ ಡಾಎಸ್.ಎಲ್.ಚಿತ್ರಗಾರಮಾತನಾಡಿದರು. ಸಸಿಗೆ ನೀರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು.



ಸಮಾರಂಭದಲ್ಲಿ ರಾಮಣಗೌಡ ಪಾಟೀಲ್, ಪಡದಯ್ಯ ಹಿರೇಮಠ, ಗಿರಿಗೌಡ ಪಾಟೀಲ್, ಚನ್ನಗೌಡ ಪಾಟೀಲ್, ನೂರುಮಹಮ್ಮದ ಪೀರಜಾದೆ, ಶಿವರಾಜ ಪಾಟೀಲ್, ಯಲ್ಲಪ್ಪಾ ಪಾಟೀಲ್, ಡಾ. ಎಸ್.ಎಲ್. ಚಿತ್ರಗಾರ, ಮಹಾವೀರ ಕೋಳಿ ಅಶೋಕ ಹಂಜಿ, ಸುಭಾಸ ಪಾಟೀಲ್, ಶಿವಬಸು ಗುಡ್ಲಿ, ಪಿ.ಬಿ. ಚೌಡಕಿ ಎ.ಎಸ್. ಮೀಶಿನಾಯಕ ಡಾ ಬಸವಂತ ಬರಗಾಲಿ ಉಪಸ್ಥಿತರಿದ್ದರು.

ಏ.1ರಿಂದ ರೇವಣಸಿದ್ದೇಶ್ವರ ವಿರಕ್ತಮಠ ಜಾತ್ರಾ ಮಹೋತ್ಸವ

ರಾಯಬಾಗ: ತಾಲೂಕಿನ ಸುಕ್ಷೇತ್ರ ಭೆಂಡವಾಡ (ಗುಡ್ಡದ) ಗ್ರಾಮದ ರೇವಣಸಿದ್ದೇಶ್ವರ ವಿರಕ್ತಮಠ ಜಾತ್ರಾ ಮಹೋತ್ಸವವು

ಏ.1 ರಿಂದ 3 ರವರೆಗೆ ಜರುಗಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಬೇಕೆಂದು ವಿರಕ್ತಮಠದ ಗುರುಸಿದ್ಧ ಸ್ವಾಮೀಜಿ ಹೇಳಿದರು.

ಶುಕ್ರವಾರ ಸಂಜೆ ತಾಲೂಕಿನ ಭೆಂಡವಾಡ ಗ್ರಾಮದ ರೇವಣಸಿದ್ದೇಶ್ವರ ವಿರಕ್ತಮಠದಲ್ಲಿ ಜಾತ್ರೆ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಏ.1 ರಂದು ಗ್ರಾಮದಿಂದ ರೇವಣಸಿದ್ದೇಶ್ವರ ಉತ್ಸವ ಮೂರ್ತಿಯು ಗುಡ್ಡದ

ಶ್ರೀ ಮಠದ ಕ್ಷೇತ್ರಕ್ಕೆ ಆಗಮಿಸುವುದು.

ಏ.2 ರಂದು ಬೆಳಿಗ್ಗೆ 6 ಗಂಟೆಗೆ ಕತ್ತೃ ಗದ್ದುಗೆಗೆ ರುದ್ರಾಭಿಷೇಕ, 8 ಗಂಟೆಗೆ ಲಿಂಗದೀಕ್ಷೆ ಮತ್ತು ಅಯ್ಯಾಚಾರವು ಘಟಪ್ರಭಾ ಹೊಸಮಠದ ವಿರೂಪಾಕ್ಷ ಸ್ವಾಮೀಜಿಯವರಿಂದ ನೆರವೇರುವುದು, ಮಧ್ಯಾಹ್ನ 12 ಗಂಟೆಗೆ ಭಕ್ತರಿಂದ ನೈವೇದ್ಯ ಸಮರ್ಪಣೆ.

ಸಂಜೆ 5 ಗಂಟೆಗೆ ಧಾರ್ಮಿಕ ಶಿವಾನುಭವ ಕಾರ್ಯಕ್ರಮದ ಸಾನಿಧ್ಯವನ್ನು ಬೆಲ್ಲದ ಬಾಗೇವಾಡಿ ಮಹಾಂತೇಶ್ವರ ವಿರಕ್ತಮಠದ ಶಿವಾನಂದ ಸ್ವಾಮೀಜಿ ವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಗುರುಸಿದ್ಧ ಸ್ವಾಮೀಜಿ ವಹಿಸಲಿದ್ದಾರೆ, ಉದ್ಘಾಟಕರಾಗಿ ಪಿ.ಎಲ್.ಡಿ ಬ್ಯಾಂಕ ಅಧ್ಯಕ್ಷ ಪ್ರತಾಪರಾವ ಪಾಟೀಲ ಆಗಮಿಸಲಿದ್ದಾರೆ. ಹಿಪ್ಪರಗಿ ಸಂಗಮೇಶ್ವರ ಮಠದ ಪ್ರಭು ಮಹಾರಾಜರು, ಕಟಕಭಾವಿಯ ಅಭಿನವ ದರಿದೇವರು ಸ್ವಾಮೀಜಿ, ಚಿಕ್ಕೋಡಿ ಸಂಸದೆ ಪ್ರಿಯಾಂಕ ಜಾರಕಿಹೊಳಿ, ಶಾಸಕರಾದ ಡಿ.ಎಮ್.ಐಹೊಳೆ, ಮಹೇಶ ತಮ್ಮಣ್ಣವರ, ಉದ್ಯಮಿ ಮಹೇಶ ಬೆಲ್ಲದ, ಅಶೋಕ ದಳವಾಯಿ, ಅರುಣ ದಳವಾಯಿ, ಅನೀಲ ದಳವಾಯಿ, ವಿ.ಎಸ್.ಪೂಜಾರಿ ಆಗಮಿಸಲಿದ್ದಾರೆ. ಬೆಳವಿ ಸಿದ್ದಾರೂಢ ಮಠದ ಮೃತ್ಯುಂಜಯ ಸ್ವಾಮೀಜಿ, ಇಟ್ನಾಳದ ಸಿದ್ದೇಶ್ವರ ಸ್ವಾಮೀಜಿ, ಕಂಕಣವಾಡಿಯ ಮಾರುತಿ ಶರಣರು ಪ್ರವಚನ ನೀಡಲಿದ್ದಾರೆ. ನಂತರ ವಿರಕ್ತಮಠದ ರೇವಣಸಿದ್ದೇಶ್ವರ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಹಾಗೂ ವಸತಿ ಶಾಲೆ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ, ರಾತ್ರಿ 9 ಗಂಟೆಗೆ ಕರಡಿ ಮಜಲು, ಖಣಿವಾದನ ಹಾಗೂ ಡೊಳ್ಳಿನ ಪದಗಳು ನಡೆಯಲಿವೆ.

ಏ.3 ರಂದು ಬೆಳಿಗ್ಗೆ 7 ಗಂಟೆಗೆ ಪಲ್ಲಕ್ಕಿಗಳು ರೇವಣಸಿದ್ದೇಶ್ವರ ಗಿರಿ (ಗುಡ್ಡ) ಏರುವುದು, ಗಿರಿಯ ಮೇಲೆ ಸಕ್ಕರೆ ನೈವೇದ್ಯ ಸಮರ್ಪಣೆ, ಮಧ್ಯಾಹ್ನ ಮಹಾಪ್ರಸಾದ, ಸಂಜೆ 5 ಗಂಟೆಗೆ ಜಂಗಿ ನಿಕಾಲಿ ಕುಸ್ತಿ ನಡೆಯಲಿವೆ ಎಂದು ಶ್ರೀಗಳು ತಿಳಿಸಿದರು.

ಪರಶುರಾಮ ಪಿಡಾಯಿ, ಪ್ರವೀಣ ಹಂಜೆ, ಮಂಜು ಪೂಜಾರಿ, ಸಂಜು ಪೂಜಾರಿ, ಆನಂದ ಪೂಜಾರಿ, ಸಿದ್ದು ಪೂಜಾರಿ, ಅಣ್ಣಪ್ಪ ವಡ್ಡರ, ರೂಪೇಶ ಪೂಜಾರಿ, ರವಿ ಪೂಜಾರಿ, ಸಾಗರ ಪೂಜಾರಿ, ಸಂಗಪ್ಪ ಬೆನ್ನಾಳೆ, ರೇವಣು ದುಪದಾಳೆ, ರೇವಪ್ಪ ಪದ್ದಿ, ಅಪ್ಪು ಬಾನೆ, ಸುರೇಶ ಚೌಗಲಾ ಇದ್ದರು.



ದಲಿತ ಸಮುದಾಯಕ್ಕೆ ಸರ್ಕಾರ ಅನ್ಯಾಯ: ಶ್ರೀ

ಬೆಳಗಾವಿ : ರಾಜ್ಯದಲ್ಲಿ ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾ. ನಾಗಮೋಹದಾಸ್ ಆಯೋಗ ನೀಡಿರುವ ವರದಿ ಅವೈಜ್ಞಾನಿಕವಾಗಿದ್ದು, ದಲಿತ ಸಮುದಾಯದ ಬಲಗೈ ಬಣಗಳಿಗೆ ಗಂಭೀರ ಅನ್ಯಾಯವಾಗಿದೆ ಎಂದು ಚಿತ್ರದುರ್ಗದ ಛಲವಾದಿ ಗುರುಪೀಠದ ಬಸವನಾಗಿ ದೇವ ಸ್ವಾಮೀಜಿ ಸರ್ಕಾರದ ವಿರುದ್ಧ ಗಂಬೀರವಾಗಿ ಆರೋಪಿಸಿದರು.

ಶನಿವಾರ ಬೆಳಗಾವಿ ನಗರದ ಸರ್ಕಿಟ್ ಹೌಸ್ ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಣ್ಣ ಸಮಸ್ಯೆಯನ್ನು ದೊಡ್ಡದಾಗಿಸಿ ಬಲಗೈ ಸೇರಿ ಹಲವು ಸಮುದಾಯಗಳಿಗೆ ಅನ್ಯಾಯ ಮಾಡಿದ್ದ ಎಂದು ರಾಜ್ಯ ಸರ್ಕಾರದ ವಿರುದ್ಧಆಕ್ರೋಶ ಹೊರ ಹಾಕಿದರು.

ನಾಗಮೋಹದಾಸ್ ಆಯೋಗದ ವರದಿಯಲ್ಲಿ ಉದ್ದೇಶಪೂರ್ವಕವಾಗಿ ಬಲಗೈ ಸಮುದಾಯದ ಜನಸಂಖ್ಯೆಯನ್ನು ಕಡಿಮೆ ತೋರಿಸಲಾಗಿದ್ದು, ಈ ವರದಿಯನ್ನು ತಕ್ಷಣ ಮರುಪರಿಶೀಲನೆಗೆ ಒಳಪಡಿಸಬೇಕು. ಸರ್ಕಾರವೇ ಬಲಗೈ ಸಮುದಾಯದ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆಂದು ಸಿಎಂ ಸಿದ್ದರಾಮಯ್ಯ ವಿರುದ್ಧ ಕಿಡಿ ಕಾರಿದರು.



ಒಳಮೀಸಲಾತಿ ವರದಿ ಅವೈಜ್ಞಾನಿಕ : ಆರೋಪ

ರಾಜ್ಯ ಸರ್ಕಾರವು ಯಾವುದೇ ಕಾರಣಕ್ಕೂ ಅವೈಜ್ಞಾನಿಕವಾಗಿರುವ ಒಳಮೀಸಲಾತಿ ಹಂಚಿಕೆಯನ್ನು ಮಾನ್ಯ ಮಾಡಬಾರದು. ತಪ್ಪಿದ್ದಲ್ಲಿ ಕಾನೂನು ಹೋರಾಟ ಕೈಗೊಳ್ಳುವುದಾಗಿ ಎಚ್ಚರಿಸಿದರು.

ಮಾ.27ರಂದು ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಕುರಿತು ನಿರ್ಣಯ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದ್ದರು. ಆದರೆ, ಇದುವರೆಗೆ ಯಾವುದೇ ಅಂತಿಮ ನಿರ್ಧಾರ ಕೈಗೊಂಡಿಲ್ಲ. ವಿಧಾನಸಭೆ ಉಪಚುನಾವಣೆ ಬಳಿಕ ನಿರ್ಧಾರ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಇನ್ನು ದುರ್ಗೇಶ ಮೇತ್ರಿ ಅವರು ಬೆಂಗಳೂರಿನ ಫ್ರೀಡಂ ಪಾರ್ಕ'ನಲ್ಲಿ ಸುಮಾರು 5-6 ಲಕ್ಷ ಚಲವಾದಿ ಬಾಂಧವರು ಭಾಗಿಯಾಗಿ ಅವಿಸ್ಮರಣೀಯ ಹೋರಾಟವನ್ನು ಮಾಡಿದ್ದಾರೆ. ನಮ್ಮ ಮೇಲಾದ ಅನ್ಯಾಯದ ವಿರುದ್ಧ ನಾವು ಒಗ್ಗಟ್ಟಾಗಿ ಧ್ವನಿ ಎತ್ತುತ್ತೇವೆ ಎಂದರು.

ಈ ವೇಳೆ ಎವಿಎಸ್‌ಎಸ್ ಸಂಸ್ಥಾಪಕ ಅಧ್ಯಕ್ಷ ತುಂಬಲ ರಾಮಣ್ಣ, ಬಂಗವಾದಿ ನಾರಾಯಣಪ್ಪ, ದುರ್ಗೇಶ ಮೇತ್ರಿ ಸೇರಿದಂತೆ ಇತರರು ಇದ್ದರು.

ಕಿರುಸುದ್ದಿ

ಎ.4ರಂದು ರಾಷ್ಟ್ರೀಯ ವಿಚಾರ ಸಂಕಿರಣ

• **ಬಾದಾಮಿ:** ಡಾ.ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನ (ರಿ) ಧಾರವಾಡ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಾದಾಮಿಯ, ಕನ್ನಡ ವಿಭಾಗದ ನೇತೃತ್ವದಲ್ಲಿ ಒಂದು ದಿನದ ಡಾ.ಎಂ.ಎಂ.ಕಲಬುರ್ಗಿ ಅವರ ಸೃಜನಶೀಲ ಸಾಹಿತ್ಯ ಮತ್ತು ಸೃಜನೇತರ ಸಾಹಿತ್ಯ ಕುರಿತು ಏ.4ರಂದು ಶನಿವಾರ ಬೆಳಗ್ಗೆ 10 ಗಂಟೆಗೆ ಕುಮಾರೇಶ್ವರ ಸಭಾಭವನ, ಶಿವಯೋಗಮಂದಿರ ಶಾಖಾಮಠ ಆವರಣದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ. ಡಾ.ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಡಾ. ವೀರಣ್ಣ ರಾಜೂರು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಎಸ್.ಎಂ.ಹಿರೇಮಠ ಹಾಗೂ ಎಂ.ಐ.ಬಾರಾವಲಿ ವಹಿಸುವರು. ಅತಿಥಿಗಳಾಗಿ ಬಾದಾಮಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತ ಅಧ್ಯಕ್ಷ ಬಿ.ಎಫ್.ಹೊರಕೇರಿ ವಹಿಸುವರು. ಪ್ರಾಸ್ತಾವಿಕ ನುಡಿಗಳನ್ನು ಡಾ.ಬಾಳಣ್ಣ ಶೀಗಿಹಳ್ಳಿ ಮಾಡುವರು. 'ಸಂಶೋಧನೆ ಮತ್ತು ಗ್ರಂಥ ಸಂಪಾದನೆ' ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ. ರವೀಂದ್ರನಾಥ ಮಾತನಾಡಲಿದ್ದು, ನೀರಾಗ ನಿಂತೀನಿ ನೀರಡಿಸಿ' ಕವನ ಸಂಕಲನ ಕುರಿತು ಬೆಳಗಾವಿ ಆರ್.ಪಿ.ಡಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಬಿ.ಕೋಲ್ಕಾರ ಮಾತನಾಡಲಿದ್ದಾರೆ. ಸರಕಾರಿ ಪ್ರಥಮ ದರ್ಜೆ ಕಾಲೇಜಿ ಪ್ರಾಚಾರ್ಯ ಪ್ರೊ..ಎಸ್.ಬಿ.ರಾಯನಗೌಡರ ಅಧ್ಯಕ್ಷತೆ ವಹಿಸುವರು ಎಂದು ಪ್ರಾಚಾರ್ಯ ಪ್ರೊ. ಎಸ್.ಬಿ.ರಾಯನಗೌಡರ ತಿಳಿಸಿದ್ದಾರೆ.

ರಾಮನವಮಿ ಆಚರಣೆ




• **ಜಮಖಂಡಿ:** ನಗರದ ರಾಮದೇವ ಗಲ್ಲಿಯ ಪುರಾತನ ರಾಮದೇವ ಮಂದಿರದಲ್ಲಿ ರಾಮನವಮಿ ಕಾರ್ಯಕ್ರಮ ಆಚರಿಸಿದರು. ರಾಮನವಮಿ ನಿಮಿತ್ತ ಬೆಳಗ್ಗೆಯಿಂದ ಕ್ಷೀರಾಭಿಷೇಕ, ರಾಮನಾಮ ಪಠಣ ಭಜನೆ ಜರುಗಿದವು. ನಂತರ ನಗರದ ಪ್ರಮುಖ ಬೀದಿಯಲ್ಲಿ ಪಲ್ಲಕ್ಕಿ ಸೇವೆ, ನಂತರ ಮಧ್ಯಾಹ್ನ 12 ಗಂಟೆಗೆ ಶ್ರೀರಾಮಚಂದರದೇವರ ಜನ್ಮ ಸಮಯಕ್ಕೆ ಸರಿಯಾಗಿ ತೊಟ್ಟಿಲು ಸೇವೆ ನಡೆಯಿತು. ಮಹಿಳೆಯರಿಮದ ಉಡಿತುಂಬುವ ಕಾರ್ಯಕ್ರಮದ ಜೊತೆಗೆ ರಾಮನ ಪ್ರೀಯವಾದ ಪಾನಕ ಮತ್ತು ಆಮ್ರ ಕುಸುಮ ವಿತರಣೆಯು ನಡೆಯಿತು. ರಾಮ ಮಂದಿರ ಟ್ರಸ್ಟ ಹಾಗೂ ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ಉಮೇಶ ದೇಸಾಯಿ, ಬ್ರಹಗ್ಗಣ ಪತ್ತಿನ ಸಹಕಾರ ಸಂಗದ ನಿರ್ದೇಶಕ ಚವಿಲಾಸ ಜೋಶಿ, ವಿಲಾಸ ರಾಯರ ಆರ್.ಟಿ.ಜೋಶಿ, ನಿಂಬಗರಿಗಿ ಅಮೃತ ದೇಸಾಯಿ, ನಂದು ಜೋಶಿ, ಅಶೋಕ ಕುಲಕರ್ಣಿ ಸೇರಿದಂತೆ ಭಕ್ತರು ಇದ್ದರು.

ಶ್ರೀರಾಮ ನವಮಿ ಆಚರಣೆ



• **ಕಲಾದಗಿ:** ಗ್ರಾಮದ ಕೆರೂರ ಓಣಿಯಲ್ಲಿ ಶ್ರೀರಾಮ ನವಮಿ ದಿನದಂದು ಪ್ರಭು ಶ್ರೀರಾಮಚಂದ್ರರ ಭಾವಚಿತ್ರಕ್ಕೆ ವಿಶೇಷ ಪೂಜಾಲಂಕಾರ ಹಾಗೂ ಮದ್ಯಾಹ್ನ ಮಹಾಪ್ರಸಾದ ಜರುಗಿತು. ಈ ಕಾರ್ಯಕ್ರಮದಲ್ಲಿ ನೂರಾರು ತರುಣರು ಹಾಗೂ ಸುಮಂಗಳೆಯರು ಬಣ್ಣ ಬಣ್ಣದ ರಂಗೋಲಿ ಬಿಡಿಸಿ ಶ್ರದ್ಧಾಭಕ್ತಿಯಿಂದ ಪಾಲ್ಗೊಂಡು ಅದ್ದೂರಿಯಾಗಿ ನೆರವೇರಿಸಿದರು.



ಕಮತಗಿ: ಪಟ್ಟಣ ಪಂಚಾಯತಿ ವತಿಯಿಂದ ಬಾಗಲಕೋಟೆ ವಿಧಾನಸಭೆ ಮತಕ್ಷೇತ್ರದ ಉಪ ಚುನಾವಣೆಯ ನಿಮಿತ್ತ ಕಮತಗಿ ಪಟ್ಟಣದಲ್ಲಿ ಸಾರ್ವಜನಿಕರಿಗೆ ಮತದಾನದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಮುಖ್ಯಾಧಿಕಾರಿ ಹಾಗೂ ಸಿಬ್ಬಂದಿಗಳಿಂದ ಪಟ್ಟಣದ ಬೀದಿಗಳಲ್ಲಿ ಜಾಥಾ ಮಾಡಲಾಯಿತು.



ಬಾಗಲಕೋಟೆ: ನಗರದ ಕೆರೂಡಿ ಆಟೋ ರಿಕ್ಷಾ ಸ್ಟ್ಯಾಂಡ್‌ನಲ್ಲಿ ಮುಖಂಡ ಮಲ್ಲಿಕಾರ್ಜುನ ಚರಂತಿಮಠ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪರ ಮತಯಾಚನೆ ಮಾಡಿದರು.

ಎನ್‌ಎಸ್‌ಎಸ್ ಶಿಬಿರದಿಂದ ನಾಯಕತ್ವ ಗುಣ

• **ಬೀಳಗಿ:** ಎನ್‌ಎಸ್‌ಎಸ್ ಶಿಬಿರವು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಸುತ್ತದೆ. ಅಲ್ಲದೇ ಬದುಕಿನ ಪಾಠ ಕಲಿಸುತ್ತದೆ. ಗ್ರಾಮಸ್ಥರು ಹಾಗೂ ಶಿಬಿರಾರ್ಥಿಗಳ ನಡುವೆ ಉತ್ತಮ ಬಾಂಧವ್ಯ ಬೆಸೆಯುತ್ತದೆ ಎಂದು ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ವಿರುಪಾಕ್ಷಯ್ಯ ಹಿರೇಮಠ ಹೇಳಿದರು. ತಾಲೂಕಿನ ರೊಳ್ಳಿ ಗ್ರಾಮದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯ ಜಮಖಂಡಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಬಿಬಿಎ ಕಾಲೇಜು ಬೀಳಗಿ (ಧವಳೇಶ್ವರ. ಪು.ಕೆ)ಕಾಲೇಜು ಸಂಯುಕ್ತ ಆಶ್ರಯದಲ್ಲಿ ವೈಯಕ್ತಿಕ ಹಿತಾಸಕ್ತಿಗಿಂತ ಸಮಾಜದ ಹಿತವೇ ಮುಖ್ಯ ಎಂಬ ಧ್ಯೇಯದೊಂದಿಗೆ ದತ್ತು ಗ್ರಾಮ ರೊಳ್ಳಿಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಆಯೋಜನೆ ವಿಶೇಷ ಶಿಬಿರ ಪಾಲ್ಗೊಂಡು ಮಾತನಾಡಿದರು. ಮಾಜಿ ಸೈನಿಕ ಭೀಮಣ್ಣ ಕುಬಕಡ್ಡಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಕೂಡಿಬಾಳುವ ಸಂಸ್ಕೃತಿ, ಸಂಸ್ಕಾರ, ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಶಿಬಿರ ಪ್ರಯೋಜನಕಾರಿಯಾಗಿದೆ. ವಿದ್ಯಾರ್ಥಿಗಳು ಶಿಸ್ತು, ಸಮಯಪ್ರಜ್ಞೆ ರೂಢಿಸಿಕೊಳ್ಳಬೇಕು. ದೇಶಭಕ್ತಿ ಹೊಂದಿರಬೇಕು. ಎಲ್ಲ ವಿದ್ಯಾರ್ಥಿಗಳು ಶ್ರದ್ಧೆಯಿಂದ ಶಿಬಿರದಲ್ಲಿ ಪಾಲ್ಗೊಂಡು, ಶ್ರಮದಾನದಲ್ಲಿ ತೊಡಗಬೇಕು ಎಂದರು. ಪದ್ಮರಾಜ ಹಿರೇಮಠದ ಧರ್ಮದರ್ಶಿ ಶಂಕ್ರಯ್ಯ ಹಿರೇಮಠ ಸಾನ್ನಿಧ್ಯ ವಹಿಸಿ, ಶಿಬಿರಕ್ಕೆ ಚಾಲನೆ ನೀಡಿದರು. ರಾಷ್ಟ್ರೀಯ ಸೇವಾ ಯೋಜನಾ ಘಟಕದ ಅಧ್ಯಕ್ಷರು, ಪ್ರಾಂಶುಪಾಲ ಪಿ.ಸಿ.ಕೋಲಕಾರ ಮಾತನಾಡಿದರು. ಸರ್. ಎಂ.ವಿಶ್ವೇಶ್ವರಯ್ಯ ವಿದ್ಯಾ ವರ್ಧಕ ಸಂಘದ ಅಧ್ಯಕ್ಷ ಸಂತೋಷ ಜಾಡರ ಅಧ್ಯಕ್ಷತೆ ವಹಿಸಿದ್ದರು. ಸಂಗಯ್ಯ ಹಿರೇಮಠ, ನಾಗಪ್ಪ ಬಿರಾದಾರ, ದುಂಡಪ್ಪ ತಳವಾರ, ಹುಸೇನಸಾಬ ದೊಡಮನಿ, ಸಿದ್ದಪ್ಪ ಬೀಳಂಡಿ, ಶೇಖಪ್ಪ ಹಳೆರೊಳ್ಳಿ, ಪತ್ರಕರ್ತ ಪ್ರಶಾಂತ ಸುಣಗಾರ ಮತ್ತಿತರಿದ್ದರು.



ಬೀಳಗಿ: ತಾಲೂಕಿನ ರೊಳ್ಳಿ ಗ್ರಾಮದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯ ಜಮಖಂಡಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಬಿಬಿಎ ಕಾಲೇಜು ಬೀಳಗಿ (ಧವಳೇಶ್ವರ. ಪು.ಕೆ)ಕಾಲೇಜು ಸಂಯುಕ್ತ ಆಶ್ರಯದಲ್ಲಿ ವೈಯಕ್ತಿಕ ಹಿತಾಸಕ್ತಿಗಿಂತ ಸಮಾಜದ ಹಿತವೇ ಮುಖ್ಯ ಎಂಬ ಧ್ಯೇಯದೊಂದಿಗೆ ದತ್ತು ಗ್ರಾಮ ರೊಳ್ಳಿಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಆಯೋಜನೆ ವಿಶೇಷ ಶಿಬಿರ ನಡೆಯಿತು.

ಗ್ರಾಮೀಣ ಭಾಗದಲ್ಲಿ ಬಿಜೆಪಿ ಪರ ಪಿ.ರಾಜೀವ ಭರ್ಜರಿ ಪ್ರಚಾರ

ಅಭಿವೃದ್ಧಿಗೆ ಬಂಜಾರರು ಬೆಂಬಲಿಸಲಿ



• **ಬಾಗಲಕೋಟೆ:** ಉಪಚುನಾವಣೆ ಹಿನ್ನಲೆ ಬಾಗಲಕೋಟೆ ಮತಕ್ಷೇತ್ರದಲ್ಲಿ ಮಾಜಿ ಶಾಸಕ ಪಿ.ರಾಜೀವ್ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠರ ಪರವಾಗಿ ಹಾಲೂರು ಎಲ್.ಟಿ. ಗ್ರಾಮದಲ್ಲಿ ಲಂಬಾಣಿ ಸಮುದಾಯದವರ ಮತಯಾಚನೆ ನಡೆಸಿದರು.

ಆಲೂರು ಎಲ್‌ಟಿ ಗ್ರಾಮದಲ್ಲಿ ನಡೆದ ಪ್ರಚಾರದ ವೇಳೆ ಲಂಬಾಣಿ (ಬಂಜಾರ) ಸಮುದಾಯದ ಸಂಸ್ಕೃತಿ, ಪರಂಪರೆ ಹಾಗೂ ಅವರ ಶಕ್ತಿಯ ಕುರಿತು ಮಾತನಾಡಿದ ಅವರು, ಈ ಸಮುದಾಯದ ಗೌರವ ಮತ್ತು ಸ್ವಾಭಿಮಾನ ಕಾಪಾಡಿಕೊಳ್ಳುವುದು ಅಗತ್ಯವೆಂದರು.

ಪ್ರಚಾರ ಸಭೆಯಲ್ಲಿ ಮಾತನಾಡಿದ ಪಿ.ರಾಜೀವ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಟೀಕೆ ವ್ಯಕ್ತಪಡಿಸಿದ ಪಿ.ರಾಜೀವ್, ಬಂಜಾರ ಸಮುದಾಯದ ಬಗ್ಗೆ ಸಮರ್ಪಕ ಅರಿವು ಮತ್ತು ಕಾಳಜಿ ಸರ್ಕಾರದ ಬಳಿ ಇಲ್ಲ ಎಂದು ಆರೋಪಿಸಿದರು. ಹಿಂದಿನ ಅವಧಿಯಲ್ಲಿ ಈ ಸಮುದಾಯದ ಅಭಿವೃದ್ಧಿಗೆ ಯಾವುದೇ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿಲ್ಲ ಎಂದರು.

ಅಭ್ಯರ್ಥಿ ವೀರಣ್ಣ ಚರಂತಿಮಠ ಮಾತನಾಡಿ, ಮತಕ್ಷೇತ್ರದ ವಿವಿಧ ತಾಂಡಾಗಳಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಲಾಗಿದೆ. ಮತ್ತೆ ಮತಕ್ಷೇತ್ರದ ಸೇವೆ ಸಲ್ಲಿಸಲು ಬಿಜೆಪಿಗೆ ಮತ ನೀಡಿ ಎಂದರು.

ಮುಖಂಡ ಹೂವಪ್ಪ ರಾಠೋಡ, ಸೋಮಸಿಂಗ ವಮಾಣಿ, ಭೀಮಸಿಂಗ್, ವಮಾಣಿ, ಚಾಪಣ್ಣ ಲಮಾಣಿ, ವೆಂಕಟೇಶ್ ನಾಯಕ, ಸಂತೋಷ ಚವ್ಹಾಣ, ಮುತ್ತತ್ತಿ ಗ್ರಾಮದ ಕರಿಯಪ್ಪ ಕಟ್ಟಿಮನಿ, ಅರ್ಜುನ, ಚವ್ಹಾಣ, ಪರಶು ಗೋವಾ, ಶರಣಪ್ಪ ಆಲೂರ, ಯಮನಪ್ಪ ಪಾಟೀಲ, ರಾಘವೇಂದ್ರ ದಳವಾಯಿ, ಹಿರೇ ಗುಳಬಾಳದ ಹನಮಂತ ಮೇಟಿ, ಚನ್ನಯ್ಯ ಪೂಜಾರಿ, ಯಲ್ಲಪ್ಪ ವಾಲಿಕಾರ, ಗೂಳಪ್ಪ ದೋಣಿ, ಬಸಪ್ಪ ಮೇಟಿ, ಸಂತೋಷ ವಾಲಿಕಾರ, ಜಡ್ರಾಮಕುಂಟಿಯ ಚನ್ನಪ್ಪಗೌಡ ಪಾಟೀಲ್, ಸಂಗಪ್ಪ ಕೂರಿ, ಶ್ರೀಶೈಲ ಖಾಕಂಡಕಿ, ಮಂಜುನಾಥ ಕಿರಸೂರ, ಸೂರೇಶ ಕುರಿ, ಹೊದ್ಲೂರಿನ ಪರಸಪ್ಪ ಕುಂಟೋಜಿ, ಪರಸಪ್ಪ ಬಂಗಿ, ಬಸಪ್ಪ ಅಂಗಡಿ, ಸೇರಿದಂತೆ ಅನೇಕರು ಇದ್ದರು.

ಬಿಜೆಪಿ ಬೆಂಬಲಿಸಿ: ಪೂಜಾರ

• **ಬಾಗಲಕೋಟೆ:** ಬಿಜೆಪಿ ಆಯ್ಕೆಯಿಂದ ಮಾತ್ರ ಅಭಿವೃದ್ಧಿ ಸಾಧ್ಯವಿದ್ದು, ಆಸೆ ಆಮಿಷಗಳಿಗೆ ಬಲಿಯಾಗದೇ ಬಿಜೆಪಿಗೆ ಮತ ನೀಡಿ ವೀರಣ್ಣ ಚರಂತಿಮಠ ಅವರನ್ನು ಗೆಲ್ಲಿಸಿ ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಹೇಳಿದರು.

ಮತಕ್ಷೇತ್ರದ ಬಿಲ್‌ಕೆರೂರ ಗ್ರಾಮದಲ್ಲಿ ಉಪಚುನಾವಣೆಯ ಪ್ರಚಾರದ ನಿಮಿತ್ತ ಬಿಜೆಪಿ ಅಭ್ಯರ್ಥಿ ಪರವಾಗಿ ಮತಯಾಚನೆ ಮಾಡಿ ದಾಖಲೆಮಟ್ಟದ ಮತದಾನ ಮಾಡಿ ಬಿಜೆಪಿ ಗೆಲ್ಲಿಸುವ ಹೊಣೆ ನಿಮ್ಮದು, ಹಳ್ಳಿಗಳ ಅಭಿವೃದ್ಧಿಗಾಗಿ ಬಿಜೆಪಿ ಪಕ್ಷ ಮತ್ತು ವೀರಣ್ಣ ಚರಂತಿಮಠ ಸದಾ ಸಿದ್ಧರಾಗಿದ್ದು, ಪ್ರತಿಯೊಬ್ಬರು ಮತದಾನ ಮಾಡಿ ಬಿಜೆಪಿ ಆಯ್ಕೆ ಮಾಡಿ ಎಂದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ರಾಮುಲು ಮಾತನಾಡಿ, ಡಾ.ವೀರಣ್ಣ ಚರಂತಿಮಠ ಅವರಿಗೆ ಮತ ನೀಡುವ ಮೂಲಕ ಬೆಂಬಲಿಸುವಂತೆ ಮನವಿ ಮಾಡಿದರು. ಹಿರಿಯ ಶಂಭುಗೌಡ ಪಾಟೀಲ್, ಹನುಮಗೌಡ ಪಾಟೀಲ, ಬಸವರಾಜ ಪಾಟೀಲ, ಸುಭಾಷ್ ಜಾಲಾಪುರ್, ಗ್ಯಾನಪ್ಪಗೌಡಪಾಟೀಲ್ ಯಲ್ಲನಗೌಡ ಪಾಟೀಲ, ದುಂಡಪ್ಪ ಪಾಟೀಲ್ ಯಂಕಪ್ಪ ವಾಲೀಕಾರ್, ಲಕ್ಷ್ಮಣಗೌಡ ಪಾಟೀಲ, ಮಹಾಂತೇಶ್ ಪಾಟೀಲ, ಬಿಜೆಪಿ ಮುಖಂಡರಾದ ಡಾ.ಶೇಖರ್ ಮಾನೆ, ಕುಮಾರ ಗಿರಿಜಾ ಮಲ್ಲಿಕಾರ್ಜು, ಸುರಪುರ, ಯಲ್ಲಪ್ಪ ಕ್ಯಾದಿಗೇರಿ, ರಾಘವೇಂದ್ರ ನಾಗೂರ, ವಾಲ್ಮೀಕಿ ಉಪಸ್ಥಿತರಿದ್ದರು.



ಗ್ಯಾರಂಟಿ ಅಭಿವೃದ್ಧಿಗೆ ಕೈ ಬಲಪಡಿಸಿ



• **ಬಾಗಲಕೋಟೆ:** ದಿ.ಎಚ್.ವೈ. ಮೇಟಿ ಅವರ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲು ಉಮೇಶ ಮೇಟಿ ಅವರನ್ನು ಬೆಂಬಲಿಸಿ ಕಾಂಗ್ರೆಸ್ ಗೆಲ್ಲಿಸಬೇಕು ಎಂದು ಮಾಜಿ ಸಚಿವ ಅಜಯಕುಮಾರ ಸರನಾಯಕ ಹೇಳಿದರು.

ತಾಲೂಕಿನ ಬೇವೂರಗ್ರಾಮದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಪಕ್ಷದ ಚುನಾವಣೆ ಸಭೆಯಲ್ಲಿ ಅವರು ಮಾತನಾಡಿದರು. ಗ್ರಾಮೀಣ ಭಾಗದ ಬಡಜನತೆಯ ಅನುಕೂಲಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಹಳ್ಳಿ ಹಳ್ಳಿಗಳಲ್ಲಿ ಈ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮೇಟಿ ಅವರ ಜನಪರ ಕಾರ್ಯಗಳನ್ನು ಗಮನಿಸಿ ಗ್ರಾಮೀಣ ಜನತೆ ಮತ್ತೊಮ್ಮೆ ಕಾಂಗ್ರೆಸ್ ಅಭ್ಯರ್ಥಿಗೆ ಆಶೀರ್ವದಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕರ್ನಾಟಕ ಪ್ರದೇಶಯುವಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ್ ಜಾರಕಿಹೊಳಿ ಮಾತನಾಡಿ, ಎಚ್.ವೈ. ಮೇಟಿಅವರು ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ತಮ್ಮ ಅವಧಿಯಲ್ಲಿ ಈ ಭಾಗದಲ್ಲಿ ನಿರಂತರ ಅಭಿವೃದ್ಧಿ ಕಾರ್ಯಕೈಗೊಂಡಿದ್ದಾರೆ. ಅವರ ಪುತ್ರ ಉಮೇಶ ಅವರನ್ನು ಎಲ್ಲರೂ ಬೆಂಬಲಿಸಬೇಕು ಎಂದು ಕೋರಿದರು. ಅಭ್ಯರ್ಥಿ ಉಮೇಶ ಮೇಟಿ, ಸಂಯುಕ್ತಾ ಪಾಟೀಲ ಮಾತನಾಡಿದರು.

ಸರಳ ಸ್ವಭಾವ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕಳಕಳಿಯಿಂದ ಎಚ್.ವೈ.ಮೇಟಿ ಅವರು ಅಪಾರ ಜನರ ಪ್ರೀತಿ ಗಳಿಸಿದ್ದಾರೆ. ನಗರದಲ್ಲಿ ವೈದ್ಯಕೀಯ ಮಹಾವಿದ್ಯಾಲಯ ಆಗಬೇಕೆಂಬ ಅವರ ಕನಸು ಕೂಡ ನನಸಾಗಲಿದೆ. ಪಕ್ಷದ ಅಭ್ಯರ್ಥಿ ಉಮೇಶ ಮೇಟಿ ಅವರನ್ನು ಎಲ್ಲರೂ ಬೆಂಬಲಿಸಬೇಕು ಎಂದು ಎಸ್.ಜಿ.ನಂಜಯ್ಯನಮಠ ಹೇಳಿದರು.

ನಗರದಲ್ಲಿ ಪ್ರಚಾರ ನಡೆಸಿದ ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ನುಡಿದಂತೆ ನಡೆದು ಸಮಗ್ರ ಅಭಿವೃದ್ಧಿಗೆ ಬದ್ಧವಾಗಿ ಕಾರ್ಯ ನಿರ್ವಹಿಸುತ್ತಿದೆ. ಎಲ್ಲ ಮತದಾರರು ಮತ್ತೊಮ್ಮೆ ಕಾಂಗ್ರೆಸ್ ಅಭ್ಯರ್ಥಿಕೈ ಬಲಪಡಿಸಬೇಕು ಎಂದರು.

ಶಾಸಕ ಜೆ.ಟಿ.ಪಾಟೀಲ, ಬಸವಪ್ರಭು ಸರನಾಡಗೌಡ, ಶ್ರೀಶೈಲ ದಳವಾಯಿ, ಬಸವಂತಪ್ಪ ಮೇಟಿ, ಎಸ್.ಎನ್.ರಾಂಪೂರ, ಬಲರಾಮ ಪವಾರ, ಪರಶುರಾಮ ಮಹಾರಾಜನವರ, ನಾಗರಾಜ ಹದ್ಲಿ, ಮಂಜುಳಾ ಕಮತಗಿ, ರಮೇಶ ಕೊಳ್ಳಾರ, ನ್ಯಾಯವಾದಿ ಮಾಗನೂರ, ಶರಣಪ್ಪ ಮಾಗನೂರ, ದ್ಯಾಮಣ್ಣ ಗಾಳಿ, ಸಿದ್ದು ಕುರಿ, ಶಿವಪುತ್ರ ದೊಡ್ಡಮನಿ, ಚಂದ್ರಕಾಂತ ಗುಳೇದ, ಶರಣಪ್ಪ ಗುಳೇದ,ಕರಿಬಸಪ್ಪ ಹಳ್ಳೂರ ಉಪಸ್ಥಿತರಿದ್ದರು.

ಬೇವಿನಮಟ್ಟಿಯಲ್ಲಿ ಮತದಾನ ಜಾಗೃತಿ

• **ಬಾಗಲಕೋಟೆ:** ಬಾಗಲಕೋಟೆ ವಿಧಾನ ಸಭಾ ಉಪ ಚುನಾವಣೆ ಹಿನ್ನಲೆ ಅರ್ಹ ಮತದಾರರು ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಪ್ಪದೇ ತಮ್ಮ ಹಕ್ಕನ್ನು ಚಲಾಯಿಸುವ ನಿಟ್ಟಿನಲ್ಲಿ ಬೇವಿನಮಟ್ಟಿ ಗ್ರಾಮದಲ್ಲಿ ಮುಂಬತ್ತಿ ಬೆಳಕಿನಲ್ಲಿ ಭಾರತ ನಕ್ಷೆ ಅರಳಿಸುವ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು.

ಜಿಲ್ಲಾಸ್ವೀಪ್ ವತಿಯಿಂದ ಬೇವಿನಮಟ್ಟಿಯಲ್ಲಿ ಹಮ್ಮಿಕೊಂಡ ಮತದಾನ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿಗಳು ಮತದಾನ ಪ್ರಕ್ರಿಯೆ ಎಂಬುದು ಪ್ರಜಾಪ್ರಭುತ್ವದ ಹಬ್ಬವಾಗಿದ್ದು, ಈ ಹಬ್ಬದಲ್ಲಿ ಪ್ರತಿಯೊಬ್ಬ ಅರ್ಹ ಮತದಾರರು ಪಾಲ್ಗೊಳ್ಳಬೇಕು. ಏ.9ರಂದು ಜರುಗಲಿರುವ ಮತದಾನ ದಿನ ಮತಗಟ್ಟೆಗೆ ತೆರಳಿ ತಮ್ಮ ಮತದಾನದ ಹಕ್ಕು ಚಲಾಯಿತು ಪ್ರಜಾಪ್ರಭುತ್ವ ಸದೃಢಗೊಳಿಸಬೇಕು ಎಂದರು.

ಜಿಲ್ಲಾಸ್ವೀಪ್ ಸಮಿತಿಯನೋಡಲ್ ಅಧಿಕಾರಿ ಜಿಪಂ ಸಿಇಒ ಶಶಿಧರ ಕುರೇರ ಮಾತನಾಡಿ, ಮತದಾರರು ಮತದಾನ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮತದಾನ ಮಾಡಬೇಕು. ತಮ್ಮ ಕುಟುಂಬ ವರ್ಗದವರಿಗೂ ಮತದಾನದ ಮಹತ್ವದ ಕುರಿತು ತಿಳಿಸುವ ಮೂಲಕ ಮತದಾನ ಮಾಡುವ ನಿಟ್ಟಿನಲ್ಲಿ ಪ್ರೇರೇಪಿಸಬೇಕು. ಉಪ ಚುನಾವಣೆಯಲ್ಲಿ ನೂರಕ್ಕೆ ನೂರರಷ್ಟು ಮತದಾನವಾಗುವ ನಿಟ್ಟಿನಲ್ಲಿ ವಿನೂತನ ಮಾದರಿಯಲ್ಲಿ ಮತದಾನ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಜಿಪಂ ಉಪಕಾರ್ಯದರ್ಶಿ ಎನ್.ವೈ. ಬಸರಿಗಿಡದ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ ಮತದಾನದ ಮಹತ್ವವನ್ನು ತಿಳಿಸುವ ಮೂಲಕ ಪ್ರತಿಯೊಬ್ಬರೂ ಮತದಾನ ಮಾಡಲು ಮುಂದಾಗಬೇಕು ಎಂದು ತಿಳಿಸಿದರು.

ಮುಂಬತ್ತಿ ಬೆಳಕಿನಲ್ಲಿ ಭಾರತ ನಕ್ಷೆ ಅರಳಿಸಲಾಯಿತು. ರಂಗೋಲಿಯಲ್ಲಿ ಭಾರತ ನಕ್ಷೆ ಬಿಡಿಸುವ ಮೂಲಕ ಅದರಲ್ಲಿ ಮತದಾನ ದಿನ ಮೂಡಿಸಲಾಗಿತ್ತು. ನಮ್ಮ ಮತ ಮಾರಾಟಕ್ಕಿಲ್ಲ ಎಂದು ಬರೆದು ಮತದಾನರಲ್ಲಿ ಮಹತದಾನ ಮಹತ್ವ ಸಾರಲಾಯಿತು.

ತಾಪಂ ಇಒ ಸುಭಾಷ ಸಂಪಗಾಂವಿ, ಆಡಳಿತಾಧಿಕಾರಿ ಹಾಗೂ ತಾಲೂಕು ಸಮಾಜ ಕಲ್ಯಾಣಾಧಿಕಾರಿ ರವಿ ಇದ್ದಲಗಿ, ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ ಸೇರಿದಂತೆ ಬೇವಿನಮಟ್ಟಿ ಗ್ರಾಪಂ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.



ಗಣಿತ ಪರೀಕ್ಷೆ: ವಿವಿಧ ಪರೀಕ್ಷಾ ಕೇಂದ್ರಗಳಿಗೆ ಜಿಪಂ ಸಿಇಒ ಭೇಟಿ

• **ಬಾಗಲಕೋಟೆ:** ಜಿಲ್ಲೆಯಲ್ಲಿ ಶನಿವಾರ ನಡೆದ ಎಸ್ಸೆಸ್ಸೆಲ್ಸಿ ಗಣಿತ ವಿಷಯ ಪರೀಕ್ಷೆ ನಡೆದಿದ್ದು, ವಿವಿಧ ಪರೀಕ್ಷಾ ಕೇಂದ್ರಗಳಿಗೆ ಜಿಪಂ ಸಿಇಒ ಅಧಿಕಾರಿ ಶಶಿಧರ ಕುರೇರ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಾಗಲಕೋಟೆ ತಾಲೂಕಿನಾದ್ಯಂತ ಸಂಚರಿಸಿ ಮುಗಳೊಳ್ಳಿ ಕರ್ನಾಟಕ ಪಬ್ಲಿಕ್ ಸ್ಕೂಲ್, ಹಳ್ಳೂರ ಬಸವೇಶ್ವರ ಪ್ರೌಢಶಾಲೆ, ಬೇವೂರ ಆದರ್ಶ ಪದವಿ ಪೂರ್ವ ಕಾಲೇಜುಗಳಲ್ಲಿ ಸ್ಥಾಪಿಸಲಾದ ಕೇಂದ್ರಗಳಿಗೆ ಭೇಟಿ ನೀಡಿ ಪರೀಕ್ಷಾ ಸಿದ್ಧತೆ, ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ಕಾರ್ಯನಿರ್ವಹಣೆ, ವಿದ್ಯಾರ್ಥಿಗಳಿಗೆ ಕುಡಿಯುವ ನೀರು ಮತ್ತು ಬೆಳಕಿನ ವ್ಯವಸ್ಥೆ ಹಾಗೂ ಆಸನ ವ್ಯವಸ್ಥೆ ವೀಕ್ಷಣೆ ಮಾಡಿದರು.



ಪರೀಕ್ಷಾ ನಿಯಮಾವಳಿಗಳ ಕಟ್ಟುನಿಟ್ಟಿನ ಪಾಲನೆ, ಪ್ರಶ್ನೆ ಪತ್ರಿಕೆಗಳ ಭದ್ರತೆ ಮತ್ತು ಕೇಂದ್ರದ ಸುತ್ತಮುತ್ತ ಜಾರಿಯಲ್ಲಿರುವ 144 ಕಲಂ ನಿಷೇಧಾಜ್ಞೆಯ ಜಾರಿಯನ್ನು ಪರಿಶೀಲಿಸಿದರು. ಜಿಲ್ಲೆಯಲ್ಲಿ ಪರೀಕ್ಷೆಗಳು ಅತ್ಯಂತ ಪಾರದರ್ಶಕವಾಗಿ ಮತ್ತು ಸುಸೂತ್ರವಾಗಿ ನಡೆಯುತ್ತಿವೆ. ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಸೂಚಿಸಿದರು.

ಹಿಂದಿ ಪರೀಕ್ಷೆ ಮಾ.31ಕ್ಕೆ

ಮಾ.30ರಂದು ನಡೆಯಬೇಕಿದ್ದ ಹಿಂದಿ ಪರೀಕ್ಷೆ ಮುಂದೂಡಿ ಪರೀಕ್ಷಾ ಬೋರ್ಡ್ ಆದೇಶ ಹೊರಡಿಸಿದೆ. ಮಾ.31ಕ್ಕೆ ಹಿಂದಿ ಭಾಷೆ ಪರೀಕ್ಷೆ ನಡೆಯಲಿದೆ. ಮಹಾವೀರ ಜಯಂತಿ ರಜೆ ಹಿಂದೂಡಿಕೆ ಮಾಡಿದ ಹಿನ್ನೆಲೆ ಮಾ.31ಕ್ಕೆ ಮುಂದೂಡಲಾಗಿದೆ ಎಂದು ಜಿಪಂ ಸಿಇಒ ಶಶಿಧರ ಕುರೇರ ಹೇಳಿದರು.

ಹಜ್‌ಯಾತ್ರೆಗೆ ಹೋಗುವವರಿಗೆ ಲಸಿಕಾ ಸೇವೆ: ಕಂಗನೊಳ್ಳಿ

• **ಜಮಖಂಡಿ:** ಹಜಯಾತ್ರೆಗಳಿಗಾಗಿ ನಗರದಲ್ಲಿ ಜಮಖಂಡಿ ಅಲ್ಪಸಂಖ್ಯಾತರ ಅಭಿವೃದ್ಧಿ ಸಂಘ ಮತ್ತು ಖಾದಿಮುಲ್ಲ ಹಜ್ಜಾದ ಕಮೀಟಿ ಸಹಯೋಗದಲ್ಲಿ ಕಳೆದ ಐದು ವರ್ಷದಿಂದ ನಡೆಯುತ್ತಿದೆ. ಹಜ್ ಕಮೀಟಿಯಿಂದ ಹಜ್ ಯಾತ್ರೆಗೆ ಹೋಗುವವರಿಗೆ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಲಸಿಕೆ ಹಾಕುತ್ತಾ ಬಂದಿದ್ದೇವೆ ಎಂದು ಕಾಂಗ್ರೆಸ್ ಮುಖಂಡ ಸಮೀರ ಕಂಗನೊಳ್ಳಿ ಹೇಳಿದರು.



ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಚುನಾವಣಾ ನೀತಿ ಸಂಹಿತೆಯಿಂದ ಸಂಘಟನೆ ಮತ್ತು ಆರೋಗ್ಯ ಇಲಾಖೆಯಿಂದ ಮಾ.2ರಂದು ಬೆಳಗ್ಗೆ 9ರಿಂದ 3ರ ವರೆಗೆ ಅಬ್ದುಲ್ ಕಲಾಂ ಶಾಲೆಯಲ್ಲಿ ಮಾಲಾಗುವುದು. ಜಮಖಂಡಿ 62, ತೇರದಾಳ 25, ಬನಹಟ್ಟಿ 10, ಮಹಾಲಿಂಗಪುರ 9, ಮುಧೋಳ 9, ಲೋಕಾಪುರ 5, ರಬಕವಿ 2, ರಾಮಪುರ 2, ಜಮಖಂಡಿ ಉಪವಿಭಾಗದಲ್ಲಿ 104 ಜನ ಬಾಗಲಕೋಟೆ ಉಪವಿಭಾಗದಲ್ಲಿ ಬಾಗಕೋಟೆ 48 ಬದಾಮಿ 3, ಗುಳೇದಗುಡ್ಡ 3, ಬೀಲಕಗಿ 6, ಇಲಕಲ್ 6, ಕಡರೂರ 470 ಜನ ಒಟ್ಟು ಜಿಲ್ಲೆಯಲ್ಲಿ 194 ಜನ ಹಜ್ ಯಾತ್ರೆಗೆ ಹೋಗಲು ಅಣಿಯಾಗಿದ್ದಾರೆ. ಸರ್ಕಾರದ ಹಜ್ ಕಮೀಟಿಯಿಂದ 104 ಖಾಸಗಿಯಾಗಿ 35 ಜನರು ಹೋಗಲಿದ್ದಾರೆ. ಭಾರತದ ಹಜ್‌ಯಾತ್ರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಉಸ್ತುವಾರಿ ಮಾಡುತ್ತದೆ. ವಾಸೀಮ ಸಗರ ತಂಡದವರು ಯಾತ್ರಿಕರಿಗೆ ತರಬೇತಿ ನೀಡುತ್ತಾರೆ. ರಾಜ್ಯದಿಂದ 11700 ಜನರು ಯಾತ್ರಿಕರು ಇದ್ದಾರೆ ಎಂದು ಹೇಳಿದರು.

ನವಾಜ ದೊಡಮನಿ, ತೌಫಿಸ ಬೇಪಾರಿ, ಗುಲಾಮಅಲಿ ಕೊಟ್ಟಲಗಿ, ಹಾಜಿವಸೀಮ ಸಗರ, ಮುಕೀಮ ಪಟ್ಟಣಕರ ಇದ್ದರು.

ವಿದ್ಯುತ್ ಸಂಪರ್ಕ ಕಲ್ಪಿಸಲು ಮನವಿ



• **ಹುನಗುಂದ:** ರಾಷ್ಟ್ರೀಯ ಹೆದ್ದಾರಿ 50ಕ್ಕೆ ಹೊಂದಿಕೊಂಡಿರುವ ತಾಲೂಕಿನ ಬೆಳಗಲ್ಲ ಕ್ರಾಸ್ ಬಳಿಯ ಆಂಜನೇಯ ದೇವಸ್ಥಾನಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಕೂಡಲಸಂಗಮ ಗ್ರಾಮ ಘಟಕದ ವತಿಯಿಂದ ಶುಕ್ರವಾರ ಬೆಳಗಲ್ಲ ಗ್ರಾಮ ಪಂಚಾಯತಿ ಪಿಡಿಒ ಭೀಮಸೇನಾ ರಾಠೋಡ ಅವರಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ರಕ್ಷಣಾ ವೇದಿಕೆಯ ಯುವ ಘಟಕದ ಅಧ್ಯಕ್ಷ ಪ್ರವೀಣ ವಾಲಿಕಾರ ಮಾತನಾಡಿ ಬೆಳಗಲ್ಲ ಕ್ರಾಸನಲ್ಲಿರುವ ಆಂಜನೇಯ ದೇವಸ್ಥಾನಕ್ಕೆ ನಿರ್ಮಾಣವಾಗಿನಿಂದಲೂ ವಿದ್ಯುತ್ ಸಂಪರ್ಕವಿಲ್ಲ, ಕತ್ತಲಾದರೇ ಸಾಕು ದೇವಸ್ಥಾನಕ್ಕೆ ಸಂಪೂರ್ಣ ಕಗ್ಗತ್ತಲು ಆವರಿಸಿ ದೇವಸ್ಥಾನಕ್ಕೆ ಬರು ಹೋಗುವ ಭಕ್ತಾದಿಗಳಿಗೆ ತೊಂದರೆಯಾಗುತ್ತಿದೆ.ಅದು ಅಲ್ಲದೇ ಸಧ್ಯ ರಾಷ್ಟ್ರೀಯ ಹೆದ್ದಾರಿ ಪ್ಲೇವರ್ ಕಾಮಗಾರಿ ನಡೆಯುತ್ತಿರುವುದರಿಂದ ಮತ್ತಷ್ಟು ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಅರಿತು ತಕ್ಷಣವೇ ಗ್ರಾಮ ಪಂಚಾಯತಿ ವತಿಯಿಂದ 15 ದಿನಗಳೊಳಗಾಗಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕು.ಇಲ್ಲದಿದ್ದರೇ ಕರವೇ ವತಿಯಿಂದ ಪ್ರತಿಭಟನೆ ಮಾಡಲಾಗುವುದು ಎಂದರು.

ಕರವೇ ಕೂಡಲಸಂಗಮ ಗ್ರಾಮ ಘಟಕದ ಅಧ್ಯಕ್ಷ ಮಂಜು ವಡ್ಡರ, ಪ್ರಮೋದ ಬಿರಾದರ, ಮುತ್ತು ಬೆಳಗಲ್ಲ, ಭರಮು ಬೆಳಗಲ್ಲ, ದಶರಥ ವಡ್ಡರ, ಬಾಲು ಕಟಗಿ, ಸಂತೋಷ ಮಾದರ ಸೇರಿದಂತೆ ಅನೇಕರು ಇದ್ದರು.

ಮತಯಂತ್ರಗಳ 2ನೇ ಹಂತದ ರ‍್ಯಾಂಡಮೈಜೇಶನ್

• **ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಉಪ ಚುನಾವಣಾ ಹಿನ್ನಲೆಯಲ್ಲಿ ಮತಯಂತ್ರಗಳ 2ನೇ ಹಂತದ ರ‍್ಯಾಂಡಮೈಜೇಶನ್ ಪ್ರಕ್ರಿಯೆಯನ್ನು ಚುನಾವಣಾ ಅಭ್ಯರ್ಥಿಗಳು ಹಾಗೂ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ಪಾರದರ್ಶಕವಾಗಿ ನಡೆಸಲಾಯಿತು.

ಉಪವಿಭಾಗಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಸಾಮಾನ್ಯ ವೀಕ್ಷಕರದಾ ಪಾರುಲ್ ಪಟವಾರಿ ಅವರ ನೇತೃತ್ವದಲ್ಲಿ ನಡೆದ ಮತಯಂತ್ರಗಳ ರ‍್ಯಾಂಡಮೈಜೇಶನ್ ಪ್ರಕ್ರಿಯೆಯಲ್ಲಿ ಮತಯಂತ್ರಗಳನ್ನು ಮತಗಟ್ಟೆಗಳಿಗೆ ಹಂಚಿಕೆ ಮಾಡಲಾಯಿತು. ಈ ಪ್ರಕ್ರಿಯೆ ಸಂಪೂರ್ಣವಾಗಿ ಕಂಪ್ಯೂಟರ ಆಧಾರಿತವಾಗಿ, ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ, ಚುನಾವಣಾ ವಿಭಾಗದ ಮಹೇಶ ಪಾಂಡವ ಸೇರಿದಂತೆ ತಾಂತ್ರಿಕ ಸಿಬ್ಬಂದಿ ಉಪಸ್ಥಿತರಿದ್ದರು.



ಕಾಂಗ್ರೆಸ್ ಕಚೇರಿಗೆ ಜಾಗ ಮಂಜೂರು



• **ಮುಧೋಳ:** ವಿಧಾನಸಭಾ ಕ್ಷೇತ್ರದ ಮುಧೋಳ ನಗರ ಮತ್ತು ಲೋಕಾಪುರ ಬ್ಲಾಕ್ ಕಾಂಗ್ರೆಸ್ ಕಚೇರಿಗಳ ನಿರ್ಮಾಣಕ್ಕೆ ಸರ್ಕಾರದಿಂದ ಅಧಿಕೃತವಾಗಿ ಜಾಗ ಮಂಜೂರಾಗಿದೆ ಎಂದು ಲೋಕಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕಿವಡಿ ಹೇಳಿದ್ದಾರೆ.

ರಾಜ್ಯದ್ಯಂತ 100 ಕಾಂಗ್ರೆಸ್ ಭವನಗಳಿಗೆ ಜಾಗ ನೀಡುವ ಸರ್ಕಾರದ ಯೋಜನೆ ಅಡಿ ಮುಧೋಳ ಕ್ಷೇತ್ರದ ಎರಡು ಬ್ಲಾಕ್ ಗಳಿಗೆ ನಿವೇಶನ ದೊರೆತಿದ್ದು ಸಂತಸ ತಂದಿದೆ ಎಂದು ಮುಧೋಳ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸದುಗೌಡ ಪಾಟೀಲ್ ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರ ಕಾರ್ಯವನ್ನು ತಾಲೂಕಿನ ಮುಖಂಡರು ಶ್ಲಾಘಿಸಿದ್ದಾರೆ. ಮುಖ್ಯಮಂತ್ರಿ ಸಿದ್ಧರಾಮಯ್ಯ ಉಪ ಮುಖ್ಯಮಂತ್ರಿ ಶಿವಕುಮಾರ, ಸಚಿವ ಪ್ರಿಯಾಂಕ ಖರ್ಗೆ ಹಾಗೂ ರಹೀಮ್ ಖಾನ್ ಅವರಿಗೆ ಕಾಂಗ್ರೆಸ್ ಘಟಕ ಕೃಪಜ್ಞತೆ ಸಲ್ಲಿಸಿದೆ.

ಸಚಿವ ಆರ್ ಬಿ ತಿಮ್ಮಾಪುರ ವಿಶೇಷ ಕಾಳಜಿ ವಹಿಸಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಅಶೋಕ ಕಿವಡಿ, ಸದುಗೌಡ ಪಾಟೀಲ ಹಾಗೂ ಕಾರ್ಯಕರ್ತರು ಸಂತೋಷ ವ್ಯಕ್ತಪಡಿಸಿದ್ದಾರೆ.

ಇಂದಿನಿಂದ ಜಾತ್ರಾ ಮಹೋತ್ಸವ

• **ಬೀಳಗಿ:** ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವ ಮಾ.29, 30 ಮತ್ತು 31ರಂದು ಜರುಗಲಿದೆ. ಮಾ.29ರಂದು ಬೆಳಗ್ಗೆ 9 ಗಂಟೆಗೆ ಶಿರೂರ ಬ್ರಹ್ಮವಿದ್ಯಾಶ್ರಮದ ಚಿನ್ಮಯಾನಂದ ಸ್ವಾಮಿಗಳ ಸಾನ್ನಿಧ್ಯ, ಮಲ್ಲಿಕಾರ್ಜುನ ಮಠದ ಶಿವಶರಣಾನಂದ ಸ್ವಾಮಿಗಳ ನೇತೃತ್ವದಲ್ಲಿ ಸಂಗೊಳ್ಳಿ ರಾಯಣ್ಣ ಹಾಗೂ ಕನಕದಾಸರ ಭಾವಚಿತ್ರಗಳ ಪೂಜೆ ನೆರವೇರಿದ ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಜರುಗುವುದು. ಮೆರವಣಿಗೆ ಆಗಮಿಸಿದ ಬಳಿಕ ದ್ವಾರ ಬಾಗಿಲು ಉದ್ಘಾಟನೆಗೊಳ್ಳಲಿದೆ.

ಧರ್ಮಸಭೆಯಲ್ಲಿ ಸಾಹಿತಿ ಸಿದ್ದಪ್ಪ ನಾಗಪ್ಪ ಮುಶೆಪ್ಪಗೋಳ ರಚಿತ ಹಾಲುಮತದ ಪುರಾಣ ಮತ್ತು ಮುತ್ತಿನ ಸರಮಾಲೆ ಕೃತಿ ಬಿಡುಗಡೆಗೊಳ್ಳಲಿದೆ. ರವಿವಾರ ಮುಂಜಾನೆ 10 ಗಂಟೆಗೆ ಒಂದು ಎತ್ತು ಒಂದು ಕುದುರೆ ಕೂಡುಬಂಡಿ ಸ್ಪರ್ಧೆ ನಡೆಯಲಿದೆ. ರಾತ್ರಿ 9 ಗಂಟೆಗೆ ಮನಗೂಳಿಯ ಬೀರಲಿಂಗೇಶ್ವರ ಡೊಳ್ಳಿನ ಗಾಯನ ಸಂಘ ಹಾಗೂ ಮಹಾರಾಷ್ಟ್ರ ರಾಜ್ಯದ ಕುರಘೋಟದ ಅಮೋಘಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘದವರಿಂದ ಸುಪ್ರಸಿದ್ಧ ಡೊಳ್ಳಿನ ಪದಗಳು ಜರುಗುವವು. ಮಾ.30ರಂದು ಬೆಳಗ್ಗೆ 7:30ಕ್ಕೆ ಬೀರಲಿಂಗೇಶ್ವರ ಮೂರ್ತಿಗೆ ರುದ್ರಾಭಿಷೇಕ ಜರುಗುವುದು. 9 ಗಂಟೆಗೆ ವಿವಿಧ ಹಳ್ಳಿಯ ಡೊಳ್ಳಿನ ವಾಲಗದವರೊಂದಿಗೆ ಬೀರದೇವರ ಪಲ್ಲಕ್ಕಿ ಉತ್ಸವ ಹಾಗೂ ಭಂಡಾರ ಸಂಭ್ರಮ, ಮಹಾಪ್ರಸಾದ ಜರುಗಲಿದೆ. ರಾತ್ರಿ 9 ಗಂಟೆಗೆ ಸಸಾಲಟ್ಟಿಯ ಮೀರಾ ಮೆಲೋಡಿ ಆರ್ಕೆಸ್ಟ್ರಾ ಸೌಂಡ ಸಿಸ್ಟಮ್ ಕಲಾ ತಂಡದಿಂದ ರಸಮಂಜರಿ ಕಾರ್ಯಕ್ರಮ ಜರುಗಲಿದೆ. ಮಾ.31ರಂದು ಮಧ್ಯಾಹ್ನ 12 ಗಂಟೆಗೆ ಟಗರಿನ ಕಾಳಗ ಸ್ಪರ್ಧೆಗಳು ನಡೆಯಲಿದ್ದು, 6 ತಿಂಗಳ ಟಗರಿನ ಕಾಳಗ, ಎರಡು, ನಾಲ್ಕು, ಆರು ಹಾಗೂ ಎಂಟು ಹಲ್ಲಿನ ಟಗರಿನ ಕಾಳಗಗಳು ಜರುಗಲಿವೆ ಬೀರಲಿಂಗೇಶ್ವರ ದೇವಾಲಯದ ಅರ್ಚಕ ಸಿದ್ದಪ್ಪ ಕ ಜಂಗನ್ನವರ ತಿಳಿಸಿದ್ದಾರೆ.

ಕಿರುಸುದ್ದಿ

ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ

ವಿಜಯಪುರ: ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ಅವರು ಜಿಲ್ಲಾ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಏ.5ರಂದು ಹುಬ್ಬಳ್ಳಿಯಿಂದ ಬೆಳಗ್ಗೆ 8 ಗಂಟೆಗೆ ಹೊರಟು ಮಧ್ಯಾಹ್ನ 12 ಗಂಟೆಗೆ ವಿಜಯಪುರಕ್ಕೆ ಆಗಮಿಸಿ ಅಂದು ವಾಸ್ತವ್ಯಮಾಡುವರು. ಏ.6ರಂದು ಬೆಳಗ್ಗೆ 10.30 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮಕ್ಕೆ ಸಂಬಂಧಿಸಿದ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಅಂದು ಮಧ್ಯಾಹ್ನ 3.30 ಕ್ಕೆ ನಗರದ ಅಫಜಲಪುರ ಟಕ್ಕೆಯ ಸರ್ಕಾರಿ ಮುಸ್ಲಿಂ ವಸತಿ ಶಾಲೆಯಲ್ಲಿ ಸ್ಥಳೀಯ ಅಲ್ಪಸಂಖ್ಯಾತರ ಕುಂದುಕೊರತೆ ವಿಚಾರಣೆ ನಡೆಸುವರು. ಸಂಜೆ 4.30ರಿಂದ ಅಲ್ಪಸಂಖ್ಯಾತರ ಮಹಿಳೆಯರು ಮತ್ತು ಸ್ಥಳೀಯ ಮಹಿಳಾ ಅಧಿಕಾರೇತರ ಸಂಸ್ಥೆಗಳಿಗೆ ಸಾಕ್ಷರತೆಯ ಪ್ರರೇಪಿಸಲು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿರುವರು. ಏ.7ರಂದು ಬೆಳಗ್ಗೆ 10.30ಕ್ಕೆ ಸ್ಥಳೀಯ ಹಿಂದುಳಿದ ಪ್ರದೇಶಗಳಲ್ಲಿರುವ ಅಂಗನವಾಡಿ, ಉರ್ದು ಶಾಲೆಗಳು ಮತ್ತು ಸ್ಥಳೀಯ ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ಭೇಟಿ ನೀಡಿ, ಮಧ್ಯಾಹ್ನ 3 ಗಂಟೆಗೆ ಗದಗ ಜಿಲ್ಲೆಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆಗೆ ತಿಳಿಸಿದೆ.

ಭಗವಾನ್ ಮಾಹಾವೀರ ಜಯಂತಿ ನಾಳೆ

ವಿಜಯಪುರ: ನಗರದ ಕಂದಗಲ್ ಹನುಂತರಾಯ ರಂಗಮಂದಿರದಲ್ಲಿ ಮಾ.30 ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಭಗವಾನ್ ಮಾಹಾವೀರ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 9.30ಕ್ಕೆ ನಗರದ ಸಿದ್ದೇಶ್ವರ ದೇವಸ್ಥಾನದ ಆವರಣದಿಂದ ನಗರದ ಪ್ರಮುಖ ವೃತ್ತಗಳ ಮೂಲಕ ಸಾಗಿ ಕಂದಗಲ್ ಹನುಂತರಾಯ ರಂಗಮಂದಿರದವರೆಗೆ ಭಾವಚಿತ್ರದ ಮೆರವಣಿಗೆ ಜರುಗಲಿದೆ. ಸಚಿವ ಎಂ.ಬಿ.ಪಾಟೀಲ ಉದ್ಘಾಟಿಸುವರು. ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲೆಯ ಸಚಿವರು, ಶಾಸಕರು, ಅಧಿಕಾರಿಗಳು ಭಾಗವಹಿಸಲಿದ್ದಾರೆ. ಹೀರಾಚಂದ ಗಾಂಧಿ ವಿಶೇಷ ಉಪನ್ಯಾಸ ನೀಡಲಿದ್ದು, ಶಿವಾನಂದ ಬಜಂತ್ರಿ ಸುಗಮ ಸಂಗೀತ ನಡೆಸಿಕೊಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತಿಳಿಸಿದೆ.

ಇಂದು, ನಾಳೆ ಸಚಿವ ಎಂಬಿಪಾ ಜಿಲ್ಲಾ ಪ್ರವಾಸ

ವಿಜಯಪುರ: ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಮಾ.29, ಮಾ.30ರಂದು ಎರಡು ದಿನ ಪ್ರವಾಸ ಕೈಗೊಂಡಿದ್ದಾರೆ. ಮಾ.29ರಂದು ಬಾಗಲಕೋಟೆ ವಿಧಾನಸಭೆ ಉಪಚುನಾವಣೆ ನಿಮಿತ್ತ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರ ಪರವಾಗಿ ಪ್ರಚಾರ ಕೈಗೊಳ್ಳಲಿದ್ದಾರೆ. ಅಂದು ಬೆಳಗ್ಗೆ 11 ಗಂಟೆಗೆ ನವನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಸೆಕ್ಟರ್ ನಂಬರ್ 27, ಆರ್ಯಭಟ್ ಶಾಲೆ ಹತ್ತಿರ ನವನಗರ ಶರಣಪ್ಪ ಕುದರಿಕನ್ನೂರ ಅವರ ಮನೆಯಲ್ಲಿ ಸಮಾಜ ಮುಖಂಡರ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ 1 ಗಂಟೆಗೆ ವಿದ್ಯಾಗಿರಿಯಲ್ಲಿರುವ ಮುತ್ತು ಜೋಳದ ಅವರ ಮನೆಯಲ್ಲಿ ಸಮಾಜ ಮುಖಂಡರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮಾ.30 ರಂದು ಬೆಳಗ್ಗೆ 10.11 ಗಂಟೆಗೆ ವಿಜಯಪುರ ಸಚಿವರ ನಿವಾಸದಲ್ಲಿ ಸಾರ್ವಜನಿಕರ ಕುಂದು ಕೊರತೆ ಆಲಿಸಲಿದ್ದಾರೆ. ಬೆಳಗ್ಗೆ 11 ಗಂಟೆಗೆ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ಬೆಂಗಳೂರಿಗೆ ಪ್ರಯಾಣಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಿಪಿಐ ಭಾಯಾಗೋಳ ಸಿಎಂ ಪದಕಕ್ಕೆ ಭಾಜನ

ದೇವರ ಹಿಪ್ಪರಗಿ: ತಾಲೂಕಿನ ಕೋರವಾರ ಗ್ರಾಮದ ಪೊಲೀಸ್ ಇನ್‌ಸ್ಪೆಕ್ಟರ್ ರಮೇಶ ಭಾಯಾಗೋಳ ಅವರಿಗೆ ಪೊಲೀಸ್ ಇಲಾಖೆಯಲ್ಲಿ ಅವರು ಸಲ್ಲಿಸಿದ ಶ್ಲಾಘನೀಯ ಸೇವೆ ಪರಿಗಣಿಸಿ 2025ನೇ ಸಾಲಿನ ಮುಖ್ಯಮಂತ್ರಿಗಳ ವಿಶಿಷ್ಟ ಸೇವಾ ಪದಕ ಲಭಿಸಿದೆ.



ಪೊಲೀಸ್ ಇನ್‌ಸ್ಪೆಕ್ಟರ್ ಆಗಿ ಆಯ್ಕೆಯಾದ ಅವರು ಹುಕ್ಕೇರಿ, ಹುಬ್ಬಳ್ಳಿ, ಮನಗೂಳಿ, ಬಬಲೇಶ್ವರ, ವಿಜಯಪುರದಲ್ಲಿ ಈ ಮೊದಲು ಸೇವೆ ಸಲ್ಲಿಸಿದ್ದಾರೆರ. ಸಿಪಿಐ ಆಗಿ ಪದೋನ್ನತಿ ಹೊಂದಿ ಕಲಬುರಗಿ, ಹುಕ್ಕೇರಿ,ಯಮಕನಮರಡಿಯಲ್ಲಿ ಸೇವೆ ಸಲ್ಲಿಸಿದ್ದು ಈಗ ಬೆಂಗಳೂರು ನಗರದ ಸದ್ದುಗುಂಟೆ ಪಾಳ್ಯ ಪೊಲೀಸ್ ಠಾಣೆಯಲ್ಲಿ ಇನ್‌ಸ್ಪೆಕ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ಕಳೆದ ವರ್ಷ ಕೇಂದ್ರ ಗೃಹಮಂತ್ರಿಗಳ ಪ್ರಶಸ್ತಿ ಸಹ ದೊರಕಿದೆ. ಪ್ರಸಕ್ತ ಮುಖ್ಯಮಂತ್ರಿಗಳ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಕೋರವಾರ ಹಾಗೂ ತಾಲೂಕಿನ ಹಲವಾರು ಗಣ್ಯರು ಅಭಿನಂಧಿಸಿದ್ದಾರೆ.



ಝುಳಕಿ: ಸಮೀಪದ ಅರ್ಜನಾಳ ಗ್ರಾಮದ ಮಲ್ಲಯ್ಯ ದೇವರ ಜಾತ್ರಾ ಮಹೋತ್ಸವ ನಡೆಯಿತು. ಮಲ್ಲಯ್ಯ ಕಂಬಿ ಹಾಗೂ ಪಲ್ಲಕ್ಕಿ ಉತ್ಸವ ಜರಗಿತು. ಬಸಲಿಂಗಯ್ಯ ಹಿರೇಮಠ, ಶೀವಲಿಲಾ ಹಿರೇಮಠ, ದಯಾನಂದ ಹಿರೇಮಠ ಚಂದ್ರಯ್ಯ ಹಿರೇಮಠ, ನಾಗೇಶಯ್ಯ ಚಿಟ್ಟಪಟ್ಟ, ಉಮೇಶಯ್ಯ ಹಿರೇಮಠ, ಡಾ.ರಜನಿದೇವಿ ಹಿರೇಪಟ್ಟ, ದಾನೇಶಯ್ಯ ಹಿರೇಮಠ, ಗಜಾನಂದ ಹಿರೇಮಠ, ಹಣಮಂತ ಮೇತ್ರಿ, ಈರಣ್ಣಗೌಡ ಬಿರಾದಾರ, ಮಳಸಿದ್ದಗೌಡ ಬಿರಾದಾರ, ಸುರೇಶ ಗೋಡೆಕಾರ, ಶ್ರೀಶೈಲಗೌಡ ಬಿರಾದಾರ, ಚಂದಪ್ಪ ನಾವಿ, ಶಿವಯೋಗೇಪ್ಪ ಗೋಡೆಕಾರ, ಯಶವಂತ ಗೋಡೆಕಾರ, ಚಂದ್ರಕಾಂತ ಇದ್ದರು.

ಉತ್ತರಾದಿ ಮಠದಲ್ಲಿ ಶ್ರೀರಾಮನವಮಿ ಉತ್ಸವ

ಬಸವನಬಾಗೇವಾಡಿ: ಪಟ್ಟಣದ ಉತ್ತರಾದಿಮಠದಲ್ಲಿ ಶ್ರೀರಾಮ ನವಮಿ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಗ್ಗೆ ಶ್ರೀಮಠದಲ್ಲಿ ವಿಶೇಷ ಪೂಜೆ, ವಾಯುಸ್ತುತಿ ಪಂಚಾಮೃತ ಅಭಿಷೇಕ, ಅಲಂಕಾರ, ಮುಂತಾದ ಧಾರ್ಮಿಕ ಪೂಜಾ ಕಾರ್ಯಕ್ರಮಗಳನ್ನು ನಡೆಸಲಾಯಿತು. ನಂತರವಿವಿಧಪುಷ್ಪಹಾಗೂತಳಿರುತೋರಣಗಳಿಂದ ಅಲಂಕೃತಗೊಂಡ ತೊಟ್ಟಿಲಲ್ಲಿ ಬಾಲ ರಾಮನ ಮೂರ್ತಿಯನ್ನಿರಿಸಿ ನಾಮಕರಣದ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು. ರಾಮನ ಹಾಡುಗಳು, ಜಯಘೋಷ ಹಾಗೂ ವಿವಿಧ ಮಂಗಳಾಷ್ಟಕಗಳೊಂದಿಗೆ ಸರಿಯಾಗಿ ಮಧ್ಯಾಹ್ನ 12 ಗಂಟೆಗೆ ಶ್ರೀರಾಮನ ತೊಟ್ಟಿಲೋತ್ಸವ ಕಾರ್ಯಕ್ರಮ ನಡೆಯಿತು. ಹಿರಿಯರಾದ ಶ್ರೀಷ್ಣಾಜಿ ದೇಶಪಾಂಡೆ ಅವರು ಮಾತನಾಡಿ, ಶ್ರೀರಾಮನು ಪ್ರತಿಪಾದಿಸಿದ ವಿನಯ, ವಿವೇಕ, ಪಿತೃವಾಕ್ಯ ಪರಿಪಾಲನೆ, ಸಹೋದರತೆ, ಧರ್ಮಾನುಸರಣೆ ಮುಂತಾದ ಮಾನವೀಯ ಮೌಲ್ಯಗಳು ಸರ್ವ ಕಾಲಕ್ಕೂ ಅಜರಾಮರ ವಾಗಿದ್ದು ಅಂತಹ ಮೌಲ್ಯಗಳನ್ನು ನಮ್ಮ ಜೀವನದಲ್ಲೂ ಅಳವಡಿಸಿಕೊಳ್ಳುವ ಸಂಕಲ್ಪ ಮಾಡೋಣ ಎಂದು ಹೇಳಿದರು. ಸ್ಥಳೀಯ ಸದ್ಭಕ್ತರಾದ ಶ್ರೀಕಾಂತ ಕುಲಕರ್ಣಿ (ಮುರಾರಿ) ಪ್ರಸಾದ ವ್ಯವಸ್ಥೆ ಏರ್ಪಡಿಸಿದ್ದರು. ಅರ್ಚಕ ವಾದಿಜಾಚಾರ್ಯ ಯಜುರ್ವೇದಿ, ಎ.ಆರ್. ಕುಲಕರ್ಣಿ, ಎ.ಜಿ.ಕುಲಕರ್ಣಿ, ರಮೇಶ ಇನಾಮದಾರ, ವಿಠ್ಠಲರಾವ ಕುಲಕರ್ಣಿ ವೈದ್ಯ, ಪ್ರಲ್ಹಾದ ಕುಲಕರ್ಣಿ, ವಸಂತರಾವ ಕುಲಕರ್ಣಿ, ಅನೀಲರಾವ ಕುಲಕರ್ಣಿ, ವಿನಾಯಕ ದೇಶಪಾಂಡೆ, ರಾಮಾಚಾರ್ಯ ಯಜುರ್ವೇದಿ, ಅನೀಲ ದೇಶಪಾಂಡೆ ಇದ್ದರು.



ಬಸವನಬಾಗೇವಾಡಿ: ಪಟ್ಟಣದ ಉತ್ತರಾದಿಮಠದಲ್ಲಿ ಶ್ರೀರಾಮ ನವಮಿ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಗ್ಗೆ ಶ್ರೀಮಠದಲ್ಲಿ ವಿಶೇಷ ಪೂಜೆ, ವಾಯುಸ್ತುತಿ ಪಂಚಾಮೃತ ಅಭಿಷೇಕ, ಅಲಂಕಾರ, ಮುಂತಾದ ಧಾರ್ಮಿಕ ಪೂಜಾ ಕಾರ್ಯಕ್ರಮಗಳನ್ನು ನಡೆಸಲಾಯಿತು. ವಿಠ್ಠಲರಾವ ದೇಶಪಾಂಡೆ, ರಾಮಾಚಾರ್ಯ ಜೋಶಿ ಹಿಪ್ಪರಗಿ , ಜಿ.ವಿ.ಕುಲಕರ್ಣಿ ಸೇರಿ ಪಟ್ಟಣದ ನೂರಾರು ಭಕ್ತರು, ಮಹಿಳೆಯರು ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಸಿಲಿಂಡರ್ ಹಿಡಿದು ಸಾಲು ನಿಲ್ಲುವ ಫಜೀತಿ | ಅಟೋ ಚಾಲಕರ ಪರದಾಟ

ಅನಿಲ ಗ್ರಾಹಕರಿಗೆ ತಟ್ಟಿದ ಯುದ್ಧದ ಬಿಸಿ

ಪರಶುರಾಮ ಶಿವಶರಣ

ದಿಗಂತ ವಿಶೇಷ

ವಿಜಯಪುರ: ಮಧ್ಯಪ್ರಾಚ್ಯ ಯುದ್ಧದ ಬಿಸಿ ಗುಮ್ಮಟ ನಗರಿಗೂ ತಟ್ಟಿದ್ದು, ಅಡುಗೆ ಅನಿಲ ಹಾಗೂ ಆಟೋ ರಿಕ್ಷಾ ಅನಿಲದ ಗ್ರಾಹಕರು ಪರದಾಡುವಂತಾಗಿದೆ.

ಸಾಂಪ್ರದಾಯಿಕ ಕಟ್ಟಿಗೆ, ಬೆರಣಿಯಿಂದ ಒಲೆ ಹೊತ್ತಿಸುವ ಜಾಗದಲ್ಲಿ ಯಾವಾಗ ಅಡುಗೆ ಅನಿಲ ಬಂದು ಸೇರಿತೋ?, ಸಾಮಾನ್ಯ ಜನರ ಅಡುಗೆ ಕೋಣೆಗೆ ರಾಜಗಾಂಭೀರ್ಯ ಬಂದು, ಬೇಕಾದ ತಿಂಡಿ, ತಿನಿಸುಗಳನ್ನು ತಕ್ಷಣವೇ ಮಾಡಿ ಉಣ್ಣುವ ಪದ್ಧತಿ ಬೆಳೆಯಿತು. ಒಂದೆರೆಡು ದಶಕಗಳಿಂದ ನಿರಾಯಾಸವಾಗಿ ನಡೆಯುತ್ತಿದ್ದ ಈ ವ್ಯವಸ್ಥೆ ಸದ್ಯ ಅಸ್ತವ್ಯಸ್ತಗೊಂಡಿದ್ದು, ಅಡುಗೆ ಅನಿಲ ವಿತರಣಾಕೇಂದ್ರದಎದುರುಖಾಲಿಸಿಲಿಂಡರ್ ಹಿಡಿದು ಜನಸಾಮಾನ್ಯರು ನಿಲ್ಲುವಂತಾಗಿದ್ದು, ಅಡುಗೆ ಅನಿಲ ಸಿಕ್ಕರೆ ಹೊಟ್ಟೆಗೆ ಹಿಟ್ಟು, ಇಲ್ಲದಿದ್ದರೆ ಹೊಟ್ಟೆಗೆ ತಣ್ಣೀರು ಬಟ್ಟೆನೆ ಗತಿ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಮೊದಲು ಅಡುಗೆ ಅನಿಲ ಬುಕ್ ಮಾಡಿದರೆ ತಕ್ಷಣವೇ ಸಿಗುತ್ತಿತ್ತು, ಇಲ್ಲ ಮರುದಿನವೇ ಮನೆ ಬಾಗಿಲಿಗೆ ಬರುತ್ತಿತ್ತು. ಅಡುಗೆ ಅನಿಲ ಸರಬರಾಜಿನಲ್ಲಿ ತೊಂದರೆಯಾಗುತ್ತಿದ್ದು, ಇಂದು ಅಡುಗೆ ಅನಿಲ ಬುಕ್ ಮಾಡಿ, ನಾಲ್ಕೈದು ದಿನಗಳವರೆಗೆ ಕಾಯುವ ಸ್ಥಿತಿ ಉಂಟಾಗಿದೆ. ಇದರಿಂದ ಸಾರ್ವಜನಿಕರಲ್ಲಿ ಆತಂಕ ಮೂಡಿದ್ದು, ಕೆಲ ದಶಕಗಳ ಹಿಂದೆ ಸೀಮೆ ಎಣ್ಣೆಗಾಗಿ ಸರತಿ ಸಾಲು ನಿಲ್ಲುವಂತೆ, ಸದ್ಯ ಅಡುಗೆ ಅನಿಲಕ್ಕಾಗಿ, ಅನಿಲ ವಿತರಣಾ ಕೇಂದ್ರದ ಎದುರು ಖಾಲಿ ಸಿಲಿಂಡರ್ ಹಿಡಿದು ನಿಲ್ಲುವ ಫಜೀತಿ ಎದುರಾಗಿದೆ.

ಆಟೋ ಚಾಲಕರು ಕಂಗಾಲು

ಎಲ್‌ಪಿಜಿ ಅನಿಲ ವಿತರಣಾ ವ್ಯವಸ್ಥೆಯಲ್ಲಿ ಏರುಪೇರಾಗಿದ್ದಕ್ಕೆ, ದಿನ ನಿತ್ಯದ ದುಡಿಮೆಯನ್ನೇ ನಂಬಿ ಬದುಕುತ್ತಿದ್ದ ಬಡ ಆಟೋ ರಿಕ್ಷಾ ಚಾಲಕರು ಕಂಗಾಲಾಗಿದ್ದಾರೆ. ನಗರದಲ್ಲಿದ್ದ ನಾಲ್ಕು ಎಲ್ ಪಿಜಿ ಬಂಕ್ ಪೈಕಿ ಮೂರು ಬಂದ್ ಆಗಿದ್ದು, ಇಲ್ಲಿನ ಸ್ಟೇಷನ್ ರಸ್ತೆಯ ಹಾಸಿಂಪೀರ್ ದರ್ಗಾ ಕ್ರಾಸ್ ಬಳಿ ಇರುವ ಎಲ್‌ಪಿಜಿ ಬಂಕ್ ಮಾತ್ರ ಪ್ರಾರಂಭವಿದೆ. ಈ ಎದುರು ಶುಕ್ರವಾರ ಎಲ್‌ಪಿಜಿ ಅನಿಲಕ್ಕಾಗಿ ನೂರಾರು ಆಟೋ ರಿಕ್ಷಾಗಳು ಗಂಟೆ ಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲುವಂತಾಗಿತ್ತು. ಅದರಲ್ಲೂ ದಿನಕ್ಕೆ 300 ರೂ.ಗಳ ಅನಿಲ ಮಾತ್ರ ಆಟೋಗಳಿಗೆ ತುಂಬಿಸಲಾಗುತ್ತಿದ್ದು, ಈ ಅರೆಬರೆ ತುಂಬಿದ ಟ್ಯಾಂಕ್‌ನಿಂದ ಇಡೀ ದಿನ ಆಟೋ ಓಡಿಸಲು ಸಾಧ್ಯವಿಲ್ಲ, ಕೇವಲ ಮೂರು ಗಂಟೆಗಳಲ್ಲಿ ಟ್ಯಾಂಕ್ ಖಾಲಿಯಾಗುತ್ತೇ, ಹೀಗಾದರೆ ನಾವು ದುಡಿಯುವುದಾದರೂ ಹೇಗೆ? ಎಂದು ಆಟೋ ರಿಕ್ಷಾ ಚಾಲಕ ಪರಶುರಾಮ ಕಾಸೆ ತಮ್ಮ ಅಳಲು ತೋಡಿಕೊಳ್ಳುತ್ತಾರೆ.



ಒಲೆಗೆ ಮೊರೆ ಹೋದ ಜನತೆ



ಅಡುಗೆ ಅನಿಲ ವಿತರಣೆಯಲ್ಲಿ ಅವ್ಯವಸ್ಥೆ ಉಂಟಾಗಿದ್ದಕ್ಕೆ ಸಕಾಲಕ್ಕೆ ಅನಿಲ ಸಿಗುತ್ತಿಲ್ಲ, ಇದರಿಂದ ಹಲವು ಸಾರ್ವಜನಿಕರು ತೊಂದರೆ ಪಡುತ್ತಿದ್ದರೆ, ಇನ್ನು ಕೆಲ ಜನರು ಸಾಂಪ್ರದಾಯಿಕ ಒಲೆಗೆ ಮೊರೆ ಹೋಗಿದ್ದಾರೆ. ಅದರಲ್ಲೂ ನಗರದ ರಸ್ತೆ ಪಕ್ಕದ ಹಲವು ಗೂಂಡಂಗಡಿ ಹೋಟೆಲ್‌ಗಳು ಬಂದ್ ಆಗಿದ್ದು, ದೊಡ್ಡ ಹೋಟೆಲ್‌ಗಳಲ್ಲಿ ಊಟೋಪಹಾರ, ಚಹಾ, ಕಾಫಿ ಬೆಲೆ ಹೆಚ್ಚಿಸಿದ್ದು, ಗ್ರಾಹಕರಿಗೆ ಹೊರೆ ಬೀಳುವಂತಾಗಿದೆ.

ವಿಜಯಪುರ ನಗರದಲ್ಲಿ ಅಡುಗೆ ಅನಿಲ ವಿತರಣೆಯಲ್ಲಿ ಸ್ವಲ್ಪ ವಿಳಂಬವಾಗುತ್ತಿದೆ. ಆದರೆ ಯಾವುದೇ ರೀತಿಯ ತೊಂದರೆ ಇಲ್ಲ. ಈ ಮೊದಲು ಬುಕ್ ಮಾಡಿದ ತಕ್ಷಣ ಅನಿಲ ಪೂರೈಕೆಯಾಗುತ್ತಿತ್ತು. ಸದ್ಯ ಬುಕ್ ಮಾಡಿದ ಮೂರ್‍ನಾಲ್ಕು ದಿನಕ್ಕೆ ಪೂರೈಕೆ ಮಾಡಲಾಗುತ್ತಿದ್ದು, ಜನರು ಆತಂಕ ಪಡುವ ಅವಶ್ಯಕತೆಯಿಲ್ಲ.

■ **ವಿನಯಕುಮಾರ ಪಾಟೀಲ, ಉಪ ನಿರ್ದೇಶಕ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಇಲಾಖೆ**

ಎಸ್‌ಐಆರ್ ಅವೈಜ್ಞಾನಿಕ, ಅಸಂಬದ್ಧ: ಗಣಿಹಾರ



ವಿಜಯಪುರ: ಎಸ್‌ಐಆರ್ ಗೊಂದಲದ ಗೂಡಾಗಿದ್ದು, ಇದು ಅವೈಜ್ಞಾನಿಕ, ತರ್ಕವಿಲ್ಲದ, ಅಸಂಬದ್ಧ ನಿಯಮಾವಳಿಗಳಿಂದ ನಾಗರಿಕತ್ವ ಪ್ರಶ್ನೆ ಮೂಡುವ ಕೆಲಸ ನಡೆಯುತ್ತಿದೆ. ನಾಗರಿಕನ ನಾಗರಿಕತ್ವ ರದ್ದುಗೊಳಿಸುವುದು ಒಂದು ರೀತಿ ಮರಣ ಶಾಸನಕ್ಕಿಂತಲೂ ಘೋರ ಎಂದು ಅಹಿಂದ ಮುಖಂಡ ಎಸ್.ಎಂ.ಪಾಟೀಲ ಗಣಿಹಾರ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಸ್‌ಐಆರ್ ಬಗ್ಗೆ ಧ್ವನಿ ಎತ್ತಬೇಕಾದ ರಾಜ್ಯ ಸರ್ಕಾರ ಕಾನೂನಾತ್ಮಕ ಸಲಹೆ ಕೇಳುವುದಾಗಿ ಕಾಲಹರಣ ಮಾಡುತ್ತಿದೆ. ಈ ವಿಷಯವಾಗಿ ಜನಪ್ರತಿನಿಧಿಗಳು ಸಹ ಗಮನ ಹರಿಸುತ್ತಿಲ್ಲ, ಇದರ ಗೊಂದಲಕ್ಕೆ ತೆರೆ ಎಳೆಯುವ ಕೆಲಸ ಮಾಡುತ್ತಿಲ್ಲ, ಈ ವಿಷಯವನ್ನು ಕಾಂಗ್ರೆಸ್ ಸರ್ಕಾರ ಗಂಭೀರವಾಗಿ ಪರಿಗಣಿಸದೇ ಹೋದರೆ ಅವರ ಬುಡಕ್ಕೆ ಬೆಂಕಿ ಬರುವ ದಿನ ದೂರವಿಲ್ಲ ಎಂದರು.

ನೋಬೆಲ್ ಪಾರಿತೋಷಕ ಪುರಸ್ಕೃತರು, ಹೈಕೋರ್ಟ್ ನ್ಯಾಯಮೂರ್ತಿಗಳ ಹೆಸರುಗಳೇ ಮತಪಟ್ಟಿಯಲ್ಲಿ ಮಾಯವಾಗಿರುವಾಗ ಸಾಮಾನ್ಯ ಜನರ ಗತಿಯೇನು ?, ಒಂದು ರೀತಿ ಹಿಟ್ಲರ್ ರೀತಿ ಸರ್ವಾಧಿಕಾರ ಧೋರಣೆಯ ರೂಪವಾಗಿ ಕೇಂದ್ರ ಸರ್ಕಾರ ಹಿಡನ್ ಅಜೆಂಡಾ ಇರಿಸಿ ಮುಸ್ಲಿಂರ ನಾಗರಿಕತ್ವದ ಮೇಲೆ ಪ್ರಹಾರ ಮಾಡುತ್ತಿದೆ ಎಂದು ದೂರಿದರು.

ಎಸ್‌ಐಆರ್ ಪ್ರಕ್ರಿಯೆ ಗೊಂದಲದ ಗೂಡಾಗಿದೆ, ಉತ್ತರ ಕರ್ನಾಟಕ ಭಾಗದಲ್ಲಿ ಅನೇಕರು ತುತ್ತಿನ ಚೀಲ ತುಂಬಿಸಿಕೊಳ್ಳಲು ಮಹಾರಾಷ್ಟ್ರ, ಗೋವಾ, ಗುಜರಾತ್ ರಾಜ್ಯಗಳಿಗೆ ಗುಳೆ ಹೋಗುತ್ತಾರೆ, ಹೀಗಾಗಿ ಅನೇಕರು ಮತದಾನದಿಂದ ವಂಚಿತರಾಗುತ್ತಿದ್ದರು, ಎಸ್‌ಐಆರ್ ಪ್ರಕ್ರಿಯೆಯಲ್ಲಿ ವಿಧಿಸಲಾಗಿರುವ ಅನೇಕ ನಿಯಮಾವಳಿಗಳು ತರ್ಕಹೀನವಾಗಿವೆ, ಈ ತರ್ಕಹೀನ ನಿಯಮಗಳಿಂದ ಅನೇಕರು ನಾಗರಿಕತ್ವ ಕಳೆದುಕೊಂಡರೆ ಹೇಗೆ ಎಂಬ ಗೊಂದಲ ಎದುರಾಗಿದೆ ಎಂದರು.

ಚುನಾವಣಾ ಆಯೋಗಕ್ಕೆ ನಾಗರಿಕತ್ವ ನಿಂಧುಗೊಳಿಸುವ ಯಾವ ಪರಮಾಧಿಕಾರವೂ ಇಲ್ಲ, ಕೇವಲ ಮತದಾರ ಪಟ್ಟಿ ಸೇರ್ಪಡೆ ಮಾತ್ರ ಚುನಾವಣಾ ಆಯೋಗಕ್ಕೆ ಸೀಮಿತವಾಗಿದೆ, ಈ ಬಗ್ಗೆ ಗಂಭೀರವಾಗಿ ಆತಂಕ ನಿವಾರಿಸುವ ಕೆಲಸ ನಡೆಯಬೇಕಿದೆ ಎಂದರು.

ಬಿಜೆಪಿ ಪಕ್ಷದ ಚಿಹ್ನೆ ಚುನಾವಣಾ ಆಯೋಗದ ಲೆಟರ್ ಪ್ಯಾಡ್ ಮೇಲೆ ನಮೂದಾಗಿದೆ, ಇದು ಕಣ್ತಪ್ಪಿ ಆಗಿದೆ ಎಂದು ಒಪ್ಪಿಕೊಂಡರೂ ಚುನಾವಣಾ ಆಯೋಗದಲ್ಲಿ ಬಿಜೆಪಿ ಚಿಹ್ನೆ ಇರಿಸಿಕೊಂಡಿದ್ದಾದರೂ ಏಕೆ ? ಇದು ರಾಷ್ಟ್ರಮಟ್ಟದಲ್ಲಿ ಉನ್ನತ ತನಿಖೆ ನಡೆಯಬೇಕು ಎಂದರು.

ಅಹಿಂದ ಮುಖಂಡರಾದ ಡಾ.ರವಿಕುಮಾರ ಬಿರಾದಾರ, ನಾಗರಾಜ್ ಲಂಬು, ಫಯಾಜ್ ಕಲಾದಗಿ ಇದ್ದರು.

ಪತ್ರಿಕೆಗಳು ಸಮಾಜ ತಿದ್ದುವ ಪ್ರಮುಖ ಅಸ್ತ್ರ

ಬಸವನಬಾಗೇವಾಡಿ: ಇಂದು ಪತ್ರಿಕೆಗಳು ತುಂಬಾ ಸೂಕ್ಷ್ಮವಾಗಿ ಸಮಾಜದ ಓರೆ ಕೋರೆಗಳನ್ನು ತಿದ್ದುವ, ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಪತ್ರಿಕೆಗಳಲ್ಲಿ ಲಂಕೇಶ ಪತ್ರಿಕೆಯು ಜನಮನ್ನಣೆ ಪಡೆದುಕೊಂಡಿತು ಎಂದು ವಿಜಯಪುರದ ಆದರ್ಶ ಶಿಕ್ಷಕರ ವೇದಿಕೆ ಜಿಲ್ಲಾಧ್ಯಕ್ಷ ಉಮೇಶ ಕೌಲಗಿ ಹೇಳಿದರು.

ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಕನ್ನಡ ವಿಭಾಗ ಮತ್ತು ಐಕ್ಯೂಎಸಿಯು ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಸಹಯೋಗದಲ್ಲಿ ರಾಜ್ಯಮಟ್ಟದ ಒಂದು ದಿನದ ವಿಶೇಷ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ವಿಜಯಪುರದ ಸಾಹಿತಿ ಸಿದ್ದರಾಮ ಬಿರಾದಾರ ಅವರು ಉಪನ್ಯಾಸ ನೀಡಿ ಮಾತನಾಡಿ, ಪಿ.ಲಂಕೇಶ ಅವರು ಕನ್ನಡ ಸಾಹಿತ್ಯ ಹಾಗೂ ಕವಿ ಬಳಗದಲ್ಲಿ ಅಜರಾಮರವಾಗಿ ಉಳಿಯುವಂತ ಹೆಸರು ವಾಸಿಯಾದರು ಗ್ರಾಮೀಣ ಪ್ರದೇಶದಲ್ಲಿ ಜನಿಸಿ ರಾಜ್ಯ ರಾಷ್ಟ್ರಮಟ್ಟದ ಪ್ರತಿಭಾನ್ವಿತ ಕವಿ ಲೇಖಕ ನಾಟಕಕಾರ ಕಾದಂಬರಿಕಾರ ಪ್ರಾಧ್ಯಾಪಕ ಸಾಹಿತಿಯಾಗಿ ಹೀಗೆ ಎಲ್ಲಾ ಕ್ಷೇತ್ರದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡ ಕನ್ನಡದ ಮೇರು ಸಾಹಿತಿ ಪತ್ರಿಕೋದ್ಯಮಿಯಾಗಿದರು. ರಾಜ್ಯದಲ್ಲಿ ಬಹು ಬೇಡಿಕೆಯ ಪತ್ರಿಕೆಯಾಗಿತ್ತು ಹಾಗೂ ಆ ಪತ್ರಿಕೆಯಲ್ಲಿ ಮೂಡಿ ಬರುತ್ತಿದ್ದ ವಿಮರ್ಶೆ ಯುವ ಲೇಖಕರ ಸೃಷ್ಟಿ ರಾಜಕಾರಣಿಗಳ ಆಡಳಿತ ವೈಖರಿ ಹೀಗೆ ಸಾರ್ವತ್ರಿಕವಾಗಿ ಸಮಾಜ ತಿದ್ದುವ ಹಾಗೂ ಸಮಾಜಕ್ಕೆ ಬೆಳಕಾಗಿ ಮೂಡಿ ಬಂದ ಅಮೂಲ್ಯ ಪತ್ರಿಕೆಯಾಗಿ, ನಾಡಿನ ಹಿತವನ್ನು ಕಾಪಾಡಿಕೊಂಡು ಬಂದಿರುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಹೇಳಿದರು.

ಕನ್ನಡ ಹಾಗೂ ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ ಡಾ.ಬಿ.ಎಂ.ಸಾಲವಾಡಗಿ ಮಾತನಾಡಿದರು. ಡಾ.ಎ.ವಿ.ಸೂರ್ಯವಂಶಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಂಕರ ಬೈಚಬಾಳ, ಐಕ್ಯೂಎಸಿ ಯ ಸಂಯೋಜಕ ಪ್ರೊ.ಸಿ.ಪಿ.ಧಡೇಕರ, ಡಾ.ಎಸ್.ಎಮ್ .ಬಿಜಾಪುರ, ಎಸ್.ಕೆ ಚಿಕ್ಕನರ್ತಿ, ಎಮ್. ಕೆ.ಯಾದವ, ಎಸ್.ಜೆ. ಸೂರ್ಯವಂಶಿ, ಪಿ.ಎಸ್.ಹೊರಕೇರಿ, ಆರ್.ಎಮ್. ಮುಜಾವರ, ಪಿ.ಎಂ.ಗೂಳನ್ನವರ, ಎ.ವಿ.ಪಾಟೀಲ, ಸಿ.ಬಿ.ಬಿರಾದಾರ ಇದ್ದರು. ರೇಖಾ ಅಂಬಲಿ, ಪ್ರತಿಭಾ ಕುಂಬಾರ ಪ್ರಾರ್ಥಿಸಿದರು. ಖುತುಜಾ ಪವಾರ ಸ್ವಾಗತಿಸಿದರು. ಕಾವೇರಿ ಅಡಗಿಮನಿ, ಗೀತಾ ಕುಂಬಾರ ನಿರೂಪಿಸಿದರು, ಜ್ಯೋತಿ ಕುಂಬಾರ ವಂದಿಸಿದರು.



ಸೈನಿಕರು ನಿಜವಾದ ಹೀರೋಗಳು: ಸಾಹಿತಿ ಅಶೋಕ ಹಂಚಲಿ

ವಿಜಯಪುರ: ದೇಶದ ಗಡಿಯಲ್ಲಿ ನಿಂತು ನಮ್ಮನ್ನು ರಕ್ಷಿಸುತ್ತಿರುವ ಸೈನಿಕರು ನಿಜವಾದ ಹೀರೋಗಳು ಎಂದು ಸಾಹಿತಿ ಅಶೋಕ ಹಂಚಲಿ ಹೇಳಿದರು.

ನಗರದ ಹುತಾತ್ಮ ವೃತ್ತದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಭಗತ್ ಸಿಂಗ್, ರಾಜಗುರು ಸುಖದೇವ ಅವರ ಬಲಿದಾನ ದಿವಸದ ನಿಮಿತ್ತ ಹಮ್ಮಿಕೊಂಡ ಉಘೇ ವೀರಭೂಮಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಿನಿಮಾಗಳಲ್ಲಿ ನಟಿಸುವ ನಟ- ನಟಿಯರು ಹೀರೋಗಳಲ್ಲ ಅವರು ಕೇವಲ ನಟರು ಮಾತ್ರ ನಿಜವಾದ ಹೀರೋಗಳೆಂದರೆ ನಮ್ಮ ದೇಶಕ್ಕಾಗಿ ಪ್ರಾಣ ಅರ್ಪಣೆ ಮಾಡಿದ ಹೋರಾಟಗಾರರು ಹಾಗೂ ದೇಶದ ಗಡಿಯಲ್ಲಿ ನಿಂತು ನಮ್ಮನ್ನು ರಕ್ಷಿಸುತ್ತಿರುವ ಸೈನಿಕರು ನಿಜವಾದ ಹೀರೋಗಳು ಎಂದರು.

ಎಬಿವಿಪಿಯ ಕೇಂದ್ರೀಯ ಕಾರ್ಯಸಮಿತಿ ಸದಸ್ಯ ಸಚಿನ್ ಕುಳಗೇರಿ ಮಾತನಾಡಿ, ಭಾರತದ ಸ್ವಾತಂತ್ರ ಹೋರಾಟದಲ್ಲಿ ಸಾವಿರಾರು ಜನ ಯುವಕರ ಹೋರಾಟ ಹಾಗೂ ಬಲಿದಾನವಾಗಿದೆ, ಸ್ವಾತಂತ್ರ್ಯ ನಂತರದ ಯುವಶಕ್ತಿ ದೇಶಕ್ಕಾಗಿ ಬದುಕುವ ಅವಶ್ಯಕತೆ ಇದೆ. ಆದರೆ ಇಂದಿನ ಯುವಕರು ಡ್ರಗ್ಸ್, ಗುಟ್ಕಾ, ಮದ್ಯಪಾನಕ್ಕೆ ದಾಸರಾಗಿ ತಮ್ಮ ಅಮೂಲ್ಯ ಶಕ್ತಿಯನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ, ಇದರಿಂದ ದೂರವಾಗಿ, ಸಶಕ್ತ, ಸದೃಢ, ಸ್ವಾಭಿಮಾನಿ ಭಾರತವನ್ನು ನಿರ್ಮಾಣ ಮಾಡುವಲ್ಲಿ ನಾವೆಲ್ಲರೂ ಪಾತ್ರರಾಗಬೇಕು ಎಂದರು.



ಅಧ್ಯಕ್ಷತೆ ವಹಿಸಿದ್ದ ಡಾ.ವಿಜಯಕುಮಾರ ಭಾವಿ ಮಾತನಾಡಿ, ಸ್ವಾಭಿಮಾನಿ, ಸ್ವದೇಶಿ, ಭಾರತ ನಿರ್ಮಾಣ ಮಾಡಬೇಕು, ನಮ್ಮ ದೇಶ ಇಂದು ಬಹಳಷ್ಟು ಮುಂದುವರೆಯುತ್ತಿದೆ. ಅದಕ್ಕೆ ಯುವಶಕ್ತಿ ಬೆಂಬಲವಾಗಿ ನಿಂತು, ವಿಶ್ವಗುರು ಭಾರತ ನಿರ್ಮಾಣ ಮಾಡಬೇಕು. ಈ ರೀತಿಯ ಕಾರ್ಯಕ್ರಮಗಳ ಆಯೋಜನೆ ಮೂಲಕ ಎಬಿವಿಪಿ ವಿದ್ಯಾರ್ಥಿಗಳಲ್ಲಿ ಉತ್ತಮ ವಿಚಾರ ತುಂಬುವ ಕಾರ್ಯ ಮಾಡುತ್ತಿದೆ ಎಂದರು. ಎಬಿವಿಪಿಯ ಜಿಲ್ಲಾ ಸಂಚಾಲಕ ಸಂದೀಪ ಅರಳಗುಂಡಿ ಮಾತನಾಡಿದರು. ಪ್ರಾಂತ ಕಾರ್ಯಸಮಿತಿ ಸದಸ್ಯರಾದ ಡಾ.ಅಮಿತಕುಮಾರ ಬಿರಾದಾರ, ಸ್ನೇಹಾ ಹಿರೇಮಠ, ಹರ್ಷ ನಾಯಕ, ಬಸವರಾಜ ಯಾದವಾಡ, ಸಿದ್ದು ಮದರಕಂಡಿ, ಸುರೇಖಾ ಕುಲಕರ್ಣಿ, ಮಂಜುನಾಥ ಹಳ್ಳಿ, ನಾಗೇಶ ಸಿಂಧೆ, ಸುಮಾ ಬೋಳರಡ್ಡಿ, ಓಂಕಾರ ನಾವಿ ಇದ್ದರು.

ಸ್ಲಂ ಅಭಿವೃದ್ಧಿ ಮಂಡಳಿ ಅಧಿಕಾರಿ ವಿರುದ್ಧ ಕ್ರಮಕ್ಕೆ ಒತ್ತಾಯ

ವಿಜಯಪುರ: ಕೊಳಗೇರಿ ಅಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೊಳಚೆ ಪ್ರದೇಶಗಳ ಅಭಿವೃದ್ಧಿ ಹಾಗೂ ಸ್ಲಂ ನಿವಾಸಿಗಳಿಗೆ ಯಾವ ರೀತಿಯಲ್ಲಿಯೂ ಸ್ಪಂದಿಸದೇ ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದು, ಕೂಡಲೇ ಅವರ ಮೇಲೆ ಕ್ರಮ ಕೈಗೊಳ್ಳುವಂತೆ ದಲಿತ ಸ್ವರಾಜ್ಯ ಸೇನೆ ಜಿಲ್ಲಾ ಘಟಕದ ಪದಾಧಿಕಾರಿಗಳು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಅಧಿಕಾರಿಗಳಿಗೆ ಲಿಖಿತ ಮನವಿ ಸಲ್ಲಿಸಿದರು.

ಸಂಘಟನೆಯ ಅಧ್ಯಕ್ಷ ಗೌಡಪ್ಪ ಬಡಿಗೇರ, ನಗರದ ಕೊಳಗೇರಿ ಅಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿಭಾಯಿಸುತ್ತಿಲ್ಲ, ಇದರಿಂದಾಗಿ ಸ್ಲಂ ನಿವಾಸಿಗಳಿಗೆ ದೊಡ್ಡ ತೊಂದರೆ ಎದುರಾಗಿದೆ. ನಗರದ ವಿವಿಧ ಕೊಳಚೆ ಪ್ರದೇಶಗಳಲ್ಲಿನ ಸಮಸ್ಯೆಗಳ ಪಟ್ಟಿ ಸಲ್ಲಿಸಿದರೂ ಸಮಸ್ಯೆಗೆ ಸ್ಪಂದಿಸುತ್ತಿಲ್ಲ, ಕೊಳಚೆ ಪ್ರದೇಶಗಳಲ್ಲಿನ ಸಮಸ್ಯೆಗಳೆಲ್ಲವೂ ಆಲಿಸಿದ್ದೇನೆ, ಎಲ್ಲವೂ ಸುಸೂತ್ರ



ವಾಗಿದೆ ಎಂದು ಜಿಲ್ಲಾಡಳಿತಕ್ಕೆ ತಪ್ಪು ಮಾಹಿತಿ ರವಾನಿಸುತಿದ್ದಾರೆ ಎಂದು ದೂರಿದರು.

ಪದಾಧಿಕಾರಿಗಳಾದ ಅಮೃತ, ಪರಶುರಾಮ, ಪ್ರಶಾಂತ, ರಮೇಶ, ಮೇಹಬೂಬ, ಆದಿತ್ಯ ಹಳ್ಳಿ, ಉಮೇಶ, ಚನ್ನು, ಸಾಗರ ಇದ್ದರು.

ತಂತ್ರಾಂಶ ರಚನಾ ಕಾರ್ಯಾಗಾರ



ವಿಜಯಪುರ: ಬಿಎಲ್‌ಡಿಇ ಸಂಸ್ಥೆಯ ವಚನ ಪಿತಾಮಹ ಡಾ.ಫ.ಗು. ಹಳಕಟ್ಟಿ ಎಂಜಿನಿಯರಿಂಗ್-ತಂತ್ರಜ್ಞಾನ ಮಹಾವಿದ್ಯಾಲಯದ ನೇತೃತ್ವದಲ್ಲಿ ಗ್ರಂಥಾಲಯ ನಿರ್ವಹಣೆಗಾಗಿ ವಿಶೇಷ ತಂತ್ರಾಂಶ ರಚನಾ ಕಾರ್ಯಾಗಾರ ನಡೆಯಿತು. ಇಂಡಿಯನ್ ಸೊಸೈಟಿ ಫಾರ್ ಟೆಕ್ನಿಕಲ್ ಎಜ್ಯುಕೇಷನ್ ಹಾಗೂ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಆಶ್ರಯದಲ್ಲಿ ಹಮ್ಮಿಕೊಂಡ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳು ಗ್ರಂಥಾಲಯ ವ್ಯವಸ್ಥೆ ಸರಳೀಕರಣ ಹಾಗೂ ಸುಗಮಗೊಳಿಸುವ ನಿಟ್ಟಿನಲ್ಲಿ ತಂತ್ರಾಂಶ ರಚನೆಯ ಬಗ್ಗೆ ವಿವರಣೆ ನೀಡಿದರು. ಪ್ರಾಚಾರ್ಯ ಡಾ. ಮಂಜುನಾಥ ಪಿ. ಮಾತನಾಡಿ, ಗ್ರಂಥಾಲಯ ಸೇವೆಗಳ ಮಹತ್ವ ಮತ್ತು ಸಂಸ್ಥೆಗಳಲ್ಲಿ ಶೈಕ್ಷಣಿಕ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಕೃತಿಯನ್ನು ಬೆಳೆಸುವಲ್ಲಿ ಗ್ರಂಥಪಾಲಕರ ಪಾತ್ರ ಅನನ್ಯ, ಸುಸಜ್ಜಿತ ಗ್ರಂಥಾಲಯಗಳು ಅಮೂಲ್ಯವಾದ ಸಂಶೋಧನಾ ಬೆಂಬಲ ಸೇವೆಗಳನ್ನು ನೀಡುತ್ತವೆ ಮತ್ತು ಗ್ರಂಥಾಲಯ ನಿರ್ವಹಣೆಗಾಗಿ ಮುಕ್ತ ಮೂಲ ಸಾಫ್ಟ್‌ವೇರ್ ನಲ್ಲಿ ತರಬೇತಿ ನೀಡುತ್ತವೆ ಎಂದರು. ಕೆಎಲ್‌ಎಸ್ ಜಿಐಟಿಯ ಗ್ರಂಥಪಾಲಕ ಮತ್ತು ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿ ಡಾ.ಬಸವರಾಜ ಕುಂಬಾರ್, ಡಾ.ಎಂ.ಎಂ.ಬಾಚಲಾಪ್ಪು, ಉಪ ಪ್ರಾಚಾರ್ಯೆ ಡಾ. ಲೀನಾ, ಡಾ.ಶಿವಗಂಗಾ, ಡಾ.ಭುವನೇಶ್ವರಿ ಪಾಟೀಲ, ವಿದ್ಯಾ ಬೂದಿಹಾಳ, ಬಿಎಲ್‌ಡಿಇ ಡೀಮ್ಡ್ ವಿವಿ ವಿದ್ಯಾರ್ಥಿಗಳು ಗ್ರಂಥಪಾಲಕರು ಪಾಲ್ಗೊಂಡಿದ್ದರು.

ಮಹಿಳಾ ಸಾಧಕಿಯರ ಸಂವಾದ

ವಿಜಯಪುರ: ನಗರದ ಡಾ.ಫ.ಗು.ಹಳಕಟ್ಟಿ ಎಂಜಿನಿಯರಿಂಗ್ ಮಹಾವಿದ್ಯಾಲಯದಲ್ಲಿ ಮಹಿಳಾ ಸಾಧಕೀಯರು ವಿದ್ಯಾರ್ಥಿಗಳಿಗೆ ಸಾಧನೆಯ ಪಥದ ಕುರಿತು ಸಂವಾದ ನಡೆಸಿ ಯಶಸ್ಸು ಪಡೆಯುವ ನಿಟ್ಟಿನಲ್ಲಿ ಅನೇಕ ಮಹತ್ವಪೂರ್ಣ ಅಂಶಗಳ ಬಗ್ಗೆ ಸಲಹೆ ಹೇಳಿದರು.

ಬಿಎಲ್‌ಡಿಇ ಸಂಸ್ಥೆಯ ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದಲ್ಲಿ ವಿನಿಮಯ ಎನ್ನುವ ಶೀರ್ಷಿಕೆಯಡಿಯಲ್ಲಿ ಈ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಜೆಎಸ್‌ಡಬ್ಲ್ಯೂ ಸ್ಟೀಲ್‌ನ ಆಟೊಮೇಷನ್ ಎಂಜಿನಿಯರ್ ಸಹ ಆಗಿರುವ ಮಹಾನಟಿ ರಿಯಾಲಿಟಿ ಶೋ ರನ್ನರ್ ಅಪ್ ವರ್ಷಾ ದಿಗ್ರಜೆ ಮಾತನಾಡಿ, ಎಂಜಿನಿಯರಿಂಗ್ ಕ್ಷೇತ್ರದಿಂದ ಸಾರ್ವಜನಿಕ ಭಾಷಣದವರೆಗಿನ ತಮ್ಮ ಪ್ರಯಾಣವನ್ನು ಹಂಚಿಕೊಂಡರು ಹಾಗೂ ಒತ್ತಡ ನಿರ್ವಹಣೆ ಮತ್ತು ವೃತ್ತಿಜೀವನದ ಸ್ಥಿತಿಸ್ಥಾಪಕತ್ವದ ಬಗ್ಗೆ ಸಲಹೆಗಳನ್ನು ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಪಿ.ಮಂಜುನಾಥ, ಡಾ.ಪುಷ್ಪಾ ಪಾಟೀಲ, ಡಾ. ಲೀನಾ ರಾಘಾ, ಡಾ.ಜಯಲಕ್ಷ್ಮಿ ಗೋನಾಳ್ ಮಾತನಾಡಿದರು. ದ್ರಾಕ್ಷಾಯಿಣಿ ಇಜೇರಿ, ಡಾ.ಶ್ವೇತಾ ಪಾಟೀಲ ಇದ್ದರು.



ಸಂತೆ ಕರ ವಸೂಲಿ ಲೀಲಾವು



ದೇವರಹಿಪ್ಪರಗಿ: ಪಟ್ಟಣ ಪಂಚಾಯತಿ ವತಿಯಿಂದ ಸಂತೆ ಕರ ಜಾಹೀರ ಲೀಲಾವು ತೀವ್ರ ಪೈಪೋಟಿ ಮೂಲಕ ನಡೆತು. ಸುಮಾರು 3ಕ್ಕೂ ಹೆಚ್ಚು ಜನರು ಲೀಲಾವಿನಲ್ಲಿ ಭಾಗವಹಿಸಿದ್ದರು. ಬೇಡಿಕೆ ಕೊನೆಯಲ್ಲಿ 9.05 ಲಕ್ಷಕ್ಕೆ ಅಬ್ದುಲ್ ಜಬ್ಬಾರ ಚೌದರಿ ಬೇಡಿದ ಮೇಲೆ ಖಾಜಾಬಂದೇನವಾಜ ಯಲಗಾರ,ಬಾಬುಸಾಬ ಯಲಗಾರ ಸೇರಿದಂತೆ ಯಾರೂ ಲೀಲಾವು ಬೇಡಲು ಮುಂದೆ ಬಾರದ್ದರಿಂದ ದಿನದ ಸಂತೆ ಕರ ಫೀ ವಸೂಲಿ ಲೀಲಾವು 9.05 ಲಕ್ಷಕ್ಕೆ ಅಬ್ದುಲ್ ಜಬ್ಬಾರ ಚೌದರಿಗೆ ಲಭಿಸಿತು.

ಪಪಂ ಅಧ್ಯಕ್ಷೆ ಜಯಶ್ರೀ ದೇವಣಗಾಂವ, ಉಪಾಧ್ಯಕ್ಷ ರಮೇಶ ಮಸಿಬಿನಾಳ, ಮುಖ್ಯಾಧಿಕಾರಿ ಅಫ್ರೋಜ ಅಹಮದ ಪಟೇಲ, ಸದಸ್ಯರಾದ ಕಾಸುಗೌಡ ಬಿರಾದಾರ, ಕಾಶಿನಾಥ ಭಜಂತ್ರಿ, ಸಿಂಧೂರ ಡಾಲೇರ, ನಾಮ ನಿರ್ದೇಶಿತ ಸದಸ್ಯ ಹುಸೇನ ಕೂಕಟನೂರ, ಸಿಬ್ಬಂದಿಗಳಾದ ಮುತ್ತುರಾಜ ಹಿರೇಮಠ, ಸೋಮು ಭೋವಿ, ಎಸ್.ಎಸ್.ಪೂಜಾರಿ, ಬಿ.ಪಿ.ಹಜೇರಿ, ನಬಿರಸೂಲ ಮಣೂರ ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

ವೈಜ್ಞಾನಿಕ ಪಿಂಚಣಿ ನೀಡಲು ಆಗ್ರಹ

ವಿಜಯಪುರ: ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ಪಿಂಚಣಿಗೆ ಅರ್ಹರಾಗಿರುವ ಇಪಿಎಸ್- 95 ನೌಕರರಿಗೆ ಕೂಡಲೇ ಪಿಂಚಣಿಯನ್ನು ವೈಜ್ಞಾನಿಕ ನೀಡಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಪಿಎಸ್-95 ಪಿಂಚಣಿ ನೌಕರರು ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ನಡೆಸಿದರು.

ಸಂಘಟನೆ ರಾಜ್ಯ ಕಾರ್ಯಾಧ್ಯಕ್ಷ ವೀರಕುಮಾರ ಗಡಾದ ಮಾತನಾಡಿ, ನಿವೃತ್ತಿ ನಂತರ ಜೀವನದ ಸಂಧ್ಯಾಕಾಲದಲ್ಲಿ ಈ ಸರ್ಕಾರಿ ನೆರವಾಗುವುದು ಪಿಂಚಣಿ ಅನೇಕ ನೌಕರರಿಗೆ ಮರೀಚಿಕೆಯಾಗಿದೆ, ಕಳೆದ 10 ವರ್ಷಗಳಿಂದ ಪಿಂಚಣಿ ಪರಿಷ್ಕರಣೆ ಮೊದಲಾದ ಬೇಡಿಕೆ ಈಡೇರಿಸಿ ಹೋರಾಟ ನಡೆಸುತ್ತಿದ್ದರೂ ಪ್ರಯೋಜನವಾಗಿಲ್ಲ ಎಂದರು.

ಪ್ರಮುಖರಾದ ಶಾಂತಿನಾಥ ಪಾಟೀಲ, ರಫೀಕ್ ಫಣಿಬಂದ, ಬಿ.ಆರ್. ರಜಪೂತ, ಆರ್.ಎಸ್.ಹೊಸಮನಿ, ಎಸ್.ಎಂ.ಮೂಕಿಹಾಳ, ಆರ್. ಎಸ್.ಬಿರಾದಾರ, ವಿಜಯ ಬಡಿಗೇರ, ಎಸ್.ಎಸ್.ಆಲಗುಂಡಿ, ಎಸ್. ಎನ್.ಹೆಂಚನ್ನವರ, ಅಶೋಕ ಸಂಗೋಳಿ, ಸೂರ್ಯಕಾಂತ ಜಂಗಮಶೆಟ್ಟಿ, ಬಿ.ಎ.ಚಲವಾದಿ ಇದ್ದರು.



ಕಿರುಸುದ್ದಿ

ಪೆಟ್ರೋಲ್, ಡೀಸೆಲ್ ಅಬಕಾರಿ ಸುಂಕ ಕಡಿತ ಸ್ವಾಗತಾರ್ಹ



ಕಲಬುರಗಿ: ಮಧ್ಯಪ್ರಾಚ್ಯದಲ್ಲಿ ಉದ್ಭವಿಸಿರುವ ಬಿಕ್ಕಟ್ಟಿನ ನಡುವೆಯೂ ದೇಶದ ಜನತೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮಹತ್ವದ ಸಿಹಿ ಸುದ್ದಿ ನೀಡಿದೆ ಎಂದು ಬಿಜೆಪಿ ಕಲಬುರಗಿ ವಿಭಾಗ ಸಹ ಪ್ರಭಾರಿ ಶರಣಪ್ಪ ತಳವಾರ ಸಂತಸ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಗಣನೀಯವಾಗಿ ಕಡಿತಗೊಳಿಸಿದ್ದು ಸ್ವಾಗತಾರ್ಹ. ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು 13ರಿಂದ 3ಕ್ಕೆ ಇಳಿಸಲಾಗಿದ್ದು, ಡೀಸೆಲ್ ಮೇಲಿನ ಸುಂಕವನ್ನು 10ರಿಂದ ಶೂನ್ಯಕ್ಕೆ ಇಳಿಸಲಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಿಂದ ಇಂಧನ ಕಂಪನಿಗಳು ನಷ್ಟ ಅನುಭವಿಸುತ್ತಿರುವ ಹಿನ್ನೆಲೆ, ಜನಸಾಮಾನ್ಯರ ಮೇಲೆ ಬೆಲೆ ಏರಿಕೆಯ ಭಾರ ಬಾರದಂತೆ ಈ ಕ್ರಮ ಕೈಗೊಳ್ಳಲಾಗಿದೆ ಎಂದರು.

ಇಂಧನ ದರ ಏರಿಕೆಯಿಂದ ಜನತೆಗೆ ಆಗಬಹುದಾದ ತೊಂದರೆಯನ್ನು ತಗ್ಗಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಇದರ ಮೂಲಕ ರೈತರು ಹಾಗೂ ಸಾಮಾನ್ಯ ಜನರಿಗೆ ನೇರವಾಗಿ ನೆರವಾಗುವ ಉದ್ದೇಶ ಹೊಂದಲಾಗಿದೆ. ಕೇಂದ್ರ ಸರ್ಕಾರದ ಈ ನಿರ್ಧಾರವನ್ನು ಸ್ವಾಗತಿಸಿ, ರೈತರು ಹಾಗೂ ಜನಸಾಮಾನ್ಯರ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದ್ದಾರೆ.

ಸಿಎಂ ಪದಕಕ್ಕೆ ಪೊಲೀಸ್ ಅಧಿಕಾರಿಗಳು ಆಯ್ಕೆ



ಕಲಬುರಗಿ: 2025-26ನೇ ಸಾಲಿನ ಮುಖ್ಯಮಂತ್ರಿ ಪದಕಕ್ಕೆ ಕಲಬುರಗಿ ಜಿಲ್ಲೆಯ ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಆಯ್ಕೆಯಾಗಿದ್ದಾರೆ. ಕಲಬುರಗಿ ಡಿವೈಎಸ್ಪಿ ಬಸವರಾಜ, ವಿಶ್ವವಿದ್ಯಾಲಯ ಪೊಲೀಸ್ ಠಾಣೆಯ ಪಿಎಸ್ ವಿಠಲ್, ಪೊಲೀಸ್ ಇನ್ಸ್‌ಪೆಕ್ಟರ್ ಮಹಾದೇವಪ್ಪ ದೊಡ್ಡಮನಿ ಹಾಗೂ ಯೂನಿವರ್ಸಿಟಿ ಪಿಐ ಸುಶೀಲ್ ಕುಮಾರ್ ಅವರು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಸೇವೆ, ಶಿಸ್ತು ಮತ್ತು ಜನಸಾಮಾನ್ಯರ ರಕ್ಷಣೆಯಲ್ಲಿ ತೋರಿದ ಉತ್ತಮ ಕಾರ್ಯಕ್ಷಮತೆಯನ್ನು ಪರಿಗಣಿಸಿ ಸರ್ಕಾರವು ಇವರನ್ನು ಆಯ್ಕೆ ಮಾಡಿದೆ. ಪೊಲೀಸ್ ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸಿದವರಿಗೆ ನೀಡುವ ಈ ಮುಖ್ಯಮಂತ್ರಿ ಪದಕವು ಪ್ರತಿಷ್ಠಿತ ಗೌರವವಾಗಿದ್ದು, ಆಯ್ಕೆಯಾದ ಅಧಿಕಾರಿಗಳಿಗೆ ಜಿಲ್ಲೆಯಲ್ಲಿ ಪ್ರಶಂಸೆ ವ್ಯಕ್ತವಾಗಿದೆ.ಜಿಲ್ಲಾ ಪೊಲೀಸ್ ವಲಯದಲ್ಲಿ ಇವರ ಸಾಧನೆಗೆ ಅಭಿನಂದನೆಗಳ ಮಹಾಪೂರ ಹರಿದುಬರುತ್ತಿದ್ದು,ಇತರ ಸಿಬ್ಬಂದಿಗೆ ಇದು ಪ್ರೇರಣೆಯಾಗಲಿದೆ.

ಪಾರ್ವತಿ ಆಯ್ಕೆ



ಮುನಿರಾಬಾದ್: ಬೂದಗುಂಪ ಗ್ರಾಮದ ಶ್ರೀ ಕುವೆಂಪು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿನಿ ಪಾರ್ವತಿ ಬಳಗಾರ್ ಕುಕನೂರಿನ ಪಟ್ಟಣದಲ್ಲಿ ಜವಾಹರ ನವೋದಯ ವಸತಿ ವಿದ್ಯಾಲಯಕ್ಕೆ 6ನೇ ತರಗತಿಗೆ ಆಯ್ಕೆಯಾಗಿದ್ದು, ಶ್ರೀ ಕುವೆಂಪು ಹಿರಿಯ ಪ್ರಾಥಮಿಕ ಶಾಲೆ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಉಪಾಧ್ಯಯರು ಹರ್ಷ ವ್ಯಕ್ತಪಡಿಸಿ ವಿದ್ಯಾರ್ಥಿನಿಯನ್ನು ಅಭಿನಂದಿಸಿದರು.

ಇಂದು ಬಳಗಾನೂರಿಗೆ ಯತೀಂದ್ರ, ಸಿದ್ದರಾಮಯ್ಯ

ಮಸ್ಕಿ: ತಾಲೂಕಿನ ಬಳಗಾನೂರ ಪಟ್ಟಣದಲ್ಲಿ ಮಾ.29ರಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೂರ್ತಿ ಅನಾವರಣ ಕಾರ್ಯಕ್ರಮಕ್ಕೆ ಸಮಾಜದ ಶ್ರೀಗಳು ಮತ್ತು ವಿಧಾನ ಪರಿಷತ್ ಶಾಸಕ ಯತೀಂದ್ರ ಸಿದ್ದರಾಮಯ್ಯ ಮತ್ತು ನಗರ ಅಭಿವೃದ್ಧಿ ಸಚಿವ ಬೈರತಿ ಸುರೇಶ್ ಆಗಮಿಸಲಿದ್ದು, ಈ ಕಾರ್ಯಕ್ರಮಕ್ಕೆ ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಸಮಾಜದ ಯುವ ನಾಯಕ ಆನಂದ ಕನಸಾವಿ ತಿಳಿಸಿದರು.



ಕುಷ್ಟಗಿ: ತಾಲೂಕಿನ ತಾವರಗೇರಾ ಪಟ್ಟಣದಲ್ಲಿ ಶ್ರೀರಾಮನವಮಿ ಅಂಗವಾಗಿ ಶ್ರೀರಾಮನ ಭಾವಚಿತ್ರದ ಮೆರವಣಿಗೆ ಹಾಗೂ ಪಲ್ಲಕ್ಕಿ ಉತ್ಸವ ಅತ್ಯಂತ ಸಡಗರ, ಸಂಭ್ರಮದಿಂದ ಶನಿವಾರ ಜರುಗಿತು.ಬೆಳಿಗ್ಗೆ ಶ್ರೀರಾಮ ಮಂದಿರದಲ್ಲಿ ಶ್ರೀರಾಮ, ಲಕ್ಷ್ಮಣ, ಸೀತಾ ಮಾತೆಯ ಶಿಲಾ ಮೂರ್ತಿಗೆ ವಿಶೇಷ ಅಲಂಕಾರ, ರುದ್ರಾಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಮಹಿಳೆ ಅಬಲೆ ಅಲ್ಲ ಸಬಲೆ: ಶ್ರೀದೇವಿ

ಯಲಬುರ್ಗಾ: ಮಹಿಳೆಯರು ಆತ್ಮವಿಶ್ವಾಸ, ಧೈರ್ಯದಿಂದ ದುಷ್ಟಶಕ್ತಿಗಳಿಗೆ ಭಯಪಡದೆ ಸ್ವಾವಲಂಬಿಯಾಗಿ ಬದುಕುವತ್ತ ಮುನ್ನುಗ್ಗಬೇಕು. ಹೆಣ್ಣು ಎಂದಿಗೂ ಅಬಲೆಯಲ್ಲ ಆಕೆ ಸಬಲೆಯಾಗಿದ್ದಾಳೆ ಎಂದು ತಾಲೂಕಿನ ಹಿರೇಮ್ಯಾಗೇರಿ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಶ್ರೀದೇವಿ ಮುಕಿಹಾಳ ಹೇಳಿದರು.

ಪಟ್ಟಣದ ಗುರುಭವನದಲ್ಲಿ ಗುರುವಾರ ತಾಲೂಕಾ ವೀರಶೈವ ಲಿಂಗಾಯತ ಮಹಿಳಾ ಪಂಚಮಸಾಲಿ ಸಮಾಜ ವತಿಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ ಮಾತನಾಡಿದರು.

ಜಿಲ್ಲಾ ವೀರಶೈವ ಲಿಂಗಾಯತ ಮಹಿಳಾ ಪಂಚಮಸಾಲಿ ಸಮಾಜದ ಅಧ್ಯಕ್ಷೆ ಸುಮಂಗಲಾ ಹಂಚಿನಾಳ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಹೆಣ್ಣು ತಾಯಿಯಾಗಿ ತಂಗಿ, ಅಕ್ಕ, ಮಗಳು, ಹೆಂಡತಿಯಾಗಿ ಇಡೀ ಕುಟುಂಬವನ್ನು ನಿರ್ವಹಣೆ ಮಾಡುವ ಅಗಾಧ ಶಕ್ತಿಯನ್ನು ಮಹಿಳೆ ಹೊಂದಿದ್ದಾರೆ.ಇನ್ನೂ ಪುರುಷನ ಸರಿಸಮಳಾಗಿ ಎಲ್ಲ ಕ್ಷೇತ್ರದಲ್ಲಿ ಮಹಿಳೆ ಸಾಮರ್ಥ್ಯವನ್ನು ಹೊಂದಿದ್ದಾಳೆ ಆಕೆ ಎಮದೂ ಅಬಲೆಯಲ್ಲ, ಸಬಲೆಯಾಗಿದ್ದಾಳೆ ಎಂದರು.

ತಾಲೂಕಾ ವೀರಶೈವ ಲಿಂಗಾಯತ ಮಹಿಳಾ ಪಂಚಮಸಾಲಿ ಸಮಾಜದ ಅಧ್ಯಕ್ಷೆ ಗೀತಾ ಆರ್. ನಿಂಗೋಜಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಈ ವೇಳೆಯಲ್ಲಿ ಸುಮಂಗಲಾ ತೊಂಡಿಹಾಳ, ಗಂಗಮ್ಮ ಸೊಬಗಿನ್, ರಾಜೇಶ್ವರಿ ಪಾಟೀಲ, ಭಿಮಾಂಬಿಕಾ ಗೊಡೆಕಾರ, ಚನ್ನಮ್ಮ ಪಾಟೀಲ, ಜ್ಯೋತಿ ಪಲ್ಲೇದ, ಸುನೀತಾ ಪತಂಗರಾಯ,ಲತಾ ಕಲ್ಯಾನಿ ಮತ್ತಿತರರು ಇದ್ದರು.



ಯಲಬುರ್ಗಾ: ಪಟ್ಟಣದ ಗುರುಭವನದಲ್ಲಿ ಗುರುವಾರ ತಾಲೂಕಾ ವೀರಶೈವ ಲಿಂಗಾಯತ ಮಹಿಳಾ ಪಂಚಮಸಾಲಿ ಸಮಾಜ ವತಿಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ನಡೆಯಿತು. ಹಿರೇಮ್ಯಾಗೇರಿ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಶ್ರೀದೇವಿ ಮುಕಿಹಾಳ, ಜಿಲ್ಲಾ ವೀರಶೈವ ಲಿಂಗಾಯತ ಮಹಿಳಾ ಪಂಚಮಸಾಲಿ ಸಮಾಜದ ಅಧ್ಯಕ್ಷೆ ಸುಮಂಗಲಾ ಹಂಚಿನಾಳ ಇತರರು ಇದ್ದರು.

ರಾಜ್ಯ ಸರ್ಕಾರದ ನಿರ್ಧಾರಕ್ಕೆ ಎಂಎಲ್ಸಿ ನಮೋಶಿ ಅಸಮಾಧಾನ

ಗ್ರೇಡಿಂಗ್ ವ್ಯವಸ್ಥೆ ಭಾಷೆಯ ಮಹತ್ವ ಕುಗ್ಗಿಸುವ ಕ್ರಮ

ಕಲಬುರಗಿ: ರಾಜ್ಯದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ತೃತೀಯ ಭಾಷೆಯ ಸ್ಥಾನಮಾನ ಕುರಿತು ಸರ್ಕಾರ ಕೈಗೊಂಡಿರುವ ನಿರ್ಧಾರಕ್ಕೆ ವಿರೋಧ ವ್ಯಕ್ತವಾಗುತ್ತಿದ್ದು, ಈ ನಿರ್ಧಾರವು ವಿದ್ಯಾರ್ಥಿಗಳ ಹಕ್ಕುಗಳು, ಶಿಕ್ಷಣದ ಗುಣಮಟ್ಟ ಹಾಗೂ ಶಿಕ್ಷಕರ ಭವಿಷ್ಯ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ ತಿಳಿಸಿದರು.



ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಸಂವಿಧಾನದ ವಿಧಿ 21ಎ ಅನ್ವಯ 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಜೊತೆಗೆ ತಮ್ಮ ಇಚ್ಛೆಯ ಭಾಷೆ ಕಲಿಯುವ ಹಕ್ಕು ಇದೆ. ಆದರೆ, ರಾಜ್ಯ ಸರ್ಕಾರ ತೃತೀಯ ಭಾಷೆಯನ್ನು ಕೇವಲ ಬೋಧನೆ ಮಟ್ಟಕ್ಕೆ ಸೀಮಿತಗೊಳಿಸಿ, ಅಂಕಗಳ ಬದಲಿಗೆ ಕೇವಲ ಗ್ರೇಡಿಂಗ್ ವ್ಯವಸ್ಥೆ ಜಾರಿಗೊಳಿಸಿರುವುದು ಭಾಷೆಗಳ ಮಹತ್ವವನ್ನು ಕುಗ್ಗಿಸುವ ಕ್ರಮವಾಗಿದೆ ಎಂದು ಹೇಳಿದರು.

ಇದುವರೆಗೆ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗೆ 625 ಅಂಕಗಳ ಮೌಲ್ಯಮಾಪನ ವ್ಯವಸ್ಥೆಯಲ್ಲಿ ತೃತೀಯ ಭಾಷೆಗಳಿಗೂ ಸ್ಥಾನವಿತ್ತು. ಆದರೆ, ಇದೀಗ ಅದನ್ನು 525 ಅಂಕಗಳಿಗೆ ಇಳಿಸಿರುವುದು ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರಲಿದೆ. ತೃತೀಯ ಭಾಷೆಗೆ ಪಾಸ್, ಫೇಲ್ ವ್ಯವಸ್ಥೆಯನ್ನು ರದ್ದುಪಡಿಸಿ ಕೇವಲ ಗ್ರೇಡಿಂಗ್ ಜಾರಿಗೊಳಿಸುವುದು ವಿದ್ಯಾರ್ಥಿಗಳಲ್ಲಿ ಗಂಭೀರತೆ ಕಡಿಮೆ ಮಾಡಬಹುದು. ಮಾರ್ಕ್ಸ್ ಇಲ್ಲ ಎಂಬ ಮನೋಭಾವದಿಂದ ವಿದ್ಯಾರ್ಥಿಗಳು ನಿರ್ಲಕ್ಷ್ಯ ತೋರಿಸುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ತೃತೀಯ ಭಾಷೆ ಎಂದರೆ ಕೇವಲ ಹಿಂದಿ ಮಾತ್ರವಲ್ಲ, ಕನ್ನಡ, ಮರಾಠಿ, ಸಂಸ್ಕೃತ, ಉರ್ದು, ತೆಲುಗು, ತಮಿಳು ಸೇರಿದಂತೆ ಅನೇಕ ಭಾಷೆಗಳ ಸಮೂಹವಾಗಿದೆ. ಆದರೂ ಒಂದು ಭಾಷೆಯನ್ನು ಗಮನದಲ್ಲಿಟ್ಟುಕೊಂಡು ತೆಗೆದುಕೊಳ್ಳುತ್ತಿರುವ ನಿರ್ಧಾರವು ಇತರೆ ಭಾಷೆಗಳಿಗೂ ಅನ್ಯಾಯ ಮಾಡುತ್ತದೆ. ರಾಜ್ಯದಲ್ಲಿ ಸಾವಿರಾರು ಶಿಕ್ಷಕರು ತೃತೀಯ ಭಾಷೆಯನ್ನು ಬೋಧಿಸುತ್ತಿದ್ದು, ಈ ವಿಷಯಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದ ಹಲವರು ಉದ್ಯೋಗದ ನಿರೀಕ್ಷೆಯಲ್ಲಿದ್ದಾರೆ. ಈ ನಿರ್ಧಾರವು ಅವರ ಉದ್ಯೋಗಾವಕಾಶಗಳ ಮೇಲೆಯೂ ಪರಿಣಾಮ ಬೀರುತ್ತದೆ ಎಂದು ಹೇಳಿದರು.

ಈಗಾಗಲೇ ನಡೆಯುತ್ತಿರುವ ಎಸ್ಎಸ್ಎಲ್‌ಸಿ ಪರೀಕ್ಷೆಗಳ ಮಧ್ಯದಲ್ಲೇ ಇಂತಹ ನಿರ್ಧಾರ ಕೈಗೊಳ್ಳುವುದು ವಿದ್ಯಾರ್ಥಿಗಳಲ್ಲಿ ಗೊಂದಲ ಮತ್ತು ಒತ್ತಡ ಉಂಟುಮಾಡಬಹುದು. ಇದು ಕೇವಲ ಒಂದು ವಿಷಯದ ಪ್ರಶ್ನೆಯಲ್ಲ, ಸಂಪೂರ್ಣ ಶಿಕ್ಷಣ ವ್ಯವಸ್ಥೆಯ ಗೌರವಕ್ಕೆ ಸಂಬಂಧಿಸಿದ ವಿಷಯವಾಗಿದ್ದು, ದೇಶದಲ್ಲಿ ಜಾರಿಯಲ್ಲಿರುವ ತ್ರಿಭಾಷಾ ನೀತಿ ವಿದ್ಯಾರ್ಥಿಗಳ ಭಾಷಾ ಕೌಶಲ್ಯ, ರಾಷ್ಟ್ರೀಯ ಏಕತೆ ಹಾಗೂ ಬೌದ್ಧಿಕ ಬೆಳವಣಿಗೆಗೆ ಸಹಾಯಕವಾಗಿದ್ದು, ಸರ್ಕಾರ ಈ ನಿರ್ಧಾರವನ್ನು ಕೂಡಲೇ ಮರು ಪರಿಶೀಲಿಸಬೇಕು ಎಂದು ಶಶೀಲ್ ನಮೋಶಿ ಆಗ್ರಹಿಸಿದರು.

> **ಶಿಕ್ಷಣ ಸಚಿವ ಮಧು ಬಂಗಾರಪ್ಪನವರು ಈ ಹಿಂದೆ ಅನೇಕ ವಿಷಯಗಳ ಕುರಿತು ನಮ್ಮೊಂದಿಗೆ ಚರ್ಚೆ ನಡೆಸಿದ್ದಾರೆ. ಆದರೆ,ಈ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆಯೇ ಮಾಡಿಲ್ಲ. ತರಾತುರಿಯಲ್ಲಿ ಸರ್ಕಾರ ತೆಗೆದುಕೊಂಡ ನಿರ್ಣಯದ ಕುರಿತು ಮರುಪರಿಶೀಲನೆ ಮಾಡಿ, ಕೂಡಲೇ ನಿರ್ಣಯ ವಾಪಸ್ ಪಡೆಯಬೇಕು.**
> ■ **ಶಶೀಲ್ ನಮೋಶಿ, ಎಂಎಲ್ಸಿ**

ಕಾರ್ಯಕರ್ತರ ಕೆಲಸದಿಂದ ಪಕ್ಷಕ್ಕೆ ಯಶಸ್ಸು

ಕುಷ್ಟಗಿ: ಜನರ ಮನಸ್ಸು ಗೆಲ್ಲುವ ರೀತಿಯಲ್ಲಿ ಕಾರ್ಯಕರ್ತರು ಕೆಲಸ ಮಾಡಿದರೆ ಮಾತ್ರ ಪಕ್ಷಕ್ಕೆ ಯಶಸ್ಸು ಲಭಿಸುತ್ತದೆ. ಪ್ರತಿಯೊಬ್ಬರೂ ತಮ್ಮ ಪ್ರದೇಶದಲ್ಲಿ ಜನರೊಂದಿಗೆ ನಿಕಟ ಸಂಪರ್ಕ ಬೆಳೆಸಿ ಅವರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಎಚ್. ಪಾಟೀಲ ಹೇಳಿದರು.

ತಾಲೂಕಿನ ಹಿರೇಬನ್ನಿಗೋಳ ಗ್ರಾಮದ ಅಟಲ್ ಜೀ ಸಭಾ ಭವನದಲ್ಲಿ ಶನಿವಾರ ಬಿಜೆಪಿಯಿಂದ ಪಂ. ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026ಅಂಗವಾಗಿಮಂಡಲ ಮಟ್ಟದ ಪ್ರಶಿಕ್ಷಣ ವರ್ಗ ಕಾರ್ಯಕ್ರಮದಲ್ಲಿ ಮಾತನಾಡಿ, ಮುಂಬರುವ ಜಿಪಂ ಹಾಗೂ ತಾಲೂಕು ಪಂಚಾಯತಿ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಈಗಿನಿಂದಲೇ ಕಾರ್ಯಕರ್ತರು ಸಂಘಟಿತವಾಗಿ ಸಿದ್ಧತೆ ಕೈಗೊಳ್ಳಬೇಕು ಎಂದರು.

ಪಕ್ಷದ ತತ್ವ, ಸಿದ್ಧಾಂತ ಹಾಗೂ ಸಂಘಟನಾ ಬಲವನ್ನು ವೃದ್ಧಿಸುವಲ್ಲಿ ಇಂತಹ ಕಾರ್ಯಕ್ರಮಗಳು ಮಹತ್ವದ ಪಾತ್ರವಹಿಸುತ್ತವೆ. ಗ್ರಾಮ ಮಟ್ಟದಿಂದಲೇ ಪಕ್ಷವನ್ನು ಬಲಪಡಿಸಲು ಯುವಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಪಕ್ಷದ ಹಿರಿಯ ಮುಖಂಡರು ಕಾರ್ಯಕರ್ತರಿಗೆ ಸಂಘಟನೆ, ಚುನಾವಣಾ ತಂತ್ರಗಳು, ಜನಸಂಪರ್ಕದ ವಿಧಾನಗಳು ಹಾಗೂ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಬಗ್ಗೆ ಮಾರ್ಗದರ್ಶನ ನೀಡಿದರು. ಕಾರ್ಯಕರ್ತರು ಶಿಸ್ತು ಸಮರ್ಪಣಾಭಾವದಿಂದ ಕಾರ್ಯ ನಿರ್ವಹಿಸಿದರೆ ಮುಂದಿನ ಚುನಾವಣೆಯಲ್ಲಿ ಉತ್ತಮ ಫಲಿತಾಂಶ ಸಾಧಿಸಲು ಸಾಧ್ಯವೆಂದು ವಿಶ್ವಾಸ ವ್ಯಕ್ತಪಡಿಸಿದರು.

ಪಂ. ದೀನದಯಾಳ್ ಉಪಾಧ್ಯಾಯ ಹಾಗೂ ಶ್ಯಾಮ್ ಪ್ರಸಾದ್ ಮುಖರ್ಜಿ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಲಾಯಿತು.

ಬಳಿಕ ಮಾಜಿ ಜಿಪಂ ಸದಸ್ಯ ಕೆ. ಮಹೇಶ್, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ, ರಾಜ್ಯ ಕಾರ್ಯಕಾರಿಣಿ ಡಾ. ಬಸವರಾಜ ಕ್ಯಾವಟರ್ ಮಾತನಾಡಿದರು. ಬಿಜೆಪಿ ಮಂಡಲ ತಾಲೂಕು ಅಧ್ಯಕ್ಷ ಮಹಾಂತೇಶ ಬಾದಾಮಿ, ರಾಜ್ಯ ಉಪಾಧ್ಯಕ್ಷ ವಿಜಯ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಹೆಸರೂರು ಸೇರಿದಂತೆ ಹಲವು ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.



ಏ.5ಕ್ಕೆ ಉಚಿತ ಸಾಧನಾ ಸಲಕರಣೆಗಳ ವಿತರಣೆ

ಯಲಬುರ್ಗಾ: ತಾಲೂಕಿನ ಕರಮುಡಿ ಗ್ರಾಮದಲ್ಲಿ ಹಠಯೋಗಿ ಕೋಡಿಕೊಪ್ಪದ ಶ್ರೀಹುಚ್ಚಿರಪ್ಪಜ್ಜನವರ ಜಾತ್ರ ಮಹೋತ್ಸವದ ಅಂಗವಾಗಿ ಶ್ರೀವೀರಭದ್ರೇಶ್ವರ ವಿಕಲಚೇತನರ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆ(ರಿ)ಯಲಬುರ್ಗಾ ಮತ್ತು ವಿ.ಎಚ್.ತಳವಾರ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆ ಕುಕನೂರು,ಕರ್ನಾಟಕ ಯುವಕ ಮಂಡಳ ಕರಮುಡಿ, ಗ್ರಾಮ ಪಂಚಾಯತಿ ಕರಮುಡಿ ಸಹಯೋಗದಲ್ಲಿ ಶಿಕ್ಷಣ ಪ್ರೇಮಿ ದಿ. ಡಾ. ಕಾಶೀನಾಥ ಕುಕನೂರು ಸ್ಮರಣಾರ್ಥವಾಗಿ ಗ್ರಾಮದಲ್ಲಿ ಅಗತ್ಯವಿರುವ ಹಿರಿಯ ನಾಗರಿಕರಿಗೆ ಹಾಗೂ ವಿಕಲಚೇತನರಿಗೆ ಉಚಿತ ಸಾಧನಾ ಸಲಕರಣೆಗಳ ವಿತರಣಾ ಕಾರ್ಯಕ್ರಮ ಏ.5ರಂದು ಶ್ರೀ ಶರಣಬಸವೇಶ್ವರರ ದೇವಸ್ಥಾನ ಕರಮುಡಿಯಲ್ಲಿ ಗ್ರಾಮಸ್ಥರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಡಾ.ಮಂಜುನಾಥ ಕುಕನೂರು ಹಾಗೂ ಡಾ.ಗೌಡಪ್ಪ ಬಲಕುಂದಿ, ಯುವಕ ಮಂಡಳ ಅಧ್ಯಕ್ಷ ನಿಖಿಲ್ ಗೊಂಗಡಶೆಟ್ಟಿ ತಿಳಿಸಿದ್ದಾರೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಕನಕಗಿರಿ: ಇಂದಿನ ಕಾಲದಲ್ಲಿ ಮಹಿಳೆಯರು ಕೇವಲ ಕುಟುಂಬ ಸಂರಕ್ಷಣೆಗೆ ಮಾತ್ರ ಸೀಮಿತವಾಗಿಲ್ಲ, ಬಾಹ್ಯಾಕಾಶ ಸಂಶೋಧನೆಯಿಂದ ಹಿಡಿದು, ದೇಶದ ರಕ್ಷಣೆ, ರಾಜಕೀಯ, ಕ್ರೀಡೆ ಮತ್ತು ತಂತ್ರಜ್ಞಾನದವರೆಗೆ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ. ಕಿತ್ತೂರು ರಾಣಿ ಚೆನ್ನಮ್ಮ, ಸಾಲುಮರದ ತಿಮ್ಮಕ್ಕ, ಸುಧಾ ಮೂರ್ತಿ ಅಂತಹ ಸಾಧಕಿಯರು ನಮಗೆಲ್ಲರಿಗೂ ಸ್ಫೂರ್ತಿಯಾಗಿದ್ದಾರೆ ಎಂದು ಪಪಂ ಅಧ್ಯಕ್ಷೆ ತನುಶ್ರೀ.ಟಿ.ಜೆ.ರಾಮಚಂದ್ರ ಹೇಳಿದರು.

ಪಟ್ಟಣದ ಪಂಪಣ್ಣ ಶರಣಪ್ಪ ಗುಗ್ಗಳಶೆಟ್ರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ಸುರಕ್ಷತೆ ಮತ್ತು ಸಬಲೀಕರಣ ಘಟಕದ ವತಿಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳಾ ದಿನಾಚರಣೆಯು ಕೇವಲ ಒಂದು ದಿನದ ಆಚರಣೆಯಾಗದೆ, ಪ್ರತಿ ದಿನವೂ ಮಹಿಳೆಯರನ್ನು ಗೌರವಿಸುವ ಸಂಸ್ಕೃತಿ ನಮ್ಮದಾಗಬೇಕು. ಮಹಿಳೆಗೆ ಸಮಾನ ಅವಕಾಶ ಮತ್ತು ಸುರಕ್ಷಿತ ವಾತಾವರಣ ಕಲ್ಪಿಸುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಬಜರಂಗಬಲಿ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ಮಹಿಳೆಯರು 'ಅಬಲೆ'ಯಲ್ಲ 'ಸಬಲೆ' ಎಂದು ಸಾಬೀತುಪಡಿಸಿದ್ದಾರೆ. ಮಹಿಳಾ ದಿನಾಚರಣೆಯ ನಿಜವಾದ ಉದ್ದೇಶ 'ಮಹಿಳಾ ಸಬಲೀಕರಣ ಎಂದರೆ ಕೇವಲ ಸೌಲಭ್ಯಗಳನ್ನು ನೀಡುವುದಲ್ಲ, ಬದಲಾಗಿ ಅವಳು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಶಕ್ತಿಯನ್ನು ನೀಡುವುದು. ಹೆಣ್ಣು ಮಗುವಿಗೆ ಶಿಕ್ಷಣ ನೀಡಿದರೆ ಇಡೀ ಕುಟುಂಬವೇ ಶಿಕ್ಷಣ ಪಡೆದಂತೆ. ಅವಳಿಗೆ ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಭದ್ರತೆ ನೀಡಿದಾಗ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದರು.

ಈ ವೇಳೆ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಿಂದ ತಯಾರಿಸಲಾದ ಪ್ರಾಯೋಗಿಕ ಪತ್ರಿಕೆಯನ್ನು ಬಿಡುಗಡೆ ಮಾಡಿದರು. ಕೊಪ್ಪಳ ವಿಶ್ವವಿದ್ಯಾಲಯ ಮಟ್ಟದಲ್ಲಿ ಇತ್ತೀಚಿಗೆ ನಡೆದ ಕೋ-ಕೋ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದ ಕಾಲೇಜಿನ ವಿದ್ಯಾರ್ಥಿಗಳಿಗೆ ಸನ್ಮಾನಿಸಿದರು. ದಿನಾಚರಣೆ ನಿಮಿತ್ತ ವಿದ್ಯಾರ್ಥಿನಿಯರಿಗೆ ರಂಗೋಲಿ, ಸಂಗೀತ, ಕಿರುನಾಟಕ, ನೃತ್ಯ, ವೇಷಭೂಷಣ ಸ್ಪರ್ಧೆ ಆಯೋಜಿಸಲಾಗಿತ್ತು. ವಿವಿಧ ವಿಭಾಗಗಳ ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.



ಪಿಐ ಪ್ರಕಾಶಗೆ ಮುಖ್ಯಮಂತ್ರಿ ಪದಕ

ಗಂಗಾವತಿ: ರಾಜ್ಯ ಪೊಲೀಸ್ ಇಲಾಖೆಯಲ್ಲಿನ ಅತ್ಯುತ್ತಮ ಸೇವೆಯನ್ನು ಗುರುತಿಸಿ ನೀಡಲಾಗುವ ಪ್ರತಿಷ್ಠಿತ 2025 ನೇ ಸಾಲಿನ 'ಮುಖ್ಯಮಂತ್ರಿಗಳ ಚಿನ್ನದ ಪದಕ'ಕ್ಕೆ ಗಂಗಾವತಿ ನಗರದ ಪೊಲೀಸ್ ಠಾಣೆ ನಿರೀಕ್ಷಕ ಪ್ರಕಾಶ ಎಲ್. ಮಾಳಿ ಭಾಜನರಾಗಿದ್ದಾರೆ. ಅವರು ತಮ್ಮ ಕರ್ತವ್ಯದ ಅವಧಿಯಲ್ಲಿ ತೋರಿದ ನಿಷ್ಠೆ ಮತ್ತು ಸಾಧನೆ ಪರಿಗಣಿಸಿ ಈ ಗೌರವ ನೀಡಲಾಗಿದೆ.

ಇವರು ಕೊಪ್ಪಳ ರಾಯಚೂರು ಜಿಲ್ಲೆಯಲ್ಲಿ ಪೊಲೀಸ್ ಠಾಣೆಯಲ್ಲಿ ಸಿಪಿಐಯಾಗಿ ಸೇವೆ ಸಲ್ಲಿಸಿ ಹಲವು ವರ್ಷಗಳ ಸೇವೆ ಸಲ್ಲಿದ್ದಾರೆ.

ವಿದೇಶಿ ಪ್ರಜೆ ಪ್ರಕರಣದ ಕರಾಳತೆ: ಇತ್ತೀಚೆಗೆ ಜಿಲ್ಲೆಯಲ್ಲಿ ನಡೆದ ವಿದೇಶಿ ಪ್ರಜೆಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಇಡೀ ನಾಗರಿಕ ಸಮಾಜವನ್ನೇ ಬೆಚ್ಚಿಬೀಳಿಸಿತ್ತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶದ ಮಾನ ಹರಾಜಾಗುವ ಆತಂಕವಿದ್ದಾಗ, ತನಿಖಾ ತಂಡಗಳು ಹಗಲಿರುಳು ಶ್ರಮಿಸಿ ಆರೋಪಿಗಳನ್ನು ಪತ್ತೆಹಚ್ಚಿದ್ದು ದೊಡ್ಡ ಸಾಧನೆಯಾಗಿತ್ತು. ಇಂತಹ ಸವಾಲುಗಳ ಮಧ್ಯೆಯೇ ದಕ್ಷ ಅಧಿಕಾರಿಗಳನ್ನು ಗುರುತಿಸಿ ಸರ್ಕಾರ ಪದಕ ಘೋಷಿಸಿದಕ್ಕೆ ಗಂಗಾವತಿ ನಗರ ಪೊಲೀಸ್ ಠಾಣೆಯ ಸಿಬ್ಬಂದಿಗಳು ಅಭಿನಂದಿಸಿ ಸನ್ಮಾನಿಸಿ ಗೌರವಿಸಿದರು.



ಏ.2ಕ್ಕೆ ಪ್ರದಾನ: ರಾಜ್ಯಾದ್ಯಂತ ಒಟ್ಟು 152 ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಪದಕ ಲಭಿಸಿದೆ. ಪದಕ ಪುರಸ್ಕೃತರಿಗೆ ಏ.2ರಂದು ಬೆಂಗಳೂರಿನಲ್ಲಿ ನಡೆಯಲಿರುವ ವಿಶೇಷ ಸಮಾರಂಭದಲ್ಲಿ ಮುಖ್ಯಮಂತ್ರಿಯವರು ಪದಕ ಪ್ರದಾನ ಸ್ವೀಕರಿಸಲಾಗುತ್ತದೆ.

ಪಿಎಸ್ಐ ಟಿ.ಜಿ.ನಾಗರಾಜ ಎಲ್ಲಾ ಸಿಬ್ಬಂದಿ ವರ್ಗದವರು ಇದ್ದರು.

ಕಿತ್ತೂರು ರಾಣಿ ಚನ್ನಮ್ಮ ವೃತ್ತ, ಪುತ್ಥಳಿ ಅನಾವರಣ ಇಂದು

ಸಿಂಧನೂರು: ತಾಲೂಕಿನ ತುರ್ವಿಹಾಳ ಪಟ್ಟಣದಲ್ಲಿ ಮಾ.29ರಂದು ಕಿತ್ತೂರು ರಾಣಿ ಚನ್ನಮ್ಮಾಜಿ ವೃತ್ತ ಹಾಗೂ ಪುತ್ಥಳಿ ಅನಾವರಣ ಕಾರ್ಯಕ್ರಮ ಸಾರ್ವಜನಿಕ ಆಸ್ಪತ್ರೆ ಹತ್ತಿರ ನಡೆಯಲಿದೆ ಎಂದು ಪಂಚಮಸಾಲಿ ಸಮಾಜದ ತಾಲೂಕ ಅಧ್ಯಕ್ಷ ಮಲ್ಲಿಕಾರ್ಜುನ ಸಾಹುಕಾರ ಕಲ್ಲೂರು ತಿಳಿಸಿದರು.

ನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪಟ್ಟಣದ ರಾಘವೇಂದ್ರ ಮಂದಿರದಿಂದ ಶಂಕರಲಿಂಗಸ್ವಾಮಿ ದೇವಸ್ಥಾನದವರೆಗೆ ಕುಂಬ, ಕಳಸದೊಂದಿಗೆ ಅದ್ದೂರಿ ಮೆರವಣಿಗೆ ನಡೆಯಲಿದೆ. ಲಿಂಗಾಯತ ಪೀಠ ಕೂಡಲಸಂಗಮ ಜಗದ್ಗುರು ಬಸವ ಜಯಮೃತ್ಯುಂಜಯ ಶ್ರೀಗಳು, ಲಿಂಗಾಯತ ಪಂಚಮಸಾಲಿ ಪೀಠ ಹರಿಹರ ಜಗದ್ಗುರು ವಚನಾನಂದ ಶ್ರೀಗಳು, ಪುರವರಮಠ ತುರ್ವಿಹಾಳ ಅಮರಗುಂಡಯ್ಯ ಶಿವಾಚಾರ್ಯ ಶ್ರೀಗಳು, ಸರ್ವೇಶ್ವರಮಠ ತುರ್ವಿಹಾಳ ಗುಂಡಯ್ಯ ಅಪ್ಪಾಜಿ, ಅಮೋಘ ಸಿದ್ದೇಶ್ವರ ಮಠ ತುರ್ವಿಹಾಳ ಮಾದಯ್ಯ ಗುರುವಿನ, ಚಿದಾನಂದಯ್ಯ ಗುರುವಿನ ಆಮೋಘ ರೇವಣಸಿದ್ದೇಶ್ವರ ಮಠ ತುರ್ವಿಹಾಳ ಸೇರಿದಂತೆ ಹಲವು ಸ್ವಾಮಿಗಳು ದಿವ್ಯಸಾನಿಧ್ಯ ವಹಿಸಲಿದ್ದಾರೆ. ಬೆಂಗಳೂರು ವೀರಶೈವ ಲಿಂಗಾಯತ ಪಂಚಮಸಾಲಿ ಸಂಘ ರಾಜ್ಯಾಧ್ಯಕ್ಷ ಸೋಮನಗೌಡ ಮಾಲಿ ಪಾಟೀಲ್ ಉದ್ಘಾಟನೆ ಮಾಡಲಿದ್ದಾರೆ.



ಮುಖ್ಯ ಅತಿಥಿಗಳಾಗಿ ಸಂಸದ ಕೆ.ರಾಜಶೇಖರ ಹಿಟ್ನಾಳ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಆರ್.ಬಸನಗೌಡ ತುರ್ವಿಹಾಳ, ಮಾಜಿ ಸಂಸದ ಸಂಗಣ್ಣ ಕರಡಿ, ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್, ಮಸ್ಕಿ ನಗರ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಆರ್.ಸಿದ್ದನಗೌಡ ತುರ್ವಿಹಾಳ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಈ ವೇಳೆ ಪಂಪನಗೌಡ ತಾವರಗೇರಾ, ಬಸನಗೌಡ ಬುಕ್ಕನಹಟ್ಟಿ, ಶೇಖರಪ್ಪ ದೋ ಟಿಹಾಳ, ಶರಣಬಸವ ನಾಗರಬೆಂಚಿ, ದೇವರಾಜ ಪಾಟೀಲ್, ಶರಣಪ್ಪ ಬಳೂಟಗಿ, ಚಂದ್ರೇಗೌಡ, ಶರಣಪ್ಪ ಮೇದಿಕಿನಾಳ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಣವೆಗೆ ಆಕಸ್ಮಿಕ ಬೆಂಕಿ: ಆರ್ಥಿಕ ಸಹಾಯ



ಕುಕನೂರ: ತಾಲೂಕಿನ ಕುಡಗುಂಟಿ ಗ್ರಾಮದ ರೈತ ಗವಿಸಿದ್ದಪ್ಪ ಗೆದಗೇರಿ ಅವರಿಗೆ ಸೇರಿದ ಮೇವಿನ ಬಣವೆಗೆ ಆಕಸ್ಮಿಕ ಬೆಂಕಿ ಬಿದ್ದ ಕಾರಣ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಹಾಗೂ ಭಾಜಪ ಜಿಲ್ಲಾ ಉಪಾಧ್ಯಕ್ಷ ಅರವಿಂದಗೌಡ ಪೊಲೀಸ್ ಪಾಟೀಲ್ ಅವರು ಶನಿವಾರ ರೈತನ ಮನೆಗೆ ಭೇಟಿ ನೀಡಿ ಆರ್ಥಿಕ ಸಹಾಯ ನೀಡಿ ಸಾಂತ್ವನ ಹೇಳಿದರು.

ನಂತರ ಪತ್ರಿಕೆಯೊಂದಿಗೆ ಮಾತನಾಡಿ, ಇಂದಿನ ರಾಜ್ಯ ಸರ್ಕಾರ ರೈತರ ಬಗ್ಗೆ ಕಾಳಜಿವಹಿಸಬೇಕು. ಬೇಸಿಗೆ ಬಿಸಿಲಿನಲ್ಲಿ ಹಾನಿಗೆ ಒಳಗಾದ ರೈತರ ಬಣವಿಗಳಿಗೆ ಆದಷ್ಟು ಬೇಗ ಪರಿಹಾರ ಕೊಡಲು ಮುಂದಾಗಬೇಕು ಎಂದರು.

ಗ್ರಾಮದ ಹಿರಿಯರು ಮತ್ತು ಪ್ರಥಮ ದರ್ಜೆ ಗುತ್ತಿಗೆದಾರ ವಿರೇಶ ಮ್ಯಾಗಳಮಠ, ಗ್ರಾಮದ ದಳಪತಿಗಳಾದ ಶಂಕರಗೌಡ ಪಾಟೀಲ್, ಶಂಕ್ರಪ್ಪ ಹರಿಜನ, ಮಾಜಿ ಗ್ರಾಪಂ ಸದಸ್ಯರಾದ ಶರಣಪ್ಪ ಹಾದಿಮನಿ, ದೇವಪ್ಪ ಗುರಿಕಾರ, ಸಣ್ಣೀರಪ್ಪ ಹಾದಿಮನಿ, ಶಿವ ಬಸಪ್ಪ ಸಣ್ಣಖಿರಡದ, ಶರಣಪ್ಪ ತಳವಾರ, ಮುತ್ತಪ್ಪ ತಳವಾರ, ಭರಮಪ್ಪ ಗುರಿಕಾರ, ಯುವ ಮುಖಂಡ ಹಿರೇಹನಮಪ್ಪ ಬೊಮ್ಮನಾಳ ಸೇರಿದಂತೆ ಗ್ರಾಮದ ಯುವಕರು ಉಪಸ್ಥಿತರಿದ್ದರು.

ಆಂಜನೇಯ ದೇಗುಲ ಹುಂಡಿ ಹಣ ಎಣಿಕೆ

ಯಲಬುರ್ಗಾ: ತಾಲೂಕಿನ ಸುಕ್ಷೇತ್ರ ಚಿಕ್ಕವಂಕಲಕುಂಟಾ ಆಂಜನೇಯ ಸ್ವಾಮಿ ದೇವಾಲಯ ಹುಂಡಿ ಎಣಿಕೆ ದೇವಸ್ಥಾನದ ಪ್ರಾಂಗಣದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ಹುಂಡಿ ಎಣಿಕೆ ಮಾಡಲಾಯಿತು. ಹುಂಡಿಯಲ್ಲಿ ಒಟ್ಟು 3.84.444 ನಗದು ಸಂಗ್ರಹವಾಗಿದೆ. ಯಾವುದೇ ಬಗೆಯ ಚಿನ್ನ ಅಥವಾ ಬೆಳ್ಳಿ ಆಭರಣ ಅಥವಾ ವಿದೇಶಿ ಕರೆನ್ಸಿ ಸಿಕ್ಕಿಲ್ಲ ಎಂದು ಉಪ ತಹಶೀಲ್ದಾರ ವಿಜಯ ಕುಮಾರ ಗುಂಡೂರು ತಿಳಿಸಿದ್ದಾರೆ.

ಹುಂಡೆ ಎಣಿಕೆ ಕಾರ್ಯದಲ್ಲಿ ದೇವಸ್ಥಾನದ ವ್ಯವಸ್ಥಾಪಕ ಚಂದಪ್ಪ ಕುರಿ, ಕಂದಾಯ ನಿರೀಕ್ಷಕ ಶರಣಪ್ಪ, ಗ್ರಾಮ ಆಡಳಿತಾಧಿಕಾರಿ ಶರಣಪ್ಪಗೌಡ ನಿಲೋಗಲ್, ಮಾರುತಿ ಪೂಜಾರ, ಪ್ರಕಾಶ ಮುಖಂಡರಾದ ಹನುಮಗೌಡ ಗೌಡ್ರ, ಮಾರುತಿ ಪುಟಗಮರಿ, ಕುಂಟೇಪ್ಪ ಪೂಜಾರ, ಹನುಮಂತಪ್ಪ ತಳವಾರ ಸೇರಿದಂತೆ ಮತ್ತಿತರರು ಇದ್ದರು.



ಬಹುಮಾನದ ಹಣ ಬಡ ಮಕ್ಕಳಿಗೆ ಖರ್ಚು



ಕಾರಟಗಿ: ಟೂರ್ನಮೆಂಟ್ ಗೆಲುವಿನ ಬಹುಮಾನದ ಹಣದಲ್ಲಿ ಬಡ ವಿದ್ಯಾರ್ಥಿಗಳಿಗೆ 6 ಸೈಕಲ್ ಖರೀದಿಸಿ ಕೊಡುವ ಮೂಲಕ ಕ್ರಿಕೆಟ್ ಆಟಗಾರರು ಮಾದರಿ ಆಗಿದ್ದಾರೆ. ತಾಲೂಕಿನ ಉಳೆನೂರು ಗ್ರಾಮದ ಯುವಕರು ಕಾರ್ಯಕ್ಕೆ ಗ್ರಾಮಸ್ಥರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಕಾರಟಗಿ ತಾಲೂಕಿನ ಉಳೆನೂರು ಗ್ರಾಮದಲ್ಲಿ ಮಾ. 21 ಮತ್ತು 22 ರಂದು ಶ್ರೀ ಗಜಾನನ ಹಿಂದೂ ಯುವ ಮಂಡಳಿಯಿಂದ ಪ್ರಥಮ ವರ್ಷದ ಕ್ರಿಕೆಟ್ ಟೂರ್ನ್ ಮೆಂಟ್ ಆಯೋಜನೆ ಮಾಡಲಾಗಿತ್ತು. ಟೂರ್ನಮೆಂಟ್‌ನಲ್ಲಿ ಉಳೆನೂರು ಗ್ರಾಮದ ಶ್ರೀ ಗಜಾನನ ಹಿಂದೂ ಯುವಕ ಮಂಡಳಿ ಕ್ರಿಕೆಟ್ ತಂಡ 2ನೇ ಬಹುಮಾನ ಪಡೆದಿತ್ತು. ಇದರ ಭಾಗವಾಗಿ ಬಂದಿದ್ದ 10 ಸಾವಿರ ರೂ. ಬಹುಮಾನದ ಹಣದ ಜೊತೆಗೆ 20 ಸಾವಿರ ರೂ. ಸೇರಿಸಿ, ಪ್ರತಿ ಒಂದು ಸೈಕಲ್ ಗೆ 5,100 ರೂ. ಬೆಲೆಯ ಸೈಕಲ್ ಖರೀದಿಸಿ ಬಡ ಮಕ್ಕಳಿಗೆ ಕೊಟ್ಟಿದ್ದಾರೆ.

ಬಸ್ ವ್ಯವಸ್ಥೆ ಇಲ್ಲ: ಬಸ್ ಸೌಲಭ್ಯ ಇಲ್ಲದ್ದರಿಂದ ಎರೆಕ್ಯಾಂಪ್ ಗ್ರಾಮದಿಂದ ಕಾಲು ನಡಿಗೆಯಲ್ಲಿ ಉಳೆನೂರು ಗ್ರಾಮದ ಶಾಲೆಗೆ ಬರುವ 6 ಜನ ಬಡ ವಿದ್ಯಾರ್ಥಿಗಳಿಗೆ ಸೈಕಲ್ ವಿತರಿಸಿದ್ದಾರೆ. ಯುವಕರ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತವಾಗಿದೆ. ಶ್ರೀ ಗಜಾನನ ಹಿಂದೂ ಯುವ ಮಂಡಳಿ ಕಾರ್ಯಕರ್ತರು, ಉಳೆನೂರು ಗ್ರಾಮದ ಮುಖಂಡರು, ಯುವಕರು ಇದ್ದರು.

ಮಾ.31ಕ್ಕೆ ಛತ್ರಪತಿ ಶಿವಾಜಿ ಜಯಂತ್ಯುತ್ಸವ

ಲಿಂಗಸಗೂರು: ತಾಲೂಕ ಕ್ಷತ್ರೀಯ ಸಮಾಜ ಮತ್ತು ಹಿಂದೂಪರ ಸಂಘಟನೆಗಳ ಸಹಯೋಗದಲ್ಲಿ ಮಾ.31ರಂದು ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ಮಾಡಲಾಗುವುದು ಎಂದು ಕ್ಷತ್ರೀಯ ಸಮಾಜದ ಅಧ್ಯಕ್ಷ ಸತ್ಯನಾರಾಯಣ ಸಿಂಗ್ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.31ರಂದು ಲಕ್ಷ್ಮೀ ದೇವಸ್ಥಾನದಿಂದ ಬಸ್‌ನಿಲ್ದಾಣ ವೃತ್ತ ಗಡಿಯಾರ ಚೌಕ್ ಮೂಲಕ ದೊಡ್ಡ ಹನುಮಾನ ಮಂದಿರದವರೆಗೆ ಶಿವಾಜಿ ಮಹಾರಾಜರ ಭವ್ಯ ಮೆರವಣಿಗೆ ಮಾಡಲಾಗುವುದು. ಸಂಜೆ 5ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಅಮರೇಶ್ವರ ಗುರುಗಜದಂಡ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಲಿದ್ದು, ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಬೀದರನ ವಕೀಲ ಈಶ್ವರ್‌ಸಿಂಗ್ ದಿಕ್ಪೂಚಿ ಭಾಷಣ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಶಾಸಕ ಮಾನಪ್ಪ ವಜ್ಜಲ್, ಕೇಂದ್ರ ಮಾಜಿ ಸಚಿವ ಬಸವರಾಜ ಪಾಟೀಲ್, ಅನ್ವರಿ ಮಾಜಿ ಸಚಿವ ಅಮರೇಗೌಡ ಪಾಟೀಲ್, ಬಯ್ಯಾಪುರ ಎಂಎಲ್‌ಸಿ ಶರಣಗೌಡ ಪಾಟೀಲ್, ಬಯ್ಯಾಪುರ ಮಾಜಿ ಶಾಸಕ ಡಿ.ಎಸ್.ಹೂಲಗೇರಿ, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಪಾಮಯ್ಯ ಮುರಾರಿ, ನಯೋಪ್ರಾ ಅಧ್ಯಕ್ಷ ಭೂಪನಗೌಡ ಪಾಟೀಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಗೌತಮ ಕುಮಾರ ಚವ್ಹಾಣ, ದುರ್ಗಾಸಿಂಗ್, ರವಿಕುಮಾರ ಮಸ್ಕಿ, ಚಂದಪ್ಪ ಕಟ್ಟಿಮನಿ, ಮೋಹನಬಾಬು, ವಾಸು ಹಟ್ಟಿ ಉಪಸ್ಥಿತರಿದ್ದರು.





ಬಳ್ಳಾರಿ: ನಗರದಲ್ಲಿ ಶ್ರೀರಾಮನವಮಿ ಹಬ್ಬದ ನಿಮಿತ್ತ ಶುಕ್ರವಾರ ಹಮ್ಮಿಕೊಂಡಿದ್ದ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಅವರು ಶ್ರೀರಾಮ ಭಕ್ತರಿಗೆ ಪ್ರಸಾದ ವಿತರಿಸಿ ಭಕ್ತಿ ಸಮರ್ಪಿಸಿದರು.

ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣಗೆ ಮನವಿ

ಬಳ್ಳಾರಿ: ಮೈಸೂರು-ಅಜ್ಮೀರ್ ರೈಲು ಈ ಹಿಂದೆ ಚಿತ್ರದುರ್ಗ, ರಾಯದುರ್ಗ, ಬಳ್ಳಾರಿ, ಹೊಸಪೇಟೆ ಮೂಲಕ ವಾರದಲ್ಲಿ ಒಂದು ದಿನ ಸಂಚರಿಸುತ್ತಿತ್ತು. ಇದೆ ರೈಲನ್ನು ದಾವಣಗೆರೆ ಮತ್ತು ಕೊಟ್ಟೂರ ಮಾರ್ಗದ ಮೂಲಕ ವಾರದಲ್ಲಿ ಒಂದು ದಿನ ಸಂಚಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ರೈಲ್ವೆ ಕ್ರಿಯಾ ಸಮಿತಿ ಪದಾಧಿಕಾರಿಗಳು, ನವದೆಹಲಿಯಲ್ಲಿ ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

ರೈಲ್ವೆ ಕ್ರಿಯಾ ಸಮಿತಿಯ ನಿಯೋಗ ನವದೆಹಲಿಯ ಗೃಹ ಕಚೇರಿಯಲ್ಲಿ ಭೇಟಿ ಮಾಡಿ, ಬಳ್ಳಾರಿ, ಸಿರುಗುಪ್ಪ, ಸಿಂಧನೂರು, ರೈಲ್ವೆ ಮಾರ್ಗದ ಪ್ರಧಾನ ಬೇಡಿಕೆಗೆ ಸ್ಪಂದಿಸಿ, ಈ ಮಾರ್ಗದ ಆರಂಭಕ್ಕೆ ಹಾಗೂ ಬಳ್ಳಾರಿ ಮಾರ್ಗದಲ್ಲಿ ಒಂದೇ ಭಾರತ್ ಇಲ್ಲವೇ ಸೂಪರ್ ಫಾಸ್ಟ್ ಜನ ಶತಾಬ್ದಿ ಅಥವಾ ಇಂಟರ್ ಸಿಟಿ ರೈಲು ಆರಂಭಿಸುವಂತೆ ರೈಲ್ವೆ ಇಲಾಖೆಗೆ ಶಿಫಾರಸ್ಸು ಮಾಡಿದ ಹಿನ್ನೆಲೆಯಲ್ಲಿ ಸಚಿವರನ್ನು ಕ್ರಿಯಾ ಸಮಿತಿ ನಿಯೋಗ ಅತ್ಯಂತ ಪ್ರೀತಿಯ ಪೂರ್ವಕವಾಗಿ ಸನ್ಮಾನಿಸಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿಯ ಅಧ್ಯಕ್ಷ ಕೆ.ಎಂ. ಮಹೇಶ್ವರ ಸ್ವಾಮಿ, ಸಿರುಗುಪ್ಪ ರೈಸ್ ಮಿಲ್ ಮಾಲೀಕರ ಸಂಘದ ಅಧ್ಯಕ್ಷ ಎನ್.ಜಿ.ಬಸವರಾಜಪ್ಪ, ಸಿರುಗುಪ್ಪ ಎಪಿಎಂಸಿ ಮಾಜಿ ನಿರ್ದೇಶಕ ಪಲ್ಲೇದ್ ಯೋಗರಾಜ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಜಿಲ್ಲಾ ಕಾರ್ಯದರ್ಶಿ ಕೋಳೂರು ಚಂದ್ರಶೇಖರ ಗೌಡ, ಸಿರುಗುಪ್ಪ ವಿಷ್ಣುವಿಲಾಸ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ನಿರ್ದೇಶಕ ಕೊಸಗಿ ನಾಗರಾಜ್ ಶೆಟ್ಟಿ ಅವರ ನೇತೃತ್ವದ ನಿಯೋಗ ಮಂತ್ರಿಗಳನ್ನು ಸನ್ಮಾನಿಸಿ, ಗೌರವಿಸಿ,ಅಭಿನಂದಿಸಿದರು.



ಬಳ್ಳಾರಿ: ಮೈಸೂರು-ಅಜ್ಮೀರ್ ರೈಲು ಈ ಹಿಂದೆ ಚಿತ್ರದುರ್ಗ, ರಾಯದುರ್ಗ, ಬಳ್ಳಾರಿ, ಹೊಸಪೇಟೆ ಮೂಲಕ ವಾರದಲ್ಲಿ ಒಂದು ದಿನ ಸಂಚರಿಸುತ್ತಿತ್ತು. ಇದೆ ರೈಲನ್ನು ದಾವಣಗೆರೆ ಮತ್ತು ಕೊಟ್ಟೂರ ಮಾರ್ಗದ ಮೂಲಕ ವಾರದಲ್ಲಿ ಒಂದು ದಿನ ಸಂಚಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ರೈಲ್ವೆ ಕ್ರಿಯಾ ಸಮಿತಿ ಪದಾಧಿಕಾರಿಗಳು, ನವದೆಹಲಿಯಲ್ಲಿ ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

ಕಿರುಸುದ್ದಿ

ಶಾಲಾಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮ



ಗಾದಿಗನೂರು: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾಡಳಿತ, ಜಿಪಂ, ವಿಜಯನಗರ ಹಾಗೂ ಕಲಿಕೆ-ಟಾಟಾ ಟ್ರಸ್ಟ್ ಸಹಯೋಗದೊಂದಿಗೆ ಜಿಲ್ಲೆಯಲ್ಲಿ ಅನುಷ್ಠಾನವಾಗುತ್ತಿರುವ ಶಾಲಾಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದ ಶಾಲಾಪೂರ್ವ ಶಿಕ್ಷಣ ಚಟುವಟಿಕೆಗಳನ್ನು ವೀಕ್ಷಿಸಲು ಗುರುವಾರ ಟಾಟಾ ಟ್ರಸ್ಟ್‌ನಿಂದ ಶಾಲಾಪೂರ್ವ ಶಿಕ್ಷಣದ ತಜ್ಞೆ ಮಾಳವಿಕ, ಕಲಿಕೆ-ಟಾಟಾ ಟ್ರಸ್ಟ್‌ನ ಶಾಲಾಪೂರ್ವ ಶಿಕ್ಷಣದ ಕಾರ್ಯಕ್ರಮದ ಮುಖ್ಯಸ್ಥೆ ಡಾ. ಚಿತ್ಕಲಾಂಬ ರವರು ಹೊಸಪೇಟೆ ಯೋಜನೆಯ ಗಾದಿಗನೂರು 4ನೇ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಶಾಲಾಪೂರ್ವ ಶಿಕ್ಷಣ ಚಟುವಟಿಕೆಗಳನ್ನು ಅವಲೋಕಿಸಿದರು.

ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಗಂಗಪ್ಪ ಹಾಗೂ ಮೇಲ್ವಿಚಾರಕರೊಂದಿಗೆ ಕಾರ್ಯಕ್ರಮದ ಅನುಷ್ಠಾನದ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಶಾಲಾಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದ ಅಧಿಕಾರಿ ಕೊಟ್ರೇಶ ಎ. ವೈ., ಹಾಗೂ ಮೇಲ್ವಿಚಾರಕಿ ಲಕ್ಷ್ಮೀದೇವಿ, ಅಂಗನವಾಡಿ ಶಿಕ್ಷಕಿ ಸುರೇಖಾ ಆರ್.ಕೆ. ಉಪಸ್ಥಿತರಿದ್ದರು.

ಮುಳ್ಳು ಗದ್ದುಗೆ ಉತ್ಸವ



ಹಗರಿಬೊಮ್ಮನಹಳ್ಳಿ: ತಾಲೂಕಿನ ಬಂಡಿಹಳ್ಳಿ ಬಳಿ ಇರುವ ಮೂತ್ಕೂರು ಗ್ರಾಮದಲ್ಲಿ ಮುಳ್ಳು ಗದ್ದುಗೆ ಉತ್ಸವ ವಿಜೃಂಭಣೆಯಿಂದ ಜರುಗಿತು. ಮೂತ್ಕೂರು ಗ್ರಾಮದಲ್ಲಿ ಶುಕ್ರವಾರ ಶ್ರೀ ರಾಮನವಮಿ ನಿಮಿತ್ತ ಪ್ರತಿ ವರ್ಷದ ಪದ್ಧತಿಯಂತೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಮುಳ್ಳು ಗದ್ದುಗೆ ಉತ್ಸವ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಮೂತ್ಕೂರು ಗ್ರಾಮದ ಗುರು ಹಿರಿಯರು ನೂರಾರು ಯುವಕರು ಮುಳ್ಳು ಗದ್ದುಗೆ ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಸಿಎಂ ಪದಕಕ್ಕೆ ಆಯ್ಕೆ

ಬಳ್ಳಾರಿ: 2025ನೇ ಸಾಲಿನ ಮುಖ್ಯಮಂತ್ರಿಗಳ ಪದಕಕ್ಕೆ ಜಿಲ್ಲೆಯ ಇಬ್ಬರು ಪೊಲೀಸ್ ಅಧಿಕಾರಿಗಳು ಭಾಜನರಾಗಿದ್ದಾರೆ. ಬಳ್ಳಾರಿಯ ಸಂಚಾರಿ ಪೊಲೀಸ್ ಠಾಣೆಯ ಪಿಎಸ್‌ಐ ಕಾಳಿಂಗ.ಎ ಹಾಗೂ ಸಿರಗುಪ್ಪ ಪೊಲೀಸ್ ಠಾಣೆಯ ಪಿಎಸ್‌ಐ ಪರಶುರಾಮ ಅವರು ಪದಕಕ್ಕೆ ಆಯ್ಕೆಯಾಗಿದ್ದು, ಅವರ ಸೇವೆ, ನಿಷ್ಠೆ, ಕರ್ತವ್ಯದಲ್ಲಿ ಪ್ರಾಮಾಣಿಕತೆ ಮತ್ತು ಸಾರ್ವಜನಿಕರ ಭದ್ರತೆಗೆ ನೀಡಿದ ಅಪಾರ ಕೊಡುಗೆಗಳನ್ನು ಗುರುತಿಸಿದ ಸರ್ಕಾರ ಈ ಪ್ರತಿಷ್ಠಿತ ಪದಕ ನೀಡಿ ಗೌರವಿಸಲಾಗುತ್ತಿದೆ. ಇಬ್ಬರು ಅಧಿಕಾರಿಗಳ ಈ ಸಾಧನೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ. ಪನ್ನೇಕರ್ ಅವರು ಅಭಿನಂದನೆ ಸಲ್ಲಿಸಿ, ಮುಂದಿನ ದಿನಗಳಲ್ಲಿಯೂ ಉತ್ತಮ ಸೇವೆ ಸಲ್ಲಿಸುವಂತೆ ಶುಭ ಹಾರೈಸಿದ್ದಾರೆ.




ನಿಧನ ಸುದ್ದಿ

ಬೆಣಕಲ್ಲು ಬುಳ್ಳಮ್ಮ

ಹಗರಿಬೊಮ್ಮನಹಳ್ಳಿ: ತಾಲೂಕಿನ ಬೆಣ್ಣಕಲ್ಲು ಗ್ರಾಮದ ಬುಳ್ಳಮ್ಮ (84) ಎಂಬುವರು ಗುರುವಾರ ರಂದು ಅನಾರೋಗ್ಯದಿಂದ ನಿಧನ ಹೊಂದಿದ್ದಾರೆ. ಬೆಣಕಲ್ಲು ಗ್ರಾಮದಲ್ಲಿ ಅಂತ್ಯ ಸಂಸ್ಕಾರ ಜರುಗಿತು.



ದೇವರ ದಾಸಿಮಯ್ಯ ಜಯಂತಿ | ಎಡಿಸಿ ರಮೇಶ ಕೋಲಾರ ಅಭಿಮತ

ಶರಣರ ವಚನಗಳು ನಮಗೆ ದಾರಿದೀಪ

ಯಾದಗಿರಿ: ದೇವರ ದಾಸಿಮಯ್ಯ ಅವರು ಸುಮಾರು 10ನೇ ಶತಮಾನ ಆದ್ಯ ವಚನಕಾರಕರು, ಸುರಪುರ ಜಿಲ್ಲೆಯ ಮುದನೂರಿನವರು, ರಾಮನಾಥ ಸ್ವಾಮಿಯ ಆರಾಧಕರಾಗಿದ್ದರು ಎಂದು ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಇಲ್ಲಿನ ಸರ್ಕಾರಿ ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಯೋಜಿಸಿದ್ದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ದೇವರ ದಾಸಿಮಯ್ಯ ವಿಶ್ವದ ಪ್ರಥಮ ವಚನಕಾರ. ಅವರು ರಾಮನಾಥ ಎಂಬ ಹೆಸರಲ್ಲಿಯೇ 176 ವಚನಗಳನ್ನು ರಚಿಸಿದ್ದಾರೆ ಎಂದರು.

ದೇವರ ದಾಸಿಮಯ್ಯನವರು ತಮ್ಮ ಆಧ್ಯಾತ್ಮ ಸಿರಿವಂತಿಕೆಯಿಂದ ಮೆರೆದು, ಶಿವನ ಹೆಜ್ಜೆಯಲ್ಲಿ ಹೆಜ್ಜೆಯನಿಟ್ಟು, ತಮ್ಮ ಹೆಜ್ಜೆ ಪಾಡುಗಳನ್ನು ನಮಗಾಗಿ ಉಳಿಸಿಹೋಗಿದ್ದಾರೆ. ಇವುಗಳನ್ನು ಅನುಸರಿಸಿ ನಡೆದರೆ ನಮ್ಮೆಲ್ಲರ ಬಾಳು ಬೆಳಕಾಗುವುದು ಎಂದು ತಿಳಿಸಿದರು.

ವಿಶೇಷ ಉಪನ್ಯಾಸ ನೀಡಿದ ಉಪನ್ಯಾಸಕಿ ಡಾ.ಜಯದೇವಿ ಗಾಯಕವಾಡ, ದೇವರ ದಾಸಿಮಯ್ಯ ತಮ್ಮ ಯೌವನಾವಸ್ಥೆಯಲ್ಲಿ ಹೆತ್ತವರ ಇಚ್ಛೆಯಂತೆ, ಶಿವಪುರದ ದುಗ್ಗಳೆಯನ್ನು ವರಿಸುತ್ತಾರೆ, ಆಕೆಯೂ ಸಹ ಮಹಾನ್ ಸಾಧ್ವಿಮಣಿ. ದಂಪತಿಗಳಿಬ್ಬರೂ ಸಜ್ಜನರು, ದೈವಭಕ್ತರು, ಧಾರಾಳತನವುಳ್ಳವರೂ ಆಗಿದ್ದು, ಯಾರೇ ಕಷ್ಟದಲ್ಲಿದ್ದರೂ ತಮ್ಮ ಶಕ್ತಿ ಮೀರಿ ಸಹಾಯ ಮಾಡುತ್ತಿದ್ದರು ಎಂದರು.



> **ಪ್ರತಿಯೊಬ್ಬ ಮಾನವನು, ಉತ್ತಮ ಸಂಸ್ಕೃತಿ, ಧರ್ಮ, ಆಚಾರವಾಗಿ ನಡೆಸಬೇಕೆಂಬ ಸಂದೇಶವನ್ನು ತಮ್ಮ ವಚನಗಳ ಮೂಲಕ ದಾಸಿಮಯ್ಯ ಪ್ರಪಂಚಕ್ಕೆ ತಿಳಿಸಿ ಹೇಳಿದರು. ಇಂತಹ ಮಹಾಪುರುಷನನ್ನು ಪಡೆದ ಸಮಾಜವೇ ಧನ್ಯ.**
>
> ■ **ರಮೇಶ ಕೋಲಾರ, ಅಪರ ಜಿಲ್ಲಾಧಿಕಾರಿ**

ದಕ್ಷಿಣ ಭಾರತದಲ್ಲಿ ಹೆಸರಾದ ಶರಣರಿಗಿಂತಲೂ ಮೊಟ್ಟ ಮೊದಲ ವಚನಕಾರರು. ಇವರ ವಚನಗಳು ಅರ್ಥೈಸಿಕೊಳ್ಳಲು ಬಹಳ ಸರಳವಾಗಿದ್ದು, ಸಮಾಜಕ್ಕೆ ವಿಶೇಷವಾದ ಧಾರ್ಮಿಕ ಪ್ರಜ್ಞೆಯ ಸ್ಫೂರ್ತಿಯ ಚಿಲುಮೆಯಾಗಿವೆ ಎಂದರು.

ತಮ್ಮ ದಿನನಿತ್ಯದ ಜೀವನಕ್ಕೆ ಸಂಭಂದಿಸಿದ ವಿಷಯಗಳ ಬಗ್ಗೆಯೆ ರಚಿಸಿದ ದೇವರ ದಾಸಿಮಯ್ಯ ಅವರ ವಚನಗಳು ತುಂಬಾ ಸರಳವಾಗಿ ಮನಸೂರೆಗೊಳ್ಳುತ್ತವೆ ಎಂದು ಹೇಳಿದರು.

ಯುಡಾ ಅಧ್ಯಕ್ಷ ಬಾಬುರಾವ ಕಾಡ್ಲೂರ್, ದೇವರ ದಾಸಿಮಯ್ಯ ಜಯಂತಿ ಸಮಿತಿ ಗೌರವಾಧ್ಯಕ್ಷ ಬಸವರಾಜ ಹುನಗುಂದ, ಅಧ್ಯಕ್ಷ ವೀರಸಂಗಪ್ಪ ಹಾವೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ಉತ್ತರಾದೇವಿ ಮಠಪತಿ ಇದ್ದರು.

ಬೂದಯ್ಯ ಹಿರೇಮಠ ಪ್ರಾರ್ಥಿಸಿದರು. ಡಾ.ಪರಶುರಾಂ ನಿರೂಪಿಸಿ, ಸ್ವಾಗತಿಸಿದರು.

ಎಲ್ಲ ಕ್ಷೇತ್ರದಲ್ಲೂ ಮಹಿಳೆ ಸಾಧನೆ: ಡಾ.ಪ್ರಜ್ಞಾ

ಸಿರುಗುಪ್ಪ: ಸಮಾಜದ ಕಟ್ಟುಪಾಡುಗಳ ಹೊರತಾಗಿಯೂ ಕೂಡ ಈಗಿನ ಆಧುನಿಕ ದಿನಗಳಲ್ಲಿ ಮಹಿಳೆ ಸಾಧನೆಯ ಶಿಖರವನ್ನು ಮುಟ್ಟುತ್ತಿದ್ದಾಳೆ. ಮಹಿಳೆಯರಿಗೆ ಎಲ್ಲ ಕ್ಷೇತ್ರದಲ್ಲಿಯೂ ಅವಕಾಶ ಕೊಡುವುದು ಮುಂದಿನ ಬೆಳವಣಿಗೆಗೆ ದಾರಿದೀಪ ಎಂದು ಬಳ್ಳಾರಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜ್ ಪ್ರಾಚಾರ್ಯ ಡಾ.ಪ್ರಜ್ಞಾ ಕೆ.ವಿ. ಹೇಳಿದರು.

ನಗರದ ಟಿ.ಎಚ್.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿ, ಇಂದು ಮಹಿಳೆಯರ ಸಾಧನೆ ಎಲ್ಲ ಕ್ಷೇತ್ರಗಳಲ್ಲಿಯೂ ಇದೆ. ಪ್ರಮುಖವಾಗಿ ತಾಂತ್ರಿಕ, ಸಂಶೋಧನಾ ಹಾಗೂ ಉತ್ಪಾದನಾ ಕ್ಷೇತ್ರಗಳಲ್ಲಿ ಮಹಿಳೆಯರು ದೇಶಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ತಮ್ಮ ಬುದ್ಧಿಶಕ್ತಿಯಿಂದ ಅದೆಷ್ಟೋ ಸಮಸ್ಯೆಗಳಿಗೆ ಪರಿಹಾರಗಳನ್ನು ತಂದು ಕೊಟ್ಟಿದ್ದಾರೆ ಎಂದರು.

ಕರ್ನಾಟಕ ರಾಜ್ಯ ಸಾವಿತ್ರಿ ಬಾಯಿಪುಲೆ ಶಿಕ್ಷಕಿಯರ ಸಂಘದ ರಾಜ್ಯ ಕೋಶಾಧ್ಯಕ್ಷೆ ದೊಡ್ಡ ಬಸಮ್ಮ ಮಾತನಾಡಿ, ಇತಿಹಾಸ ಮತ್ತು ಸಮಕಾಲೀನ ಸಮಾಜದಲ್ಲಿನ ಘಟನೆಗಳಿಗೆ ಮಹಿಳೆಯರ ಕೊಡುಗೆಗಳನ್ನು ಎತ್ತಿ ತೋರಿಸುವ ದಿನವೇ ಮಾ. ೮ರ ಅಂತಾರಾಷ್ಟ್ರೀಯ ಮಹಿಳಾ ದಿನ. ಹೆಣ್ಣು ಸಮಾಜದ ಕಣ್ಣು, ಬದುಕಿನ ಎಲ್ಲಾ ಸವಾಲಗಳನ್ನು ಎದುರಿಸಿ ನಿಲ್ಲುವ ಗಟ್ಟಿಗಿತ್ತಿ ಆಕೆ. ಎಲ್ಲಾ ಕಷ್ಟದ ದಿನಗಳನ್ನು ಎದುರಿಸಿ ಇಂದು ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಛಾಪು ಮೂಡಿಸಿದ ಆಕೆಯ ಸ್ಥೈರ್ಯದ ವಿವರಣೆಗೆ ಬೇರೆ ಪದಗಳು ಬೇಕಿಲ್ಲ ಎಂದರು.

ಹೆಣ್ಣಿಲ್ಲದೆ ಜೀವವಿಲ್ಲ, ಹೆಣ್ಣಿಲ್ಲದೆ ಜೀವನವಿಲ್ಲ, ಹೆಣ್ಣಿನಿಂದಲೇ ಬಾಳು ಬಂಗಾರ, ಹೆಣ್ಣಿಲ್ಲದ ಬದುಕು ನಿಸ್ಸಾರ, ಹೆಣ್ಣನ್ನು ಗೌರವಿಸಬೇಕು. ದೇಶಕ್ಕೆ ಕೊಡುಗೆ ನೀಡಿದ, ಸಮಾಜಕ್ಕೆ ಮಾದರಿಯಾದ ಮಹಿಳೆಯರ ಸಾಧನೆ ನೆನೆದು ಗೌರವಿಸಬೇಕು ಎಂದರು.

ಕಾಲೇಜಿನ ಪ್ರಭಾರಿ ಪ್ರಾಚಾರ್ಯ ಕೃಷ್ಣಪ್ಪ, ಹಚ್ಚೊಳ್ಳಿ ಪ್ರಾದೇಶಿಕ ಅರಣ್ಯ ಉಪ ವಲಯ ಅರಣ್ಯಾಧಿಕಾರಿ ವೈ.ಜ್ಯೋತಿ ಮಾತನಾಡಿದರು. ವಿವಿಧ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಹಚ್ಚೊಳ್ಳಿ ಪ್ರಾದೇಶಿಕ ಅರಣ್ಯ ಉಪ ವಲಯ ಅರಣ್ಯಾಧಿಕಾರಿ ವೈ. ಜ್ಯೋತಿ, ಬಸಮ್ಮ ಹಾಗೂ ಡಾ.ಪ್ರಜ್ಞಾ ಕೆ.ವಿ. ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಹಾಯಕ ಪ್ರಾಧ್ಯಾಪಕ ಡಾ.ಕೆ. ಎಂ.ಚಂದ್ರಕಾಂತ, ಉಪನ್ಯಾಸಕರಾದ ಡಾ.ಶಾಲಿನಿ ವಿ., ಡಾ.ಅರ್ಪಣಾ ಎಸ್. ಆರ್., ಡಾ.ಚಂದ್ರಮ್ಮ ಎಸ್., ಮಮತಾ ಕೆ., ರೇಣುಕಾ ಭಾಗವಹಿಸಿದ್ದರು.



ನೆಮ್ಮದಿ, ಉನ್ನತಿಗೆ ಧರ್ಮದ ದಿಕ್ಸೂಚಿ ಮುಖ್ಯ

ಹೂವಿನಹಡಗಲಿ: ತಾಲೂಕಿನ ಮಾನಿಹಳ್ಳಿ ಪುರವರ್ಗ ಮಠದಲ್ಲಿ ಶುಕ್ರವಾರ 14ನೇ ವರ್ಷದ ಶ್ರೀ ಮರುಳ ಸಿದ್ದೇಶ್ವರ ಜಾತ್ರಾ ಮಹೋತ್ಸವ ಹಾಗೂ ಧರ್ಮ ಜಾಗೃತಿ ಸಮಾರಂಭ ನಡೆಯಿತು. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಬಾಳೆಹೊನ್ನೂರು ರಂಭಾಪುರಿ ಜಗದ್ಗುರುಗಳು ಮತ್ತು ಉಜ್ಜಯಿನಿ ಜಗದ್ಗುರುಗಳ ಸಾನಿಧ್ಯದಲ್ಲಿ ಗುರು ಮರುಳಸಿದ್ದೇಶ್ವರ ಸ್ವಾಮಿ ಹಾಗೂ ಧರ್ಮ ಜಾಗೃತಿ ಸಮಾರಂಭ ನಡೆಯಿತು.

ರಂಭಾಪುರಿ ಶ್ರೀಗಳು ಮಾತನಾಡಿ, ಧರ್ಮಾಚರಣೆಯ ಮಹತ್ವ ಜೀವನದ ನೆಮ್ಮದಿ ಮತ್ತು ಉನ್ನತಿಗೆ ಧರ್ಮದ ದಿಕ್ಸೂಚಿ ಮುಖ್ಯ. ಭೌತಿಕ ಬದುಕಿಗೆ ಧರ್ಮಪ್ರಜ್ಞೆ ಅತ್ಯವಶ್ಯಕ.

ಸಮಾಜ ಸಂಘಟನೆ: ಜಾತಿ, ಧರ್ಮದ ವಿಚಾರಗಳು ಅತಿರೇಕಕ್ಕೆ ಹೋಗಬಾರದು. ಸಮಾಜಗಳ ನಡುವಿನ ಸಂಘರ್ಷ ಪ್ರಗತಿಗೆ ಅಡ್ಡಿ ಮತ್ತು ಒಡೆದ ಮನಸ್ಸನ್ನು ಬೆಸೆಯುವುದೇ ನಿಜವಾದ ಧರ್ಮ ಎಂದು ತಿಳಿಸಿದರು.

ರಾಷ್ಟ್ರ ಮತ್ತು ಸಂಸ್ಕೃತಿ ರಕ್ಷಣೆ: ಭಾರತೀಯ ಸನಾತನ ಸಂಸ್ಕೃತಿಯನ್ನು ಉಳಿಸಿ, ದೇಶ ಹಾಗೂ ಧರ್ಮದ ರಕ್ಷಣೆಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು.

ಶಿಕ್ಷಣ ಮತ್ತು ವಿಜ್ಞಾನ: ವಿಜ್ಞಾನವು ಸಾತ್ವಿಕ ಧರ್ಮದೊಂದಿಗೆ ಹೆಜ್ಜೆ ಹಾಕಿದಾಗ ಮಾತ್ರ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯ. ಜಾತ್ರಾ ಮಹೋತ್ಸವಗಳ ಮೂಲಕ ಜನರಲ್ಲಿ ಧಾರ್ಮಿಕ ಜಾಗೃತಿ ಮೂಡಿಸಬೇಕು ಎಂದರು.

ಸಂಗೀತ ಸೇವೆಯನ್ನು ಶಿವಬಸಪ್ಪ ಆರ್. ಮರಗೂರು ಹೂವಿನಹಡಗಲಿ ತಂಡದವರು ನೆರವೇರಿಸಿದರು.ಈ ವೇಳೆ ವೇದಿಕೆ ಅಧ್ಯಕ್ಷತೆಯನ್ನು ಮಠಾಧೀಶ ಡಾ. ಮಳೆಯೋಗೀಶ್ವರ ಶಿವಾಚಾರ್ಯಸ್ವಾಮಿಗಳು ವಹಿಸಿದ್ದರು. ಮಾನಿಹಳ್ಳಿ ಪುರವರ್ಗ ಮಠ, ಮಾನಿಹಳ್ಳಿ ಷ.ಬ್ರ.ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು, ತಗ್ಗಿನಮಠ ಸಂಸ್ಥಾನ, ಹರಪನಹಳ್ಳಿ ಸದ್ಗುರು ಶಿವಯೋಗಿ ಹಾಲಸ್ವಾಮಿಗಳು, ಗುರು ಹಾಲಸ್ವಾಮಿ ಸಂಸ್ಥಾನಮಠ, ಹಿರೇಹಡಗಲಿ, ಇನ್ನು ಹಲವಾರು ಸ್ವಾಮೀಜಿಗಳು, ಸುತ್ತಮುತ್ತಲಿನ ಅಪಾರ ಭಕ್ತರು, ಮಹಿಳೆಯರು, ಗ್ರಾಮಸ್ಥರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು.



ಶಾಲಾ ವಾರ್ಷಿಕೋತ್ಸವ: ಮಾತೃವಂದನ



ಹುಣಸಗಿ: ಸಮೀಪದ ವಜ್ಜಲ ತಾಂಡಾದಸರಕಾರಿಕಿರಿಯಪ್ರಾಥಮಿಕ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ, ಸರಸ್ವತಿ ಮಹಾಪೂಜೆ, ಮಾತೃವಂದನೆ ಹಾಗೂ 5ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮವನ್ನು ಸಗರನಾಡಿನ ಖ್ಯಾತ ಸಭಾ ನಿರೂಪಕರಾದ ಅಮರಯ್ಯಸ್ವಾಮಿ ಜಾಲಿಬೆಂಚಿ ಉದ್ಘಾಟಿಸಿ ಮಾತನಾಡಿದರು. ಈ ವೇಳೆ ವಿದ್ಯಾರ್ಥಿಗಳು ತಮ್ಮ ತಾಯಂದಿರ ಪಾದಪೂಜೆ ನೆರವೇರಿಸಿ ಮಾತೃವಂದನೆ ಸಲ್ಲಿಸಿದ್ದು ವಿಶೇಷ ಗಮನ ಸೆಳೆಯಿತು.

ಸಾನ್ನಿಧ್ಯ ವಹಿಸಿದ್ದ ತಲಬಂಡಿಯ ವಿಠ್ಠಲ ಮಹಾರಾಜರು ಹಾಗೂ ಹುಣಸಗಿ ವಲಯದ ಬಿಆರ್‌ಪಿ ರವಿ ಕನಕರೆಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿ, ಶಿಕ್ಷಣದ ಮಹತ್ವವನ್ನು ವಿವರಿಸಿದರು. ಸರಸ್ವತಿ ಮಹಾಪೂಜೆ ಯನ್ನು ಮನೋಹರ ಪತ್ತಾರ ನೆರವೇರಿಸಿದರು. ಮಾತೃವಂದನೆ ಕಾರ್ಯಕ್ರಮ ವನ್ನು ಅಮರಯ್ಯ ಸ್ವಾಮಿ ಜಾಲಿಬೆಂಚಿ ನಡೆಸಿಕೊಟ್ಟರು.

ಇತ್ತೀಚೆಗೆ ವರ್ಗಾವಣೆಗೊಂಡ ಗೀತಾ ಸಜ್ಜನ, ಶೇಖರಪ್ಪ ಹುಗಾರ, ಆಶಾ ರಾಠೋಡ ಹಾಗೂ ನಿವೃತ್ತರಾದ ಮೋನಪ್ಪ ಸುತಾರ್ ಸೇರಿದಂತೆ ವಿವಿಧ ವಸತಿ ಶಾಲೆಗಳಿಗೆ ಆಯ್ಕೆ ಯಾದ ವಿದ್ಯಾರ್ಥಿಗಳಿಗೆ ಹಾಗೂ ಬೀಳ್ಕೊಡಲಾಗುತ್ತಿರುವ 5ನೇ ತರಗತಿ ವಿದ್ಯಾರ್ಥಿಗಳನ್ನು ಗೌರವಿಸಿ ಸನ್ಮಾನಿಸಲಾಯಿತು. ಕಾರ್ಯಕ್ರಮ ದಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಕಾಂತೇಶ ಹಲಗಿನಮನಿ, ಷಣ್ಮುಖಪ್ಪ ನುಚ್ಚಿ, ಪ್ರಕಾಶ ಬಡಿಗೇರ, ನಿಂಗಪ್ಪ ರಾಠೋಡ, ನಿಂಗನಗೌಡ ಪಾಟೀಲ, ಶಂಕರ ಚವ್ಹಾಣ, ಬಂದಗೀಸಾ, ಇರ್ಫಾನ್, ತಾರಾಸಿಂಗ್, ಬೀಮಣ್ಣ ಮೇಸ್ತ್ರಿ, ನಾಗಪ್ಪ ರಾಠೋಡ, ನಂದಪ್ಪ ರಾಠೋಡ, ತಿರುಪತಿ ರಾಠೋಡ, ವೆಂಕಟೇಶ ಪೂಜಾರಿ ಮುಖ್ಯಗುರು ಮನೋಹರ ಪತ್ತಾರ, ವೀರಪ್ಪ ಹಡಪದ ಸೇರಿದಂತೆ ಪಾಲಕರು ಗ್ರಾಮಸ್ಥರು ಉಪಸ್ಥಿತರಿದ್ದರು. ಸುನೀಲ ಚವ್ಹಾಣ ಸ್ವಾಗತಿಸಿದರು, ಚನ್ನಮ್ಮ ಚವ್ಹಾಣ ವಂದಿಸಿದರು. ವೀರಪ್ಪ ಹಡಪದ ನಿರೂಪಿಸಿದರು.

ಏ.15ರವರೆಗೆ ಕಾಲುವೆಗೆ ನೀರು ಹರಿಸಿ

ಸುರಪುರ: ಬೆಂಗಳೂರಿನಲ್ಲಿ ಸರ್ಕಾರದಉಪಮುಖ್ಯಮಂತ್ರಿಗಳು ಹಾಗೂ ಜಲ ಸಂಪನ್ಮೂಲ ಸಚಿವ ಡಿ. ಕೆ. ಶಿವಕುಮಾರ ರವರನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷರು ಹಾಗೂ ಮಾಜಿ ಸಚಿವ ನರಸಿಂಹ ನಾಯಕ ರಾಜುಗೌಡ ಭೇಟಿ ಮಾಡಿ ಏ.15 ವರೆಗೆ ಕಾಲುವೆಗೆ ನೀರು ಹರಿಸಲು ಅಧಿಕಾರಿಗಳಿಗೆ ಆದೇಶಿಸಬೇಕೆಂದು ಮನವಿ ಸಲ್ಲಿಸಿದರು.

ಈ ಕುರಿತು ಮನವಿ ಮಾಡಿದ ಅವರು, ಪ್ರಸ್ತುತ ನಾರಾಯಣಪುರ ಬಸವ ಸಾಗರ ಜಲಾಶಯದ ವ್ಯಾಪ್ತಿಯ ಬೆಳೆಗಳು ಕಟಾವು ಹಂತಕ್ಕೆ ಬಂದಿದ್ದು, ಜಲಾಶಯದ ಎಡದಂಡೆ ಮತ್ತು ಬಲದಂಡೆ ಕಾಲುವೆಗಳಿಗೆ ಏ.15 ವರೆಗೆ ನೀರು ಹರಿಸುವುದು ಅವಶ್ಯವಿದೆ ಒಂದು ವೇಳೆ ಕಾಲುವೆಗೆ ನೀರು ಹರಿಸದೆ ಹೋದರೆ ನಮ್ಮ ಭಾಗದ ರೈತರಿಗೆ ಸಾವಿರಾರು ಕೋಟಿ ನಷ್ಟವಾಗುತ್ತದೆ. ಆದ್ದರಿಂದ ಕೂಡಲೇ ಏ.15 ವರೆಗೆ ಕಾಲುವೆಗೆ ನೀರು ಹರಿಸಲು ಅಧಿಕಾರಿಗಳಿಗೆ ಆದೇಶಿಸಬೇಕೆಂದು ಮನವಿ ಮಾಡಿದ್ದಾರೆ.





ಕುರುಗೋಡು:ಸಮೀಪದ ಎಮ್ಮಿಗನೂರು ಗ್ರಾಮದ ಶ್ರೀ ಜಡೆಸಿದ್ದೇಶ್ವರ ಸಮುದಾಯ ಭವನದಲ್ಲಿ ಶ್ರೀ ಹಂಪಿ ಹಕ್ಕ ಬುಕ್ಕರ ಕಲಾ ಟ್ರಸ್ಟ್ ವತಿಯಿಂದ ವಿಶ್ವ ರಂಗಭೂಮಿ ದಿನವನ್ನು ಆಚರಿಸಲಾಯಿತು. ಪೂರ್ವದಲ್ಲಿ ನಾಟಕ ರತ್ನ ಗುಬ್ಬಿ ವೀರಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.ಈ ಸಂದರ್ಭದಲ್ಲಿ ಅಧ್ಯಕ್ಷ ಶಂಕರ್ ಬಂಡೆ ಪಿರಸಾಬ್, ಟ್ರಸ್ಟಿನ ಪದಾಧಿಕಾರಿಗಳಾದ ಎಸ್. ರಾಮಪ್ಪ, ಪ್ರಕಾಶ್, ಪರ್ವೇಜ್, ಜಡೆಸಿದ್ದ ಸ್ವಾಮಿ, ತಿಮ್ಮರಾಜು, ಎಚ್.ಎಂ. ಪ್ರಭುಸ್ವಾಮಿ ಸೇರಿದಂತೆ ಇತರರು ಇದ್ದರು.

ಪ್ರಿಪೇಯ್ಡ್ ಮೀಟರ್ ಅಳವಡಿಕೆ ಖಾಸಗೀಕರಣದ ಹುನ್ನಾರ: ಆರೋಪ

ಹಗರಿಬೊಮ್ಮನಹಳ್ಳಿ: ರಾಜ್ಯದ ರೈತರ ಪಂಪ್‌ಸೆಟ್ ಗಳಿಗೆ ಜನ ಸಾಮಾನ್ಯರ ವಾಸವಿರುವ ಮತ್ತು ಹೊಸ ಮನೆಗಳಿಗೆ ಪ್ರಿಪೇಯ್ಡ್ ಮೀಟರ್ ಅಳವಡಿಸುವುದು ವಿದ್ಯುತ್ತನ್ನು ಖಾಸಗಿಕರಣ ಗೊಳಿಸುವ ಹುನ್ನಾರ ಆಗಿದೆ. ಇದನ್ನು ವಿರೋಧಿಸಿ ರಾಜ್ಯ ರೈತ ಸಂಘದಿಂದ ಹೋರಾಟ ಮಾಡಬೇಕಾಗುತ್ತದೆ ಎಂದು ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಜೆ.ಎಂ ವೀರ ಸಂಗಯ್ಯ ಎಚ್ಚರಿಸಿದರು.

ಶುಕ್ರವಾರ ಪಟ್ಟಣದ ಕೃಷಿಕ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ 1.7 ಕೋಟಿ ಜನ ಕುಟಿರಾ ಜ್ಯೋತಿ ಭಾಗ್ಯಜ್ಯೋತಿ ವಿದ್ಯುತ್ ಸಬ್ಸಿಡಿ ಪಡೆಯುತ್ತಿದ್ದು, ಇದು ಬಂದ್ ಆಗುತ್ತೆ. ಇಂಧನ ಸಚಿವ ಜಾರ್ಜ್ ಪಂಪ್‌ಸೆಟ್ ಅಕ್ರಮ ಸಕ್ರಮ ಮಾಡಿಕೊಳ್ಳಲು ಪ್ರತಿ ಪಂಪ್‌ಸೆಟ್‌ಗೆ 5 ಲಕ್ಷ ಹಣ ಖರ್ಚು ಆಗುತ್ತದೆ. ರೈತರು 1.50 ಲಕ್ಷ ಕಟ್ಟಬೇಕು. ಸರ್ಕಾರ 3.50 ಲಕ್ಷ ತುಂಬುತ್ತದೆ ಕೂಡಲೇ ರೈತರ ಪಂಪ್‌ಸೆಟ್ ಅಕ್ರಮ ಇರುವ ಪಂಪ್‌ಸೆಟ್ ಗಳನ್ನು ಸಕ್ರಮಗೊಳಿಸಿ ಎಂದು ಆದೇಶ ಹೊರಡಿಸಿದ್ದು, ತುಂಗಭದ್ರಾ ಹಿನ್ನೀರಿನಿಂದ ಸ.ಸು 1.20 ಲಕ್ಷ ಜನ ರೈತರು ಕೃಷಿ ಪಂಪ್‌ಸೆಟ್‌ನಿಂದ ಬೆಳೆ ಬೆಳೆಯುತಿದ್ದು ಅಕ್ರಮ ಪಂಪ್‌ಸೆಟ್ ಸಕ್ರಮ ಗೊಳಿಸಲಾಗಿಲ್ಲ. ಇಂತಹ ರೈತರಿಗೆ ಸಕ್ರಮಗೊಳಿಸಲು ಮೂರು ತಿಂಗಳು ಗಡುವು ಬಳಿಕ ಸಂಪರ್ಕ ಕಟ್ ಮಾಡಲು ತಿಳಿಸಿದ್ದಾರೆ ಎಂದರು.

ಶೇ. 80ರಷ್ಟು ಜನ ರೈತರು ಕೃಷಿಯನ್ನೇ ಅವಲಂಬಿಸಿ ಜೀವನ ಮಾಡುವ ರೈತರಿಗೆ ಈ ಪ್ರಿಪೇಡ್ ಅಳವಡಿಸಿದರೆ ಇವುಗಳನ್ನು ಕಿತ್ತು ಹಾಕುವ ಕೆಲಸ ರೈತ ಸಂಘ ಮಾಡುತ್ತದೆ ಎಂದರು.

ಜಿಲ್ಲಾ ಯುವ ಘಟಕದ ಅಧ್ಯಕ್ಷ ರವಿಕುಮಾರ್ ತಂಬ್ರಹಳ್ಳಿ, ಮುಖಂಡ ರಾಜ ಭಕ್ಷಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



> **ರೈತ ವಿರೋಧಿ ಯೋಜನೆಗಳ ವಿರುದ್ಧ ತಾಲೂಕಿನ 68 ಹಳ್ಳಿಗಳಿಗೆ ಸಂಚರಿಸಿ ನಿರಂತರ ಸಭೆ ನೆಡೆಸಿ ಜಿಲ್ಲೆ ಹಾಗೂ ರಾಜ್ಯ ಮಟ್ಟದ ರೈತರನ್ನು ಸಂಘಟಿಸಿ 1998 ರಲ್ಲಿ ಮಾಡಿದಂತೆ ಹಗರಿಬೊಮ್ಮನಹಳ್ಳಿಯಲ್ಲಿ ನ.30ರಂದು ಬೃಹತ್ ರೈತರ ಸಮಾವೇಶ ಮಾಡಲಿದ್ದೇವೆ. ಒಂದು ಲಕ್ಷ ಜನ ರೈತರನ್ನು ಸೇರಿಸುವ ಗುರಿ ಹೊಂದಿದ್ದು, ಈಗಿನಿಂದಲೇ ನಿರಂತರವಾಗಿ ಹಳ್ಳಿ ಹಳ್ಳಿಗಳಿಗೂ ಸಂಚರಿಸಿ ಸಭೆ ನೆಡೆಸಿ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗುವುದು.**
>
> ■ **ಜೆ.ಎಂ. ವೀರಸಂಗಯ್ಯ, ಕಾರ್ಯಾಧ್ಯಕ್ಷ, ರಾಜ್ಯ ರೈತ ಸಂಘ**

ಮುಖ್ಯಮಂತ್ರಿ ಚಿನ್ನದ ಪದಕಕ್ಕೆ ಆಯ್ಕೆ

ವಿಜಯನಗರ: ಪೊಲೀಸ್ ಇಲಾಖೆಯಲ್ಲಿ ಶ್ರೇಷ್ಠ ಸೇವೆ ಸಲ್ಲಿಸಿದವರಿಗೆ ಕರ್ನಾಟಕ ರಾಜ್ಯ ಸರ್ಕಾರ ಹಾಗೂ ಗೃಹ ಇಲಾಖೆಯಿಂದ ನೀಡಲಾಗುವ ಮುಖ್ಯಮಂತ್ರಿ ಚಿನ್ನದ ಪದಕ-2025ನೇ ಸಾಲಿನ ಪ್ರಶಸ್ತಿಗೆ ಹರಪನಹಳ್ಳಿ ಡಿವೈಎಸ್ಪಿ ಡಾ.ಸಂತೋಷ ಚೌವ್ಹಾಣ್ ಸೇರಿದಂತೆ ನಾಲ್ವರು ಭಾಜನರಾಗಿದ್ದಾರೆ.



ಹರಪನಹಳ್ಳಿ ಡಿವೈಎಸ್ಪಿ ಡಾ. ಸಂತೋಷ್ ಚೌವ್ಹಾಣ್, ಹೂವಿನಹಡಗಲಿ ಠಾಣೆಯ ಸಿಪಿಐ ದೀಪಕ್ ಬೂಸರೆಡ್ಡಿ, ಹೊಸಪೇಟೆಯ ಬಡಾವಣೆ ಠಾಣೆ ಪಿಎಸ್‌ಐ ಹಾಗೂ ಟಿಬಿ ಡ್ಯಾಂ ಠಾಣೆಯ(ಪ್ರಭಾರಿ) ಪಿಎಸ್‌ಐ ಕೋದಂಡಪಾಣಿ ಹಾಗೂ ಹರಪನಹಳ್ಳಿ ಠಾಣೆಯ ಪೊಲೀಸ್ ಪೇದೆ ಕೆ.ಎಂ. ಆನಂದ್ ಸಿ.ಎಂ. ಪದಕ ಗೌರವಕ್ಕೆ ಭಾಜನರಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶೀಘ್ರದಲ್ಲೇ ನಡೆಯಲಿರುವ ಸಮಾರಂಭದಲ್ಲಿ ಪದಕಗಳನ್ನು ಪ್ರದಾನ ಮಾಡಲಿದ್ದಾರೆ.

ಪದಕ ವಿಜೇತ ಬಡಾವಣೆ ಠಾಣೆಯ ಪಿಎಸ್‌ಐ ಕೋದಂಡಪಾಣಿ ತಂದೆ ಯತಿರಾಜ್ ಅವರು ಮೂಲತ ಟಿಬಿ ಡ್ಯಾಂ ನಿವಾಸಿಯಾಗಿದ್ದಾರೆ. ಅವರು 15-7-1967 ಜನಿಸಿದ್ದು, 17-2-1993 ರಂದು ಪೊಲೀಸ್ ಇಲಾಖೆಯಲ್ಲಿ ಸಿವಿಲ್ ಪೇದೆಯಾಗಿ ನೇಮಕಗೊಂಡಿದ್ದರು. ಬಳ್ಳಾರಿಯಲ್ಲೇ ಪೊಲೀಸ್ ಟ್ರೈನಿಂಗ್ ಪೂರ್ಣಗೊಳಿಸಿರುವ ಅವರು, 2010ರಲ್ಲಿ ಎಚ್‌ಸಿ, 2019ರಲ್ಲಿ ಎಎಸ್‌ಐ ಹಾಗೂ 2023 ರಲ್ಲಿ ಬಡಾವಣೆ ಠಾಣೆಯಲ್ಲಿ ಪಿಎಸ್‌ಐ ಮುಂಬಡ್ತಿಯಾಗಿದ್ದಾರೆ. ಈ ವರೆಗೆ ಸಿರಗುಪ್ಪ, ಕಮಲಾಪುರ, ಹೊಸಪೇಟೆ ಪಟ್ಟಣ, ಕೂಡ್ಲಿಗಿ, ಬಡಾವಣೆ, ಹೊಸಪೇಟೆ ಗ್ರಾಮೀಣ, ಇಟಗಿ , ಟಿಬಿ ಡ್ಯಾಂ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸಿದ್ದಾರೆ.

ಗುರುಗಾದಿಲಿಂಗೇಶ್ವರ ಪುರಾಣ ಸಂಪನ್ನ: ಸಾಮೂಹಿಕ ವಿವಾಹ

ವಿಜಯನಗರ: ಹೊಸಪೇಟೆ ತಾಲೂಕಿನ ಅನಂತಶಯನ ಗುಡಿ ಗ್ರಾಮದ ಶ್ರೀ ಗುರುಗಾದಿ ಲಿಂಗೇಶ್ವರ ಪುರಾಣ ಕಾರ್ಯಕ್ರಮ ಸಂಪನ್ನಗೊಂಡಿದೆ.

ಇದೇ ವೇಳೆ ಉಚಿತ ಸಾಮೂಹಿಕ ವಿವಾಹ, ರಕ್ತದಾನ ಶಿಬಿರ ಯಶಸ್ವಿಯಾಗಿ ನಡೆಯಿತು.

ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದ ಜಗದ್ಗುರು ಕೊಟ್ಟೂರು ಬಸಲಿಂಗ ಸ್ವಾಮೀಜಿ, ಕನಕಗುರು ಪೀಠದ ಹಾಲುವರ್ತಿ ಬಾದಿಮಿನಾಳ್ ಶಾಖಾ ಮಠದ ಶಿವಸಿದ್ದೇಶ್ವರ ಸ್ವಾಮೀಜಿ, ಮಾತಂಗ ಪರ್ವತದ ಮಾತಂಗ ಮಹಾಮುನಿ, ಅಳ್ಳಳ್ಳಿ ಗವಿಸಿದ್ದೇಶ್ವರ ಸ್ವಾಮಿಗಳ ಸಾನ್ನಿಧ್ಯದಲ್ಲಿ ನೆರವೇರಿದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ 7 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಬಳಿಕ ಆಶೀರ್ವಚನ ನೀಡಿದ ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದ ಜಗದ್ಗುರು ಕೊಟ್ಟೂರು ಬಸಲಿಂಗ ಸ್ವಾಮೀಜಿ, ನವ ದಂಪತಿಗಳು ಅನ್ಯರ ಮಾತುಗಳಿಗೆ ಕಿವಿಗೊಡದೇ, ಪರಸ್ಪರ ಅರ್ಥ ಮಾಡಿಕೊಳ್ಳಬೇಕು. ಕಷ್ಟ- ಸುಖಗಳನ್ನು ಸಮಾನವಾಗಿ ಸ್ವೀಕರಿಸಬೇಕು. ಇಂದಿನ ದುಬಾರಿ ದಿನಗಳಲ್ಲಿ ಒಬ್ಬರ ದುಡಿಮೆಯಿಂದ ಜೀವನ ಸಾಗಿಸುವುದು ಕಷ್ಟಕರ. ಈ ಹಿನ್ನೆಲೆಯಲ್ಲಿ ಮಹಿಳೆಯರು ಕೂಡ ಸ್ವಯಂ ಉದ್ಯೋಗದತ್ತ ಮನಸ್ಸು ಮಾಡಬೇಕು ಎಂದು ಕಿವಿಮಾತು ಹೇಳಿದರು.

ರಾಜ್ಯ ರೈತ ಹಸಿರಿಕರಣ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಗಂಟೆ ಸೋಮಶೇಖರ್ ಮಾತನಾಡಿ, ಸಾವಯವ ಕೃಷಿ ವಿಷಯದ ಬಗ್ಗೆ ಸವಿಸ್ತಾರವಾಗಿ ತಿಳಿಸಿದರಲ್ಲದೇ, ಟ್ರಸ್ಟ್‌ನ ವರದಿ ವಾಚಿಸಿದರು.

ಇದಕ್ಕೂ ಮುನ್ನ ನಡೆದ ರಕ್ತದಾನ ಶಿಬಿರದಲ್ಲಿ ಹತ್ತಾರು ಜನ ಯುವಕರು ರಕ್ತದಾನ ಸಾಮಾಜಿಕ ಕಳಕಳ ತೋರಿದರು.

ಬಿಜೆಪಿ ಓಬಿಸಿ ಮೋರ್ಚಾ ರಾಜ್ಯ ಮುಖಂಡ ಅಯ್ಯಾಳಿ ತಿಮ್ಮಪ್ಪ, ಕಾಂಗ್ರೆಸ್‌ನಾಯಕಿರಶ್ಮಿರಾಜಶೇಖರ್ ಹಿಟ್ನಾಳ್, ನಗರದ ಪ್ರಮುಖರಾದ ಡಾ.ಧರ್ಮೆಂದ್ರಗೌಡ, ಎನ್. ಕೆ.ದೀಪಾಲಿ, ನಾರಾಯಣ ಶೆಟ್ಟರು, ಮತ್ತು ಎನ್.ಕೆ.ರಾಮು, ವಿ.ಕೆ.ಪಂಪಾಪತಿ, ಉಪನ್ಯಾಸಕ ಕಿನ್ನೂರಯ್ಯ, ಅಯ್ಯಾಳಿ ಶಂಕ್ರಪ್ಪ, ಕಪ್ಲಿ ಹನುಮಂತಪ್ಪ, ಅವಿನಾಶ್ ವೇದಿಕೆಯಲ್ಲಿದ್ದರು.

